ಬುಧವಾರ, ಜುಲೈ 21, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 202 | ಪುಟ 14 + 4


www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ
ಕ್ಲೌಡ್ ಓಎಸ್ ಎಂಬ ಹೊಸದೊಂದು ಸೇವೆಯನ್ನು ಮೈಕ್ರೋಸಾಫ್ಟ್ ಪರಿಚಯಿಸಿದೆ. ಇದು ಯಾವ ಹಾರ್ಡ್‌ವೇರ್‌ನೊಂದಿಗಾದರೂ ಹೊಂದಿಕೊಳ್ಳುತ್ತದೆ.



ಅನುಭವ ಮಂಟಪ ಸಹಕಾರಿ ರಂಗದ ಕಬ್ಬಾವನ ಸುಡುವ ಕಪಿಚೇಷ್ಟೆ
ಆಧಾರ್: ಮನೆ ಬಾಗಿಲಲ್ಲೇ ಮೊಬೈಲ್ ಸಂಖ್ಯೆ ಅಪ್ಡೇಟ್ 10
‘ಆಮ್ಲಜನಕ ಕೊರತೆಯಿಂದ ಯಾರೂ ಸತ್ತಿಲ್ಲ’ 11

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
52,198 ▼	15,632 ▼	₹49,900 (ಬೆಂಗಳೂರು) ▲	₹69,400 (ಬೆಂಗಳೂರು)	74.61 ▲

ವಿಶೇಷ ಜಿಲ್ಲಾಧಿಕಾರಿ: ಐಎಎಸ್ ಅಧಿಕಾರಿ ನೇಮಕಕ್ಕೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಎಎಸ್ ಅಧಿಕಾರಿಗಳಾದ ಎಂ.ಕೆ.ಜಗದೀಶ್ ಮತ್ತು ಬಸವರಾಜ್ ಅವರನ್ನು ಬೆಂಗಳೂರು ನಗರ ಜಿಲ್ಲೆಯ ವಿಶೇಷ ಜಿಲ್ಲಾಧಿಕಾರಿ ಹುದ್ದೆಗಳಿಗೆ ನೇಮಕ ಮಾಡಿದ್ದ ಸರ್ಕಾರದ ಆದೇಶವನ್ನು ಹೈಕೋರ್ಟ್ ರದ್ದುಪಡಿಸಿದೆ.

ನಗರದ ವಕೀಲ ವಾಸುದೇವ ರೆಡ್ಡಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಬಿ.ವಿ. ನಾಗರತ್ನಾ ನೇತೃತ್ವದ ವಿಭಾಗೀಯ ಪೀಠ, ‘ಐಎಎಸ್ ಅಧಿಕಾರಿಗಳನ್ನೇ ಈ ಹುದ್ದೆಗಳಿಗೆ ನೇಮಕ ಮಾಡಬೇಕು’ ಎಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಗೆ ನಿರ್ದೇಶನ ನೀಡಿದೆ.

3A ಪುಟ ನೋಡಿ

ಇಂದಿನ ಪಾಡ್‌ಕಾಸ್ಟ್ ವಿಶೇಷ
ಪ್ರಜಾವಾಣಿ ಕನ್ನಡ ಧ್ವನಿ
ಝಣ ಝಣ ಕಾಂಚಾಣ
ಪ್ರತೀ ದಿನ: ದಿನದ ಸೂಕ್ತಿ, ವಚನವಾಣಿ ಸಂಪಾದಕೀಯ, ಪ್ರಚಲಿತ
Prajavani.net/podcast

ಚಿನಕುರಳಿ
ಪ್ರಕಾಶ್ ಶೆಟ್ಟಿ



ಬಿಎಸ್‌ವೈ ಬೆನ್ನಿಗೆ ಮಠಾಧೀಶರು

ಮುರುಘಾ ಶರಣರು, ಪೇಜಾವರ ಶ್ರೀ, ಮಾದಾರ ಚೆನ್ನಯ್ಯ ಸ್ವಾಮೀಜಿ ಬೆಂಬಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿ.ಎಸ್.ಯಡಿಯೂರಪ್ಪ ಅವರನ್ನೇ ಮುಖ್ಯಮಂತ್ರಿಯಾಗಿ ಮುಂದುವರಿಸಬೇಕು ಎಂದು ನಾಡಿನ ವಿವಿಧ ಸಮುದಾಯಗಳ ಮಠಾಧೀಶರು ಆಗ್ರಹಿಸಿದ್ದು, ಇಲ್ಲಿಯವರೆಗೆ ರಾಜಕೀಯ ಮೇಲಾಟಗಳಿಗೆ ಸೀಮಿತವಾಗಿದ್ದ ಬಿಜೆಪಿ



ಜಗಳಕ್ಕೆ ‘ಜಾತಿ–ಧರ್ಮ’ದ ಬಣ್ಣ ಬಂದಂತಾಗಿದೆ.

‘ಒಂದು ವೇಳೆ ಯಡಿಯೂರಪ್ಪ ಅವರನ್ನು ಪದಚ್ಯುತಿಗೊಳಿಸಿದರೆ ಭಾರಿ ಬೆಲೆ ತೆರಬೇಕಾಗುತ್ತದೆ’ ಎಂದೂ ಕೆಲವು ಸ್ವಾಮೀಜಿಗಳು ಬಿಜೆಪಿ ವರಿಷ್ಠರಿಗೆ ಎಚ್ಚರಿಕೆಯನ್ನೂ ನೀಡಿದ್ದಾರೆ.

ರಂಭಾಪುರಿ ವೀರಸೋಮೇಶ್ವರ ಸ್ವಾಮೀಜಿ ಅವರು ಯಡಿಯೂರಪ್ಪ ಪರ ಹೇಳಿಕೆ ನೀಡಿದ ಬೆನ್ನಲ್ಲೇ ವೀರಶೈವ– ಲಿಂಗಾಯತ ಅಲ್ಲದೆ ಇತರ ಸಮುದಾಯದ ಮಠಾಧೀಶರೂ ಅವರ ಬೆಂಬಲಕ್ಕೆ ಧಾವಿಸಿದ್ದಾರೆ.

ಚಿತ್ರದುರ್ಗದ ಮುರುಘಾ ಶರಣರು, ಉಡುಪಿಯ ಪೇಜಾವರ ಮಠದ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ, ಶ್ರೀಶೈಲ ಪೀಠದ ಜಗದ್ಗುರು ಚನ್ನಸಿದ್ಧರಾಮ ಶಿವಾಚಾರ್ಯ ಸ್ವಾಮೀಜಿ, ಬಸವಮೂರ್ತಿ ಮಾದಾರ ಚೆನ್ನಯ್ಯ ಸ್ವಾಮೀಜಿ, ಬಾಲೆಹೊಸೂರು ದಿಂಗಾಲೇಶ್ವರ ಸ್ವಾಮೀಜಿ, ಯಡಿಯೂರಪ್ಪ ಪರ ಧ್ವನಿ ಎತ್ತಿರುವ ಮಠಾಧೀಶರಲ್ಲಿ ಪ್ರಮುಖರಾಗಿದ್ದಾರೆ. ದಿಂಗಾಲೇಶ್ವರ ಸ್ವಾಮಿಜಿ ನೇತೃತ್ವದಲ್ಲಿ 30ಕ್ಕೂ ಹೆಚ್ಚು ಸ್ವಾಮೀಜಿಗಳು ಯಡಿಯೂರಪ್ಪ ಅವರನ್ನು ಅವರ ನಿವಾಸದಲ್ಲೇ ಮಂಗಳವಾರ ಭೇಟಿ ಮಾಡಿ ಮುಖ್ಯಮಂತ್ರಿ ಹುದ್ದೆಯಲ್ಲೇ ಮುಂದುವರಿಯುವಂತೆ ಒತ್ತಾಯಿಸಿದರು.

ಬಳಿಕ ಸುದ್ದಿಗಾರರ ಜತೆ ಮಾತನಾಡಿದ ದಿಂಗಾಲೇಶ್ವರ ಸ್ವಾಮೀಜಿ, ‘ಯಡಿಯೂರಪ್ಪ ಅವರನ್ನು ಬದಲಿಸಿದರೆ ಬಿಜೆಪಿ ಸರ್ವನಾಶ ಆಗಲಿದೆ. ಬಿಜೆಪಿ ನಾಯಕರು ಕೆಟ್ಟ ಪರಿಸ್ಥಿತಿ ಎದುರಿಸಬೇಕಾಗುತ್ತದೆ. ಇದು ಎಲ್ಲ ಮಠಾಧೀಶರ ಅಭಿಪ್ರಾಯ’ ಎಂದರು.

‘ತಮ್ಮ ಕೈಯಲ್ಲಿ ಏನೂ ಇಲ್ಲ. ಎಲ್ಲವೂ ವರಿಷ್ಠರ ನಿರ್ಧಾರ ಎಂದು ಯಡಿಯೂರಪ್ಪ ಹೇಳಿದ್ದಾರೆ. ಬಿಜೆಪಿ ವರಿಷ್ಠರ ತೀರ್ಮಾನ ನಾವು ಒಪ್ಪುವುದಿಲ್ಲ. ಅವಧಿ ಪೂರ್ಣಗೊಳಿಸಲು ಅವಕಾಶ ನೀಡಬೇಕು. ಎರಡು– ಮೂರು ದಿನಗಳಲ್ಲಿ ಬೆಂಗಳೂರಿನಲ್ಲಿ 500 ಮಠಾಧೀಶರು ಸಭೆ ಸೇರಿ ಈ ಬಗ್ಗೆ ಒಕ್ಕೊರಲಿನ ತೀರ್ಮಾನ ತೆಗೆದುಕೊಳ್ಳುತ್ತೇವೆ’ ಎಂದು ಅವರು ಹೇಳಿದರು.

6ನೇ ಪುಟ ನೋಡಿ

‘ನಾಯಕತ್ವ ಬದಲಿಸಿದರೆ ಸಾಮೂಹಿಕ ಹೋರಾಟ’



ಶಿವಮೂರ್ತಿ ಮುರುಘಾ ಶರಣರು

ಚಿತ್ರದುರ್ಗ: ‘ಬಿ.ಎಸ್.ಯಡಿಯೂರಪ್ಪ ಅವರನ್ನು ಯಾವ ಕಾರಣಕ್ಕೂ ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಸಬಾರದು. ಅವಧಿ ಪೂರ್ಣಗೊಳ್ಳುವವರೆಗೂ ಅವರನ್ನೇ ಮುಂದುವರಿಸಬೇಕು. ಒಂದು ವೇಳೆ ನಾಯಕತ್ವ ಬದಲಾಯಿಸಿದರೆ ಸಾಮೂಹಿಕ ಹೋರಾಟಕ್ಕೂ ಸಿದ್ಧರಿದ್ದೇವೆ’ ಎಂದು ವಿವಿಧ ಮಠಾಧೀಶರು ಬಿಜೆಪಿ ವರಿಷ್ಠರಿಗೆ ಎಚ್ಚರಿಕೆ ನೀಡಿದರು. ಶಿವಮೂರ್ತಿ ಮುರುಘಾ ಶರಣರ ನೇತೃತ್ವದಲ್ಲಿ ಇಲ್ಲಿನ ಮುರುಘಾಮಠದಲ್ಲಿ ಹಲವು ಮಠಾಧೀಶರು ಮಂಗಳವಾರ ಪತ್ರಿಕಾಗೋಷ್ಠಿ ನಡೆಸಿದರು. ‘ಮುಖ್ಯಮಂತ್ರಿ ಬದಲಾವಣೆ ಮಾಡಿದರೆ ಯಡಿಯೂರಪ್ಪ ಅವರಿಗೇನೂ ನಷ್ಟ ಆಗುವುದಿಲ್ಲ. ಆದರೆ, ಪಕ್ಷಕ್ಕೆ ದೊಡ್ಡ ತೊಂದರೆ ಉಂಟಾಗಬಹುದು. ರಾಜ್ಯದ ಅಭಿವೃದ್ಧಿಗೆ ಅಪಾರ ಕೊಡುಗೆ ನೀಡಿದವರನ್ನು ನಿರ್ಲಕ್ಷಿಸುವುದರಿಂದ ಮುಂದೆ ಭಾರಿ ಬೆಲೆ ತೆರಬೇಕಾಗುತ್ತದೆ. ಅವಧಿಗೂ ಮುನ್ನವೇ ಮುಖ್ಯಮಂತ್ರಿ ಬದಲಾವಣೆ ಮಾಡಿದರೆ ಪಕ್ಷಕ್ಕೆ ತೊಂದರೆ ಆಗುವುದು ಖಚಿತ’ ಎಂದು ಶಿವಮೂರ್ತಿ ಮುರುಘಾ ಶರಣರು ಅಭಿಪ್ರಾಯಪಟ್ಟರು.

6ನೇ ಪುಟ ನೋಡಿ

> ಕಾಂಗ್ರೆಸ್‌ನ ಲಿಂಗಾಯತ ನಾಯಕರು ದಿವಾಳಿಯಾಗಿದ್ದಾರೆ, ಅವರಿಗೆ ನಯಾಪೈಸೆ ಕಿಮ್ಮತ್ತಿಲ್ಲ. ಸಚಿವರಾಗಲು ಸೋನಿಯಾ– ರಾಹುಲ್ ಕಾಲು ಹಿಡಿಯುವ ಅವರಿಗೆ ತಾಕತ್ತಿದ್ದರೆ ಲಿಂಗಾಯತರೇ ಮುಂದಿನ ಮುಖ್ಯಮಂತ್ರಿ ಅಭ್ಯರ್ಥಿ ಎಂದು ಘೋಷಿಸಲಿ
>
> **ಬಸನಗೌಡ ಪಾಟೀಲ ಯತ್ನಾಳ**, ಶಾಸಕ

> ಮೇಲ್ವರ್ಗದವರ ಪಕ್ಷ ಎಂಬ ಮಾತನ್ನು ಹುಸಿಯಾಗಿಸಿ, ಸರ್ವ ಧರ್ಮೀಯರನ್ನು ಒಟ್ಟಿಗೆ ಒಯ್ಯಲು ಯಡಿಯೂರಪ್ಪ ಶ್ರಮಿಸುತ್ತಿದ್ದಾರೆ. ಪಕ್ಷಕ್ಕಾಗಿ ನಾಲ್ಕು ದಶಕ ಹೋರಾಟ ಮಾಡಿದ್ದಾರೆ
>
> **ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ**, ಭೋವಿ ಗುರುಪೀಠ

ಪರೀಕ್ಷೆ ಇಲ್ಲದೆ ಫಲಿತಾಂಶ ನಿರ್ಣಯ

ದ್ವಿತೀಯ ಪಿಯು: 600ಕ್ಕೆ 600 ಪಡೆದ 2,239 ವಿದ್ಯಾರ್ಥಿಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಕಾರಣ 2020-21ನೇ ಸಾಲಿನ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆ ರದ್ದುಪಡಿಸಿರುವುದರಿಂದ, ಪರೀಕ್ಷೆ ಇಲ್ಲದೆ ಫಲಿತಾಂಶ ಪ್ರಕಟಿಸಲಾಗಿದೆ. ಪರೀಕ್ಷೆಗೆ ನೋಂದಾಯಿಸಿರುವ ಹೊಸಬರು ಮತ್ತು ಪುನರಾವರ್ತಿತರು ಸೇರಿ ಎಲ್ಲ ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ.

ಈ ಪೈಕಿ, 2,239 ವಿದ್ಯಾರ್ಥಿಗಳು 600ಕ್ಕೆ 600 ಅಂಕ ಪಡೆದಿದ್ದಾರೆ. ಅಲ್ಲದೆ, 4,50,706 ವಿದ್ಯಾರ್ಥಿಗಳು ಉನ್ನತ ಶ್ರೇಣಿ (ಡಿಸ್ಟಿಂಗ್ಷನ್) ಮತ್ತು ಪ್ರಥಮ ಶ್ರೇಣಿ ಗಳಿಸಿದ್ದಾರೆ!

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಫಲಿತಾಂಶ ಪ್ರಕಟಿಸಿ ಮಾತನಾಡಿದ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಎಸ್. ಸುರೇಶ್ ಕುಮಾರ್, ‘ಈ ಫಲಿತಾಂಶದಿಂದ ತೃಪ್ತರಾಗದ ವಿದ್ಯಾರ್ಥಿಗಳು, ಇದನ್ನು ತಿರಸ್ಕರಿಸಿ ಆಗಸ್ಟ್ ತಿಂಗಳಲ್ಲಿ ನಡೆಯಲಿರುವ ಪರೀಕ್ಷೆಗೆ ಶುಲ್ಕ ರಹಿತವಾಗಿ ನೋಂದಾಯಿಸಿಕೊಂಡು ಹಾಜರಾಗಬಹುದು’ ಎಂದು ಹೇಳಿದರು.

11 ನೇ ಪುಟ ನೋಡಿ



> ಎಲ್ಲರನ್ನು ಉತ್ತೀರ್ಣಗೊಳಿಸಿರುವುದರಿಂದ ಅವರೆಲ್ಲರಿಗೂ ಪದವಿ ಕಾಲೇಜುಗಳಲ್ಲಿ ಪ್ರವೇಶ ಸಿಗುವಂತಾಗಲು ಕಾಲೇಜು ಶಿಕ್ಷಣ ಇಲಾಖೆ ಪದವಿ ಕಾಲೇಜುಗಳಲ್ಲಿ ಹೆಚ್ಚಿನ ಸೀಟುಗಳಿಗೆ ಅವಕಾಶ ಕಲ್ಪಿಸಲಿದೆ
>
> **ಎಸ್. ಸುರೇಶ್‌ಕುಮಾರ್**
> ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು

ಮೈತ್ರಿ ಸರ್ಕಾರ ಕೆಡವಿತೇ ಪೆಗಾಸಸ್?

ಪ್ರಜಾವಾಣಿ ವಾರ್ತೆ

ನವದೆಹಲಿ: ಎರಡು ವರ್ಷಗಳ ಹಿಂದೆ, ಕರ್ನಾಟಕದಲ್ಲಿ ಕಾಂಗ್ರೆಸ್–ಜೆಡಿಎಸ್ ಮೈತ್ರಿ ಸರ್ಕಾರ ಉರುಳಿಸಲು ಪೆಗಾಸಸ್ ಗೂಢಚರ್ಯೆಯ ಕುತಂತ್ರಾಂಶ ಬಳಕೆಯಾಗಿರುವ ಸಾಧ್ಯತೆ ಇದೆ ಎಂದು ಹೇಳಲಾಗಿದೆ.

ಆಗ ಉಪಮುಖ್ಯಮಂತ್ರಿಯಾಗಿದ್ದ ಜಿ.ಪರಮೇಶ್ವರ, ಅಂದಿನ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ, ಕಾಂಗ್ರೆಸ್ ನಾಯಕ ಸಿದ್ದರಾಮಯ್ಯ ಅವರ ಆಪ್ತರು ಹಾಗೂ ಎಚ್.ಡಿ.ದೇವೇಗೌಡ ಅವರ ಭದ್ರತೆಯ ಹೊಣೆ ಹೊತ್ತಿದ್ದ ಪೊಲೀಸ್ ಸಿಬ್ಬಂದಿಯೊಬ್ಬರನ್ನು ಗುರಿಯಾಗಿಸಿ ಕಣ್ಗಾವಲು ನಡೆದ ಅನುಮಾನ ವ್ಯಕ್ತವಾಗಿದೆ.

ಫ್ರಾನ್ಸ್‌ನ ಫಾರ್‌ಬಿಡನ್ ಸ್ಟೋರೀಸ್ ನಡೆಸಿದ ತನಿಖೆಯಿಂದ ಸಿಕ್ಕ ದತ್ತಾಂಶದ ಪ್ರಕಾರ, ಪೆಗಾಸಸ್ ಗೂಢಚರ್ಯೆಗಾಗಿ ಪಟ್ಟಿ ಮಾಡಲಾದ ಫೋನ್ ನಂಬರ್‌ಗಳಲ್ಲಿ, ಇವರ ಫೋನ್ ನಂಬರ್‌ಗಳೂ ಇದ್ದವು.

12ನೇ ಪುಟ ನೋಡಿ

ಇನ್ನಷ್ಟು ಸುದ್ದಿಗಳು 12

ರಾಜ್ಯ ಸರ್ಕಾರಿ ನೌಕರರಿಗೆ ಶೇ 11ರಷ್ಟು ತುಟ್ಟಿಭತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇದೇ ಜುಲೈ 1ರಿಂದ ಅನ್ವಯವಾಗುವಂತೆ ರಾಜ್ಯ ಸರ್ಕಾರಿ ನೌಕರರಿಗೆ ಶೇ 11ರಷ್ಟು ತುಟ್ಟಿಭತ್ಯೆ ನೀಡುವಂತೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಹಣಕಾಸು ಇಲಾಖೆಗೆ ಸೂಚನೆ ನೀಡಿದ್ದಾರೆ.

ರಾಜ್ಯ ಸರ್ಕಾರ ನೌಕರರ ತುಟ್ಟಿಭತ್ಯೆ ಶೇ 11.25ರಷ್ಟಿದ್ದು, ಈ ಹೆಚ್ಚಳದ ಆದೇಶ ಜಾರಿಯಾದರೆ ನೌಕರರ ಮೂಲವೇತನಕ್ಕೆ ಅನ್ವಯವಾಗುವಂತೆ ಶೇ 22.25ರಷ್ಟು ತುಟ್ಟಿಭತ್ಯೆ ಸಿಗಲಿದೆ.

ಕೋವಿಡ್ ಕಾರಣಕ್ಕೆ 2020ರ ಜನವರಿಯಿಂದ ನೀಡಬೇಕಾದ ಮೂರು ತುಟ್ಟಿಭತ್ಯೆಗಳನ್ನು ಸರ್ಕಾರ ತಡೆ ಹಿಡಿದಿತ್ತು. ಕೇಂದ್ರ ಸರ್ಕಾರ ತನ್ನ ನೌಕರರಿಗೆ ಶೇ 11ರಷ್ಟು ತುಟ್ಟಿಭತ್ಯೆ ನೀಡುವ ತೀರ್ಮಾನ ಕೈಗೊಂಡಿತ್ತು. ಕೇಂದ್ರದ ಆದೇಶ ಮಂಗಳವಾರವಷ್ಟೇ (ಜುಲೈ 20) ಹೊರಬಿದ್ದಿದೆ. ಈ ಬೆನ್ನಲ್ಲೇ, ಮುಖ್ಯಮಂತ್ರಿ ಅವರನ್ನು ಭೇಟಿ ಮಾಡಿದ್ದ ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್. ಷಡಾಕ್ಷರಿ ನೇತೃತ್ವದ ನಿಯೋಗ, ರಾಜ್ಯದಲ್ಲೂ ತುಟ್ಟಿಭತ್ಯೆ ಹೆಚ್ಚಿಸುವಂತೆ ಮನವಿ ಮಾಡಿತ್ತು.

ಉಪ ಮುಖ್ಯಮಂತ್ರಿ ಅಶ್ವತ್ಥನಾರಾಯಣ ತಿರುಗೇಟು

ಪೆಗಾಸಸ್ ತಂತ್ರಾಂಶವನ್ನು 45 ರಾಷ್ಟ್ರಗಳು ಬಳಕೆ ಮಾಡುತ್ತಿವೆ. ಆದರೆ, ಕೇಂದ್ರ ಸರ್ಕಾರಕ್ಕೆ ಕೆಟ್ಟ ಹೆಸರು ತರಲು ಇಲ್ಲಿ ಮಾತ್ರ ಆರೋಪ ಮಾಡಲಾಗುತ್ತಿದೆ ಎಂದರು.

‘ದೂರವಾಣಿ ಕದ್ದಾಲಿಕೆ ಸಂಸ್ಕೃತಿ ಕಾಂಗ್ರೆಸ್‌ನದ್ದು’

ಬೆಂಗಳೂರು: ‘ಪೆಗಾಸಸ್ ತಂತ್ರಾಂಶ ಬಳಸಿಕೊಂಡು ದೂರವಾಣಿ ಕದ್ದಾಲಿಕೆ ಹಾಗೂ ಗೂಢಚರ್ಯೆ ನಡೆಸಿದ ಆರೋಪವನ್ನು ಕಾಂಗ್ರೆಸ್ ಮತ್ತು ಇತರ ವಿರೋಧ ಪಕ್ಷಗಳು ಮಾಡಿರುವ ಆರೋಪಗಳಲ್ಲಿ ಹುರುಳಿಲ್ಲ. ದೂರವಾಣಿ ಕದ್ದಾಲಿಕೆ ಸಂಸ್ಕೃತಿ ಕಾಂಗ್ರೆಸ್‌ನದ್ದು, ಬಿಜೆಪಿಯದ್ದಲ್ಲ’ ಎಂದು ಉಪ ಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ ಹೇಳಿದರು.



ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಹಿಂದೆ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರದ ಅವಧಿಯಲ್ಲಿ 9,000 ದೂರವಾಣಿಗಳನ್ನು ಕದ್ದಾಲಿಕೆ ಮಾಡಲಾಗಿತ್ತು ಮತ್ತು 500 ಇ–ಮೇಲ್ ಖಾತೆಗಳ ಮೇಲೆ ನಿಗಾ ಇಡಲಾಗಿತ್ತು ಎಂದು ಆಗ ಸರ್ಕಾರವೇ ಒಪ್ಪಿಕೊಂಡಿತ್ತು. ಕಾಂಗ್ರೆಸ್ ತನ್ನದೇ ಸರ್ಕಾರದ ಸಚಿವರ ದೂರವಾಣಿಗಳನ್ನೂ ಕದ್ದಾಲಿಕೆ ಮಾಡುತ್ತಿತ್ತು’ ಎಂದು ಆರೋಪಿಸಿದರು.

‘ಡೇಟಾಬೇಸ್’ ಅಥವಾ ಮಾಹಿತಿ ಸೋರಿಕೆ ಆಗುತ್ತಿದ್ದರೆ ಅದನ್ನು ದೂರವಾಣಿ ಕದ್ದಾಲಿಕೆ ಎಂಬುದಾಗಿ ಬಿಂಬಿಸುವುದು ಸರಿಯಲ್ಲ ಎಂದರು.

ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಅಶ್ವತ್ಥನಾರಾಯಣ ಮಾತನಾಡಿ, ‘ಮತಾಂತರ ಮತ್ತು ದೇಶವಿರೋಧಿ ಚಟುವಟಿಕೆಗಳಿಗೆ ನೆರವು ನೀಡುತ್ತಿದ್ದ ಆರೋಪ ಎದುರಿಸುತ್ತಿರುವ ಅಮ್ನೆಸ್ಟಿ ಇಂಟರ್‌ನ್ಯಾಷನಲ್ ಸಂಸ್ಥೆ ಕೇಂದ್ರ ಸರ್ಕಾರದ ವಿರುದ್ಧ ಆರೋಪ ಮಾಡುತ್ತಿದೆ. ಕೇಂದ್ರ ಸರ್ಕಾರ ಬಿಗಿಯಾದ ಕ್ರಮ ಕೈಗೊಂಡಿರುವುದಕ್ಕಾಗಿ ಆ ಸಂಸ್ಥೆ ಸುಳ್ಳು ಆರೋಪ ಮಾಡುತ್ತಿದೆ’ ಎಂದರು.

ನಗರದಲ್ಲಿ ಇಂದು

ಪ್ರೊ.ಎಚ್.ಟಿ.ಪೋತೆ ಅವರ ‘ಬಾಬಾಸಾಹೇಬರೆಡೆಗೆ’ ಪುಸ್ತಕ ಬಿಡುಗಡೆ: ವೂಡೇ ಪಿ.ಕೃಷ್ಣ, ಅಧ್ಯಕ್ಷತೆ– ಸಾಹಿತಿ ಹಂಪ ನಾಗರಾಜಯ್ಯ, ಅತಿಥಿ– ವಿದ್ವಾಂಸ ಮಲ್ಲೇಪುರಂ ಜಿ.ವೆಂಕಟೇಶ್, ಜೀರಿಗೆ ಲೋಕೇಶ್, ‘ಪ್ರಸ್ತುತ ಭಾರತ: ಗಾಂಧಿ ಮತ್ತು ಅಂಬೇಡ್ಕರ್’ ಉಪನ್ಯಾಸ–ಮೂಡ್ನಾಕೂಡು ಚಿನ್ನಸ್ವಾಮಿ, ಆಯೋಜನೆ–ಕರ್ನಾಟಕ ಗಾಂಧಿಸ್ಮಾರಕ ನಿಧಿ, ಗಾಂಧಿ ಶಾಂತಿ ಪ್ರತಿಷ್ಠಾನ, ಸ್ಥಳ–ಗಾಂಧಿ ಭವನ, ಬೆಳಿಗ್ಗೆ 10.30

ವಿ.ಎನ್.ಲಕ್ಷ್ಮೀನಾರಾಯಣ ಅವರ ‘ಜರ್ಮನ್ ಸಿದ್ಧಾಂತ’ ಅನುವಾದಿತ ಪುಸ್ತಕ ಬಿಡುಗಡೆ ಮತ್ತು ‘ಕರ್ನಾಟಕ ಬೌದ್ಧಿಕ ಪರಂಪರೆ ಮತ್ತು ಸಂಕಥನಗಳಲ್ಲಿ ಭಾವನಾವಾದದ ಪ್ರಭಾವ’ ಕುರಿತು ಸಂವಾದ: ಪ್ರೊ.ರಾಜೇಂದ್ರ ಚೆನ್ನಿ, ಭಾಗವಹಿಸುವವರು–ಮೀನಾಕ್ಷಿ ಬಾಳಿ, ಕೆ.ಪ್ರಕಾಶ್, ಆಯೋಜನೆ–ಏಂಗೆಲ್ಸ್ ದ್ವಿಶತಮಾನೋತ್ಸವ ಆಚರಣಾ ಸಮಿತಿ, ಸಂಜೆ 5.30 (ಆನ್‌ಲೈನ್ ಕಾರ್ಯಕ್ರಮ)

ಮಳೆ ಬಂದರೆ ಮನೆ ತೊರೆಯುವ ಜನ • ಸ್ಥಳೀಯರ ಗೋಳು ಹೆಚ್ಚಿಸುವ ಹೂಳು

ಹೊಸಕೆರೆಹಳ್ಳಿ: ರಾಜಕಾಲುವೆ ಕಾಮಗಾರಿ ಅರೆಬರೆ

• ಗುರು ಪಿ.ಎಸ್.

ಬೆಂಗಳೂರು: ಹೂಳಿನಿಂದ ಕೂಡಿದ ರಾಜಕಾಲುವೆ, ಕೆಸರು ತುಂಬಿದ ರಸ್ತೆ, ಖಾಲಿ ಆಗಿರುವ ಮನೆಗಳು. ಪದ್ಮನಾಭನಗರ ಕ್ಷೇತ್ರ ವ್ಯಾಪ್ತಿಯ ಹೊಸಕೆರೆಹಳ್ಳಿ ವಾರ್ಡ್‌ನಲ್ಲಿ ಪ್ರತಿ ಮಳೆಗಾಲದ ಸಂದರ್ಭ ಕಂಡುಬರುವ ಸಾಮಾನ್ಯ ದೃಶ್ಯಗಳಿವು.

ಮಳೆ ನೀರು ಮನೆಗೆ ನುಗ್ಗದಂತೆ ನೀರು ಸೋರಿಕೆ ನಿರೋಧಕ ಬಾಗಿಲುಗಳನ್ನು ಅಳವಡಿಸಿಕೊಂಡ ಮನೆಯೂ ನಿಮಗೆ ಇಲ್ಲಿ ಕಾಣಸಿಗುತ್ತದೆ. ಈ ಬಾಗಿಲು ಅಳವಡಿಸಿಕೊಳ್ಳಲು ₹75 ಸಾವಿರ ಖರ್ಚು ಮಾಡಬೇಕಾದ ಅನಿವಾರ್ಯತೆ ಇದೆ ಎಂದರೆ, ಇಲ್ಲಿನ ಪರಿಸ್ಥಿತಿ ಹೇಗಿದೆ ಎಂಬುದನ್ನು ತಿಳಿಯಬಹುದು.

2020ರ ಸೆಪ್ಟೆಂಬರ್‌ನಲ್ಲಿ ಮತ್ತು 2021ರ ಏಪ್ರಿಲ್‌ನಲ್ಲಿ ಸುರಿದ ಭಾರಿ ಮಳೆಗೆ ಇಲ್ಲಿನ ಅನೇಕ ಮನೆಗಳು ಜಲಾವೃತವಾಗಿದ್ದವು. ಗುರುದತ್ತ ಬಡಾವಣೆಯಲ್ಲಿ ತಡೆಗೋಡೆಯೇ ಕೊಚ್ಚಿ ಹೋಗಿತ್ತು. ಕಾರು, ಬೈಕುಗಳು ರಸ್ತೆಯಲ್ಲಿ ತೇಲಿ ಹೋಗಿದ್ದವು. ಬೆಲೆಬಾಳುವ ಪೀಠೋಪಕರಣಗಳು, ಯಂತ್ರೋಪಕರಣಗಳಿಗೆ ಹಾನಿಯಾಗಿತ್ತು. ಈ ಪೈಕಿ, ಕೆಲವು ಮನೆಗಳಿಗೆ ತಲಾ ₹25 ಸಾವಿರ ಪರಿಹಾರ ನೀಡಿದ ಬಿಬಿಎಂಪಿ, ಬಹುತೇಕ ಮನೆಗಳತ್ತ ತಿರುಗಿಯೂ ನೋಡಿಲ್ಲ.

ಅರೆಬರೆ ಕಾಮಗಾರಿ: ಕಳೆದ ಬಾರಿಯ ಹಾನಿಯಿಂದ ಎಚ್ಚೆತ್ತುಕೊಂಡಿರುವ ಬಿಬಿಎಂಪಿಯು, ಈ ವಾರ್ಡ್‌ನಲ್ಲಿ ರಾಜಕಾಲುವೆಗೆ ತಡೆಗೋಡೆ ನಿರ್ಮಿಸುವುದು, ಮಳೆ ನೀರು ಸರಾಗವಾಗಿ ಹರಿಯಲು ಮಳೆನೀರುಗಾಲುವೆ, ದೊಡ್ಡ ಚರಂಡಿ ನಿರ್ಮಾಣ ಕಾರ್ಯವನ್ನು ಕೈಗೆತ್ತಿಕೊಂಡಿದೆ. ಆದರೆ, ಈ ಕಾಮಗಾರಿಯು ಆಮೆಗತಿಯಲ್ಲಿ ಸಾಗಿದ್ದು, ರಸ್ತೆಗಳ ಸ್ಥಿತಿ ತೀರಾ ಹದಗೆಟ್ಟಿದೆ. ಚಿಕ್ಕದಾಗಿರುವ ರಸ್ತೆಗಳೇ ಹೆಚ್ಚಿನ ಸಂಖ್ಯೆಯಲ್ಲಿರುವ ಈ ಬಡಾವಣೆಗಳಲ್ಲಿ ವಾಹನ ದಟ್ಟಣೆ ಸಮಸ್ಯೆಯನ್ನೂ ಉಂಟು ಮಾಡಿದೆ.

ವಾರ್ಡ್ ಸಂಖ್ಯೆ 161ರಲ್ಲಿರುವ ಪ್ರಮೋದ್ ಬಡಾವಣೆಯ ಕಡೆಯಲ್ಲಿನ ರಾಜಕಾಲುವೆಗೆ ತಡೆಗೋಡೆ ನಿರ್ಮಿಸಲಾಗಿದೆ. ಆದರೆ, ಕಾಲುವೆ ಪಕ್ಕದಲ್ಲಿರುವ ಎಲ್ಲ ಮನೆಗಳಿಗೆ ಈ ಗೋಡೆ ರಕ್ಷಣೆ ಒದಗಿಸುವುದಿಲ್ಲ. ಗೋಡೆಯನ್ನು ಅರ್ಧದವರೆಗೆ ಮಾತ್ರ ನಿರ್ಮಿಸಿದ್ದು, ಜೋರು ಮಳೆ ಸುರಿದರೆ ಇಲ್ಲಿನ ಮನೆಗಳಿಗೆ ಮತ್ತೆ ಹಾನಿಯಾಗುವುದು ನಿಶ್ಚಿತ.

‘ವಿಶಾಲವಾಗಿರುವ ರಾಜಕಾಲುವೆ, ಕೆಲವು ಪ್ರಭಾವಿಗಳು ಇರುವ ಮನೆ, ಕಲ್ಯಾಣಮಂಟಪಗಳು ಇದ್ದ ಕಡೆ ಇದ್ದಕ್ಕಿದ್ದಂತೆ ಸುಮಾರು 15 ಅಡಿಯಷ್ಟು ಕಡಿತವಾಗಿದೆ. ರಾಜಕಾಲುವೆಗಿಂತ ತಗ್ಗಿನ ಪ್ರದೇಶದಲ್ಲಿ ಒಳಚರಂಡಿ ನಿರ್ಮಿಸಿದ್ದು, ಕಾಲುವೆಗೆ ಸರಾಗವಾಗಿ ಸಾಗದ ನೀರು ತುಂಬಿ, ಒಳಚರಂಡಿಗೆ ಬರುತ್ತಿದೆ. ಒಳಚರಂಡಿಯೂ ತುಂಬಿದರೆ ಆ ನೀರು ಸೀದಾ ಮನೆಗೆ ನುಗ್ಗುತ್ತದೆ’ ಎಂದು ಹೆಸರು ಬಹಿರಂಗಪಡಿಸಲು ಬಯಸದ ನಿವಾಸಿಯೊಬ್ಬರು ಹೇಳಿದರು.

‘ನನಗೆ 14 ವರ್ಷದ ಮಗನಿದ್ದಾನೆ. ರಾತ್ರಿಯ ವೇಳೆ ಮಳೆ ಸುರಿಯಲು ಆರಂಭಿಸಿದರೆ ಸಾಕು ಇದ್ದಕ್ಕಿದ್ದಂತೆ ಅವನು ಬೆವರತೊಡಗುತ್ತಾನೆ. ಅಷ್ಟು ಆತಂಕದಲ್ಲಿ ನಾವು ಸಮಯ ಕಳೆಯಬೇಕಾಗಿದೆ’ ಎಂದು ಅವರು ಹೇಳಿದರು.

‘ಮಳೆಗಾಲ ಬರುತ್ತಿದ್ದಂತೆ ಹಲವರು ಮನೆಗಳನ್ನು ಖಾಲಿ ಮಾಡುತ್ತಾರೆ. ಅನಿವಾರ್ಯವಾಗಿ ನಾವು ಈ ಪ್ರದೇಶದಲ್ಲಿ ಇರಬೇಕಾಗಿದೆ’ ಎಂದು ಮತ್ತೊಬ್ಬ ನಿವಾಸಿ ಅಳಲು ತೋಡಿಕೊಂಡರು.

ಮುಂದುವರಿದ ನಿರ್ಲಕ್ಷ್ಯ: ಹೊಸಕೆರೆಹಳ್ಳಿಯು ಪದ್ಮನಾಭನಗರ ಕ್ಷೇತ್ರದ ವ್ಯಾಪ್ತಿಯಲ್ಲಿದ್ದರೂ, ಕ್ಷೇತ್ರದ ಅಂಚಿನಲ್ಲಿ ಇದೆ. ರಾಜಕಾಲುವೆಯ ಒಂದು ಬದಿ ಪದ್ಮನಾಭನಗರ ಕ್ಷೇತ್ರದಲ್ಲಿದ್ದರೆ, ಮತ್ತೊಂದು ತುದಿ ರಾಜರಾಜೇಶ್ವರಿನಗರ ಕ್ಷೇತ್ರಕ್ಕೆ ಸೇರಿದೆ. ಎರಡೂ ಕ್ಷೇತ್ರದ ಶಾಸಕರ ನಡುವೆ ‘ಹೊಣೆ ವರ್ಗಾವಣೆ’ ಆಗುತ್ತಿರುವುದರಿಂದಲೂ ರಾಜಕಾಲುವೆ ಕಾಮಗಾರಿ ಸೇರಿದಂತೆ ಯಾವುದೇ ಕಾರ್ಯಗಳು ಸಕಾಲದಲ್ಲಿ ಮುಗಿಯುತ್ತಿಲ್ಲ ಎಂದು ಸ್ಥಳೀಯರು ಹೇಳುತ್ತಾರೆ.





ಹೊಸಕೆರೆಹಳ್ಳಿ ವಾರ್ಡ್ ಸಂಖ್ಯೆ 161ರಲ್ಲಿನ ಪ್ರಮೋದ್ ಬಡಾವಣೆಯ ರಾಜಕಾಲುವೆಗೆ ತಡೆಗೋಡೆ ನಿರ್ಮಿಸಲಾಗಿದೆ. ಆದರೆ, ರಾಜಕಾಲುವೆಯ ಅಗಲ ಅಲ್ಲಲ್ಲಿ ಕಡಿಮೆಯಾಗಿದ್ದು, ಕೆಲವರು ತಮ್ಮ ನಿವೇಶನದ ವ್ಯಾಪ್ತಿಗಿಂತ ಹೆಚ್ಚು ವಿಸ್ತಾರದಲ್ಲಿ ಕಾಂಪೌಂಡ್ ನಿರ್ಮಿಸಿಕೊಂಡಿದ್ದಾರೆ (ಚಿತ್ರ: 1) ಹೊಸಕೆರೆಹಳ್ಳಿಯ ರಾಜಕಾಲುವೆ ಇನ್ನೂ ಸಂಪೂರ್ಣವಾಗಿ ಹೂಳು ಮುಕ್ತವಾಗಿಲ್ಲ (ಚಿತ್ರ: 2)

–ಪ್ರಜಾವಾಣಿ ಚಿತ್ರಗಳು/ಅನೂಪ್ ರಾಘ ಟಿ.

ಕೊಚ್ಚಿ ಹೋಗದಿರಲಿ ಬದುಕು 3

ವಿಡಿಯೋ ನೋಡಲು ಈ ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

‘ಕೋವಿಡ್ ಕಾರಣದಿಂದ ವಿಳಂಬ’

‘ಪ್ರಮೋದ್ ಬಡಾವಣೆಯಲ್ಲಿ ತಡೆಗೋಡೆ ನಿರ್ಮಾಣ ಕಾರ್ಯ ಅರೆಬರೆಯಾಗಿಲ್ಲ. ₹1ಕೋಟಿ ಅನುದಾನ ಬಿಡುಗಡೆಯಾಗಿತ್ತು. ಅದಕ್ಕೆ ಆಗುವಷ್ಟು ತಡೆಗೋಡೆ ನಿರ್ಮಿಸಲಾಗಿದೆ. ಇನ್ನೂ 200 ಮೀಟರ್‌ನಷ್ಟು ಗೋಡೆ ಕಟ್ಟಬೇಕಾಗಿದೆ. ಇದಕ್ಕಾಗಿ ₹5 ಕೋಟಿ ಅನುದಾನ ಅಗತ್ಯವಿದೆ ಎಂದು ಮುಖ್ಯ ಆಯುಕ್ತರಿಗೆ ಮನವಿ ಸಲ್ಲಿಸಲಾಗಿದೆ’ ಎಂದು ಬಿಬಿಎಂಪಿ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ರಾಘವೇಂದ್ರ ‘ಪ್ರಜಾವಾಣಿ’ಗೆ ತಿಳಿಸಿದರು.

‘ಚರಂಡಿ ನೀರು ಸರಾಗವಾಗಿ ಹೋಗಲು, ವಾಲ್ವ್ ಮತ್ತು ಪೈಪ್‌ಗಳನ್ನು ಹಾಕಿ ಸರಿಪಡಿಸಲಾಗುವುದು. ರಾಜಕಾಲುವೆಗೆ ನೀರು ಸೇರುವಂತೆ ವ್ಯವಸ್ಥೆ ಮಾಡಲಾಗುವುದು’ ಎಂದೂ ಅವರು ಹೇಳಿದರು.

‘ಗುರುದತ್ತ ಬಡಾವಣೆ ಮತ್ತು ದತ್ತಾತ್ರೇಯ ಬಡಾವಣೆ ವ್ಯಾಪ್ತಿಯಲ್ಲಿ ಮಳೆನೀರುಗಾಲುವೆ ಮತ್ತು ದೊಡ್ಡ ಚರಂಡಿ ನಿರ್ಮಾಣ ಕಾರ್ಯ ನಡೆಯುತ್ತಿದೆ. ಕ್ರೇಟಿಂಗ್ ಅಳವಡಿಸಲಾಗುತ್ತಿದೆ. ಕೋವಿಡ್ ಇದ್ದುದರಿಂದ ಕಾರ್ಮಿಕರು ಸಿಗದೆ ಕಾಮಗಾರಿ ವಿಳಂಬವಾಗಿದೆ. ಎಲ್ಲರಿಗೂ ಅನುಕೂಲವಾಗುವ ಕೆಲಸ ನಡೆಯುತ್ತಿದ್ದಾಗ, ಸಂಚಾರ ದಟ್ಟಣೆ ಸೇರಿದಂತೆ ಬೇರೆ ಅನಾನುಕೂಲಗಳು ಆಗುವುದು ಸಹಜ’ ಎಂದು ಬಿಬಿಎಂಪಿ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಸತೀಶ್ ಹೇಳಿದರು.

‘ಈ ಕಾಮಗಾರಿಗೆ ಒದಗಿಸಿದ ಅನುದಾನ ಕಡಿಮೆ ಇತ್ತು. ಮುಖ್ಯಮಂತ್ರಿಯವರ ಸೂಚನೆಯಂತೆ ಬೇರೆ ಯೋಜನೆಯ ಹಣವನ್ನು ಇದಕ್ಕೆ ನೀಡಿದ್ದು, ಅಂದಾಜು ₹3 ಕೋಟಿ ಅನುದಾನ ಒದಗಿಸಲಾಗಿದೆ. ಆದಷ್ಟು ಬೇಗ ಕಾಮಗಾರಿ ಮುಗಿಸಲು ಎಲ್ಲ ಕ್ರಮಗಳನ್ನೂ ತೆಗೆದುಕೊಳ್ಳಲಾಗುತ್ತಿದೆ’ ಎಂದು ತಿಳಿಸಿದರು.

ನೀರು ಸೋರಿಕೆ ನಿರೋಧಕ ಬಾಗಿಲು!

ಮಳೆ ನೀರು ಮನೆಯೊಳಗೆ ನುಗ್ಗುವುದರಿಂದ ಅಪಾರ ಹಾನಿ ಎದುರಿಸಿದ್ದ ಪ್ರಮೋದ್ ಬಡಾವಣೆಯ ನಿವಾಸಿ, ವಕೀಲರಾದ ದೀಪಕ್ ಹೊಸ ಉಪಾಯವನ್ನೇ ಮಾಡಿದ್ದಾರೆ. ಮನೆಯ ಗೇಟ್ ಹಾಗೂ ಮನೆಯ ಬಾಗಿಲಿನ ನಡುವೆ, ನೀರು ಸೋರಿಕೆ ನಿರೋಧಕ (ವಾಟರ್ ಪ್ರೂಫ್) ಗೇಟ್ ಅಳವಡಿಸಿದ್ದಾರೆ.

ಹಡಗಿನೊಳಗೆ ನೀರು ನುಗ್ಗದಿರಲು ಅಳವಡಿಸುವ ಬಾಗಿಲನ್ನು ಮುಂಬೈನಿಂದ ತರಿಸಿದ್ದು, ಇದಕ್ಕಾಗಿ ₹75 ಸಾವಿರ ಖರ್ಚು ಮಾಡಿದ್ದಾರೆ. 6.2 ಅಡಿ ಎತ್ತರದ ಈ ಬಾಗಿಲನ್ನು ಹಾಕಿಬಿಟ್ಟರೆ ಒಂದು ಹನಿ ನೀರೂ ಒಳನುಗ್ಗುವುದಿಲ್ಲ.

‘ಜೋರು ಮಳೆ ಸುರಿದಾಗಲೆಲ್ಲ ನೀರು ಮನೆಯೊಳಗೆ ಬಂದು ಪೀಠೋಪಕರಣಗಳೆಲ್ಲ ಹಾಳಾಗುತ್ತಿದ್ದವು. ಅನಿವಾರ್ಯವಾಗಿ ಈ ವ್ಯವಸ್ಥೆ ಮಾಡಿಕೊಳ್ಳಬೇಕಾಯಿತು’ ಎಂದು ದೀಪಕ್ ಹೇಳಿದರು.



ರಾಜಕಾಲುವೆಗೆ ತಡೆಗೋಡೆ ಕಟ್ಟಿರುವುದರಿಂದ ನೀರು ನುಗ್ಗುವುದು ತಪ್ಪಬಹುದು. ಆದರೆ, ಚರಂಡಿ ಮತ್ತು ಮೋರಿಗಳನ್ನು ಮುಚ್ಚಿಬಿಟ್ಟಿದ್ದಾರೆ. ಅದನ್ನು ಸರಿ ಮಾಡಿಸಬೇಕು

ಅಣ್ಣೇಗೌಡ, ಪ್ರಮೋದ್ ಬಡಾವಣೆ ನಿವಾಸಿ



ಮಳೆ ನೀರು ರಾಜಕಾಲುವೆಯನ್ನು ಸರಾಗವಾಗಿ ಸೇರುವಂತೆ ಎಲ್ಲ ವ್ಯವಸ್ಥೆ ಮಾಡುತ್ತಿದ್ದಾರೆ. ಆದರೆ, ಈ ಕಾಮಗಾರಿ ಆದಷ್ಟು ಬೇಗ ಮುಗಿದರೆ ಅನುಕೂಲವಾಗುತ್ತದೆ

ಜೆ. ಚಂದ್ರಶೇಖರ್
ಗುರುದತ್ತ ಬಡಾವಣೆ ನಿವಾಸಿ

ಆಗಸ್ಟ್ 10ಕ್ಕೆ ಎಸ್ಸೆಸ್ಸೆಲ್ಸಿ ಫಲಿತಾಂಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಸ್ಸೆಸ್ಸೆಲ್ಸಿ ಪರೀಕ್ಷೆಯ ಫಲಿತಾಂಶ ಆಗಸ್ಟ್ 10 ರ ವೇಳೆಗೆ ಪ್ರಕಟವಾಗಲಿದೆ ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಎಸ್.ಸುರೇಶ್ ಕುಮಾರ್ ತಿಳಿಸಿದ್ದಾರೆ.

ಮಂಗಳವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ಸೋಮವಾರ ನಡೆದ ಪರೀಕ್ಷೆಗೆ ಶೇ 99.6 ರಷ್ಟು ವಿದ್ಯಾರ್ಥಿಗಳು ಹಾಜರಾಗಿದ್ದರು. ಎಲ್ಲೂ ಯಾವುದೇ ಅಹಿತಕರ ಘಟನೆಗಳು ನಡೆದಿಲ್ಲ ಎಂದು ಹೇಳಿದರು.

ಇದು ಶಿಕ್ಷಣ ಇಲಾಖೆಯ ಪರೀಕ್ಷೆ ಆಗಿರಲಿಲ್ಲ. ಸಾರ್ವಜನಿಕರ ಪರೀಕ್ಷೆ ಆಗಿತ್ತು. ಉತ್ತರ ಕನ್ನಡ ಜಿಲ್ಲೆಯಲ್ಲಿ ವಿದ್ಯಾರ್ಥಿಯೊಬ್ಬರು ಗೊಂದಲಕ್ಕೆ ಒಳಗಾಗಿ ಬೇರೊಂದು ಪರೀಕ್ಷಾ ಕೇಂದ್ರಕ್ಕೆ ಹೋದಾಗ ಪೊಲೀಸ್ ಕಾನ್‌ಸ್ಟೆಬಲ್ ಒಬ್ಬರು ತಮ್ಮ ದ್ವಿಚಕ್ರ ವಾಹನದಲ್ಲಿ ವಿದ್ಯಾರ್ಥಿಯನ್ನು ಪರೀಕ್ಷಾ ಕೇಂದ್ರಕ್ಕೆ ತಲುಪಿಸಿದರು ಎಂದರು.

ಪರೀಕ್ಷೆಗೆ ಬಂದವರಲ್ಲಿ 58 ವಿದ್ಯಾರ್ಥಿಗಳಿಗೆ ಕೋವಿಡ್ ದೃಢವಾಗಿತ್ತು. ಅವರಿಗೆ ಕೋವಿಡ್ ಆರೈಕೆ ಕೇಂದ್ರದಲ್ಲಿ ಪರೀಕ್ಷೆ ಬರೆಯಲು ಅವಕಾಶ ನೀಡಲಾಯಿತು. ಕೋವಿಡ್ ಲಕ್ಷಣಗಳು ಇದ್ದ 111 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದಾರೆ ಎಂದು ಸಚಿವರು ತಿಳಿಸಿದರು.

‘ಕೋವಿಡ್ ಪರೀಕ್ಷೆ ಕಡಿಮೆ ಮಾಡಿಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಿಬಿಎಂಪಿ ವ್ಯಾಪ್ತಿಯಲ್ಲಿ ಕೊರೊನಾ ಪ್ರಕರಣಗಳು ಗಣನೀಯವಾಗಿ ಇಳಿಕೆಯಾದರೂ ಕೋವಿಡ್ ಪರೀಕ್ಷೆ ಪ್ರಮಾಣ ಇಳಿಕೆ ಮಾಡಿಲ್ಲ. ದೇಶದ ಬೇರೆ ಮಹಾನಗರಗಳಿಗಿಂತ ದುಪ್ಪಟ್ಟು ಪರೀಕ್ಷೆಗಳನ್ನು ನಮ್ಮಲ್ಲಿ ನಡೆಸಲಾಗುತ್ತಿದೆ’ ಎಂದು ಮುಖ್ಯ ಆಯುಕ್ತ ಗೌರವ್ ಗುಪ್ತ ತಿಳಿಸಿದರು.


ಸುದ್ದಿಗಾರರ ಜೊತೆ ಮಂಗಳವಾರ ಮಾತನಾಡಿದ ಅವರು, ‘ನಮ್ಮಲ್ಲಿ ಅವಶ್ಯಕತೆಗಿಂತಲೂ ಹೆಚ್ಚು ಪರೀಕ್ಷೆಗಳನ್ನು ನಡೆಸುತ್ತಿದ್ದೇವೆ. ರಾಜ್ಯದಲ್ಲಿ ನಡೆಯುತ್ತಿರುವ ಕೋವಿಡ್ ಪರೀಕ್ಷೆಗಳಲ್ಲಿ ಅರ್ಧದಷ್ಟು ಪಾಲು ಬೆಂಗಳೂರಿನದು’ ಎಂದರು.

‘ಕೋವಿಡ್ ಮೂರನೇ ಅಲೆ ತಡೆಯಲು ಅನುಸರಿಸಬೇಕಾದ ಮುನ್ನೆಚ್ಚರಿಕೆಗಳ ಬಗ್ಗೆ ಸರ್ಕಾರ ನೇಮಿಸಿದ್ದ ತಜ್ಞರ ಸಮಿತಿ ವರದಿ ನೀಡಿದೆ. ಬಿಬಿಎಂಪಿ ಹಂತದಲ್ಲಿ ರಚಿಸಲಾದ ಮಕ್ಕಳ ತಜ್ಞರ ಸಮಿತಿಯೂ ಕೆಲ ಸಲಹೆಗಳನ್ನು ನೀಡಿದೆ. ಇವುಗಳ ಆಧಾರದಲ್ಲಿ ಪೂರ್ವಸಿದ್ಧತೆ ಮಾಡಿಕೊಳ್ಳುತ್ತಿದ್ದೇವೆ. ಆಸ್ಪತ್ರೆಯ ಮೂಲಸೌಕರ್ಯ ಹೆಚ್ಚಳ ಮಾಡಲಾಗುತ್ತಿದೆ’ ಎಂದರು.

‘ಇಂಗ್ಲೆಂಡ್‌ನಂತಹ ದೇಶಗಳಲ್ಲಿ ಪ್ರಸ್ತುತ 50 ಸಾವಿರಕ್ಕೂ ಅಧಿಕ ಕೋವಿಡ್ ಪ್ರಕರಣಗಳು ನಿತ್ಯ ಪತ್ತೆಯಾಗುತ್ತಿವೆ. ಕೋವಿಡ್ ಲಸಿಕೆ ಕಾರ್ಯಕ್ರಮದ ಪರಿಣಾಮಕಾರಿ ಅನುಷ್ಠಾನದಿಂದಾಗಿ ಅಲ್ಲಿ ರೋಗಿಗಳ ಸ್ಥಿತಿ ಗಂಭೀರ ಹಂತ ತಲುಪುತ್ತಿಲ್ಲ. ನಾವೂ ಲಸಿಕೆ ಕಾರ್ಯಕ್ರಮಕ್ಕೆ ಆದ್ಯತೆ ನೀಡಿದ್ದೇವೆ. ಹಾಗಾಗಿ ಮೂರನೇ ಅಲೆ ಕಾಣಿಸಿಕೊಂಡರೂ ಚಿಕಿತ್ಸೆಗೆ ಹಾಸಿಗೆಗಳ ಬೇಡಿಕೆ ಕಡಿಮೆ ಇರಲಿದೆ. ಲಸಿಕೆ ಪಡೆಯುವ ಅರ್ಹತೆ ಹೊಂದಿರುವ ಶೇ 55ರಷ್ಟು ಮಂದಿಗೆ ಮೊದಲ ಡೋಸ್ ನೀಡಲಾಗಿದೆ. ಶೇ 15ರಷ್ಟು ಮಂದಿಗೆ ಎರಡೂ ಡೋಸ್‌ಗಳನ್ನು ನೀಡಲಾಗಿದೆ’ ಎಂದರು.

‘ಕಳೆದ ವಾರ ನಗರದಲ್ಲಿ ನಿತ್ಯ ಸರಾಸರಿ 400 ಕೋವಿಡ್ ಪ್ರಕರಣಗಳು ವರದಿಯಾಗುತ್ತಿದ್ದವು. ಈಗ ಈ ಪ್ರಮಾಣ ಮತ್ತಷ್ಟು ಕಡಿಮೆ ಆಗಿದೆ. ಕೋವಿಡ್ ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಾಗುವವರ ಸಂಖ್ಯೆಯೂ ಕಡಿಮೆ ಆಗುತ್ತಿದೆ. ದಿನಕ್ಕೆ ಸರಾಸರಿ 30 ಮಂದಿ ಮಾತ್ರ ಸರ್ಕಾರಿ ಕೋಟಾದಡಿ ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಾಗುತ್ತಿದ್ದಾರೆ. ಸದ್ಯ 320 ಮಂದಿ ಮಾತ್ರ ಸರ್ಕಾರಿ ಕೋಟಾದಡಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಜಾಸ್ತಿ ಸಂಖ್ಯೆಯಲ್ಲಿ ಹಾಸಿಗೆಗಳನ್ನು ಬಿಬಿಎಂಪಿ ತೆಕ್ಕೆಗೆ ಪಡೆದರೆ ಅನ್ಯ ಕಾಯಿಲೆ ಹೊಂದಿರುವವರ ಚಿಕಿತ್ಸೆಗೆ ತೊಂದರೆ ಆಗಲಿದೆ’ ಎಂದರು.

‘ನಗರದಲ್ಲಿ 13 ಸಾವಿರದಷ್ಟು ಹಾಸಿಗೆಗಳನ್ನು ಸರ್ಕಾರಿ ಕೋಟಾದಡಿ ಚಿಕಿತ್ಸೆಗೆ ಕಾಯ್ದಿರಿಸಲಾಗಿತ್ತು. ಈ ಸಂಖ್ಯೆಯನ್ನು 5 ಸಾವಿರಕ್ಕೆ, ನಂತರ 1,800ಕ್ಕೆ ಇಳಿಕೆ ಮಾಡಲಾಗಿದೆ. ಇದನ್ನೂ ಇನ್ನಷ್ಟು ಕಡಿಮೆ ಮಾಡಲಿದ್ದೇವೆ. ಅವಶ್ಯಕತೆ ಬಿದ್ದಾಗ ಪರಿಸ್ಥಿತಿಗೆ ಅನುಗುಣವಾಗಿ ಹೆಚ್ಚಿನ ಹಾಸಿಗೆಗಳನ್ನು ನಮ್ಮ ತೆಕ್ಕೆಗೆ ಪಡೆಯುತ್ತೇವೆ’ ಎಂದು ಅವರು ತಿಳಿಸಿದರು.





ಸಿದ್ಧಗಂಗಾ ಮಠದ ಸಿದ್ಧಲಿಂಗ ಸ್ವಾಮೀಜಿ ಅವರು ವಸತಿ ಸಚಿವ ವಿ.ಸೋಮಣ್ಣ ಅವರ ಹುಟ್ಟುಹಬ್ಬದ ಪ್ರಯುಕ್ತ ವಿಜಯನಗರದ ನಿವಾಸದಲ್ಲಿ ಸೋಮಣ್ಣ ಹಾಗೂ ಶೈಲಜಾ ದಂಪತಿಯನ್ನು ಮಂಗಳವಾರ ಆಶೀರ್ವದಿಸಿದರು. ಸಚಿವ ಕೆ.ಗೋಪಾಲಯ್ಯ, ಕನ್ನಡ ಹೋರಾಟಗಾರ ಪಾಲನೇತ್ರ, ನವೀನ್ ಸೋಮಣ್ಣ ಹಾಗೂ ಇತರರು ಇದ್ದರು – ಪ್ರಜಾವಾಣಿ ಚಿತ್ರ

ಬೆಂಗಳೂರು ನಗರ ವಿ.ವಿ: ಆ.10ರಿಂದ ಪರೀಕ್ಷೆ

ಬೆಂಗಳೂರು: ಬೆಂಗಳೂರು ನಗರ ವಿಶ್ವವಿದ್ಯಾಲಯವು 2020–21ನೇ ಸಾಲಿನ ವಿವಿಧ ಪದವಿ ಪರೀಕ್ಷೆಗಳ ವೇಳಾಪಟ್ಟಿ ಸಿದ್ಧಪಡಿಸಿದೆ. ಬಾಕಿ ಉಳಿದಿರುವ 1, 3 ಮತ್ತು 5ನೇ ಸೆಮಿಸ್ಟರ್ ಪರೀಕ್ಷೆಗಳನ್ನು ಆಗಸ್ಟ್ 10ರಿಂದ, ಅಂತಿಮ ಪದವಿ ಪರೀಕ್ಷೆಗಳನ್ನು ಆಗಸ್ಟ್ 28ರಿಂದ ನಡೆಸಲಾಗುತ್ತದೆ. 31ರೊಳಗೆ ಪರೀಕ್ಷಾ ಪ್ರಕ್ರಿಯೆ ಪೂರ್ಣಗೊಳಿಸಲು ನಿರ್ಧರಿಸಲಾಗಿದೆ.

ವಿದ್ಯಾರ್ಥಿಗಳು ಸ್ನಾತಕೋತ್ತರ ಪದವಿಗೆ ಪ್ರವೇಶಾತಿ ಪಡೆದುಕೊಳ್ಳಲು ಅನುವು ಮಾಡಿಕೊಡುವ ಉದ್ದೇಶದಿಂದ ಸೆಪ್ಟೆಂಬರ್ 20ರೊಳಗೆ ಫಲಿತಾಂಶ ಪ್ರಕಟಿಸಲು ನಿಶ್ಚಯಿಸಲಾಗಿದೆ.

‘ವಿದ್ಯಾರ್ಥಿಗಳು ಗಳಿಸಿರುವ ಆಂತರಿಕ ಹಾಗೂ ಹಿಂದಿನ ಸೆಮಿಸ್ಟರ್‌ನ ಅಂಕಗಳ ಸರಾಸರಿಯ ಆಧಾರದಲ್ಲಿ ಪದವಿಯ 2 ಮತ್ತು 4ನೇ ಸೆಮಿಸ್ಟರ್ ಹಾಗೂ ಸ್ನಾತಕೋತ್ತರ ಪದವಿಯ ಎರಡನೇ ಸೆಮಿಸ್ಟರ್ ಫಲಿತಾಂಶ ಪ್ರಕಟಿಸಲಾಗುತ್ತದೆ. ಸ್ನಾತಕೋತ್ತರ ಪದವಿಯ ಪ್ರಥಮ ಹಾಗೂ ಅಂತಿಮ ಸೆಮಿಸ್ಟರ್‌ನ ಪರೀಕ್ಷೆಗಳೂ ಬಾಕಿ ಇವೆ. ಪ್ರಥಮ ಸೆಮಿಸ್ಟರ್ ಪರೀಕ್ಷೆಗಳನ್ನು ಆಗಸ್ಟ್ 10ರಿಂದ ಹಾಗೂ ಅಂತಿಮ ಸೆಮಿಸ್ಟರ್ ಪರೀಕ್ಷೆಗಳನ್ನು ಆಗಸ್ಟ್ ಎರಡನೇ ವಾರದಿಂದ ನಡೆಸಲಾಗುತ್ತದೆ’ ಎಂದು ಕುಲಪತಿ ಪ್ರೊ.ಲಿಂಗರಾಜ ಗಾಂಧಿ ಹೇಳಿದ್ದಾರೆ.

‘2021–22ನೇ ಸಾಲಿನ ಶೈಕ್ಷಣಿಕ ವರ್ಷವನ್ನು ಅಕ್ಟೋಬರ್ 1ರಿಂದ ಆರಂಭಿಸಲು ತೀರ್ಮಾನಿಸಿದ್ದೇವೆ’ ಎಂದೂ ಅವರು ತಿಳಿಸಿದ್ದಾರೆ.



ಬೆಂಗಳೂರಿನ ರಾಘವೇಂದ್ರ ಸಂಗೀತ ಸೇವಾ ಪ್ರತಿಷ್ಠಾನದ ಅಧ್ಯಕ್ಷರಾದ ಗೌರಿ ನಾಗರಾಜ್ ದಂಪತಿಯ ಸಹಕಾರದಲ್ಲಿ ಗಾಯಕ ಜಗದೀಶ್ ಪುತ್ತೂರು ಹಾಡಿರುವ ‘ಗುರುವಿನ ಮಹಿಮೆಯ ಮಂತ್ರಾಕ್ಷತೆ’ ಭಕ್ತಿಗೀತೆಯ ಧ್ವನಿಸುರುಳಿಯನ್ನು ಮಂತ್ರಾಲಯದ ಸುಬುಧೇಂದ್ರ ತೀರ್ಥ ಸ್ವಾಮೀಜಿ ಬಿಡುಗಡೆ ಮಾಡಿದರು

ಎಸ್‌ಡಿಎಂನಿಂದ ಚ್ಯವನಪ್ರಾಶ ಲೇಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಆಯುರ್ವೇದ ಫಾರ್ಮಸಿಯು ಎಸ್‌ಡಿಎಂ ಚ್ಯವನಪ್ರಾಶ ಲೇಹವನ್ನು ಅಭಿವೃದ್ಧಿಪಡಿಸಿದೆ.

‘ಲೇಹ ತಯಾರಿಕೆಯಲ್ಲಿ ನೆಲ್ಲಿಕಾಯಿಯನ್ನು ಪ್ರಮುಖವಾಗಿ ಬಳಸಲಾಗುತ್ತದೆ. ರೋಗ ನಿರೋಧಕ ಹಾಗೂ ಶಕ್ತಿವರ್ಧಕ ಗಿಡಮೂಲಿಕೆಗಳು, ತುಪ್ಪ, ಎಳ್ಳೆಣ್ಣೆ ಹಾಗೂ ಬೆಲ್ಲವನ್ನೂ ಇದಕ್ಕೆ ಸೇರಿಸಲಾಗುತ್ತದೆ’ ಎಂದು ಪ್ರಕಟಣೆ ತಿಳಿಸಿದೆ.



‘ಚ್ಯವನಪ್ರಾಶ ತಯಾರಿಕೆಯಲ್ಲಿ ಹಸಿ ನೆಲ್ಲಿಕಾಯಿಗಳನ್ನೇ ನಾವು ಅಧಿಕವಾಗಿ ಬಳಸಿದ್ದೇವೆ. ಆ ಮೂಲಕ ಗುಣಮಟ್ಟಕ್ಕೆ ಆದ್ಯತೆ ನೀಡಲಾಗಿದೆ. ಇದರ ಜೊತೆಗೆ ಅಗತ್ಯಕ್ಕೆ ಅನುಗುಣವಾಗಿ 50 ಬಗೆಯ ಗಿಡಮೂಲಿಕೆಗಳನ್ನೂ ಸೇರಿಸಲಾಗಿದೆ. ಈ ಚ್ಯವನಪ್ರಾಶ ಸೇವಿಸುವುದರಿಂದ ಹೆಚ್ಚಿನ ಲಾಭಗಳು ಆಗಲಿವೆ’ ಎಂದು ಫಾರ್ಮಸಿಯ ವ್ಯವಸ್ಥಾಪಕ ನಿರ್ದೇಶಕ ಡಾ.ಮುರಳೀಧರ ಬಲ್ಲಾಳ ತಿಳಿಸಿದ್ದಾರೆ.

ಇನ್ಫೊಸಿಸ್ ಫೌಂಡೇಷನ್‌ನಿಂದ 50 ಕಂಪ್ಯೂಟರ್ ಕೊಡುಗೆ

ಬೆಂಗಳೂರು: ಇನ್ಫೊಸಿಸ್ ಫೌಂಡೇಷನ್, ಚಾಮರಾಜಪೇಟೆಯಲ್ಲಿರುವ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ 50 ಕಂಪ್ಯೂಟರ್‌ಗಳನ್ನು ಕೊಡುಗೆಯಾಗಿ ನೀಡಿದೆ.

‘ವಿಶ್ವವಿದ್ಯಾಲಯದ ಇ–ಆಡಳಿತ ವಿಭಾಗದಿಂದ ಕಂಪ್ಯೂಟರ್ ಪ್ರಯೋಗಾಲಯ ಆರಂಭಿಸಲಾಗುತ್ತಿದೆ. ಹೀಗಾಗಿ ಇನ್ಫೊಸಿಸ್ ಫೌಂಡೇಷನ್ 50 ಕಂಪ್ಯೂಟರ್‌ಗಳನ್ನು ಒದಗಿಸಿದೆ. ಇದರಿಂದ ಸ್ನಾತಕೋತ್ತರ ಪದವಿ ಹಾಗೂ ಸಂಶೋಧನೆಯಲ್ಲಿ ತೊಡಗಿಕೊಂಡಿರುವ ವಿದ್ಯಾರ್ಥಿಗಳಿಗೆ ಹೆಚ್ಚಿನ ಅನುಕೂಲವಾಗಲಿದೆ’ ಎಂದು ಕುಲಪತಿ ಪ್ರೊ.ಕೆ.ಇ.ದೇವನಾಥನ್ ತಿಳಿಸಿದ್ದಾರೆ.

‘ವಿದ್ಯಾರ್ಥಿಗಳ ಹಿತ ಗಮನದಲ್ಲಿಟ್ಟುಕೊಂಡು ಕಂಪ್ಯೂಟರ್‌ಗಳನ್ನು ಒದಗಿಸಿರುವ ಇನ್ಫೊಸಿಸ್ ಫೌಂಡೇಷನ್ ಮುಖ್ಯಸ್ಥೆ ಸುಧಾಮೂರ್ತಿ ಅವರಿಗೆ ನಾವು ಆಭಾರಿಯಾಗಿದ್ದೇವೆ. ಇವರ ಕಾರ್ಯ ಇತರರಿಗೂ ಮಾದರಿಯಾಗಲಿ’ ಎಂದು ಕುಲಸಚಿವ ಪ್ರೊ.ಎಂ.ಕೊಟ್ರೇಶ್ ಹೇಳಿದ್ದಾರೆ.

ಪೆಗಾಸಸ್ ಬೇಹುಗಾರಿಕೆ: ಕೇಂದ್ರದ ವಿರುದ್ಧ ಯುವ ಕಾಂಗ್ರೆಸ್ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನ್ಯಾಯಾಂಗ, ಪತ್ರಕರ್ತರು, ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಸೇರಿದಂತೆ ವಿರೋಧ ಪಕ್ಷಗಳ ನಾಯಕರ ವಿರುದ್ಧ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಬೇಹುಗಾರಿಕೆ ನಡೆಸುತ್ತಿದೆ ಎಂದು ಆರೋಪಿಸಿ ರಾಜ್ಯ ಯುವ ಕಾಂಗ್ರೆಸ್ ವತಿಯಿಂದ ಮಂಗಳವಾರ ಪ್ರತಿಭಟನೆ ನಡೆಯಿತು.

ರೇಸ್ ಕೋರ್ಸ್ ರಸ್ತೆಯ ಕಾಂಗ್ರೆಸ್ ಭವನದ ಬಳಿ ಯುವ ಕಾಂಗ್ರೆಸ್ ಅಧ್ಯಕ್ಷ ರಕ್ಷಾ ರಾಮಯ್ಯ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ಪೆಗಾಸಸ್ ಬೇಹುಗಾರಿಕೆ ವಿರುದ್ಧ ಕಾರ್ಯಕರ್ತರು ಭಿತ್ತಿಪತ್ರಗಳನ್ನು ಪ್ರದರ್ಶಿಸಿ ಘೋಷಣೆಗಳನ್ನು ಕೂಗಿದರು.

‘ಮೋದಿ ಅವರು ದಿನದ 18 ಗಂಟೆಗಳ ಕಾಲ ಕೆಲಸ ಮಾಡುತ್ತಿರುವುದಾಗಿ ಹೇಳಿಕೊಳ್ಳುತ್ತಿದ್ದು, ಇಷ್ಟೂ ಸಮಯ ಬೇಹುಗಾರಿಕೆಗಾಗಿ ತಮ್ಮ ಸಮಯ ಮೀಸಲಿರಿಸಿದ್ದಾರೆ. ಜನೋಪಯೋಗಿ ಕೆಲಸಗಳನ್ನು ಮಾಡುತ್ತಿಲ್ಲ. ಸಾಮಾನ್ಯ ಜನರ ಬಗ್ಗೆ ಕನಿಷ್ಠ ಗಮನವನ್ನೇ ಹರಿಸುತ್ತಿಲ್ಲ’ ಎಂದು ರಕ್ಷಾ ರಾಮಯ್ಯ ಆರೋಪಿಸಿದರು.



ಕೇಂದ್ರ ಸರ್ಕಾರದ ವಿರುದ್ಧ ಯುವ ಕಾಂಗ್ರೆಸ್ ಕಾರ್ಯಕರ್ತರು ಮಂಗಳವಾರ ಪ್ರತಿಭಟನೆ ನಡೆಸಿದರು

‘ಮೋದಿ ನೇತೃತ್ವದ ಸರ್ಕಾರಕ್ಕೆ ಪ್ರಜಾಪ್ರಭುತ್ವದ ಬಗ್ಗೆ ನಂಬಿಕೆ ಇಲ್ಲ. ಕೇಂದ್ರ ಸರ್ಕಾರದ ವಿರುದ್ಧ ಇರುವವರನ್ನು ಗುರಿಯಾಗಿಸಿಕೊಂಡು, ಹತ್ತಿಕ್ಕುವ ಪ್ರವೃತ್ತಿ ವಿರುದ್ಧ ನಮ್ಮ ಹೋರಾಟ ತೀವ್ರಗೊಳ್ಳಲಿದೆ. ಈ ಪ್ರಜಾತಂತ್ರ ವಿರೋಧಿ ಧೋರಣೆಯ ವಿರುದ್ಧ ಯುವ ಕಾಂಗ್ರೆಸ್ ರಾಜ್ಯದಾದ್ಯಂತ ಪ್ರತಿಭಟನೆ ಹಮ್ಮಿಕೊಳ್ಳಲಿದೆ. ಸಂಸತ್ ಅಧಿವೇಶನ ನಡೆಯುತ್ತಿರುವ ಸಂದರ್ಭದಲ್ಲೇ ಸಂಸತ್‌ಗೆ ಮುತ್ತಿಗೆ ಹಾಕಲು ಉದ್ದೇಶಿಸಿದ್ದು, ಈ ಬಗ್ಗೆ ಪಕ್ಷದ ಮುಖಂಡರ ಜತೆ ಚರ್ಚಿಸಿ, ರೂಪುರೇಷೆಗಳನ್ನು ಸಿದ್ಧಪಡಿಸಲಾಗುವುದು’ ಎಂದು ಹೇಳಿದರು.

ರಾಜ್ಯ ಯುವ ಕಾಂಗ್ರೆಸ್ ಉಸ್ತುವಾರಿ ಸುರಭಿ ದ್ವಿವೇದಿ ಮಾತನಾಡಿ, ‘ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ, ಕೋವಿಡ್ ಸಂಕಷ್ಟದಿಂದ ಜನರು ದಿನನಿತ್ಯ ಸಾಯುತ್ತಿದ್ದಾರೆ. ಆದರೆ, ನಮ್ಮ ಪ್ರಧಾನಿ ಇದರ ಪರಿವೆಯೇ ಇಲ್ಲದೇ ಬೇಹುಗಾರಿಕೆಯಲ್ಲಿ ನಿರತರಾಗಿದ್ದಾರೆ’ ಎಂದು ದೂರಿದರು.

‘ಶಂಕರಾಚಾರ್ಯರ ಸಂದೇಶಗಳು ಸಾರ್ವಕಾಲಿಕ ಸತ್ಯ’

ಬೆಂಗಳೂರು: ‘ಅದ್ವೈತ ಸಿದ್ಧಾಂತದ ಪ್ರತಿಪಾದಕ ಶಂಕರ ಭಗವತ್ಪಾದರ ಸಂದೇಶಗಳು ಸಾರ್ವಕಾಲಿಕ ಸತ್ಯವಾಗಿವೆ’ ಎಂದು ಚಾಮರಾಜಪೇಟೆಯಲ್ಲಿರುವ ಕೂಡ್ಲಿ–ಶೃಂಗೇರಿ ಮಠದ ನೂತನ ಪೀಠಾಧಿಪತಿ ವಿದ್ಯಾವಿಶ್ವೇಶ್ವರ ಭಾರತೀ ಮಹಾಸ್ವಾಮಿ ಹೇಳಿದರು.

ಮಠದಲ್ಲಿ ಮಂಗಳವಾರ ನಡೆದ ಗುರುವಂದನಾ ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡಿದರು.

‘ಶಂಕರಾಚಾರ್ಯರು ಜನಸಾಮಾನ್ಯರಿಗೋಸ್ಕರ ಸ್ತೋತ್ರಗಳನ್ನು ಬರೆದು ಎಲ್ಲರನ್ನೂ ಭಕ್ತಿರಸದಲ್ಲಿ ತೇಲಿಸಿದರು’ ಎಂದರು.

ವಾರಾಣಸಿಯ ಸಾಂಗವೇದ ವಿದ್ಯಾಲಯದ ಪ್ರಧಾನ ಅಧ್ಯಾಪಕ ಗಣೇಶ ದ್ರಾವಿಡ ಶಾಸ್ತ್ರಿ ಮಾತನಾಡಿದರು.

ಸಂಕೇಶ್ವರ ಕರವೀರಪೀಠದ ಸಚ್ಚಿದಾನಂದ ಅಭಿನವ ನೃಸಿಂಹ ಭಾರತೀ ಸ್ವಾಮೀಜಿ, ಕರ್ನಾಟಕ ಬ್ರಾಹ್ಮಣ ನಿಗಮದ ಅಧ್ಯಕ್ಷ ಎಸ್.ಎಚ್.ಸಚ್ಚಿದಾನಂದ ಮೂರ್ತಿ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕುಲಪತಿ ದೇವನಾಥನ್, ವೇದ ವಿದ್ವಾಂಸ ಭಾನುಪ್ರಕಾಶ ಶರ್ಮಾ ಇದ್ದರು.

ಅಫ್ಗಾನಿಸ್ತಾನ ಅಧ್ಯಕ್ಷರ ನಿವಾಸದ ಬಳಿ ರಾಕೆಟ್ ದಾಳಿ

ಕಾಬೂಲ್(ಎಪಿ): ಅಫ್ಗಾನಿಸ್ತಾನ ಅಧ್ಯಕ್ಷ ಆಶ್ರಫ್ ಘನಿ ಅವರ ನಿವಾಸದ ಸಮೀಪ-ದಲ್ಲಿರುವ ಮೈದಾನದಲ್ಲಿ ಮಂಗಳವಾರ ಮೂರು ರಾಕೆಟ್ ದಾಳಿ ನಡೆದಿದೆ.

ಬಕ್ರೀದ್ ಆಚರಣೆಗೆ ಒಂದು ದಿನ ಬಾಕಿ ಇರುವಂತೆಯೇ ಈ ರಾಕೆಟ್ ದಾಳಿ ನಡೆದಿದೆ.

ದಾಳಿಯಲ್ಲಿ ಒಂದು ಕಾರು ಭಸ್ಮವಾಗಿದೆ. ಆದರೆ ಯಾವುದೇ ಸಾವು–ನೋವಿನ ವರದಿಯಾಗಿಲ್ಲ ಎಂದು ಅಫ್ಗಾನಿಸ್ತಾನ ಆಂತರಿಕ ಸಚಿವಾಲಯದ ವಕ್ತಾರರು ಹೇಳಿದ್ದಾರೆ.

ಸಿ.ಎಂ ಅಭ್ಯರ್ಥಿ ಹೇಳಿಕೆ: ಬೆಂಬಲಿಗರ ಬಾಯಿ ಮುಚ್ಚಿಸಲು ಸೂಚನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಹೈಕಮಾಂಡ್ ಸೂಚನೆಯ ಮೇರೆಗೆ ಇಲ್ಲಿಗೆ ಬಂದಿರುವ ಕಾಂಗ್ರೆಸ್ ಮುಖಂಡರಾದ ಸಿದ್ದರಾಮಯ್ಯ ಹಾಗೂ ಡಿ.ಕೆ. ಶಿವಕುಮಾರ್ ಅವರು, ಪಕ್ಷದ ಮುಖಂಡ ರಾಹುಲ್ ಗಾಂಧಿ ಅವರನ್ನು ಮಂಗಳವಾರ ಸಂಜೆ ಭೇಟಿ ಮಾಡಿ ರಾಜ್ಯದಲ್ಲಿ ಪಕ್ಷದ ಸ್ಥಿತಿಗತಿಯ ಕುರಿತು ಚರ್ಚಿಸಿದರು.

ಮುಂದಿನ ಮುಖ್ಯಮಂತ್ರಿ ಯಾರಾಗಬೇಕು ಎಂಬ ವಿಷಯದ ಬಗ್ಗೆ ಹೇಳಿಕೆ ನೀಡದಂತೆ ಬೆಂಬಲಿಗರಿಗೆ ತಾಕೀತು ಮಾಡುವಂತೆಯೂ ಸೂಚಿಸಿದ ರಾಹುಲ್, ಸಾಮೂಹಿಕ ನಾಯಕತ್ವದಡಿ ವಿಧಾನಸಭೆ ಚುನಾವಣೆ ಎದುರಿಸುವಂತೆ ಕಿವಿಮಾತು ಹೇಳಿದರು ಎಂದು ತಿಳಿದುಬಂದಿದೆ.



ರಾಹುಲ್ ಗಾಂಧಿ

ರಾಜ್ಯದಲ್ಲಿ ನಾಯಕತ್ವ ಬದಲಾವಣೆಯ ಸಂಬಂಧ ಬಿಜೆಪಿ ಆಲೋಚಿಸುತ್ತಿದ್ದು, ಸರ್ಕಾರದ ಭ್ರಷ್ಟಾಚಾರ ಮತ್ತು ದುರಾಡಳಿತಕ್ಕೆ ಜನರೂ ಬೇಸತ್ತಿದ್ದಾರೆ. ಈ ಸಂದರ್ಭದ ಲಾಭ ಪಡೆ ಯುವ ನಿಟ್ಟಿನಲ್ಲಿ ಕಾಂಗ್ರೆಸ್ ಒಗ್ಗಟ್ಟು ಪ್ರದರ್ಶಿಸುವ ಅಗತ್ಯವಿದೆ ಎಂದು ಅವರು ಉಭಯ ಮುಖಂಡರಿಗೆ ತಿಳಿಹೇಳಿದರು.

ಪಕ್ಷವನ್ನು ಯಾರು ಮುನ್ನಡೆಸಬೇಕು ಎಂಬ ಕುರಿತು ಅನಗತ್ಯ ಗೊಂದಲಕ್ಕೆ ಅವಕಾಶ ನೀಡಕೂಡದು. ಎಲ್ಲರೊಂದಿಗೆ ಕೈಜೋಡಿಸಿ ಗೆಲುವಿಗೆ ಯತ್ನಿಸಬೇಕು ಎಂದೂ ಅವರು ಸಲಹೆ ನೀಡಿದರು ಎಂದು ತಿಳಿದುಬಂದಿದೆ.

ಮಧ್ಯಂತರ ಚುನಾವಣೆಯ ಸಾಧ್ಯತೆ ಇರುವುದರಿಂದ ಸೂಕ್ತ ತಯಾರಿ ನಡುಸುವಂತೆ ಸೂಚಿಸಿದ ಅವರು, ಬೆಂಬಲಿಗರ ಅನಗತ್ಯ ಹೇಳಿಕೆಗಳಿಂದ ಕಾರ್ಯಕರ್ತರಲ್ಲಿ ಗೊಂದಲ ಉಂಟಾಗಲಿದ್ದು, ಇದಕ್ಕೆ ಕಡಿವಾಣ ಹಾಕಬೇಕು. ಬಿಜೆಪಿ ನೇತೃತ್ವದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಜನವಿರೋಧಿ ಧೋರಣೆಯನ್ನು ಜನತೆಗೆ ಮನವರಿಕೆ ಮಾಡಿಕೊಡುವಂತೆ ಸಲಹೆ ನೀಡಿದ್ದಾರೆ ಎಂದು ಮೂಲಗಳು ಹೇಳಿವೆ.

ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ, ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಸಭೆಯಲ್ಲಿ ಹಾಜರಿದ್ದರು.

ಪ್ರತ್ಯೇಕ ಸಭೆ: ಮೊದಲು ಇಬ್ಬರೂ ನಾಯಕರೊಂದಿಗೆ ಸಭೆ ನಡೆಸಿದ ರಾಹುಲ್, ಬಳಿಕ ಸಿದ್ದರಾಮಯ್ಯ ಅವರೊಂದಿಗೆ ಪ್ರತ್ಯೇಕ ಸಭೆ ನಡೆಸಿದ್ದಾಗಿ ತಿಳಿದುಬಂದಿದೆ.

ಬಣ ರಾಜಕೀಯಕ್ಕೆ ಒತ್ತು ನೀಡುವ ಮೂಲಕ ಗೊಂದಲ ಸೃಷ್ಟಿಸಕೂಡದು ಎಂದೂ ಅವರು ತಾಕೀತು ಮಾಡಿದರು ಎನ್ನಲಾಗಿದೆ.

ಶಾಸಕರೇ ನಿರ್ಧರಿಸಲಿದ್ದಾರೆ: ಚುನಾವಣೆಯನ್ನು ಯಾರ ನೇತೃತ್ವದಲ್ಲಿ ಎದುರಿಸಬೇಕು ಎಂಬ ಪ್ರಶ್ನೆಯೇ ಇಲ್ಲ. ಬದಲಿಗೆ, ಕಾಂಗ್ರೆಸ್ ಪಕ್ಷದಲ್ಲಿ ಪ್ರತಿಯೊಬ್ಬ ಕಾರ್ಯಕರ್ತನೂ ಮುಖ್ಯ ಎಂದು ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಸಭೆಯ ನಂತರ ಸುದ್ದಿಗಾರರಿಗೆ ತಿಳಿಸಿದರು.

ಪಕ್ಷವು ಚುನಾವಣೆಯಲ್ಲಿ 130ರಿಂದ 150 ಸ್ಥಾನಗಳಲ್ಲಿ ಗೆಲುವು ಸಾಧಿಸಿದ ನಂತರ ಮುಖ್ಯಮಂತ್ರಿ ಯಾರಾಗಬೇಕು ಎಂಬುದನ್ನು ಶಾಸಕರು ನಿರ್ಧರಿಸಲಿದ್ದಾರೆ. ಆಗಲೂ ಗೊಂದಲ ಮುಂದುವರಿದರೆ ವರಿಷ್ಠರು ಈ ಬಗ್ಗೆ ತೀರ್ಮಾನ ಕೈಗೊಳ್ಳಲಿದ್ದಾರೆ. ಈ ಕುರಿತ ಚರ್ಚೆ ಈಗ ಅನಗತ್ಯ ಎಂದು ಅವರು ಹೇಳಿದರು.

'ಸಾಮೂಹಿಕ ನಾಯಕತ್ವದಲ್ಲಿ ನಂಬಿಕೆ ಇರುವ ಪಕ್ಷ ಕಾಂಗ್ರೆಸ್. ಒಂದಾಗಿ ಕೆಲಸ ಮಾಡುವಂತೆ ವರಿಷ್ಠರು ಸೂಚಿಸಿದ್ದು, ಅದನ್ನು ಪ್ರತಿಯೊಬ್ಬರೂ ಪಾಲಿಸಲಿದ್ದಾರೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

'ರಾಜಕಾರಣದಲ್ಲಿ ಚಿಕ್ಕಪುಟ್ಟ ಭಿನ್ನಾಭಿಪ್ರಾಯಗಳು ಇದ್ದೇ ಇರುತ್ತವೆ. ಪ್ರಜಾತಂತ್ರದಲ್ಲಿ ಭಿನ್ನಾಭಿಪ್ರಾಯ ಇರಲೇಬೇಕು. ಇದೇ ವಿಷಯವನ್ನು ದೊಡ್ಡದಾಗಿ ಬಿಂಬಿಸಬೇಕಿಲ್ಲ. ವರಿಷ್ಠರು ನೀಡಿರುವ ಸಲಹೆಯನ್ನು ಎಲ್ಲರೂ ಪಾಲಿಸಲಿದ್ದೇವೆ' ಎಂದು ಸಿದ್ದರಾಮಯ್ಯ ಹೇಳಿದರು.

ವಿಶೇಷ ಜಿಲ್ಲಾಧಿಕಾರಿ: ಐಎಎಸ್ ಅಧಿಕಾರಿ ನೇಮಕಕ್ಕೆ ಸೂಚನೆ

ಒಂದನೇ ಪುಟದಿಂದ

'ಕರ್ನಾಟಕ ಭೂಕಂದಾಯ ಕಾಯ್ದೆಯ ಸೆಕ್ಷನ್ 136 (3) ಮತ್ತು ಸೆಕ್ಷನ್ 67 (2)ರ ಪ್ರಕಾರ ಕೆಎಎಸ್ ಅಧಿಕಾರಿಗಳನ್ನು ಈ ಹುದ್ದೆಗೆ ನೇಮಿಸಲು ಅಧಿಕಾರ ಇಲ್ಲ. 2014ರ ಅಕ್ಟೋಬರ್ 10ರ ಹೈಕೋರ್ಟ್ ಆದೇಶಕ್ಕೂ ಇದು ವಿರುದ್ಧ' ಎಂದು ಅರ್ಜಿದಾರರು ತಿಳಿಸಿದ್ದಾರೆ.

'ಭೂಕಂದಾಯ ಕಾಯ್ದೆ ಪ್ರಕಾರ ಅರೆನ್ಯಾಯಿಕ ಕಾರ್ಯ ನಿರ್ವಹಿಸಬೇಕಾಗಿರುವ ಕಾರಣ ವಿಶೇಷ ಜಿಲ್ಲಾಧಿಕಾರಿಗಳ ಹುದ್ದೆಗಳಿಗೆ ಐಎಎಸ್ ಅಧಿಕಾರಿಗಳನ್ನೇ ನೇಮಿಸಬೇಕು. ಒಂದು ತಿಂಗಳಲ್ಲಿ ಮಾರ್ಪಡಿಸಿದ ಆದೇಶ ಹೊರಡಿಸಬೇಕು' ಎಂದು ಪೀಠ ತಿಳಿಸಿತು.

JOB OPPORTUNITIES

Teachers/ Professors

GURUKULA INTERNATIONAL School requires English Social, Maths Teachers for Primary and High school and Lady Accountant with Kannada Typing. Near Magadi Road, Metro Station, Bangalore-23. 7829338292, 7676676629.

SWAMY VIVEKANANDA INTERNATIONAL PUBLIC SCHOOL
#38, Near Housing Board Colony, Attur Layout, Yelahanka, Bengaluru - 560 064
URGENTLY REQUIRED
Lady Accountant with minimum 3 to 5 years of experience in school accounts with knowledge of Tally and ERP-9.
Mathematics, Physics, Social Science & English Teacher for High School with minimum experience of 3 years in CBSE Schools.
Interested candidates can walk-in for an interview on Monday 19.7.2021.
Phone : 9108221414 / 72044 37368
e-mail: svips.ynk@gmail.com Website: www.svips.in

Wanted Trained and Experienced Lady Teachers with excellent communication skills in English for Higher Primary and High School Graduate/ Post-Graduate with B.Ed. to teach Social Science and English.
Walk-In Interview between 2 p.m.-4.30 p.m. on Thursday, 22nd July, 2021
Florence High School
3rd Stage, 3rd Block Basaveshwaranagar, Bengaluru-560 079
Tel : 080-23236160 080-41536693

""ST.MARTIN'S. HIGH School, 7th Cross, Behind Anjan Theater, Magadi Road, Bangalore:-23 Requires:- Qualified & Trained. Teachers for Nursery, Primary & High School to teach all the Subjects including COMPUTER & P E. Contact Office Phone:: 080-23101999/ 9591990199""

BUNTS' SANGHA RNS VIDYANIKETAN - II
Yalachaguppe, Tavarekere, Bangalore.
Applications are invited for Lecturers for PUC.
SCIENCE
Physics, Maths, Chemistry, Biology & Electronics. (Faculty to handle CET, JEE and NEET coaching)
COMMERCE
Economics, Computer Science, Statistics and Accountancy
Minimum Qualification: Post Graduate with BEd With a Minimum 5 years of Experience in a reputed PU College. Remuneration: at par with the institutional standard. On campus accommodation available.
Please send your detailed resume within 10 days with a passport size photo to: Bunts' Sangha RNS Vidyaniketan, No. 324, Bunts' Sangha Complex, Chord Road, Vijayanagar, Bangalore - 560 040.
Email: info@bsrnsv.com
Contact No.: 080 - 23398922 / 080 - 23393610

AURO MIRRA International School, Ulsoor, Bangalore, Requires:- Accountant, Administrator, HOD- for English & Math, Teachers (all-subjects) Contact- 7760977548 jobs@auroschoolsulsoor.org www.auroschoolsulsoor.org

WANTED NAYANA Vidyanikethana Patashale, Required Experience High School Teachers for Maths, Science and English Subject, B.Ed. Compulsory. Address: Near Kengeri Around. Contact: 9632202212, 9448074325, 7483440310

GLOBAL ACADEMY FOR LEARNING
Next Gen School
Affiliated to CBSE, New Delhi
Applications are invited from qualified female candidates for the following posts:
Primary School – All Subjects Bachelor Degree with B.Ed and at least 2 years of previous experience
Secondary school - English, Social Studies, Maths and Physics Master Degree with B.Ed and at least 2 years of previous experience.
Librarian- B. Lib with at least two years of experience.
Eligible candidates may send their detailed resumes in an envelope clearly super-scribing the post applied for.
The soft copy of the application may be sent to contact@gaflschool.com.
Candidates with good communication skills and previous experience will be given preference.
R R Nagar, Bangalore

SAMBHRAM INSTITUTE OF TECHNOLOGY
BENGALURU
SaIT invites applications for faculty positions
PROFESSOR / ASSISTANT PROFESSOR
Dept. of CSE,ECE, MBA
Qualification : M.Tech / MBA (Min 3yrs of Exp.)
PLACEMENT CO-ORDINATOR
(Min 2 years of Experience)
Salary : as Per AICTE Norms
Please email your CV to ckgowda@gmail.com
Contact Principal at - 9900001936

WANTED ENGLISH MEDIUM TRAINED LADY TEACHERS B.A /M.A., B.Ed to teach English/ Social Science for Primary /Hindi for High School/ Primary/ N.T.T/ B.Sc Computer Science faculty. Contact in person (10.00 am-3.00 pm on all working days) - Secretary, Deccan Educational Society, No.95, 3rd Cross, Srirampuram, Bengaluru- 560021 (Near Sampige Theater, Malleswaram)

KARNATAKA YADAVA Education Society, Devanahalli Requires for Degree College PRINCIPAL with M.Com. Ph.D, KSET/NET & Asst.Professors in Commerce,Political Science, Economics, History, Kannada, English With PG,B.Ed& KSET. For B.Ed College LECTURERS in Mathematics, History, English,Commerce and Business Studies, Physical Education- PG, M.Ed withKSET. For PU College , LECTURERS in Kannada, English, Commerce, Economics, History with PG,B.Ed. For ITI College JTO Fitter (All Trades)-Diploma in Mechanical. For High School TEACHERS in Kannada, English, Hindi, Mathematics, Social Science, EVS- UG with B.Ed and TET. Contact:08041704396/ 9036823515/ 6362317737/ 9606380888/ 9845404022/ 9448462093. Mail: yadavaeducation@gmail.com

SHANTHINIKETHANA ENGLISH SCHOOL- Girinagar, Requires FEMALE TEACHERS: Trained/ Experienced/ Part-time & Fresher's can also can apply. For Nursery, Social, English & RECEPTIONIST. Shanthinikethana School, 1341/A, 8th Cross, 8th Main, Girinagar 2nd Phase, Bengaluru-85. Phone: 7760202693/ 080-26721334/ 26420794. E-mail: sesgirinagar@gmail.com;

ENGLISH, MATH - Physics & Hindi Teachers needed for Middle & High School for Chitrakoota CBSE School in Nagarbhavi, Kengeri Ring Road, with high salary. Immediately or for the next academic year. Call: 7829647333 chitrakootajobs@gmail.com

WANTED TRAINED Teachers to teach English, Mathematics and G.Science for Primary & Higher class for school near Vijaynagar Contact:9448016795 9901299450

MORNING STAR School, Ramachandra Puram, (Rajajinagar Entrance) Bangalore, Require B.Sc/ M.Sc, B.Ed, (Mathematics) Lady Teachers, Contact: 9845018480

REQUIRED ARTS Teacher with B.A., B.Ed., (English and S.S.) & Science Teacher with B.Sc.,B.Ed. (Mathematics & Science) for Higher Primary School. Contact immediately Hon. Secretary, Sri Vinayaka Education Society (R) #218, BanappaPark, Cubbonpet, Bengaluru 560002. Ph:22210459, 7406222209.

HERITAGE PUBLIC SCHOOL, Srinidhi Layout, Konanakunte, J.P.Nagar 8th-Phase, Bangalore-62. Urgently Requires Hindi and Chemistry/Biology TEACHERS For High School. Contact: 9901733776.

"ENDEAVOUR'S INTERNATIONAL School, Mugalur. Qualified English, Social Teachers required to teach 8/9/10 ICSE.Contact: 8722140020/ 9945058552."

Hospital & Medical Jobs

HOSMAT HOSPITAL is Recruiting the following Staff Male and Female at HOSMAT Second Unit at Ring Road, Hennur Junction (open) and Third Unit of HOSMAT is opening shortly at Sadashivanagar, #18, Bellary Main Road.
1. Administrator/COO/ CEO/VP
2. Medical Director
3. Marketing Head with Hospital Experience only
4. Duty Doctors (ICU)
5. Casualty Medical Officer/ Emergency Medical Officer
6. Corporate Marketing Executives
7. Accounts Manager with Hospital Experience
8. Accounts Execuitves
9. Branding and Digital Marketing Executives
10. International Marketing Manager
11. Patient Finance Co-ordinator / Advisor
12. House Keeping Incharge
13. ICU Nurses
14. Pharmacists
15. OT Scrub Nurses & OT Technicians
16. Nurses for Wards and Home care
17. Front Office- Manager & Executives
18. Patients Care / PR Executives
19. OT Staffs & Assistants
20. Billing and Collection Executives
21. Plaster Technicians
22. Echo Technicians
23. EEG Technicians
24. Dialysis Technicians
25. A/C Technicians
26. Electricians
27. Plumbers
28. House Keeping Staffs

Call: 080 41139762, 9108450312
recruitment@hosmathospitals.com
coordinatorhosmat@gmail.com

HRD & Admin

OFFICE ASSISTANT with computer knowledge required in chamrajpet jobs@eyesense.in

Accounts & Finance

REPUTED REAL Estate Company. Required Female ACCOUNTANT with 10 years experience, well knowledge of GST/TDS. Contact:9886150302/ 08023610405 Mail: jpnarayanslv@gmail.com

WANTED ACCOUNT Assistant with min 2 to 3 years experience for Garment Manufacturing Co. Basapura, Off Hosur Road, Email: santhaliapankaj@gmail.com

Call Centre

JOBS FOR-WOMEN (Reliance) Age above 30 years (Degree) Fixed Salary - 18,000/- Contact: 9343349670

Part-Time Jobs

PANDEMIC SITUATION Lost Job. MNC Provide Work From Home 30 to 35KCall: 7019215243/ 9886641282

Engg/ Production Technical

LEADING SUPER-GRADE Electrical Contractor Required Diploma/BE Electrical Engineers with 6-Months to 1-Year Experience. Contact: 9972056655

REQUIRED EXPERIENCED CNC-OPERATORS, QUALITY CONTROLLER, PRODUCTION ENGINEER. 'VINUMAC' #205A, Peenya 3rd phase, Bangalore-58. Contact: 080-28391959 admin@vinumac.com

WANTED SINGLE/MULTI Spindle Operators: Any qualification, Quality Inspectors: Qualification: PUC, Kamakshipalya, Bangalore-560079, Contact: 9845142536

GRANITE EOU requires Production Manager and Mechanical Maintenance Engineer for Multiwires and Line Polihsing Plant, Bangalore. Pharma14g@gmail.com

Marketing & Sales

WANTED
There is a good opportunity to work with Mattresses company as a Area Sales Manager in Bengaluru Market.
Contact Nos: 8884442047 9008728781
Mail id: comfortsleepmysuru@gmail.com

AGSAR PAINTS PVT. LTD REQUIRED Sales Executives (MALE) Qualification: Degree Age: 30-45 years Language: English, Kannada, Hindi and Tamil Email: bangalore@agsar.net Contact: 9535910010

Multiple Vacancy

REQUIRED IMMEDIATELY HR, Administration, Manager, Accounts, Supervisor, Technical Mechanical, Electronics, Electrical, Computer Engineers -7676760299/7676760399

Receptionist/ Secretary

REQUIRED EXPERIENCED Tele callersExcellent Remuneration, Incentives. send WhatsApp message about yourself Please don't call 8762424646Deevige ClassesMalleshwaram

General

EXECUTIVE MANAGER with good Communication, Computer Knowledge and routine Office Accounts required for Office near M.G. Road. Retired persons may also apply: Bangalore Trades' Association 080-23348834/ 9886754946.

RENTAL PROPERTIES

Accommodation Available

Commercial

RENT COMMERCIAL Independent New Building G+2, 900 Sft. Near Airtel Office Bommanahalli Signal Ready to occupy suitable for Retail Purpose- 7676666616

REAL ESTATE SELLING

Commercial Land

Intl Airport Road

SALE 30,000SFT Full/Part Commercial Land on Whitefield to International Airport Road, Near Bodigere, Opp KIADB. Attached to up-coming Manyata Tech Park. Call Owner: 9606369933/ 9606559933

Commerical

Vishweshwariah Layout

SALE COMMERCIAL 40x60 East Facing Railways Layout Near Ullalu RTO Office Suitable For Hospital or Complex Call Aswath: 9845074355

House

Hanumanthnagar

HANUMATHANAGAR, BULL Temple Road, old House 1200 Sft. Clear Titles, Going Cheap Contact: 8660514834, 9342410224

Residential/ Commercial

Rajarajeshwari Nagar

RAJARAJESWARI NAGAR, Bangalore University Layout (BDA) Site: 30 X 45, VASAVI ESTATES: 9900522163, 9880127399

Multiple Locations

CANARA BANK owned residential property for sale at Rajaji Nagar, Bengaluru and Dollars Colony, RMV Layout, Bengaluru. Please contact: 9449860134 /8951357925. For more details, Visit: www.canarabank.com>Tenders>Expression of interest

Sites

Hebbal

AVAILABLE/WANTED BDA Plots Arkavathy Layout, R.T.Nagar, Thanisandra, Hebbal, Jakkur, Yelahanka, HBR, Immediate settlement. "SPACELINKS" 9845129934.

Kumaraswamy Layout

BDA 30X40 Intermediate Vacant 2nd Stage, Near 15F/G Bus Stop, ISKCON South, Genuine Buyers Call 9972095359 Brokers Excuse.

AUTOMOTIVE

Four Wheelers Selling

Maruti

REQUIRED SALVAGE quote for Maruti Tour S 2018 model KA04AB 5742 with & without RC. 9844036218

BUSINESS

Business to Business

Business

ANGEL SUB BROKING FREE DEMAT/ TRADING ACCOUNT Opening Free* Stock Market Classes, Contact/ WhatsApp: 9845853152.

WANTED BUSINESS Partner, Lahab Veg Hotel, Investment Rs 5 Lakhs, Income 50:50. Contact: 8892501007/ 9606701007

Business Offers

Finance

NRI'S INVESTMENT And Finance AvailableOn LowInterest AgainstProperties, Land & Building,Sites,Flats, Converted& AgricultureLandsCall: 7411265189

General

EARN REGULAR INCOME through online TRADING from your home. Forex, Equity and Commodity segments. Get TRAINED by experts. Call 8105303232

EDUCATIONAL

Admission

ADMISSIONS OPEN 10th,12th, B.A, B.Com, BBA, B.Sc,BCA, B.Ed, MBA, MCA, M.A, M.Com,M.Sc, M.Ed, DIPLOMA,B.Tech, COURSES. Contact: 9901668842/ 9844321589.





Training

SAREE DRAPING and craft, one-day class for Varalakshmi festival at Basaveshwaranagar. Srinika creations. 9972341333

PERSONAL

Change of Name

I, SHARADA Anand W/o. Anand Kumar L.S, residing at Mandara, 1st floor, RNM Enclave, Chandrashekar Azad road, Gavipuram, Bangalore- 560019, My name has been entered as SHARADA. R in my Educational and other Records. Here declaring that my corrected name is SHARADA ANAND vide affidavit dated 20/07/2021 before notary L. Shankaranarayana, Bangalore.

JC670874H, SUB/MT, Amir Ali, ASC Centre and College, my father name service record ABDUS SAMAD instead of ABDUL SAMAD notary KV Mani, Bangalore.

I, BALU residing at No.1450, 3rd Cross, Govindarajangara, Bengaluru-560079 have changed my minor son's name from THYAGARAJ A.B. to THRISHUL A.B. vide affidavit dated 04/03/2021 before notary M.K.Devaki, Bengaluru

I, RAMESH RAJ.P.A R/at No. 522/A, 1st Main, 1st Cross, Sydicate Layout, Andrahalli Main Road, Herohalli, Bangalore-560091, have changed my Daughter Name from LAYA to LAYAA SRI vide affidavit dated: 19/7/2021 before Notary Kundan Babu Bangalore

I, RAJAMMA alias THIMMAMMA., W/o VENKATESH, R/at No.198, 10th Cross, Andanappa Main Road, Leggere, Bangalore -560058, hereby declare that my Names RAJAMMA and THIMMAMMA both the names belong me itself only, vide affidavit dated: 19/7/2021 Before Notary Onkarappa N.R Bangalore

JC670874H, SUB/MT, Amir Ali, ASC Centre and College, my mother name service record ISAKHA KHATUN instead of AYESHA KHATUN notary KV Mani, Bangalore.

6498026F, SEP/ASH, Naveen Kumar A, ASC Record(AT) mother name service record SHANTHI R instead of SHANTHI notary KV Mani, Bangalore.

Lost

LOST
I, Diana Fernandes R/at. # 05, 27th Main, 3rd Cross, Viveknagar Post, Ejipura, Blr-47, have lost my Rectification Deed No. 9631/2000-01/ 9.2.2001 of H.No.5/17, Old Site No.16, New No.2, 20th 'B' Cross, Begur Hobli, Blr. Executed by S.Gandhimathi to V. Narayanaswamy.
Finder may contact - 8147607437

SOCIAL SERVICES

Old Age Home

FLORANCE HEALTHCARE Services Luxury Old age home with All medical facilities and caretaker service in Nagarabavi Bangalore: 9620761222, 7829203447, 9900371597, 9739320897

ಮಾಧ್ಯಮ ನಿರ್ಬಂಧ ಸುತ್ತೋಲೆ ಹಿಂದಕ್ಕೆ

ಬೆಂಗಳೂರು: ವಿಧಾನಸೌಧದ ಆವರಣದಲ್ಲಿ ಮಾಧ್ಯಮ ಚಟುವಟಿಕೆಗಳ ಮೇಲೆ ನಿರ್ಬಂಧ ವಿಧಿಸಿ ಹೊರಡಿಸಿದ್ದ ಸುತ್ತೋಲೆಯನ್ನು ವಿಧಾನಸಭೆ ಸಚಿವಾಲಯ ಹಿಂದಕ್ಕೆ ಪಡೆದಿದೆ.

ವಿಧಾನಸೌಧದ ಕಾರಿಡಾರ್‌ಗಳಲ್ಲಿ ಪತ್ರಿಕಾ ಛಾಯಾಗ್ರಾಹಕರು ಛಾಯಾಗ್ರಹಣ ಮತ್ತು ವಿದ್ಯುನ್ಮಾನ ಮಾಧ್ಯಮಗಳು ವಿಡಿಯೊ ಚಿತ್ರೀಕರಣ ನಡೆಸುವುದನ್ನು ನಿರ್ಬಂಧಿಸಿ ಸುತ್ತೋಲೆ ಹೊರಡಿಸಲಾಗಿತ್ತು. ಗಣ್ಯ ವ್ಯಕ್ತಿಗಳ ಸುಗಮ ಚಲನವಲನಕ್ಕೆ ಅಡ್ಡಿ ಉಂಟಾಗುತ್ತಿದೆ ಎಂದು ಸುತ್ತೋಲೆಯಲ್ಲಿ ಸಮರ್ಥನೆ ನೀಡಲಾಗಿತ್ತು. ಸಚಿವಾಲಯದ ಈ ಕ್ರಮಕ್ಕೆ ವ್ಯಾಪಕ ಟೀಕೆ ವ್ಯಕ್ತವಾಗಿತ್ತು.

ಕುಮಾರ ನಿಜಗುಣ ಸ್ವಾಮೀಜಿ ಇನ್ನಿಲ್ಲ

ಪ್ರಜಾವಾಣಿ ವಾರ್ತೆ

ಕೊಳ್ಳೇಗಾಲ: ತಾಲ್ಲೂಕಿನ ಚಿಲುಕವಾಡಿಯ ಶಂಭುಲಿಂಗನ ಕ್ಷೇತ್ರದ ಕುಮಾರ ನಿಜಗುಣ ಸ್ವಾಮೀಜಿ (88) ಮಂಗಳವಾರ ಮುಂಜಾನೆ ಮೈಸೂರಿನ ಆಸ್ಪತ್ರೆಯಲ್ಲಿ ನಿಧನರಾದರು. ಅನಾರೋಗ್ಯದ ಕಾರಣಕ್ಕೆ ಅವರನ್ನು ಕೆಲವು ದಿನಗಳ ಹಿಂದೆ ಆಸ್ಪತ್ರೆಗೆ ದಾಖಲಿಸಲಾಗಿತ್ತು.



ಕಾವ್ಯಶಾಸ್ತ್ರ, ಛಂದಶಾಸ್ತ್ರಗಳಲ್ಲಿ ಪಾಂಡಿತ್ಯ ಹೊಂದಿದ್ದ ಅವರು ಅಧ್ಯಾತ್ಮ ಹಾಗೂ ಸಾಹಿತ್ಯ ಕ್ಷೇತ್ರದಲ್ಲಿ ಪ್ರಸಿದ್ಧರಾಗಿದ್ದರು. ಛಂದಸ್ಸಿನಲ್ಲಿ ಹಲವು ಆವಿಷ್ಕಾರಗಳನ್ನು ಮಾಡಿದ್ದರು. ಕ್ಲಿಷ್ಟಕರ ವೃತ್ತಗಳನ್ನು ಸುಲಲಿತವಾಗಿ ರಚಿಸುತ್ತಿದ್ದರು. ಬೋಳು ಬಸವನ ಬೊಂತೆ, ಪಾರ್ವತಿ ಪ್ರಣಯ ಕಲಹ, ಶಿವನ ಪಂಚವಿಂಶಂತಿ ಲೀಲೆಗಳು, ತ್ರಿಷಷ್ಠಿ ಪುರಾತನ ಸ್ತೋತ್ರ, ಶ್ರೀ ಶಿವಕುಮಾರ ಚರಿತಂ ಅವರ ಪ್ರಮುಖ ಕೃತಿಗಳು. 1933ರ ಜೂನ್ 15ರಂದು ತಾಲ್ಲೂಕಿನ ಮುಳ್ಳೂರಿನಲ್ಲಿ ಜನಿಸಿದ ಅವರ ಪೂರ್ವಾಶ್ರಮದ ಹೆಸರು ಬಸವಣ್ಣ. ವಕೀಲರಾಗಿದ್ದ ಅವರು 1981ರಲ್ಲಿ ಸನ್ಯಾಸ ದೀಕ್ಷೆ ಪಡೆದಿದ್ದರು. ಸಾಂಸಾರಿಕ ಜೀವನವನ್ನೂ ನಡೆಸಿದ್ದ ಅವರಿಗೆ ಮಗ ಮತ್ತು ಮಗಳು ಇದ್ದಾರೆ.

ಸ್ವಾಮೀಜಿಯ ಪಾರ್ಥಿವ ಶರೀರದ ಮೆರವಣಿಗೆ ನಡೆದ ಬಳಿಕ ಗ್ರಾಮದಲ್ಲಿ ವೀರಶೈವ ಲಿಂಗಾಯತ ಸಂಪ್ರದಾಯದಂತೆ ಅಂತ್ಯಕ್ರಿಯೆ ನೆರವೇರಿತು.

ಆಸ್ಕರ್‌ಗೆ ಗಾಯ; ಆಸ್ಪತ್ರೆಗೆ ದಾಖಲು

ಪ್ರಜಾವಾಣಿ ವಾರ್ತೆ



ಆಸ್ಕರ್ ಫರ್ನಾಂಡಿಸ್

ಮಂಗಳೂರು: ಹಿರಿಯ ಕಾಂಗ್ರೆಸ್ ಮುಖಂಡ ಆಸ್ಕರ್ ಫರ್ನಾಂಡಿಸ್ ಅವರು ಯೋಗ ಮಾಡುವ ವೇಳೆ ಜಾರಿ ಬಿದ್ದು ಗಾಯಗೊಂಡಿದ್ದು, ನಗರದ ಯೇನೆಪೋಯ ಸೂಪರ್ ಸ್ಪೆಶಾಲಿಟಿ ಆಸ್ಪತ್ರೆಗೆ ದಾಖಲಾಗಿದ್ದಾರೆ.

ಭಾನುವಾರ ಬೆಳಿಗ್ಗೆ ಯೋಗ ಮಾಡುವ ವೇಳೆ ಅವರು ನಿಯಂತ್ರಣ ತಪ್ಪಿ ಜಾರಿ ಬಿದ್ದಿದ್ದಾರೆ. ದೊಡ್ಡ ಪೆಟ್ಟಾಗಿಲ್ಲ ಎಂದು ನಿರ್ಲಕ್ಷಿಸಿದ್ದರು. ಭಾನುವಾರ ಸಂಜೆ ಆರೋಗ್ಯ ತಪಾಸಣೆಗಾಗಿ ಅವರು ಆಸ್ಪತ್ರೆಗೆ ತೆರಳಿದ್ದರು.

ವೈದ್ಯರು ತಪಾಸಣೆ ಮಾಡಿದಾಗ, ತಲೆಯ ಒಳಭಾಗಕ್ಕೆ ಪೆಟ್ಟಾಗಿರುವುದು ಗೊತ್ತಾಯಿತು.

'ಆಸ್ಕರ್ ಫರ್ನಾಂಡಿಸ್ ಅವರಿಗೆ ಕೂಡಲೇ ಶಸ್ತ್ರಚಿಕಿತ್ಸೆ ಮಾಡುವ ಅಗತ್ಯವಿದೆ ಎಂದು ವೈದ್ಯರು ಹೇಳಿದ್ದಾರೆ. ಸದ್ಯ ಅವರಿಗೆ ತೀವ್ರ ನಿಗಾ ಘಟಕದಲ್ಲಿ ವೆಂಟಿಲೇಟರ್ ಅಳವಡಿಸಿ ಚಿಕಿತ್ಸೆ ನೀಡಲಾಗುತ್ತಿದೆ' ಎಂದು ಆಸ್ಪತ್ರೆಯ ಮೂಲಗಳು ತಿಳಿಸಿವೆ.

'ನಾಳೆಯಿಂದ ಸುರ್ಜೇವಾಲಾ ರಾಜ್ಯ ಪ್ರವಾಸ'



ಸಲೀಂ ಅಹ್ಮದ್

ಮಂಗಳೂರು: ಎಐಸಿಸಿ ಪ್ರಧಾನ ಕಾರ್ಯದರ್ಶಿ, ಕರ್ನಾಟಕ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರು ಇದೇ 22ರಿಂದ ರಾಜ್ಯ ಪ್ರವಾಸ ಮಾಡಲಿದ್ದು, 25 ಜಿಲ್ಲೆಗಳ ಕಾಂಗ್ರೆಸ್ ನಾಯಕರೊಂದಿಗೆ ಸಭೆ ನಡೆಸಲಿದ್ದಾರೆ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹ್ಮದ್ ತಿಳಿಸಿದರು.

ನಗರದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಇದೇ 23ರಂದು ಮಂಗಳೂರಿಗೆ ಬರುವ ಸುರ್ಜೇವಾಲ, ದಕ್ಷಿಣ ಕನ್ನಡ, ಉಡುಪಿ, ಹಾಸನ, ಚಿಕ್ಕಮಗಳೂರು, ಶಿವಮೊಗ್ಗ ಜಿಲ್ಲೆಗಳ ಮುಖಂಡರೊಂದಿಗೆ ಸಭೆ ನಡೆಸಲಿದ್ದಾರೆ ಎಂದರು.

ಒಂದು ವಾರ ರಾಜ್ಯ ಪ್ರವಾಸ ನಡೆಸಲಿರುವ ಅವರು, ಬೆಂಗಳೂರು, ಮಂಗಳೂರು, ಹುಬ್ಬಳ್ಳಿ, ಬೆಳಗಾವಿಯಲ್ಲಿ ಸಭೆ ನಡೆಸಲಿದ್ದಾರೆ. ಹಾಲಿ, ಮಾಜಿ ಶಾಸಕರು, ಸಂಸದರು ಸೇರಿದಂತೆ ಪ್ರಮುಖ ಮುಖಂಡರು ಸಭೆಯಲ್ಲಿ ಭಾಗವಹಿಸಲಿದ್ದಾರೆ. ಪಕ್ಷ ಸಂಘಟನೆ ನಿಟ್ಟನಲ್ಲಿ ಈ ಸರಣಿ ಸಭೆ ಆಯೋಜಿಸಲಾಗಿದೆ ಎಂದು ತಿಳಿಸಿದರು.

ಮುಂಬರುವ ಉಪ ಚುನಾವಣೆ, ವಿಧಾನ ಪರಿಷತ್ ಚುನಾವಣೆ, ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಚುನಾವಣೆಗಳು, ಸರ್ಕಾರದ ವೈಫಲ್ಯ, ಜನರು ಎದುರಿಸುತ್ತಿರುವ ಸಂಕಷ್ಟ ಇತ್ಯಾದಿಗಳ ಬಗ್ಗೆ ಚರ್ಚೆ ನಡೆಯಲಿದೆ ಎಂದರು.

ಮದುವೆಯಲ್ಲಿ ಭಾಗಿ: ಕಡ್ಡಾಯ ರಜೆಯ ಶಿಕ್ಷೆ

ಕೊಪ್ಪಳ: ಕೊಲೆ ಪ್ರಕರಣದಲ್ಲಿ ಜಾಮೀನು ಪಡೆದ ರಾಜಕೀಯ ವ್ಯಕ್ತಿಯ ಪುತ್ರನ ಮದುವೆ ಸಮಾರಂಭದಲ್ಲಿ ಭಾಗವಹಿಸಿದ ಕಾರಣಕ್ಕಾಗಿ ಮೂವರು ಪೊಲೀಸ್ ಅಧಿಕಾರಿಗಳಿಗೆ ಕಡ್ಡಾಯ ರಜೆ ಮೇಲೆ ತೆರಳುವಂತೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಟಿ.ಶ್ರೀಧರ್ ಆದೇಶಿಸಿದ್ದಾರೆ.

ಗಂಗಾವತಿ ಡಿವೈಎಸ್ಪಿ ರುದ್ರೇಶ್ ಉಜ್ಜನಕೊಪ್ಪ, ಗಂಗಾವತಿ ಗ್ರಾಮೀಣ ಸಿಪಿಐ ಉದಯರವಿ ಹಾಗೂ ಕನಕಗಿರಿ ಪಿಎಸ್‌ಐ ತಾರಾಬಾಯಿ ಅವರಿಗೆ ಕಡ್ಡಾಯ ರಜೆ ನೀಡಲಾಗಿದೆ.

2015ರಲ್ಲಿನಡೆದವಿದ್ಯಾರ್ಥಿಯಲ್ಲಾಲಿಂಗ ಕೊಲೆ ಪ್ರಕರಣದ ಆರೋಪಿ ಹನುಮೇಶ ನಾಯಕ ಅವರ ಪುತ್ರ ಮಹಾಂತೇಶ ಅವರ ವಿವಾಹ ಕನಕಗಿರಿ ತಾಲ್ಲೂಕಿನ ಹುಲಿಹೈದರ್ ಗ್ರಾಮದಲ್ಲಿ ಜು.18ರಂದು ನಡೆಯಿತು. ಇದರಲ್ಲಿ ಈ ಅಧಿಕಾರಿಗಳು ಸಮವಸ್ತ್ರ ಧರಿಸಿ ಭಾಗಿಯಾಗಿದ್ದರು.


'ಮದುವೆಯಲ್ಲಿ ಭಾಗವಹಿಸಿದ ಕುರಿತು ಮಾಧ್ಯಮಗಳಲ್ಲಿ ವರದಿ ಪ್ರಕಟವಾಗಿದ್ದು, ಇದರಿಂದ ಇಲಾಖೆಗೆ ಮುಜುಗರ ಉಂಟಾಗಿದೆ. ರಾಜ್ಯ ಪೊಲೀಸ್ ಮಹಾ ನಿರ್ದೇಶಕ ಪ್ರವೀಣ್ ಸೂದ್, ಐಜಿಪಿ ಮನೀಶ್ ಕರ್ಬಿಕರ್ ನಿರ್ದೇಶನದ ಮೇರೆಗೆ ಈ ಕ್ರಮ ಕೈಗೊಳ್ಳಲಾಗಿದೆ' ಎಂದು ಎಸ್‌ಪಿ ತಿಳಿಸಿದ್ದಾರೆ.

ಯಲ್ಲಾಲಿಂಗನ ಕೊಲೆಗೆ ಜಿಲ್ಲೆಯಲ್ಲಿ ಭಾರಿ ಆಕ್ರೋಶ ವ್ಯಕ್ತವಾಗಿತ್ತು. ಆರೋಪಿಗಳು ಜಾಮೀನಿನ ಮೇಲೆ ಹೊರಗಡೆ ಬಂದಿದ್ದು, ಈ ಪ್ರಕರಣ ನ್ಯಾಯಾಲಯದಲ್ಲಿದೆ.

ನಿಮ್ಮೂರಿಗೆ ಕೈಗಾರಿಕೆ, ಮನೆಯಂಗಳಕ್ಕೆ ಉದ್ಯೋಗ

ಉದ್ಯೋಗ ಸೃಷ್ಟಿಯಲ್ಲಿ ಕ್ರಾಂತಿ

ಕೋವಿಡ್‌ನಂತಹ ಸಂಕಷ್ಟದ ಸಮಯದಲ್ಲಿಯೂ ರಾಜ್ಯ ಸರ್ಕಾರ ಹಲವಾರು ಬಂಡವಾಳ ಹೂಡಿಕೆದಾರರನ್ನು ಸೆಳೆಯುವಲ್ಲಿ ಯಶಸ್ವಿಯಾಗಿದೆ. ಉದ್ಯಮ ಸ್ನೇಹಿ ಹೊಸ ಕೈಗಾರಿಕಾ ನೀತಿಯ ಮೂಲಕ ಕೈಗಾರಿಕಾ ಕ್ಷೇತ್ರದಲ್ಲಿ ಕ್ರಾಂತಿ ಮಾಡುತ್ತಿದೆ. ಬೆಂಗಳೂರಿನಂತೆಯೇ ರಾಜ್ಯದ ವಿವಿಧೆಡೆ ಉದ್ಯಮಿಗಳಿಗೆ ಬೇಕಾದ ಎಲ್ಲ ಸೌಲಭ್ಯಗಳನ್ನು ಒದಗಿಸುತ್ತಿದೆ. ವಿವಿಧ ಕ್ಷೇತ್ರವಾರು ಕ್ಲಸ್ಟರ್‌ಗಳನ್ನೇ ಆರಂಭಿಸುತ್ತಿದೆ.


ಜಗದೀಶ ಶೆಟ್ಟರ್

ಬೆಂಗಳೂರಿಗೆ ಸೀಮಿತವಾಗಿದ್ದ ಕೈಗಾರಿಕೆಗಳನ್ನು ರಾಜ್ಯದ ಉಳಿದೆಡೆ ತರುವುದು ಸವಾಲಾಗಿತ್ತು. ಈ ಸವಾಲನ್ನು ಸ್ವೀಕರಿಸಿದ ರಾಜ್ಯ ಸರ್ಕಾರ, ರಾಜ್ಯದ ಎರಡು ಹಾಗೂ ಮೂರನೇ ಹಂತದ ನಗರಗಳಿಗೂ ಕೈಗಾರಿಕೆಗಳನ್ನು ಸೆಳೆಯುವಲ್ಲಿ ಯಶಸ್ವಿಯಾಗಿದೆ. ಪರಿಣಾಮ ಕಲ್ಯಾಣ ಕರ್ನಾಟಕದ ಯಾದಗಿರಿ ಜಿಲ್ಲೆಯ ಕಡೇಚೂರಿನಿಂದ ಹಿಡಿದು ಚಾಮರಾಜನಗರ ಜಿಲ್ಲೆಯವರೆಗೂ ಉದ್ಯಮಗಳು ಹರಡಿಕೊಳ್ಳಲಾರಂಭಿಸಿವೆ.

ಬೆಂಗಳೂರಿನಿಂದ ಹೊರಗಡೆ ಮೊದಲ ಬಾರಿಗೆ ಹುಬ್ಬಳ್ಳಿಯಲ್ಲಿ ನಡೆಸಿದ ಬಂಡವಾಳ ಹೂಡಿಕೆದಾರರ ಸಮಾವೇಶಕ್ಕೂ ಉತ್ತಮ ಪ್ರತಿಕ್ರಿಯೆ ದೊರಕಿತ್ತು. ಮುಂದಿನ ಹಂತದಲ್ಲಿ ಕಲಬುರ್ಗಿ, ಮೈಸೂರು ಸೇರಿದಂತೆ ರಾಜ್ಯದ ವಿವಿಧೆಡೆ ಬಂಡವಾಳ ಹೂಡಿಕೆದಾರರ ಸಮಾವೇಶ ಆಯೋಜಿಸಲು ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ. ನಿಮ್ಮ ಜಿಲ್ಲೆಗಳಿಗೆ ಕೈಗಾರಿಕೆಗಳನ್ನು ತರುವುದಷ್ಟೇ ಅಲ್ಲ; ನಿಮ್ಮ ಮನೆಯಂಗಳಕ್ಕೂ ಉದ್ಯೋಗವಕಾಶಗಳನ್ನು ತರಲಾಗುತ್ತಿದೆ. ಇದರಿಂದ ಉದ್ಯೋಗಕ್ಕಾಗಿ ಪುಣೆ, ಮುಂಬೈ, ಬೆಂಗಳೂರು ಸೇರಿದಂತೆ ಬೇರೆಡೆ ಹೋಗುವುದು ತಪ್ಪಲಿದೆ. ಇಲ್ಲಿನ ಕುಟುಂಬಗಳ ಆರ್ಥಿಕ ಸ್ಥಿತಿಯಲ್ಲಿಯೂ ಬದಲಾವಣೆಗೆ ನಾಂದಿ ಹಾಡಲಿದೆ.

2020-25ರವರೆಗಿನ ನೂತನ ಕೈಗಾರಿಕಾ ನೀತಿಯಡಿ ರಾಜ್ಯದ ಸಮಗ್ರ ಅಭಿವೃದ್ಧಿಯ ಜತೆಗೆ ಬೆಂಗಳೂರಿನಿಂದ ಹೊರಗೆ ಕೈಗಾರಿಕೆಗಳನ್ನು ವಿಸ್ತರಿಸುವುದು ಸರ್ಕಾರದ ಉದ್ದೇಶವಾಗಿದೆ. ಹಿಂದುಳಿದಿರುವ ಕೈಗಾರಿಕಾ ಅಭಿವೃದ್ಧಿಯನುಸಾರ ಬಂಡವಾಳ ಹೂಡಿಕೆಗಳಿಗೆ ರಿಯಾಯಿತಿ ಒದಗಿಸಲು ರಾಜ್ಯದ ಜಿಲ್ಲೆಗಳನ್ನು ಮೂರು ವಲಯಗಳನ್ನಾಗಿ ವಿಂಗಡಿಸಲಾಗಿದೆ.

ಜೋನ್-1 ಹಾಗೂ 2 ಕೈಗಾರಿಕಾ ಅಭಿವೃದ್ಧಿಯಲ್ಲಿ ಹಿಂದುಳಿದ ಜಿಲ್ಲೆಗಳು ಸೇರಿರುತ್ತವೆ. ಬೆಂಗಳೂರು ನಗರ ಹಾಗೂ ಗ್ರಾಮಾಂತರ ಜಿಲ್ಲೆಗಳನ್ನು ಜೋನ್-3 ರಲ್ಲಿ ವರ್ಗೀಕರಿಸಲಾಗಿದೆ. ಬೆಂಗಳೂರು ನಗರದಂತೆಯೇ ರಾಜ್ಯದ ಎರಡನೇ ಹಾಗೂ ಮೂರನೇ ಹಂತದ ನಗರಗಳಲ್ಲಿ ಕೈಗಾರಿಕೆಗಳ ಸ್ಥಾಪನೆಗೆ ಹಾಗೂ ಬಂಡವಾಳ ಹೂಡಿಕೆಗೆ ಉತ್ತಮ ವಾತಾವರಣ ನಿರ್ಮಾಣವಾಗಿದೆ. ನೂತನ ಕೈಗಾರಿಕಾ ನೀತಿಯಲ್ಲಿ ಸಾಕಷ್ಟು ವಿಶೇಷ ಅನುಕೂಲಗಳನ್ನು ಒದಗಿಸಿಕೊಡಲಾಗಿದೆ. ವಿಶೇಷ ಸೌಲಭ್ಯಗಳನ್ನೂ ಕಲ್ಪಿಸಿಕೊಡಲಾಗಿದೆ.

ರಾಜ್ಯದ ಇತರ ಜಿಲ್ಲೆಗಳಲ್ಲೂ ಕೈಗಾರಿಕೆಗಳ ಸ್ಥಾಪನೆ ಹಾಗೂ ಬಂಡವಾಳ ಹೂಡಿಕೆಗೆ ವಿಫುಲ ಅವಕಾಶಗಳಿವೆ. ಉತ್ತಮ ಸಾರಿಗೆ ಸಂಪರ್ಕ, ವಿಮಾನ ಯಾನ, ಗುಣಮಟ್ಟದ ಮಾನವ ಸಂಪನ್ಮೂಲ ಸೇರಿ ಹಲವಾರು ಸೌಲಭ್ಯಗಳನ್ನು ರಾಜ್ಯ ಸರ್ಕಾರ ನೀಡುತ್ತಿದೆ.

ಬೆಂಗಳೂರು ಮಾತ್ರವಲ್ಲದೇ ಚಾಮರಾಜನರ, ಶಿವಮೊಗ್ಗ, ಹುಬ್ಬಳಿ-ಧಾರವಾಡ, ಕಲಬುರ್ಗಿ ಸೇರಿ ರಾಜ್ಯದ ಇತರೆಡೆಯೂ ಬಂಡವಾಳ ಹೂಡುವಂತೆ ಕೈಗಾರಿಕೋದ್ಯಮಿಗಳ ಮನವೊಲಿಸುವ ಒಂದು ಹಂತದ ಯಶಸ್ಸು ಸಿಕ್ಕಿದೆ. ಜತೆಗೆ ಇನ್ನಷ್ಟು ಉದ್ಯಮಿಗಳನ್ನು ಸೆಳೆಯುವ ಪ್ರಯತ್ನ ನಡೆದಿದೆ. ಜತೆಗೆ, ಅಲ್ಲಿ ಕೈಗಾರಿಕೆ ಸ್ಥಾಪಿಸುವುದುದಾದರೆ ಎಲ್ಲ ರೀತಿಯ ಸೌಲಭ್ಯ ಕಲ್ಪಿಸಲಾಗುತ್ತಿದೆ.

ಅಮೆಜಾನ್ ಜೊತೆ ಒಪ್ಪಂದ

ಕೋವಿಡ್‌ನಿಂದ ಅತಿ ಹೆಚ್ಚು ಹಾನಿಗೊಳಗಾದ ವಲಯಗಳಲ್ಲಿ ಒಂದಾದ ಸೂಕ್ಷ್ಮ, ಸಣ್ಣ, ಮಧ್ಯಮ ಕೈಗಾರಿಕೆಗಳ ಚೇತರಿಕೆಗೆ ರಾಜ್ಯ ಸರ್ಕಾರವು ಅಮೆಜಾನ್ ಜತೆಗೆ ಮಾಡಿಕೊಂಡಿರುವ ಒಪ್ಪಂದ ನೆರವಾಗಿದೆ. ಬಳ್ಳಾರಿ, ಮೈಸೂರು, ಚನ್ನಪಟ್ಟಣ ಮುಂತಾದ ಪ್ರಮುಖ ಎಂಎಸ್ಎಂಇ ಕ್ಲಸ್ಟರ್‌ಗಳಲ್ಲಿ ಉದ್ಯಮಿಗಳಿಗೆ ಅಮೆಜಾನ್ ತರಬೇತಿ, ಕಾರ್ಯಾಗಾರಗಳನ್ನು ನಡೆಸಲಿದೆ.

ವಿಶ್ವದಾದ್ಯಂತ 30 ಕೋಟಿಗೂ ಹೆಚ್ಚು ಗ್ರಾಹಕರನ್ನು ಹೊಂದಿರುವ ಅಮೆಜಾನ್ ಬಿ2ಸಿ (ಉದ್ಯಮದಿಂದ ಗ್ರಾಹಕರಿಗೆ), ಇ-ಕಾಮರ್ಸ್ ರಫ್ತಿನ ಬಗ್ಗೆ ಅರಿವು ಮೂಡಿಸಲಿದೆ. ಇದರಿಂದ ತಮ್ಮದೇ ಬ್ರ್ಯಾಂಡ್ ಆರಂಭಿಸಿ ಅಮೆಜಾನ್ ಗ್ಲೋಬಲ್ ಸೆಲ್ಲಿಂಗ್ ಮೂಲಕ ಅಂತರರಾಷ್ಟ್ರೀಯ ಮಾರುಕಟ್ಟೆಗಳಲ್ಲಿಯೂ ಸಹ ಉದ್ಯಮದಾರರು ವಹಿವಾಟು ನಡೆಸಬಹುದಾಗಿದೆ.

ಬೆಂಗಳೂರಲ್ಲದೇ ಇತರ ನಗರಗಳಲ್ಲಿ ಕೈಗಾರಿಕಾ ಅಭಿವೃದ್ಧಿಗೆ ಆದ್ಯತೆ ನೀಡಲಾಗಿದ್ದು, ಕೆಳಕಂಡ ಉದಾಹರಣೆಗಳನ್ನು ನೀಡಬಹುದಾಗಿದೆ.

ಕೊಪ್ಪಳದಲ್ಲಿ ಆಟಿಕೆ ಕ್ಲಸ್ಟರ್, ಹುಬ್ಬಳ್ಳಿ ಧಾರವಾಡದಲ್ಲಿ ಎಫ್‌ಎಂಸಿಜಿ ಕ್ಲಸ್ಟರ್, ಯಾದಗಿರಿಯ ಜಿಲ್ಲೆಯಲ್ಲಿ ಫಾರ್ಮಾ ಕ್ಲಸ್ಟರ್ ಅಭಿವೃದ್ಧಿಪಡಿಸಲಾಗಿದೆ.

ಬೆಳಗಾವಿಯಲ್ಲಿ ಏರೋಸ್ಪೇಸ್ ಪ್ರಿಸಿಷನ್ ಎಂಜಿನಿಯರಿಂಗ್ ಮತ್ತು ಮ್ಯಾನುಫ್ಯಾಕ್ಚರಿಂಗ್ ವಿಶೇಷ ಆರ್ಥಿಕ ವಲಯ ಕೇಂದ್ರವಿದೆ. ಜತೆಗೆ, ರಾಜ್ಯದಾದ್ಯಂತ ಐದಾರು ಕೈಗಾರಿಕಾ ಟೌನ್‌ಷಿಪ್ ಅಭಿವೃದ್ಧಿ ಪಡಿಸಲಾಗುತ್ತದೆ. ತುಮಕೂರಿನಲ್ಲಿ ಮಷಿನ್ ಟೂಲ್ಸ್ ಪಾರ್ಕ್, ಫುಡ್ ಪಾರ್ಕ್, ಜಪಾನೀಸ್ ಕೈಗಾರಿಕಾ ಪ್ರದೇಶ ಹೀಗೆ ಹಲವಾರು ಕೈಗಾರಿಕಾ ಪ್ರದೇಶಗಳನ್ನು ಅಭಿವೃದ್ಧಿಪಡಿಸಲಾಗಿದ್ದು, ಪ್ರಮುಖ ಕೈಗಾರಿಕೆಗಳು ತಮ್ಮ ಕಾರ್ಖಾನೆಗಳನ್ನು ಪ್ರಾರಂಭಿಸಿವೆ.

ಕೋಲಾರ ಜಿಲ್ಲೆಯ ಕೋಲಾರ್ ಗೋಲ್ಡ್ ಫೀಲ್ಡ್ (ಕೆಜಿಎಫ್) ನಲ್ಲಿ ಕರ್ನಾಟಕದ ಅತಿದೊಡ್ಡ ಕೈಗಾರಿಕಾ ಟೌನ್‌ಷಿಪ್ ನಿರ್ಮಾಣವಾಗಲಿದ್ದು, ರಾಜ್ಯ ಸರ್ಕಾರವು ಭಾರತ್ ಗೋಲ್ಡ್ ಮೈನ್ಸ್ ಲಿ. (ಬಿಜಿಎಂಎಲ್) ಗೆ ಸೇರಿದ 3,212 ಎಕರೆ ಭೂಮಿಯಲ್ಲಿ ಡ್ರೋನ್ ಸಮೀಕ್ಷೆ ನಡೆಸಲಾಗುತ್ತಿದೆ.

20ಲಕ್ಷ ಉದ್ಯೋಗ ಗುರಿ

- ಮುಂದಿನ 5 ವರ್ಷಗಳಲ್ಲಿ ₹ 5 ಲಕ್ಷ ಕೋಟಿ ಮೌಲ್ಯದ ಬಂಡವಾಳ ಹೂಡಿಕೆ ಮತ್ತು 20 ಲಕ್ಷ ಜನರಿಗೆ ಉದ್ಯೋಗಾವಕಾಶ ಸೃಷ್ಟಿಯ ಗುರಿ ಹೊಂದಲಾಗಿದೆ. ಕರ್ನಾಟಕವನ್ನು ವಿಶ್ವದರ್ಜೆಯ ಔದ್ಯಮಿಕ ಜಾಲವಾಗಿ ಅಭಿವೃದ್ಧಿ ಪಡಿಸಲು ಚೆನ್ನೈ, ಬೆಂಗಳೂರು ಕೈಗಾರಿಕಾ ಕಾರಿಡಾರ್‌ನ ಭಾಗವಾಗಿ ತುಮಕೂರಿನಲ್ಲಿ ಕೈಗಾರಿಕಾ ಕಾರಿಡಾರ್ ನಿರ್ಮಾಣಕ್ಕೆ ಕೇಂದ್ರ ಸರ್ಕಾರ ₹1,701.81 ಕೋಟಿ ಮೀಸಲಿರಿಸಿದ್ದು, ಇದರಿಂದ ಅಂದಾಜು 88,500 ಜನರಿಗೆ ಉದ್ಯೋಗ ದೊರೆಯಲಿದೆ.
- ಏಷ್ಯಾದಲ್ಲೇ ಅತಿ ದೊಡ್ಡ ಏರೋಸ್ಪೇಸ್ ಹಬ್ ಆಗಿ ಹೊರಹೊಮ್ಮಲು ಸಜ್ಜಾಗಿರುವ ಕರ್ನಾಟಕ, ಏರೋಸ್ಪೇಸ್ ಮತ್ತು ರಕ್ಷಣಾ ಉದ್ಯಮಗಳಿಗೆ ಸಂಬಂಧಿಸಿದ ₹2,464 ಕೋಟಿ ಮೊತ್ತದ 34 ಒಪ್ಪಂದಗಳಿಗೆ ಏರೋ ಇಂಡಿಯಾ 20201ರಲ್ಲಿ ಸಹಿ ಹಾಕಿದೆ. ಇದರಿಂದ 6,462 ಉದ್ಯೋಗ ಸೃಷ್ಟಿಯಾಗುವ ನಿರೀಕ್ಷೆ ಇದೆ.

ರಾಜ್ಯದಲ್ಲಿ ಶೇ 39.19ರಷ್ಟು ಹೂಡಿಕೆ

ಮುಖ್ಯಮಂತ್ರಿ ಅವರ ಅಧ್ಯಕ್ಷತೆಯಲ್ಲಿ ನಡೆಯುವ ರಾಜ್ಯ ಸರ್ಕಾರದ ಉನ್ನತ ಮಟ್ಟದ ಒಪ್ಪಿಗೆ ನೀಡಿಕೆ ಸಮಿತಿ (ಎಸ್‌ಎಚ್‌ಎಲ್‌ಸಿಸಿ) ಹಾಗೂ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರ ಅಧ್ಯಕ್ಷತೆಯಲ್ಲಿ ನಡೆಯುವ ರಾಜ್ಯ ಮಟ್ಟದ ಏಕಗವಾಕ್ಷಿ ಅನುಮೋದನಾ ಸಮಿತಿ ಸಭೆಯಲ್ಲಿ ಜೂನ್ - 2019 ರಿಂದ ಏಪ್ರಿಲ್ 2021ರವರೆಗೆ 661 (613 ಹೊಸ ಪ್ರಸ್ತಾವಗಳು, 48 ಹೆಚ್ಚುವರಿ ಹೂಡಿಕೆ ಪ್ರಸ್ತಾವಗಳು) ಬಂಡವಾಳ ಹೂಡಿಕೆ ಪ್ರಸ್ತಾವಗಳಿಗೆ ಅನುಮೋದನೆ ನೀಡಿದೆ. ಈ ಯೋಜನೆಗಳಿಂದ ₹1,05,646.22 ಕೋಟಿ ಬಂಡವಾಳ ಹೂಡಿಕೆಯಾಗಿದ್ದು, 2,28,164 ಜನರಿಗೆ ಉದ್ಯೋಗ ಅವಕಾಶ ಲಭ್ಯವಾಗಲಿದೆ.

2019ರಲ್ಲಿ ದೇಶದಲ್ಲಿ ವಿವಿಧ ಕೈಗಾರಿಕೆಗಳನ್ನು ಸ್ಥಾಪಿಸಲು ಒಟ್ಟು 2,378 ಬಂಡವಾಳ ಹೂಡಿಕೆ ಪ್ರಸ್ತಾವಗಳು ₹6,78,852 ಕೋಟಿ ಬಂಡವಾಳದೊಂದಿಗೆ ನೋಂದಾಯಿತವಾಗಿವೆ. ಈ ಪೈಕಿ ರಾಜ್ಯಕ್ಕೆ 251 ಹೂಡಿಕೆ ಪ್ರಸ್ತಾವಗಳು ಹಾಗೂ ₹83,492 ಕೋಟಿ ಬಂಡವಾಳ ಹೂಡಿಕೆ ಪ್ರಸ್ತಾವಗಳು ಬಂದಿವೆ. ಅಂದರೆ, ದೇಶದ ಒಟ್ಟು ಹೂಡಿಕೆ ಪ್ರಸ್ತಾವಗಳಲ್ಲಿ ರಾಜ್ಯದ ಪಾಲು ಶೇ12.9 ರಷ್ಟಾಗಿದೆ.

ಕೇಂದ್ರ ಸರ್ಕಾರದ ಡಿಪಿಐಐಟಿ ಇಲಾಖೆಯು ಅಧಿಕೃತ ಮಾಹಿತಿ ಪ್ರಕಾರ, 2020ರಲ್ಲಿ ದೇಶದಲ್ಲಿ ವಿವಿಧ ಕೈಗಾರಿಕೆಗಳನ್ನು ಸ್ಥಾಪಿಸಲು ಒಟ್ಟು 1,432 ಬಂಡವಾಳ ಹೂಡಿಕೆ ಪ್ರಸ್ತಾವಗಳು ₹41,4620 ಕೋಟಿ ಬಂಡವಾಳದೊಂದಿಗೆ ನೋಂದಾಯಿತವಾಗಿವೆ. ಈ ಪೈಕಿ ರಾಜ್ಯಕ್ಕೆ 120 ಹೂಡಿಕೆ ಪ್ರಸ್ತಾವಗಳು ₹1,62,492 ಕೋಟಿ ಬಂಡವಾಳ ಹೂಡಿಕೆ ಪ್ರಸ್ತಾವಗಳು ಬಂದಿವೆ. ಅಂದರೆ, ದೇಶದ ಒಟ್ಟು ಹೂಡಿಕೆ ಪ್ರಸ್ತಾವಗಳಲ್ಲಿ ರಾಜ್ಯದ ಪಾಲು ಶೇ 39.19ರಷ್ಟಾಗಿದೆ.


ವಿಶೇಷ ಹೂಡಿಕೆ ವಲಯ ಕುರಿತು ಅಧ್ಯಯನಕ್ಕೆ ಗುಜರಾತ್‌ಗೆ ತೆರಳಿದ್ದ ಕೈಗಾರಿಕಾ ಸಚಿವ ಜಗದೀಶ ಶೆಟ್ಟರ್ ನೇತೃತ್ವದ ತಂಡದೊಂದಿಗೆ ಮುಖ್ಯಮಂತ್ರಿ ವಿಜಯ್ ರೂಪಾನಿ



ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಜೊತೆ ಕೈಗಾರಿಕಾ ಸಚಿವ ಜಗದೀಶ ಶೆಟ್ಟರ್

ಗುಜರಾತ್‌ನಲ್ಲಿ ಶೆಟ್ಟರ್ ತಂಡದ ಅಧ್ಯಯನ

ರಾಜ್ಯದ ನೂತನ ಕೈಗಾರಿಕಾ ನೀತಿಯಲ್ಲಿ ವಿಶೇಷ ಹೂಡಿಕೆ ವಲಯ ನಿರ್ಮಾಣದ ಪ್ರಸ್ತಾವವಿದೆ. ಈ ಹಿನ್ನೆಲೆಯಲ್ಲಿ ಅಧ್ಯಯನ ನಡೆಸಲು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಜಗದೀಶ ಶೆಟ್ಟರ್ ನೇತೃತ್ವದ ತಂಡ ಗುಜರಾತ್‌ಗೆ ತೆರಳಿ ಅಲ್ಲಿನ ಮುಖ್ಯಮಂತ್ರಿ ವಿಜಯ್ ರೂಪಾನಿ ಅವರೊಂದಿಗೆ ಚರ್ಚಿಸಿದ್ದು ಬಹು ದೊಡ್ಡ ಹೆಜ್ಜೆಯಾಗಿದೆ.

ಗುಜರಾತ್‌ನ ಧೋಲೇರಾ 'ಗಿಫ್ಟ್ ಸಿಟಿ' ವಿಶೇಷ ಹೂಡಿಕೆ ವಲಯ ಮತ್ತು ಸ್ಮಾರ್ಟ್ ಸಿಟಿಗೆ ಭೇಟಿ ನೀಡಿದ್ದ ಶೆಟ್ಟರ್ ಅಲ್ಲಿನ ವಿಶೇಷತೆಗಳನ್ನು ಗಮನಿಸಿದರು. ಅದೇ ರೀತಿ ರಾಜ್ಯದಲ್ಲಿಯೂ ವಿಶೇಷ ಹೂಡಿಕೆ ವಲಯ ನಿರ್ಮಿಸುವ ಉದ್ದೇಶ ಹೊಂದಿದ್ದಾರೆ.

ಗುಜರಾತ್‌ನಲ್ಲಿರುವ ಕೈಗಾರಿಕಾ ನೀತಿ, ಭೂಸ್ವಾಧೀನ ಪ್ರಕ್ರಿಯೆ, ಹೂಡಿಕೆದಾರರ ಸಮಾವೇಶ ಸೇರಿದಂತೆ ಹಲವು ವಿಷಯಗಳ ಕುರಿತು ಶೆಟ್ಟರ್ ಚರ್ಚಿಸಿದ್ದಾರೆ. ಕೈಗಾರಿಕೆಗಳ ಅಭಿವೃದ್ಧಿಗೆ ಪೂರಕವಾಗಿ ರಾಜ್ಯದಲ್ಲಿ ನೀತಿ, ನಿಯಮಗಳಿಗೆ ಮಾಡಬಹುದಾದ ಬದಲಾವಣೆ ಕುರಿತು ಮಾಹಿತಿ ಸಂಗ್ರಹಿಸಿದ್ದಾರೆ.

ಹೂಡಿಕೆ ವಿವರ

ಕೊರೊನಾ ಎರಡನೇ ಅಲೆ ಮಧ್ಯೆಯೂ ರಾಜ್ಯದಲ್ಲಿ ₹17,718 ಕೋಟಿ ಬಂಡವಾಳ ಹೂಡಿಕೆಯಾಗಿದೆ. ಕೊರೊನಾ ಮತ್ತು ಲಾಕ್‌ಡೌನ್‌ನಿಂದ ಉದ್ಯಮಗಳು ಕಂಗಾಲಾಗಿರುವ ಸಂದರ್ಭದಲ್ಲೂ ಹೆಚ್ಚು ಬಂಡವಾಳ ಆಕರ್ಷಿಸಲು ರಾಜ್ಯ ಸರ್ಕಾರ ಯಶಸ್ವಿಯಾಗಿದೆ. ಕಳೆದೆರೆಡು ತಿಂಗಳಲ್ಲಿ (ಏಪ್ರಿಲ್-ಮೇ) 120 ಯೋಜನೆಗಳಿಗೆ ಅನುಮೋದನೆ ನೀಡಿರುವ ಸರ್ಕಾರ ಒಟ್ಟು ₹17,718 ಕೋಟಿ ಮೊತ್ತದ ಹೂಡಿಕೆಗೆ ವಿವಿಧ ಕಂಪನಿಗಳಿಗೆ ಅನುಮೋದನೆ ನೀಡಿದೆ. ಲಾಕ್‌ಡೌನ್ ಸಂದರ್ಭದಲ್ಲಿ ಬಹುತೇಕ ಕಂಪನಿಗಳು ಯೋಜನೆಗಳ ಅನುಷ್ಠಾನಕ್ಕೆ ಕರ್ನಾಟಕವನ್ನೇ ಆಯ್ದುಕೊಂಡಿರುವುದು ಗಮನಾರ್ಹ ಸಂಗತಿ. ಈ ಹೂಡಿಕೆಗಳಿಂದ 19,729 ಉದ್ಯೋಗ ಸೃಷ್ಟಿಯಾಗಲಿವೆ.

ವಿದೇಶಿ ನೇರ ಹೂಡಿಕೆ

2019-2020ನೇ ಸಾಲಿನಲ್ಲಿ ₹30,746 ಕೋಟಿ ವಿದೇಶಿ ನೇರ ಬಂಡವಾಳ ಆಕರ್ಷಿಸಿ ರಾಜ್ಯ ಮೂರನೇ ಸ್ಥಾನದಲ್ಲಿತ್ತು. ಕೋವಿಡ್ ಸಂಕಷ್ಟಗಳ ನಡುವೆಯೂ 2020-21ನೇ ಸಾಲಿನಲ್ಲಿ ₹56,884 ಕೋಟಿ ವಿದೇಶಿ ನೇರ ಬಂಡವಾಳ ಆಕರ್ಷಿಸಿ ಮೂರನೇ ಸ್ಥಾನ ಕಾಯ್ದುಕೊಂಡಿದೆ.

ಹೂಡಿಕೆ ಹೆಚ್ಚಳಕ್ಕೆ ಕಾರಣಗಳು

- ಹೊಸ ಕೈಗಾರಿಕಾ ನೀತಿ ಘೋಷಣೆ– ವಿಶೇಷ ಸವಲತ್ತು
- ಸುಲಲಿತ ವ್ಯವಹಾರಕ್ಕೆ ಒತ್ತು
- ಲೈಸೆನ್ಸ್ ನೀತಿ ನಿಯಮಗಳಲ್ಲಿ ವಿನಾಯಿತಿ
- ಭೂ , ಕಾರ್ಮಿಕ ನೀತಿಯಲ್ಲಿ ಸುಧಾರಣೆ
- ಈ ಸಂಬಂಧ ಕಾಯಿದೆಗಳಿಗೆ ತಿದ್ದುಪಡಿ
- ಸುಲಲಿತ ವ್ಯವಹಾರಕ್ಕೆ ಅಫಿಡವಿಟ್ ಬೇಸ್ಡ್ ಕ್ಲಿಯರೆನ್ಸ್ (ಎಬಿಸಿ) ಯೋಜನೆ.

ಚಾಮರಾಜನಗರ ಜಿಲ್ಲೆಯಲ್ಲಿ ಹೇರಳ ಅವಕಾಶ

ಚಾಮರಾಜನಗರ ಜಿಲ್ಲೆಯಲ್ಲಿ ಕೈಗಾರಿಕೆಗಳ ಸ್ಥಾಪನೆಗೆ ಹೆಚ್ಚಿನ ಅವಕಾಶಗಳಿವೆ. ಇತ್ತೀಚಿನ ದಿನಗಳಲ್ಲಿ ಕೈಗಾರಿಕೆಗಳ ಸ್ಥಾಪನೆ ಹಾಗೂ ಬಂಡವಾಳ ಹೂಡಿಕೆಗೆ ಹಲವಾರು ಪ್ರಸ್ತಾವಗಳು ಬಂದಿವೆ. ಕೊರೊನಾ ಕಾಲದಲ್ಲಿಯೂ ಗಡಿ ಜಿಲ್ಲೆ ಚಾಮರಾಜನಗರದಲ್ಲಿ ಒಟ್ಟು ₹1,130.50 ಕೋಟಿ ಹೂಡಿಕೆ ಆಗಿದೆ. ಇದರಿಂದ ಒಟ್ಟು 1,546 ಉದ್ಯೋಗ ಸೃಷ್ಟಿಯಾಗುವ ನಿರೀಕ್ಷೆ ಇದೆ.

ಗ್ರಾನೈಟ್ ಕಟ್ಟಿಂಗ್, ಫ್ಯೂಯಲ್ ಎಥನಾಲ್, ಎಲ್‌ಇಡಿ ಟಿವಿ, ಅಲ್ಯೂಮಿನಿಯಂ ಕುಕ್ಕರ್, ನಾನ್‌ಸ್ಟಿಕ್ ಅಡುಗೆ ಪಾತ್ರೆಗಳ ತಯಾರಿಕಾ ಘಟಕ, ಪೀಠೋಪಕರಣಗಳ ತಯಾರಿಕಾ ಘಟಕ ಹಾಗೂ ಪೇಂಟ್ ಉದ್ಯಮಗಳ ಸ್ಥಾಪನೆಗೆ ರಾಜ್ಯ ಸರ್ಕಾರ ಅನುಮೋದನೆ ನೀಡಿದೆ.

ಜಿಲ್ಲೆಯಲ್ಲಿ ಇನ್ನೂ ಹೆಚ್ಚಿನ ಬಂಡವಾಳ ಆಕರ್ಷಣೆಗೆ ಹಾಗೂ ಇಲ್ಲಿರುವ ಅವಕಾಶಗಳ ಬಗ್ಗೆ ಪ್ರಚಾರ ಮಾಡುವ ಉದ್ದೇಶದಿಂದ ತಮಿಳುನಾಡಿನ ಕೊಯಮತ್ತೂರು, ತಿರಪೂರ್ ಹಾಗೂ ಕೇರಳದಲ್ಲಿ ರೋಡ್ ಶೋ ಆಯೋಜಿಸಲು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಉದ್ದೇಶಿಸಿದ್ದಾರೆ. ಈಗಾಗಲೇ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ವತಿಯಿಂದ ಬದನಗುಪ್ಪೆ - ಕೆಲ್ಲಂಬಳ್ಳಿ ಯಲ್ಲಿ 1,400 ಎಕರೆಯಷ್ಟು ಕೈಗಾರಿಕಾ ಪ್ರದೇಶ ಅಭಿವೃದ್ಧಿಪಡಿಸಲಾಗಿದೆ. ಸಣ್ಣ ಕೈಗಾರಿಕೆಗಳ ಸ್ಥಾಪನೆಗೆ ಹೆಚ್ಚಿನ ಒತ್ತು ನೀಡಲಾಗುವುದು. ಹೆಚ್ಚಿನ ಉದ್ಯೋಗಾವಕಾಶ ಇರುವ ಸಣ್ಣ ಬಂಡವಾಳದಲ್ಲಿ ಪ್ರಾರಂಭಿಸಬಹುದಾದ ಕೈಗಾರಿಕೆಗಳಿಗೆ ಪ್ರೋತ್ಸಾಹ ನೀಡಲಾಗುವುದು.

ಮಹಿಳೆಯರಿಗೆ ಆದ್ಯತೆ

ಮೈಸೂರಿನಲ್ಲಿ 40 ಎಕರೆಯಲ್ಲಿ ಮಹಿಳಾ ಉದ್ಯಮ ಪಾರ್ಕ್ ಸ್ಥಾಪನೆ ಮಾಡಿ ನಿವೇಶನ ಹಂಚಿಕೆ ಮಾಡಲಾಗುತ್ತಿದೆ. ಧಾರವಾಡದಲ್ಲಿ 30 ಎಕರೆಯಲ್ಲಿ ಮಹಿಳಾ ಉದ್ಯಮ ಪಾರ್ಕ್ ಕಾಮಗಾರಿ ಪ್ರಗತಿಯಲ್ಲಿದೆ. ಹಾರೋಹಳ್ಳಿ ಮತ್ತು ಕಲಬುರ್ಗಿಯಲ್ಲಿ ಪ್ರತ್ಯೇಕ ಮಹಿಳಾ ಉದ್ಯಮ ಪಾರ್ಕ್ ಸ್ಥಾಪನೆಗೆ ಕ್ರಮ ಕೈಗೊಳ್ಳಲಾಗಿದೆ. ಬೀದರ್‌ನಲ್ಲಿ 42.57 ಎಕರೆ ಪ್ರದೇಶದಲ್ಲಿ ಮಹಿಳಾ ಉದ್ಯಮ ಪಾರ್ಕ್ ಸ್ಥಾಪನೆಗೆ ಅನುಮೋದನೆ ನೀಡಲಾಗಿದ್ದು, ಆರ್ಥಿಕ ಮಂಜೂರಾತಿ ಸಿಕ್ಕಿದೆ.

ಕೈಗಾರಿಕೆ ಕ್ಷೇತ್ರದ ಅಭಿವೃದ್ಧಿಗಾಗಿ ವಿಜಯಪುರ-ಬಾಗಲಕೋಟೆ, ಕಲಬುರ್ಗಿ- ಬೀದರ್- ರಾಯಚೂರು ಹಾಗೂ ಮೈಸೂರು ಭಾಗದಲ್ಲಿ ಹೂಡಿಕೆದಾರರ ಸಮಾವೇಶ ನಡೆಸಲು ಉದ್ದೇಶಿಸಲಾಗಿದೆ. ಉಡಾನ್ ಯೋಜನೆಯ ಮುಂದುವರಿದ ಭಾಗವಾಗಿ ಬೈಂದೂರು ಮತ್ತು ಕಾರವಾರದಲ್ಲಿ ನಾಗರಿಕ ವಿಮಾನ ನಿಲ್ದಾಣಗಳನ್ನು ಸ್ಥಾಪಿಸಲು ಯೋಜನೆ ರೂಪಿಸಲಾಗಿದೆ. ಇದರಿಂದ ಸ್ಥಳೀಯ ಉದ್ಯಮಕ್ಕೆ ನೆರವಾಗಲಿದೆ.


ನೂತನ ಕೈಗಾರಿಕಾ ನೀತಿ ಮತ್ತು ಹೂಡಿಕೆ ಅವಕಾಶಗಳ ಕುರಿತು ಹುಬ್ಬಳ್ಳಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಕೈಗಾರಿಕಾ ಸಚಿವ ಜಗದೀಶ ಶೆಟ್ಟರ್ ಪಾಲ್ಗೊಂಡಿದ್ದರು

10 ಸಾವಿರ ಎಕರೆ ಭೂಮಿ ಲಭ್ಯ

ರಾಜ್ಯದಲ್ಲಿ ಬಂಡವಾಳ ಹೂಡಿಕೆ ಮಾಡುವ ಮುನ್ನ ಉದ್ಯಮಿಗಳ ಮನದಲ್ಲಿ ಹಲವಾರು ಪ್ರಶ್ನೆಗಳು ಏಳುತ್ತವೆ. ಅದರಲ್ಲಿಯೂ ಭೂಮಿ ಲಭ್ಯತೆ, ಸೌಲಭ್ಯ, ಮಾನವ ಸಂಪನ್ಮೂಲ ಲಭ್ಯತೆ ಮುಖ್ಯವಾಗಿರುತ್ತವೆ. ಕರ್ನಾಟಕ ಸರ್ಕಾರ ವಿವಿಧ ಸೌಲಭ್ಯಗಳನ್ನು ಒದಗಿಸುವ ಮೂಲಕ ಉದ್ಯಮಿಗಳಿಗೆ ರಾಜ್ಯದ ಹೆಬ್ಬಾಗಿಲನ್ನೇ ತೆರೆದಿದೆ. ಈ ಕುರಿತು ಒಂದಷ್ಟು ಮಾಹಿತಿ ಇಂತಿದೆ

● ಉದ್ಯಮಿಗಳು ಕರ್ನಾಟಕದಲ್ಲಿ ಏಕೆ ಬಂಡವಾಳ ಹೂಡಿಕೆ ಮಾಡಬೇಕು?

ನೂತನ ಕೈಗಾರಿಕಾ ನೀತಿ ಹಾಗೂ ಕೈಗಾರಿಕಾ ಸೌಲಭ್ಯ ತಿದ್ದುಪಡಿ ಅಧಿನಿಯಮದಲ್ಲಿನ ತಿದ್ದುಪಡಿ ತಂದಿರುವುದರಿಂದ ರಾಜ್ಯ ಉದ್ಯಮ ಸ್ನೇಹಿ ರಾಜ್ಯಗಳ ಪಟ್ಟಿಯಲ್ಲಿ ಅತ್ಯಂತ ಪ್ರಮುಖ ಸ್ಥಾನ ಪಡೆದುಕೊಂಡಿದೆ. ಕೈಗಾರಿಕೆಗಳ ಸ್ಥಾಪನೆಗೆ ಎಲ್ಲ ರೀತಿಯ ಅನುಕೂಲ ಮಾಡಿಕೊಟ್ಟಿರುವ ರಾಜ್ಯದ ಬಗ್ಗೆ ಹೂಡಿಕೆದಾರರು ಹೆಚ್ಚು ವಿಶ್ವಾಸ ಹೊಂದಿದ್ದಾರೆ. ಹಾಗಾಗಿ, ಉದ್ಯಮಿಗಳು ರಾಜ್ಯದತ್ತ ಮುಖ ಮಾಡಿದ್ದಾರೆ.

ಐಟಿ, ಐಟಿಇಎಸ್ ಸೇವೆಗಳು, ಯಂತ್ರೋಪಕರಣಗಳ ಉತ್ಪಾದನೆ, ಏರೋಸ್ಪೇಸ್, ಜೈವಿಕ ತಂತ್ರಜ್ಞಾನ ಮತ್ತು ಎಂಜಿನಿಯರಿಂಗ್ ಕ್ಷೇತ್ರಗಳಲ್ಲಿ ಹೂಡಿಕೆಗೆ ವಿಫುಲ ಅವಕಾಶಗಳಿದ್ದು, ಉದ್ಯಮಿಗಳಿಗೆ ಕರ್ನಾಟಕ ಮುಕ್ತ ಆಹ್ವಾನ ನೀಡುತ್ತದೆ. ಶೇ 10 ರಷ್ಟು ಕೈಗಾರಿಕಾ ಬೆಳವಣಿಗೆ ದರ ಹೊಂದುವುದು ಹೊಸ ಕೈಗಾರಿಕಾ ನೀತಿಯ ಉದ್ದೇಶವಾಗಿದೆ.

ಹೂಡಿಕೆ, ಯೋಜನಾ ಸ್ಥಳ, ನೇರ ಮತ್ತು ಪರೋಕ್ಷ ಉದ್ಯೋಗ ಸೃಷ್ಟಿಗಳಿಗೆ ಸೂಕ್ತ ಆದ್ಯತೆ ನೀಡುವುದರೊಂದಿಗೆ ಅಲ್ಟ್ರಾ ಮತ್ತು ಸೂಪರ್ ಮೆಗಾ ಕೈಗಾರಿಕೆಗಳಿಗೆ ವಿಶೇಷ ಪ್ಯಾಕೇಜ್‌ಗಳು/ರಿಯಾಯಿತಿಗಳನ್ನು ನೀಡಲಾಗುವುದು.

● ಬಂಡವಾಳ ಹೂಡಿಕೆಗೆ ಇರುವ ಧನಾತ್ಮಕ ಅಂಶಗಳೇನು?

ಚೀನಾ ಮತ್ತು ಇತರ ರಾಷ್ಟ್ರಗಳಿಂದ ಬಂಡವಾಳ ಆಕರ್ಷಿಸಲು ವಲಯ ನಿರ್ದಿಷ್ಟ ಕ್ಲಸ್ಟರ್‌ಗಳನ್ನು ರೂಪಿಸಿದ ಮೊದಲ ರಾಜ್ಯ ಕರ್ನಾಟಕ. ಕ್ಲಸ್ಟರ್‌ನಿಂದಾಗಿ ಒಂದೇ ಕ್ಷೇತ್ರಕ್ಕೆ ಸಂಬಂಧಿಸಿದ ಹಲವಾರು ಉದ್ಯಮಗಳು ಒಂದೆಡೆ ಬರುತ್ತವೆ. ಇದರಿಂದ ಕಚ್ಚಾ ವಸ್ತುಗಳ ಬೆಲೆಯಲ್ಲಿ ಕಡಿಮೆಯಾಗುತ್ತದೆ. ಜೊತೆಗೆ ಸಾರಿಗೆಗೂ ಅನುಕೂಲವಾಗುತ್ತದೆ. ಸೆಕ್ಟರ್ ಆಧಾರಿತ ಕೌಶಲ ಅಭಿವೃದ್ಧಿಗೆ ಸಂಬಂಧಿಸಿದ ಸಂಸ್ಥೆಗಳಿಗೆ ಒತ್ತು ನೀಡಲಾಗಿದೆ. ಇವುಗಳಲ್ಲಿ ಉತ್ಪನ್ನಗಳ ನಿರ್ದಿಷ್ಟತೆಯ ಬಗ್ಗೆ ತರಬೇತಿ ನೀಡಲಾಗುತ್ತಿದೆ.

ಇದರಿಂದ ಕಾರ್ಮಿಕರ ಕೌಶಲದ ಮಟ್ಟ ಹೆಚ್ಚಲಿದೆ. ವಲಸೆ ಹೋಗುವವರ ಪ್ರಮಾಣ ಕಡಿಮೆ ಆಗಲಿದೆ. ಈ ಉದ್ದೇಶಗಳೊಂದಿಗೆ ಸಾಂಪ್ರದಾಯಿಕ ಕೌಶಲದಾಚೆಗೂ ಕಾರ್ಮಿಕರನ್ನು ಸಶಕ್ತಗೊಳಿಸಲಾಗುತ್ತಿದೆ.

● ರಾಜ್ಯದಲ್ಲಿ ಕೈಗಾರಿಕೆಗಳ ಆರಂಭಕ್ಕೆ ಭೂಮಿ ಲಭ್ಯವಿದೆಯೇ?

ರಾಜ್ಯದಲ್ಲಿ ಒಟ್ಟು 10 ಸಾವಿರ ಎಕರೆ ಭೂಮಿ ಕೈಗಾರಿಕೆಗಳ ಸ್ಥಾಪನೆಗೆ ಲಭ್ಯವಿದೆ. ಹುಬ್ಬಳ್ಳಿ-ಧಾರವಾಡದಲ್ಲಿ 1 ಸಾವಿರ ಎಕರೆ ಸೇರಿದಂತೆ ಬೆಳಗಾವಿ, ವಿಜಯಪುರ, ಬೆಂಗಳೂರು, ಯಾದಗಿರಿ, ಬೀದರ್ ಜಿಲ್ಲೆಗಳಲ್ಲಿ ಒಟ್ಟು 10 ಸಾವಿರ ಎಕರೆ ಭೂಮಿ ಇದೆ. ಕೆಲವು ಕಡೆಗಳಲ್ಲಿ ಭೂಸ್ವಾಧೀನ ಪ್ರಕ್ರಿಯೆ ಪೂರ್ಣವಾಗಿದ್ದರೆ, ಕೆಲವು ಕಡೆಗಳಲ್ಲಿ ನಡೆದಿದೆ.

● ರಾಜ್ಯದಲ್ಲಿ ಕೈಗಾರಿಕಾ ಟೌನ್‌ಷಿಪ್ ಆರಂಭಿಸುವ ಉದ್ದೇಶವಿದೆಯೇ?

ಬೆಂಗಳೂರಿನಲ್ಲಿ ಮಾತ್ರ ಎಲೆಕ್ಟ್ರಾನಿಕ್ ಸಿಟಿ ಟೌನ್‌ಷಿಪ್ ಇದೆ. ಇದೇ ಮಾದರಿಯಲ್ಲಿ ಹುಬ್ಬಳ್ಳಿ, ಧಾರವಾಡ ಸೇರಿದಂತೆ ಐದಾರು ಕಡೆಗಳಲ್ಲಿ ಟೌನ್‌ಶಿಪ್ ಆರಂಭಿಸುವ ಯೋಜನೆ ಇದೆ. ನಗರಾಭಿವೃದ್ಧಿ ಇಲಾಖೆಯೊಂದಿಗೆ ಚರ್ಚಿಸಿ, ಅದಕ್ಕೊಂದು ಅಂತಿಮ ರೂಪ ನೀಡಲಾಗುವುದು.

ಕಲ್ಯಾಣ ಕರ್ನಾಟಕದಲ್ಲೂ ಹೂಡಿಕೆ ಮಹಾಪೂರ

ಕಡೇಚೂರು ಫಾರ್ಮಾ ಪಾರ್ಕ್‌ಗೆ ಹೊಂದಿಕೊಂಡಂತೆ 3,300 ಎಕರೆ ಪ್ರದೇಶದಲ್ಲಿ ಹೈದರಾಬಾದ್– ಬೆಂಗಳೂರು ಇಂಡಸ್ಟ್ರಿಯಲ್ ಕಾರಿಡಾರ್ ಸ್ಥಾಪನೆಗೆ ಪ್ರಸ್ತಾವ ಸಲ್ಲಿಸಲಾಗಿದೆ.

ಗಡಿ ಜಿಲ್ಲೆಯಾದ ಯಾದಗಿರಿ ಜಿಲ್ಲೆಯ ಕಡೇಚೂರು--ಬಾಡಿಯಾಳ ಪ್ರದೇಶದಲ್ಲಿ 2013ರಿಂದ 2021ರವರೆಗೆ ಫಾರ್ಮಾ ಕ್ಷೇತ್ರದಲ್ಲಿ ₹2,812.36 ಕೋಟಿ ಹೂಡಿಕೆಗೆ 67 ಕಂಪನಿಗಳಿಗೆ ಅನಮೋದನೆ ನೀಡಲಾಗಿದೆ. ಇದರಿಂದ 11,770 ಉದ್ಯೋಗಗಳು ಸೃಷ್ಟಿಯಾಗಿವೆ.

ಫಾರ್ಮಾ ಪಾರ್ಕ್‌ನ ಒಟ್ಟು ಯೋಜನಾ ವೆಚ್ಚ ₹3,000 ಕೋಟಿಯಾಗಿದ್ದು, ಈ ಯೋಜನೆಯಡಿ ಮೂರು ದೊಡ್ಡ ಔಷಧ ಪಾರ್ಕ್ ಅಭಿವೃದ್ಧಿಗೆ ಬೆಂಬಲ ನೀಡಲಾಗುವುದು. 2020-21ರಿಂದ 2024-2025 ಯೋಜನಾ ಅವಧಿಯಲ್ಲಿ ಗರಿಷ್ಠ ₹1000 ಕೋಟಿ ಸಹಾಯ ಧನ ನೀಡಲು ಉದ್ದೇಶಿಸಲಾಗಿದೆ. ಕಡೇಚೂರಿನಲ್ಲಿ 3 ಸಾವಿರ ಎಕರೆಗೂ ಹೆಚ್ಚು ಭೂಮಿ ಸ್ವಾಧೀನ ಪಡಿಸಿಕೊಂಡು ಕೈಗಾರಿಕಾ ಪ್ರದೇಶ ಅಭಿವೃದ್ಧಿ ಪಡಿಸಲಾಗಿದೆ. ಅದರಲ್ಲಿ 1,500 ಎಕರೆ ಭೂಮಿಯಲ್ಲಿ ಫಾರ್ಮಾ ಕೈಗಾರಿಕೆಗಳಿಗೆ ಅಗತ್ಯವಿರುವ ಎಲ್ಲಾ ರೀತಿಯ ಮೂಲ ಸೌಕರ್ಯ ಹಾಗೂ ರಸ್ತೆ ಅಭಿವೃದ್ಧಿ ಪಡಿಸಲಾಗಿದೆ. ರಫ್ತು, ಸಂಶೋಧನೆ ಮತ್ತು ಪ್ಯಾಕೇಜಿಂಗ್‌ಗೆ ಕರ್ನಾಟಕದಲ್ಲಿ ಅತ್ಯುತ್ತಮ ವಾತಾವರಣವಿದೆ. ಬಯೋಕಾನ್, ಆಸ್ಟ್ರಾ ಜೆನೆಕಾ ಸೇರಿದಂತೆ ಅನೇಕ ಪ್ರಖ್ಯಾತ ಸಂಸ್ಥೆಗಳು ಈಗಾಗಲೇ ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿವೆ.

ಮೈಸೂರು: ₹3,356 ಕೋಟಿ ಹೂಡಿಕೆ

ಮೈಸೂರು ಹೂಡಿಕೆದಾರರನ್ನು ಆಕರ್ಷಿಸುವಲ್ಲಿ ಮುಂಚೂಣಿಯಲ್ಲಿದೆ. ಕೊರೊನಾದಿಂದ ಕಂಗಾಲಾಗಿದ್ದ ಉದ್ಯಮ ವಲಯ ಮತ್ತೆ ಚೇತರಿಕೆ ಹಾದಿಯಲ್ಲಿದೆ. ಅದಕ್ಕೆ ಸಾಕ್ಷಿ ಎಂಬಂತೆ ಮೈಸೂರಿನಲ್ಲಿ ₹3,356 ಕೋಟಿ ಹೂಡಿಕೆ ಪ್ರಸ್ತಾವ ಬಂದಿವೆ. ಇದರಿಂದ ಅಂದಾಜು 3,130 ಉದ್ಯೋಗ ಸೃಷ್ಟಿಯಾಗುವ ನಿರೀಕ್ಷೆ ಇದೆ. ಮೈಸೂರು ವಿಭಾಗದ ಕೈಗಾರಿಕಾ ವಲಯ ಹೂಡಿಕೆದಾರರ ಪಾಲಿಗೆ ಆಕರ್ಷಣೆ ಕೇಂದ್ರವಾಗಿ ಉಳಿದಿದೆ. ಒಟ್ಟು 11 ಯೋಜನೆಗಳ ಪೈಕಿ 8 ಯೋಜನೆಗಳ ಸ್ಥಾಪನೆಗೆ ಪ್ರಕ್ರಿಯೆಗಳು ಆರಂಭವಾಗಿದ್ದು, ಉಳಿದ ಮೂರು ಯೋಜನೆಗಳು ಪ್ರಸ್ತಾವ ಹಂತದಲ್ಲಿವೆ.

ಮಂಗಳೂರು: ₹21 ಸಾವಿರ ಕೋಟಿ

ಮಂಗಳೂರು ಹೂಡಿಕೆದಾರರನ್ನು ಆಕರ್ಷಿಸುವಲ್ಲಿ ಮುಂಚೂಣಿಯಲ್ಲಿದ್ದು, ₹21,003.77 ಸಾವಿರ ಕೋಟಿ ಹೂಡಿಕೆ ಪ್ರಸ್ತಾವಗಳು ಬಂದಿವೆ. ಇದರಿಂದ ಅಂದಾಜು 1,723 ಉದ್ಯೋಗ ಸೃಷ್ಟಿಯಾಗುವ ನಿರೀಕ್ಷೆ ಇದೆ.

ಬೆಳಗಾವಿ: ₹543 ಕೋಟಿ

ಬೆಳಗಾವಿಯಲ್ಲಿ ಒಟ್ಟು ₹543.8 ಕೋಟಿ ಹೂಡಿಕೆ ಪ್ರಸ್ತಾವಗಳು ಬಂದಿವೆ. ಇದರಿಂದ ಅಂದಾಜು ಐದು ನೂರಕ್ಕೂ ಹೆಚ್ಚು ಉದ್ಯೋಗ ಸೃಷ್ಟಿಯಾಗುವ ನಿರೀಕ್ಷೆ ಇದೆ. ಇದರಿಂದ ಸ್ಥಳೀಯರಿಗೆ ಹೆಚ್ಚಿನ ಉದ್ಯೋಗಾವಕಾಶಗಳು ಲಭಿಸಲಿವೆ.


ಮುಖ್ಯಮಂತ್ರಿ ಪರಿಹಾರ ನಿಧಿಗೆ ಹಣ ನೀಡಿದ ಸಂದರ್ಭ

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

ಏರೋಸ್ಪೇಸ್‌ನಲ್ಲಿ ಕ್ರಾಂತಿ

ನಿರ್ದಿಷ್ಟ ಏರೋಸ್ಪೇಸ್ ನೀತಿಯನ್ನು ರೂಪಿಸಿದ ದೇಶದ ಮೊದಲ ರಾಜ್ಯವಾಗಿದೆ. ಲಾಕ್‌ಡೌನ್ ನಿಯಮಗಳಿಂದ ಏರೋಸ್ಪೇಸ್ ಮತ್ತು ಡಿಫೆನ್ಸ್ ಕ್ಷೇತ್ರಗಳಿಗೆ ವಿನಾಯಿತಿ ನೀಡಿದ ಮತ್ತು ಉತ್ಪಾದನೆಗೆ ಅವಕಾಶ ನೀಡಿದ ಏಕೈಕ ರಾಜ್ಯ ಕರ್ನಾಟಕ. ಏರ್‌ಕ್ರಾಫ್ಟ್, ಬಾಹ್ಯಾಕಾಶಕ್ಕೆ ಸಂಬಂಧಿಸಿದ ಶೇ25ರಷ್ಟು ಉದ್ಯಮಗಳು ನಮ್ಮಲ್ಲಿವೆ. ರಕ್ಷಣಾ ಸೇವೆಗೆ ಬಳಕೆಯಾಗುವ ಶೇ67ರಷ್ಟು ಏರ್‌ಕ್ರಾಫ್ಟ್‌ಹೆಲಿಕಾಪ್ಟರ್‌ಗಳ ಉತ್ಪಾದನೆ ರಾಜ್ಯದಲ್ಲಿ ಆಗುತ್ತದೆ. ಏರೋಸ್ಪೇಸ್‌ಗೆ ಸಂಬಂಧಿಸಿದ ದೇಶದ ಒಟ್ಟು ರಫ್ತಿನಲ್ಲಿ ರಾಜ್ಯದ ಪಾಲು ಶೇ 65 ರಷ್ಟಿದೆ.

ಉದ್ಯೋಗದಲ್ಲಿ ಕನ್ನಡಿಗರಿಗೆ ಆದ್ಯತೆ

ಕರ್ನಾಟಕವನ್ನು ಹೂಡಿಕೆದಾರರ ನೆಚ್ಚಿನ ತಾಣವಾಗಿ ರೂಪಿಸಲು ಭೂಮಿ ಖರೀದಿಯನ್ನು ಸರಳಗೊಳಿಸಲಾಗಿದೆ. ಭೂ ಸುಧಾರಣಾ ಕಾಯ್ದೆ 1961ರ ಸೆಕ್ಷನ್ 109 ಹಾಗೂ 79 'ಎ' ಮತ್ತು 'ಬಿ'ಗೆ ತಿದ್ದುಪಡಿ ತಂದು, ಸಂಭಾವ್ಯ ಹೂಡಿಕೆದಾರರಿಗೆ ಎಲ್ಲ ಪ್ರಕ್ರಿಯೆಗಳನ್ನು ಸುಗಮಗೊಳಿಸಲು ವ್ಯವಸ್ಥಿತ ಕಾರ್ಯವಿಧಾನಗಳನ್ನು ಜಾರಿಗೆ ತರಲಾಗಿದೆ.

ಕೃಷಿ ಉದ್ದೇಶಕ್ಕೆ ಭೂಮಿ ಹೊಂದಿರುವ ಮಾಲೀಕರು, ಆ ಜಮೀನನ್ನು ಕೃಷಿಯೇತರ ಉದ್ದೇಶಕ್ಕೆ ಭೂ ಪರಿವರ್ತಿಸಲು ಇಚ್ಛಿಸಿದರೆ, ಆನ್‌ಲೈನ್ ಮೂಲಕ ಸರಳವಾಗಿ ಮಾಡಿಕೊಳ್ಳಬಹುದಾಗಿದೆ. ರಾಜ್ಯದ ಉನ್ನತ ಮಟ್ಟದ ಒಪ್ಪಿಗೆ ನೀಡಿಕೆ ಸಮಿತಿ ಮತ್ತು ರಾಜ್ಯಮಟ್ಟದ ಏಕಗವಾಕ್ಷಿ ಅನುಮೋದನೆ ಸಮಿತಿ ಒಪ್ಪಿಗೆ ಪಡೆದ ಬಳಿಕ 30 ದಿನದೊಳಗೆ ಅನುಮತಿ ದೊರೆಯುತ್ತದೆ. ಇಲ್ಲದಿದ್ದರೆ, ಅದನ್ನು ಡೀಮ್ಡ್ ಪರಿವರ್ತನೆ ಎಂದು ಪರಿಗಣಿಸಲಾಗುತ್ತದೆ. ರೈತರು, ಖಾಸಗಿ ವ್ಯಕ್ತಿ/ಸಂಸ್ಥೆಗಳಿಂದ ಸ್ವಾಧೀನ ಪಡಿಸಿಕೊಂಡ ಭೂಮಿಗೆ ಪರಿಹಾರ ಧನದ ಬದಲು ಅಭಿವೃದ್ಧಿ ಪಡಿಸಿದ ಭೂಮಿಯಲ್ಲಿ ಪಾಲು ಕೊಡಲಾಗುತ್ತಿದೆ.

ನೂತನ ಕೈಗಾರಿಕಾ ನೀತಿಯಲ್ಲಿ ಕನ್ನಡಿಗರಿಗೆ ಆದ್ಯತೆ ನೀಡಲಾಗಿದೆ. ಕೈಗಾರಿಕಾ ಬಂಡವಾಳ ಹೂಡಿಕೆ ಯೋಜನೆಗಳ ಒಟ್ಟಾರೆ ಆಧಾರದ ಮೇಲೆ 'ಸಿ' ಗ್ರೂಪ್‌ನಲ್ಲಿ ಶೇ70ರಷ್ಟು, ಗ್ರೂಪ್ 'ಡಿ' ನಲ್ಲಿ ಶೇ100 ರಷ್ಟು ಕನ್ನಡಿಗರಿಗೆ ಉದ್ಯೋಗ ನೀಡುವುದನ್ನು ಕಡ್ಡಾಯಗೊಳಿಸಲಾಗಿದೆ.

ಕಾರ್ಮಿಕ ಕಾನೂನುಗಳಿಗೆ ತಿದ್ದುಪಡಿ ತರಲಾಗಿದೆ. ಏರೋಸ್ಪೇಸ್, ಎಲೆಕ್ಟ್ರಿಕ್ ವೆಹಿಕಲ್ಸ್, ಎಲೆಕ್ಟ್ರಾನಿಕ್ಸ್, ಜವಳಿ, ಕೃಷಿ, ಐಟಿ ಮತ್ತು ಜೈವಿಕ ತಂತ್ರಜ್ಞಾನದಂತಹ ಕ್ಷೇತ್ರಗಳನ್ನು ಉತ್ತೇಜಿಸಲು ನಿರ್ದಿಷ್ಟ ನೀತಿ ರೂಪಿಸಲಾಗಿದೆ.



ಕೋವಿಡ್ ನಿರ್ವಹಣೆ: ಒಟ್ಟಾಗಿ ಕೆಲಸ ಮಾಡಲು ಪ್ರಧಾನಿ ಕರೆ

ನವದೆಹಲಿ (ಪಿಟಿಐ): ಕೋವಿಡ್ ಪಿಡುಗನ್ನು ಸಮರ್ಪಕವಾಗಿ ಎದುರಿಸಲು ಕೇಂದ್ರ ಮತ್ತು ರಾಜ್ಯಗಳು ಒಟ್ಟಾಗಿ ಕೆಲಸ ಮಾಡಬೇಕಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಕರೆ ನೀಡಿದರು.

ಕೋವಿಡ್–19ರ ಕುರಿತು ಸರ್ವ ಪಕ್ಷ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಅವರು, ಮಾನವೀಯತೆಯ ಕಾಳಜಿ ವಿಷಯವಾಗಿರುವ ಸಾಂಕ್ರಾಮಿಕವು ರಾಜಕೀಯದ ವಿಷಯವಾಗಬಾರದು ಎಂದರು.

ವಿಶ್ವದ ಇತರ ದೇಶಗಳಿಗೆ ಹೋಲಿಸಿದರೆ ಭಾರತವು ಕೋವಿಡ್ ನಿರ್ವಹಣೆಯಲ್ಲಿ ಉತ್ತಮ ಸ್ಥಾನದಲ್ಲಿಯೇ ಇದೆ. ಬ್ರಿಟನ್ ಸೇರಿದಂತೆ ಕೆಲ ದೇಶಗಳಲ್ಲಿ ಸೋಂಕು ಮತ್ತೆ ಕಾಣಿಸಿಕೊಂಡಿದೆ. ಹಾಗಾಗಿ ಹೆಚ್ಚು ಜಾಗರೂಕರಾಗಿ ಉಳಿಯುವ ಅಗತ್ಯವಿದೆ ಎಂದು ಅವರು ಒತ್ತಿ ಹೇಳಿದರು.


ಆಮ್ಲಜನಕ ಲಭ್ಯತೆಯ ಕುರಿತು ಮಾತನಾಡಿದ ಅವರು, ದೇಶದಾದ್ಯಂತ ಪ್ರತಿ ಜಿಲ್ಲೆಯಲ್ಲೂ ಒಂದು ಆಮ್ಲಜನಕ ಘಟಕ ಇರುವಂತೆ ವ್ಯವಸ್ಥೆ ಮಾಡುವ ನಿಟ್ಟಿನಲ್ಲಿ ಪ್ರಯತ್ನ ಸಾಗಿದೆ ಎಂದರು.

ದೇವೇಗೌಡರ ಮೆಚ್ಚುಗೆ: ಸಭೆಯಲ್ಲಿ ಮಾತನಾಡಿದ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಅವರು, ಸಾಂಕ್ರಾಮಿಕ ರೋಗದ ಸಂದರ್ಭದಲ್ಲಿ ಪ್ರಧಾನಿ ಮೋದಿ ಅವರು ನಿರಂತರ ಮೇಲ್ವಿಚಾರಣೆ ನಡೆಸಿದ್ದಾರೆ. ದಣಿವರಿಯದೆ ಕಾರ್ಯ ನಿರ್ವಹಿಸಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ನಗರಕ್ಕೆ ಕಳ್ಳಸಾಗಣೆಯಾಗುತ್ತಿದ್ದ ಒಂಟೆ • ತುಮಕೂರು ರಸ್ತೆ, ಸರ್ಜಾಪುರ ರಸ್ತೆಯಲ್ಲಿ ಸಗಾಣೆ

ಆರು ವಾರದಲ್ಲಿ 13 ಒಂಟೆಗಳ ರಕ್ಷಣೆ

ಪ್ರಜಾವಾಣಿ ವಾರ್ತೆ



ಸಂರಕ್ಷಿಸಲಾದ ಒಂಟೆಗಳು

ಬೆಂಗಳೂರು: ನಗರಕ್ಕೆ ಕಳ್ಳಸಾಗಣೆಯಾಗುತ್ತಿದ್ದ ಒಂಟೆಗಳನ್ನು ಸ್ವಯಂಸೇವಾ ಸಂಸ್ಥೆಗಳ ನೆರವಿನಿಂದ ಅಧಿಕಾರಿಗಳು ರಕ್ಷಣೆ ಮಾಡಿದ್ದಾರೆ. ತುಮಕೂರು ರಸ್ತೆ ಹಾಗೂ ಸರ್ಜಾಪುರ ರಸ್ತೆಯಲ್ಲಿ ಸಾಗಿಸುತ್ತಿದ್ದ ಒಟ್ಟು 13 ಒಂಟೆಗಳನ್ನು ಆರು ವಾರಗಳಲ್ಲಿ ಸಂರಕ್ಷಣೆ ಮಾಡಲಾಗಿದೆ.

‘ಒಂಟೆಗಳ ಸಂತತಿ ಅಪಾಯದಲ್ಲಿದೆ. ಹಾಗಾಗಿ ಅವುಗಳಿಗೆ ಕಾನೂನಡಿ ವಿಶೇಷ ರಕ್ಷಣೆ ಒದಗಿಸಲಾಗಿದೆ. ಹೈಕೋರ್ಟ್ ಕೂಡಾ ಈ ಕುರಿತು ಆದೇಶ ಮಾಡಿದೆ. ಒಂಟೆಗಳ ಸ್ವಾಭಾವಿಕ ಆವಾಸವಲ್ಲದ ಪ್ರದೇಶಗಳಿಗೆ ಅವುಗಳನ್ನು ಅನಧಿಕೃತವಾಗಿ ಸಾಗಣೆ ನಡೆಸುವಂತಿಲ್ಲ. ಬಕ್ರೀದ್ ಹಬ್ಬದ ಸಂದರ್ಭದಲ್ಲಿ ನಗರಕ್ಕೆ ಒಂಟೆಗಳ ಕಳ್ಳಸಾಗಣೆ ನಡೆಯುತ್ತದೆ. ನಗರಕ್ಕೆ ತರುತ್ತಿದ್ದ ಒಂಟೆಗಳನ್ನು ಸ್ವಯಂಸೇವಾ ಸಂಘಟನೆಗಳ ಸಹಾಯದಿಂದ ಸಂರಕ್ಷಣೆ ಮಾಡಲಾಗಿದೆ’ ಎಂದು ಬಿಬಿಎಂಪಿ ಪಶುಸಂಗೋಪನಾ ವಿಭಾಗದ ಜಂಟಿ ನಿರ್ದೇಶಕ ಎಸ್.ಎಂ.ಮಂಜುನಾಥ ಶಿಂಧೆ ‘ಪ್ರಜಾವಾಣಿ’ಗೆ ತಿಳಿಸಿದರು.

‘ಒಂಟೆಗಳ ಸಾಗಣೆಗೆ ನಿಷೇಧ ಹೇರಿದ್ದರೂ ಅವುಗಳ ಕಳ್ಳಸಾಗಣೆ ನಡೆಯುತ್ತಲೇ ಇದೆ. ಮೂರು–ನಾಲ್ಕು ರಾಜ್ಯಗಳ ಗಡಿಗಳನ್ನು ದಾಟಿಸಿಕೊಂಡು ಅವುಗಳನ್ನು ರಾಜ್ಯಕ್ಕೆ ತರಲಾಗುತ್ತಿದೆ. ಅವುಗಳ ಕಳ್ಳಸಾಗಣೆ ಹಾಗೂ ವಧೆ ತಡೆಯಲು ಕ್ರಮ ಕೈಗೊಳ್ಳಬೇಕು ಎಂದು ಸರ್ಕಾರವನ್ನು ಆಗ್ರಹಿಸಿದ್ದೇವು. ಪೊಲೀಸ್ ಇಲಾಖೆ, ಬಿಬಿಎಂಪಿ, ಪಶುಸಂಗೋಪನಾ ಇಲಾಖೆಗಳಿಗೂ ಈ ಬಗ್ಗೆ ಪ್ರತ್ಯೇಕವಾಗಿ ಮನವಿ ಸಲ್ಲಿಸಿದ್ದೆವು. ನಗರಕ್ಕೆ ಕಳ್ಳಸಾಗಣೆಯಾಗುತ್ತಿದ್ದ 13 ಒಂಟೆಗಳಲ್ಲಿ 11 ಒಂಟೆಗಳ ಪ್ರಾಣ ಉಳಿಸಲು ನಮ್ಮ ಸಂಘಟನೆ ನೆರವಾಗಿದೆ. ತುಮಕೂರು ರಸ್ತೆಯ ಮೂಲಕ ಒಟ್ಟು 11 ಒಂಟೆಗಳನ್ನು ವಾಹನದಲ್ಲಿ ಸಾಗಿಸಲಾಗುತ್ತಿತ್ತು. ಅವುಗಳಲ್ಲಿ ಎರಡು ಒಂಟೆಗಳು ವಾಹನದಲ್ಲೇ ಸತ್ತಿದ್ದವು. ಅಷ್ಟು ಕ್ರೂರವಾಗಿ ಅವುಗಳನ್ನು ನಡೆಸಿಕೊಳ್ಳಲಾಗಿತ್ತು’ ಎಂದು ‘ಗೌ ಗ್ಯಾನ್ ಫೌಂಡೇಷನ್’ನ ಸ್ವಯಂಸೇವಕರೊಬ್ಬರು ತಿಳಿಸಿದರು.

‘ಸಂರಕ್ಷಿಸಲಾದ ಒಂಟೆಗಳನ್ನು ನ್ಯಾಯಾಲಯದ ಆದೇಶದ ಮೇರೆಗೆ ಮಹದೇವಪುರದ ದೊಡ್ಡನೆಕ್ಕುಂದಿಯ ಗೋ ಸಂರಕ್ಷಣಾ ಗೋಶಾಲೆಯಲ್ಲಿ ಆರೈಕೆ ಮಾಡಲಾಗುತ್ತಿದೆ’ ಎಂದು ಸಂಸ್ಥೆಯ ಇನ್ನೊಬ್ಬ ಸ್ವಯಂಸೇವಕರು ಮಾಹಿತಿ ನೀಡಿದರು.

‘ಒಂಟೆಗಳು ಸೂಕ್ಷ್ಮ ಜೀವಿಗಳು. ಅವುಗಳು ಬದುಕುವ ಪರಿಸರ ಬೇರೆ. ನಮ್ಮ ರಾಜ್ಯದ ಹವಾಗುಣ ಅವುಗಳಿಗೆ ಒಗ್ಗುವುದಿಲ್ಲ. ಅವುಗಳಿಗೆ ಇಲ್ಲಿ ಸಣ್ಣಪುಟ್ಟ ಗಾಯಗಳಾದರೂ ಗ್ಯಾಂಗ್ರೀನ್ ರೂಪ ತಳೆಯುತ್ತದೆ. ಅವುಗಳ ಸಂತತಿಯೂ ಅಪಾಯದಲ್ಲಿರುವುದರಿಂದ ಅವುಗಳ ವಧೆ ಹಾಗೂ ಕಳ್ಳಸಾಗಣೆ ತಡೆಯಲು ಎಲ್ಲರೂ ಕೈಜೋಡಿಸಬೇಕು’ ಎಂದು ಅವರು ಒತ್ತಾಯಿಸಿದರು.

‘ನಿಯಮ ಪಾಲಿಸಿ– ಹಬ್ಬ ಆಚರಿಸಿ’

‘ಬಕ್ರೀದ್ ಹಬ್ಬದ ಆಚರಣೆಗೆ ಸಂಬಧಿಸಿ ಸರ್ಕಾರ ನಿರ್ದೇಶನಗಳನ್ನು ನೀಡಿದೆ. ಬಿಬಿಎಂಪಿ ವ್ಯಾಪ್ತಿಯಲ್ಲಿ ಪ್ರಾಣಿಗಳ ಅನಧಿಕೃತ ವಧೆ ತಡೆಗೆ ಸಂಬಂಧಿಸಿ ಬಿಬಿಎಂಪಿಯೂ ಕೆಲವು ಮಾರ್ಗಸೂಚಿಗಳನ್ನು ಹೊರಡಿಸಿದೆ. ಇವುಗಳನ್ನು ಅನುಸರಿಸಿ ಹಬ್ಬ ಆಚರಿಸುವುದಕ್ಕೆ ಯಾವುದೇ ಅಡ್ಡಿ ಇಲ್ಲ. ನಿಯಮ ಉಲ್ಲಂಘನೆ ತಡೆಯಲು ಪಾಲಿಕೆಯ ಸ್ಥಳೀಯ ಹಂತದ ಅಧಿಕಾರಿಗಳಿಗೂ ನಿರ್ದೇಶನಗಳನ್ನು ನೀಡಿದ್ದೇವೆ’ ಎಂದು ಪಾಲಿಕೆ ಮುಖ್ಯ ಆಯುಕ್ತ ಗೌರವ್ ಗುಪ್ತ ತಿಳಿಸಿದರು.

ಸುದ್ದಿ 2 ನಿಮಿಷ

ಕಡಿಮೆ ಬೆಲೆಗೆ ಚಿನ್ನದ ಆಮಿಷ; ₹ 1 ಕೋಟಿ ವಂಚನೆ

ಬೆಂಗಳೂರು: ಕಡಿಮೆ ಬೆಲೆಗೆ ಚಿನ್ನ ಕೊಡಿಸುವ ಆಮಿಷವೊಡ್ಡಿ ನಗರದ ಉದ್ಯಮಿಯೊಬ್ಬರಿಂದ ₹ 1 ಕೋಟಿ ಪಡೆದು ವಂಚಿಸಲಾಗಿದ್ದು, ಈ ಸಂಬಂಧ ಪೂರ್ವ ವಿಭಾಗ ಸೈಬರ್ ಕ್ರೈಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಇಂದಿರಾನಗರದ 55 ವರ್ಷದ ಉದ್ಯಮಿ ವಂಚನೆ ಬಗ್ಗೆ ದೂರು ನೀಡಿದ್ದಾರೆ. ಆರೋಪಿ ಪೃಥ್ವಿ ಎಂಬಾತನ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ದೂರುದಾರರ ಮೊಬೈಲ್‌ಗೆ ಕರೆ ಮಾಡಿದ್ದ ಆರೋಪಿ, ತಾನೊಬ್ಬ ಚಿನ್ನ ಮಾರಾಟಗಾರ ಎಂದಿದ್ದ. ಮುಂಗಡವಾಗಿ ಹಣ ನೀಡಿದರೆ ಪರಿಚಯಸ್ಥರೊಬ್ಬರಿಂದ ಕಡಿಮೆ ಬೆಲೆಗೆ ಚಿನ್ನ ಕೊಡಿಸುವ ಆಮಿಷವೊಡ್ಡಿದ್ದ. ಆತನ ಮಾತು ನಂಬಿದ್ದ ದೂರುದಾರ, ಆರೋಪಿ ನೀಡಿದ್ದ ಬ್ಯಾಂಕ್ ಖಾತೆಗೆ ಆರ್‌ಟಿಜಿಎಸ್ ಮೂಲಕ ₹ 1 ಕೋಟಿ ಹಾಕಿದ್ದರು.’

‘ಹಣ ಪಡೆದ ನಂತರ ಆರೋಪಿ ಯಾವುದೇ ಚಿನ್ನ ಕೊಡಿಸಿಲ್ಲ. ಈ ಬಗ್ಗೆ ಪ್ರಶ್ನಿಸಿದರೂ ಪ್ರತಿಕ್ರಿಯಿಸಿಲ್ಲ. ನೊಂದ ಉದ್ಯಮಿ ಠಾಣೆಗೆ ದೂರು ನೀಡಿದ್ದಾರೆ’ ಎಂದೂ ಮೂಲಗಳು ತಿಳಿಸಿವೆ.

ಯುಜಿಸಿ ಮಾರ್ಗಸೂಚಿ ಅನುಷ್ಠಾನಕ್ಕೆ ಆಗ್ರಹ



ಬೆಂಗಳೂರು: ಅಂತಿಮ ಸೆಮಿಸ್ಟರ್‌ನ ಪರೀಕ್ಷೆಗಳನ್ನು ಕಡ್ಡಾಯವಾಗಿ ನಡೆಸಬೇಕು ಹಾಗೂ ಆಂತರಿಕ ಮೌಲ್ಯಮಾಪನ ನಡೆಸಬೇಕು ಎಂಬ ಯುಜಿಸಿ ಮಾರ್ಗಸೂಚಿ ರಾಜ್ಯದ ವಿಶ್ವವಿದ್ಯಾಲಯಗಳು ಹಾಗೂ ತಾಂತ್ರಿಕ ಶಿಕ್ಷಣ ಇಲಾಖೆ ಅನುಷ್ಠಾನಕ್ಕೆ ತರಬೇಕು ಎಂದು ಆಗ್ರಹಿಸಿ ಡಿಪ್ಲೊಮಾ ವಿದ್ಯಾರ್ಥಿಗಳು ನಗರದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು.

ಆಲ್ ಇಂಡಿಯಾ ಡೆಮಾಕ್ರಟಿಕ್ ಸ್ಟೂಡೆಂಟ್ಸ್ ಆರ್ಗನೈಸೇಷನ್ (ಎಐಡಿಎಸ್‌ಒ) ಹಾಗೂ ಡಿಪ್ಲೊಮಾ ವಿದ್ಯಾರ್ಥಿಗಳ ರಾಜ್ಯ ಹೋರಾಟ ಸಮಿತಿಗಳ ಜಂಟಿ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ 300ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದರು.

‘ಈಗಿನ ಪರಿಸ್ಥಿತಿಗೆ ಅನುಗುಣವಾಗಿ ಪರೀಕ್ಷಾ ಮಾರ್ಗಸೂಚಿ ಹೊರಡಿಸಿದ್ದ ಯುಜಿಸಿ, ಅಂತಿಮ ಸೆಮಿಸ್ಟರ್‌ನ ಪರೀಕ್ಷೆಯನ್ನು ಕಡ್ಡಾಯವಾಗಿ ನಡೆಸಬೇಕು. ಉಳಿದ ಸೆಮಿಸ್ಟರ್‌ಗಳ ಪರೀಕ್ಷೆ ರದ್ದು ಮಾಡಿ, ಅವರನ್ನು ಆಂತರಿಕ ಮೌಲ್ಯಮಾಪನ ಅಥವಾ ಹಿಂದಿನ ಸೆಮಿಸ್ಟರ್ ಆಧಾರದ ಮೇಲೆ ಮೌಲ್ಯಮಾಪನ ನಡೆಸುವಂತೆ ಸಲಹೆ ನೀಡಿದೆ’ ಎಂದು ಡಿಪ್ಲೊಮಾ ವಿದ್ಯಾರ್ಥಿಗಳ ರಾಜ್ಯ ಹೋರಾಟ ಸಮಿತಿಯ ಅಪೂರ್ವ ತಿಳಿಸಿದರು.



ಮೇಲ್ಸೇತುವೆಯಿಂದ ಕಾಂಕ್ರೀಟ್ ಹಲಗೆ ಹೊರ ಸರಿದಿರುವುದು

ಮೇಲ್ಸೇತುವೆಯಿಂದ ಸರಿಯುತ್ತಿದ್ದ ಕಾಂಕ್ರೀಟ್ ಹಲಗೆಗಳ ದುರಸ್ತಿ

ಬೆಂಗಳೂರು: ರಾಜಾಜಿನಗರ ಕ್ಷೇತ್ರದ ಮಂಜುನಾಥ ನಗರದಲ್ಲಿ ಪಶ್ಚಿಮ ಕಾರ್ಡ್ ರಸ್ತೆಯ ಮೇಲ್ಸೇತುವೆಯಿಂದ ಸರಿಯುತ್ತಿದ್ದ ಕಾಂಕ್ರೀಟ್ ಹಲಗೆಗಳನ್ನು ಬಿಬಿಎಂಪಿ ದುರಸ್ತಿ ಪಡಿಸಿದೆ.

ಈ ಮೇಲ್ಸೇತುವೆಯ ರ‍್ಯಾಂಪ್ ನಿರ್ಮಾಣಕ್ಕಾಗಿ ಜೋಡಿಸಲಾದ ಕೆಲವು ಕಾಂಕ್ರೀಟ್ ಹಲಗೆಗಳು ಸ್ವಲ್ಪ ಹೊರಕ್ಕೆ ಸರಿದಿದ್ದವು. ಇದರಿಂದಾಗಿ, ಮೇಲ್ಸೇತುವೆಯು ನಿರ್ಮಾಣವಾದ ಮೂರೇ ವರ್ಷಗಳಲ್ಲಿ ಶಿಥಿಲಗೊಂಡಿರುವ ಆತಂಕ ಎದುರಾಗಿತ್ತು.

‘ಮೇಲ್ಸೇತುವೆಯ ರ‍್ಯಾಂಪ್‌ಗಳ ಬಳಿ ಜೋಡಿಸಿದ್ದ ಕೆಲ ಕಾಂಕ್ರೀಟ್ ಹಲಗೆಗಳು ತುಸು ಸರಿದಿದ್ದು ನಿಜ. ಮೇಲ್ಸೇತುವೆಯ ನಿರ್ವಹಣೆ ವೇಳೆ ಇದನ್ನು ಗಮನಿಸಿದ್ದೆವು. ಮೊಳೆ ಹೊಡೆಯುವ ತಂತ್ರಜ್ಞಾನ ಬಳಸಿ ಇವುಗಳನ್ನು ದುರಸ್ತಿಗೊಳಿಸಿದ್ದೇವೆ. ರ‍್ಯಾಂಪ್‌ನ ಎರಡು ಪಾರ್ಶ್ವಗಳ ಕಾಂಕ್ರೀಟ್ ಹಲಗೆಗಳು ಇನ್ನಷ್ಟು ಹೊರಗೆ ಸರಿಯದಂತೆ ತಡೆದಿದ್ದೇವೆ. ಇದರಿಂದ ಮೇಲ್ಸೇತುವೆಯ ಸುರಕ್ಷತೆಗೆ ಏನೂ ಅಡ್ಡಿ ಇಲ್ಲ’ ಎಂದು ಬಿಬಿಎಂಪಿಯ ಪ್ರಭಾರ ಮುಖ್ಯ ಎಂಜಿನಿಯರ್ (ಯೋಜನೆ) ಲೋಕೇಶ್ ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದರು.

‘ಸುರಕ್ಷತಾ ದೃಷ್ಟಿಯಿಂದ ಈ ಮೇಲ್ಸೇತುವೆಯನ್ನು ಇನ್ನೊಮ್ಮೆ ಪರಿಶೀಲನೆ ನಡೆಸಿ ವರದಿ ನೀಡುವಂತೆ ಸೂಚಿಸುತ್ತೇನೆ’ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ತಿಳಿಸಿದರು.

2018ರಲ್ಲಿ ಈ ಮೇಲ್ಸೇತುವೆಯ ಕಾಮಗಾರಿ ಪೂರ್ಣಗೊಂಡಿದೆ. ಮೂರು ವರ್ಷಗಳಿಂದ ಇದು ಬಳಕೆಯಾಗುತ್ತಿದೆ.

ಡ್ರಗ್ಸ್ ಮಾರಾಟ: ಬಟ್ಟೆ ವ್ಯಾಪಾರಿ ಬಂಧನ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ರಾಜಸ್ಥಾನದಿಂದ ಬಟ್ಟೆಗಳಲ್ಲಿ ಮಾದಕ ವಸ್ತು (ಡ್ರಗ್ಸ್) ಬಚ್ಚಿಟ್ಟುಕೊಂಡು ತಂದು ನಗರದಲ್ಲಿ ಮಾರುತ್ತಿದ್ದ ಆರೋಪದಡಿ ಭಾಗೀರಥಿ ದೇವಾಸಿ (44) ಎಂಬಾತನನ್ನು ಗಿರಿನಗರ ಪೊಲೀಸರು ಬಂಧಿಸಿದ್ದಾರೆ.

‘ರಾಜಸ್ಥಾನದ ಆರೋಪಿ, ನಗರದ ಬಾಗಲೂರಿನ ಪರ್ವತಪುರ ರಸ್ತೆಯಲ್ಲಿ ವಾಸವಿದ್ದ. ಆತನಿಂದ ₹ 10 ಲಕ್ಷ ಮೌಲ್ಯದ 2 ಕೆ.ಜಿ 140 ಗ್ರಾಂ ಅಫೀಮು ಹಾಗೂ ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಬನಶಂಕರಿ 3ನೇ ಹಂತದಲ್ಲಿರುವ ವೀರಭದ್ರನಗರದ 100 ಅಡಿ ರಸ್ತೆ ಬಳಿ ಆರೋಪಿ ಅಫೀಮು ಮಾರಲು ಬಂದಿದ್ದ. ಆ ಬಗ್ಗೆ ಮಾಹಿತಿ ಬರುತ್ತಿದ್ದಂತೆ ದಾಳಿ ಮಾಡಿ ಆತನನ್ನು ಬಂಧಿಸಲಾಯಿತು. ಆರೋಪಿಯ ದ್ವಿಚಕ್ರ ವಾಹನದ ಡಿಕ್ಕಿಯಲ್ಲಿ ಅಫೀಮು ಇತ್ತು’ ಎಂದೂ ತಿಳಿಸಿದರು.

ಬಟ್ಟೆ ವ್ಯಾಪಾರಿ: ‘ಬಂಧಿತ ಬಟ್ಟೆ ವ್ಯಾಪಾರಿ. ರಾಜಸ್ಥಾನದಿಂದ ಬಟ್ಟೆಗಳನ್ನು ತಂದು ನಗರದಲ್ಲಿ ಮಾರಾಟ ಮಾಡುತ್ತಿದ್ದ. ಪೆಡ್ಲರೊಬ್ಬರ ಪರಿಚಯ ಮಾಡಿಕೊಂಡಿದ್ದ ಆರೋಪಿ, ಡ್ರಗ್ಸ್ ಮಾರಾಟ ಮಾಡಲಾರಂಭಿಸಿದ್ದ’ ಎಂದು ಪೊಲೀಸರು ಹೇಳಿದರು.

‘ಬಟ್ಟೆಗಳಲ್ಲಿ ಮಾದಕ ವಸ್ತು ಬಚ್ಚಿಟ್ಟು ರಾಜಸ್ಥಾನದಿಂದ ನಗರಕ್ಕೆ ಕಳುಹಿಸಲಾಗುತ್ತಿತ್ತು. ಅದನ್ನು ಪಡೆಯುತ್ತಿದ್ದ ಆರೋಪಿ, ಸಣ್ಣ ಪೊಟ್ಟಣಗಳಲ್ಲಿ ಅಫೀಮು ತುಂಬುತ್ತಿದ್ದ. ಬಟ್ಟೆ ವ್ಯಾಪಾರ ಸೋಗಿನಲ್ಲಿ ಹಲವೆಡೆ ಸುತ್ತಾಡಿ ಅಫೀಮು ಮಾರುತ್ತಿದ್ದ. ಕೆಲ ಕಾಲೇಜು ವಿದ್ಯಾರ್ಥಿಗಳು ಹಾಗೂ ಕೆಲ ಕಂಪನಿ ಉದ್ಯೋಗಿಗಳು ಆತನ ಬಳಿ ಅಫೀಮು ಖರೀದಿಸುತ್ತಿದ್ದರು’ ಎಂದೂ ಅವರು ತಿಳಿಸಿದರು.

ದ್ವಿಚಕ್ರ ವಾಹನ ಕದ್ದು ಮಾರಾಟ

ಬೆಂಗಳೂರು: ದ್ವಿಚಕ್ರ ವಾಹನ ಕದ್ದು ಮಾರಾಟ ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ಜ್ಞಾನಭಾರತಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಮೆಹಬೂಬ್ ಪಾಷಾ ಹಾಗೂ ಸೈಯದ್ ತಬ್ರೇಜ್ ಬಂಧಿತರು. ಅವರಿಂದ ₹ 1.50 ಲಕ್ಷ ಮೌಲ್ಯದ 3 ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಠಾಣೆ ವ್ಯಾಪ್ತಿಯ ಮನೆಯೊಂದರ ಮುಂದೆ ನಿಲ್ಲಿಸಿದ್ದ ದ್ವಿಚಕ್ರ ವಾಹನವನ್ನು ಆರೋಪಿಗಳು ಇತ್ತೀಚೆಗೆ ಕದ್ದಿದ್ದರು. ಈ ಬಗ್ಗೆ ಪ್ರಕರಣ ದಾಖಲಾಗಿತ್ತು. ತನಿಖೆ ಕೈಗೊಂಡಾಗ ಆರೋಪಿಗಳು ಸಿಕ್ಕಿಬಿದ್ದರು’ ಎಂದರು.

ಲ್ಯಾಪ್‌ಟಾಪ್ ಮಾರುವುದಾಗಿ ₹ 2.26 ಲಕ್ಷ ವಂಚನೆ

ಬೆಂಗಳೂರು: ಕಡಿಮೆ ದರದಲ್ಲಿ ಲ್ಯಾಪ್‌ಟಾಪ್ ಕೊಡಿಸುವ ಆಮಿಷವೊಡ್ಡಿ ಎಂಜಿನಿಯರೊಬ್ಬರಿಂದ ಮುಂಗಡವಾಗಿ ₹ 2.26 ಲಕ್ಷ ಪಡೆದು ವಂಚಿಸಲಾಗಿದೆ.

ಈ ಸಂಬಂಧ ಕೊತ್ತನೂರು ನಿವಾಸಿ ದೂರು ನೀಡಿದ್ದಾರೆ. ಪೂರ್ವ ವಿಭಾಗ ಸೈಬರ್ ಕ್ರೈಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ದೂರುದಾರರಿಗೆ ಕರೆ ಮಾಡಿದ್ದ ಆರೋಪಿ, ಕಡಿಮೆ ದರದಲ್ಲಿ ಗುಣಮಟ್ಟದ ಲ್ಯಾಪ್‌ಟಾಪ್ ಕೊಡಿಸುವುದಾಗಿ ಹೇಳಿದ್ದ. ದೂರುದಾರ, ಆರೋಪಿ ನೀಡಿದ್ದ ಖಾತೆಗೆ ₹ 2.26 ಲಕ್ಷ ಜಮೆ ಮಾಡಿದ್ದರು. ಎಂದು ಮೂಲಗಳು ಹೇಳಿವೆ.

‘ಎಚ್‌ಎನ್‌ಎಸ್ ಕಾರ್ಖಾನೆಯಲ್ಲಿ ದಾಳಿ ಆಗಿಲ್ಲ'

ಬೆಂಗಳೂರು: ಯಲಚೇನಹಳ್ಳಿ ವೈ.ವಿ. ಅಣ್ಣಯ್ಯ ರಸ್ತೆಯಲ್ಲಿರುವ ‘ಎಚ್‌ಎನ್‌ಎಸ್’’ ಪೀಠೋಪಕರಣ ಕಾರ್ಖಾನೆ ಮೇಲೆ ಯಾವುದೇ ದಾಳಿ ನಡೆದಿಲ್ಲ. ಕಾರ್ಖಾನೆಗೂ ಪೊಲೀಸರ ದಾಳಿಗೂ ಯಾವುದೇ ಸಂಬಂಧವಿಲ್ಲ. ಕಾರ್ಖಾನೆ ಬಳಿಯ ಪಾಳುಬಿದ್ದ ಕಟ್ಟಡದ ಮೇಲೆ ದಾಳಿ ಮಾಡಲಾಗಿತ್ತು ಎಂಬುದಾಗಿ ಪೊಲೀಸರು ಸ್ಪಷ್ಟಪಡಿಸಿದ್ದಾರೆ.


ಡ್ರಗ್ಸ್ ಸಾಗಣೆ ಹಾಗೂ ಮಾರಾಟದ ವಿರುದ್ಧ ಚುರುಕಿನ ಕಾರ್ಯಾಚರಣೆ ನಡೆಸುತ್ತಿರುವ ಕುಮಾರಸ್ವಾಮಿ ಲೇಔಟ್ ಠಾಣೆ ಪೊಲೀಸರು, ಪಾಳುಬಿದ್ದ ಕಟ್ಟಡದ ಮೇಲೆ ಇತ್ತೀಚೆಗೆ ದಾಳಿ ಮಾಡಿದ್ದರು. 21 ಕೆ.ಜಿ 350 ಗ್ರಾಂ ಗಾಂಜಾ ಜಪ್ತಿ ಮಾಡಿ 13 ರೌಡಿಗಳನ್ನು ಬಂಧಿಸಿದ್ದರು.

ಕಾರ್ಯಾಚರಣೆ ಬಗ್ಗೆ ಪತ್ರಿಕಾ ಪ್ರಕಟಣೆ ನೀಡುವಾಗ ‘ಎಚ್‌ಎನ್‌ಎಸ್’ ಕಾರ್ಖಾನೆ ಹೆಸರು ಪ್ರಸ್ತಾಪವಾಗಿತ್ತು. ‘ಕಾರ್ಖಾನೆಯಲ್ಲಿ 21 ಕೆ.ಜಿ ಗಾಂಜಾ’ ಶೀರ್ಷಿಕೆಯಡಿ ಸುದ್ದಿ ಪ್ರಕಟವಾಗಿತ್ತು. ಆದರೆ, ಕಾರ್ಖಾನೆ ಮೇಲೆ ಯಾವುದೇ ದಾಳಿ ನಡೆದಿಲ್ಲ. ಕಾರ್ಖಾನೆ ಬಳಿಯ ಕಟ್ಟಡದಲ್ಲಿ ಡ್ರಗ್ಸ್ ಸಿಕ್ಕಿದೆ. ಕೃತ್ಯ ನಡೆದ ಸ್ಥಳವನ್ನು ಗುರುತಿಸುವ ಉದ್ದೇಶದಿಂದ ಕಾರ್ಖಾನೆ ಹೆಸರು ಉಲ್ಲೇಖಿಸಲಾಗಿತ್ತು. ತಪ್ಪು ಮಾಹಿತಿಯಿಂದ ಕಾರ್ಖಾನೆ ಮೇಲೆ ದಾಳಿ ಎಂಬ ಸುದ್ದಿ ಪ್ರಕಟವಾಗಿರುವುದಾಗಿ ಪೊಲೀಸರು ಸ್ಪಷ್ಟಪಡಿಸಿದ್ದಾರೆ.

‘ಒಕ್ಕಲಿಗ ನಿಗಮ: ಬುಡಕಟ್ಟು ಜಾತಿಗಳ ನಿರ್ನಾಮ’

ಬೆಂಗಳೂರು: ‘ಒಕ್ಕಲಿಗ ಅಭಿವೃದ್ಧಿ ನಿಗಮ ಸ್ಥಾಪನೆ ಮಾಡುವ ಮೂಲಕ ಸಣ್ಣ ಜಾತಿಗಳು, ಪಶುಪಾಲನಾ ಬುಡಕಟ್ಟು ಜನಾಂಗಗಳನ್ನು ನಾಶ ಮಾಡುವಂತಹ ನಿರ್ಣಯವನ್ನು ರಾಜ್ಯ ಸರ್ಕಾರ ಕೈಗೊಂಡಿದೆ’ ಎಂದು ವಿಶ್ವ ಕುಂಚಿಟಿಗ ಯುವಶಕ್ತಿ ಸಂಘಟನೆ ಅಸಮಾಧಾನ ವ್ಯಕ್ತಪಡಿಸಿದೆ.

‘ಪ್ರವರ್ಗ 3ಎ ಅಡಿಯಲ್ಲಿ ಬರುವ ಒಕ್ಕಲಿಗ ಜಾತಿಯನ್ನು ಪ್ರಧಾನವಾಗಿ ಬಿಂಬಿಸಿ, ಪ್ರವರ್ಗ 3ರ ಅಡಿಯಲ್ಲಿ ಬರುವ ಕುಂಚಿಟಿಗ ಜಾತಿಯನ್ನು ಒಕ್ಕಲಿಗರ ಉಪಜಾತಿ ಎಂದು ಹೇಳಿರುವುದು ಖಂಡನೀಯ’ ಎಂದಿದೆ.



ವಿಐಟಿಯ ‘ಟೈಟನ್ಸ್’ ತಂಡ

ಮೆಟೀರಿಯಲ್ ನೆಕ್ಸ್ಟ್ 2.0: ವಿಐಟಿ ತಂಡಕ್ಕೆ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಟಾಟಾ ಸ್ಟೀಲ್ ವತಿಯಿಂದ ಆಯೋಜಿಸಿದ್ದ ‘ಮೆಟೀರಿಯಲ್ ನೆಕ್ಸ್ಟ್ 2.0 ಸಂಶೋಧನಾ ಸ್ಪರ್ಧೆ’ಯಲ್ಲಿ ವೆಲ್ಲೂರು ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ (ವಿಐಟಿ) ‘ಟೈಟನ್ಸ್’ ತಂಡ ಜಯ ಗಳಿಸಿದೆ.

ಟಾಟಾ ಸ್ಟೀಲ್ ಅಡ್ವಾನ್ಸ್‌ಡ್ ಮೆಟೀರಿಯಲ್ಸ್ ರಿಸರ್ಚ್ ಸೆಂಟರ್ (ಟಿಎಸ್‌ಎಎಂಆರ್‌ಸಿ) ತನ್ನ ‘ಕ್ಯಾಂಪಸ್ ಕನೆಕ್ಟ್’ ಕಾರ್ಯಕ್ರಮದಡಿ ಉದಯೋನ್ಮುಖ ಸಂಶೋಧನಾ ಪ್ರತಿಭೆಗಳನ್ನು ಗುರುತಿಸಲು ಮತ್ತು ಸಂಭಾವ್ಯ ವಿಚಾರಗಳನ್ನು ಕಾರ್ಯರೂಪಕ್ಕೆ ತರಲು ಸಂಶೋಧನೆ ಮತ್ತು ನವೋದ್ಯಮ ವಿಭಾಗಗಳಲ್ಲಿ ಈ ಸ್ಪರ್ಧೆ ಆಯೋಜಿಸಿತ್ತು.

ಜುಲೈ 9ರಂದು ನಡೆದ ಸ್ಪರ್ಧೆಯ ಅಂತಿಮ ಸುತ್ತಿನಲ್ಲಿ ವಿಐಟಿ ತಂಡ ₹5 ಲಕ್ಷ ನಗದು ಬಹುಮಾನ ಸಹಿತ ಮೊದಲ ಸ್ಥಾನದಲ್ಲಿ ವಿಜೇತರಾದರು. ತಂಡದಲ್ಲಿ ಪರ್ಲಿನ್ ಹಮೀದ್, ಅಂಶೀದ್ ರಹೀಂ, ಅಶ್ವಿನ್, ಜಿಶಿತಾ ಇದ್ದರು. ಇವರಿಗೆ ಹಿರಿಯ ಪ್ರಾಧ್ಯಾಪಕರಾದ ಗೀತಾ ಮನಿವಸ್ಗಂ ಮಾರ್ಗದರ್ಶಕರಾಗಿದ್ದರು.

‘ದೇಶದಾದ್ಯಂತ ಆಯೋಜಿಸಿದ್ದ ಈ ಸ್ಪರ್ಧೆಯಲ್ಲಿ 250 ತಂಡಗಳು ಭಾಗವಹಿಸಿದ್ದವು. ಇದರಲ್ಲಿ ವಿಐಟಿ ತಂಡ ಟೈಟಾನಿಯಂ ಮಿಶ್ರಲೋಹದ 3ಡಿ ಮುದ್ರಿತ ವಿನ್ಯಾಸ ಮತ್ತು ಅಭಿವೃದ್ಧಿಪಡಿಸಿತ್ತು’ ಎಂದು ಪ್ರಕಟಣೆ ತಿಳಿಸಿದೆ.

ಬ್ಯಾಂಕ್‌ನಲ್ಲಿ ಹತ್ಯೆ; ಇನ್‌ಸ್ಪೆಕ್ಟರ್‌ಗೆ ಕಮಿಷನರ್ ತರಾಟೆ

ಬೆಂಗಳೂರು: ಬ್ಯಾಂಕೊಂದರಲ್ಲಿ ಹಾಡಹಗಲೇ ರೌಡಿ ಜೋಸೆಫ್ ಅಲಿಯಾಸ್ ಬಬ್ಲಿ ಕೊಲೆ ನಡೆದಿರುವುದನ್ನು ಗಂಭೀರವಾಗಿ ಪರಿಗಣಿಸಿರುವ ಕಮಿಷನರ್ ಕಮಲ್ ಪಂತ್, ಕೋರಮಂಗಲ ಠಾಣೆಗೆ ಮಂಗಳವಾರ ರಾತ್ರಿ ದಿಢೀರ್ ಭೇಟಿ ನೀಡಿ ಕೃತ್ಯದ ಬಗ್ಗೆ ಮಾಹಿತಿ ಪಡೆದರು.

ಪತ್ನಿ ಜೊತೆ ಸೋಮವಾರ ಮಧ್ಯಾಹ್ನ ಬ್ಯಾಂಕ್‌ಗೆ ಬಂದಿದ್ದ ವೇಳೆ ರೌಡಿ ಬಬ್ಲಿ ಹತ್ಯೆಯಾಗಿತ್ತು. ಜನನಿಬಿಡ ಪ್ರದೇಶದಲ್ಲಿ ಕೊಲೆ ನಡೆದಿದ್ದರಿಂದ ಸುತ್ತಮುತ್ತ ಪ್ರದೇಶಗಳಲ್ಲಿ ಭಯದ ವಾತಾವರಣ ನಿರ್ಮಾಣವಾಗಿದೆ. ದಿನ ಕಳೆದರೂ ಆರೋಪಿಗಳ ಬಂಧನವಾಗಿಲ್ಲ. ಈ ಬಗ್ಗೆ ಇನ್‌ಸ್ಪೆಕ್ಟರ್ ರವಿ ಅವರನ್ನು ತರಾಟೆಗೆ ತೆಗೆದುಕೊಂಡ ಕಮಿಷನರ್, ‘ಮುಂದಿನ 24 ಗಂಟೆಯೊಳಗೆ ಆರೋಪಿಗಳನ್ನು ಬಂಧಿಸಬೇಕು. ಇಲ್ಲದಿದ್ದರೆ, ಶಿಸ್ತು ಕ್ರಮ ಜರುಗಿಸಲಾಗುವುದು’ ಎಂದು ಎಚ್ಚರಿಸಿದರು.

‘ಮಾರಕಾಸ್ತ್ರ ಹಿಡಿದು ಮಧ್ಯಾಹ್ನವೇ ಬ್ಯಾಂಕ್‌ಗೆ ನುಗ್ಗಿ ಹತ್ಯೆ ಮಾಡುತ್ತಾರೆ ಎಂದರೆ ಏನು ಅರ್ಥ. ಠಾಣೆ ವ್ಯಾಪ್ತಿಯ ರೌಡಿಗಳ ಮೇಲೆ ನಿಗಾ ಇರಿಸಬೇಕು. ರೌಡಿ ಚಟುವಟಿಕೆಗಳ ಬಗ್ಗೆ ಮಾಹಿತಿ ಕಲೆಹಾಕಬೇಕಾದ ನೀವು ಹಾಗೂ ನಿಮ್ಮ ಸಿಬ್ಬಂದಿ ಏನು ಮಾಡುತ್ತಿದ್ದೀರಾ?’ ಎಂದೂ ಏರುಧ್ವನಿಯಲ್ಲಿ ಪ್ರಶ್ನಿಸಿದರು.

‘ಇಂಥ ಘಟನೆಗಳು ಮರುಕಳಿಸಿದರೆ ಠಾಣಾಧಿಕಾರಿಯನ್ನೇ ಹೊಣೆ ಮಾಡಿ ಕ್ರಮ ಕೈಗೊಳ್ಳುತ್ತೇನೆ’ ಎಂದೂ ಎಚ್ಚರಿಕೆ ನೀಡಿದರು.

ಕೊಲೆಗೆ ಪ್ರತೀಕಾರ: ಅಶೋಕ ನಗರ ಠಾಣಾ ವ್ಯಾಪ್ತಿಯಲ್ಲಿ ಇತ್ತೀಚೆಗೆ ರೌಡಿ ಅಪ್ಪು ಕೊಲೆ ಆಗಿತ್ತು. ಅದರಲ್ಲಿ ಬಬ್ಲಿ ಹೆಸರು ಕೇಳಿಬಂದಿತ್ತು. ಅದೇ ಕೊಲೆ ಪ್ರತೀಕಾರವಾಗಿ ಬಬ್ಲಿ ಹತ್ಯೆಯಾಗಿರುವ ಮಾಹಿತಿ ಪೊಲೀಸರಿಗೆ ಲಭ್ಯವಾಗಿದೆ. ತಲೆಮರೆಸಿಕೊಂಡಿರುವ ಆರೋಪಿಗಳ ಪತ್ತೆಗಾಗಿ ವಿಶೇಷ ತಂಡಗಳನ್ನು ರಚಿಸಲಾಗಿದೆ.

ಕಾರ್ಮಿಕರ ನೆರವಿನ ಸಹಾಯವಾಣಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಸಂಘಟಿತ ಕಾರ್ಮಿಕರಿಗಾಗಿ ಮಧ್ಯಸ್ಥಿಕೆ ಮತ್ತು ಕಾನೂನು ನೆರವು ಒದಗಿಸಲು ವರ್ಕಿಂಗ್ ಪೀಪಲ್ಸ್ ಚಾರ್ಟರ್ (ಡಬ್ಲ್ಯುಪಿಸಿ) ಸಂಘಟನೆಯು ‘ಭಾರತ ಕಾರ್ಮಿಕವಾಣಿ’ ಎಂಬ ಸಹಾಯವಾಣಿಯನ್ನು ಗುರುವಾರದಿಂದ ಆರಂಭಿಸಿದೆ.

ಆಜೀವಿಕಾ ಬ್ಯೂರೊದ ಸಹಯೋಗದೊಂದಿಗೆ 18008339020 ಸಹಾಯವಾಣಿಯು ಕಾರ್ಯನಿರ್ವಹಿಸಲಿದ್ದು, ದೇಶದಲ್ಲಿರುವ ಅಸಂಘಟಿತ ವಲಯದ ಎಲ್ಲ ಕಾರ್ಮಿಕರ ಅಗತ್ಯ ನೆರವಿಗೆ ಸ್ಪಂದಿಸಲಿದೆ. ಅನಿಶ್ಚಿತ ಉದ್ಯೋಗ, ಅಸುರಕ್ಷಿತ ಸ್ಥಳಗಳಲ್ಲಿ ಕೆಲಸದ ಅಭದ್ರತೆ ಮತ್ತು ಅನಿಯಮಿತ ದುಡಿಮೆ, ಕಡಿಮೆ ಸಂಬಳ ಹಾಗೂ ರಕ್ಷಣೆ ಇಲ್ಲದಿರುವ ಸ್ಥಳಗಳಲ್ಲಿ ದುಡಿಯುವುದು ಮುಂತಾದ ಸಮಸ್ಯೆ ಮತ್ತು ದೂರುಗಳಿಗೆ ದೂರವಾಣಿ ಮೂಲಕ ಸ್ಪಂದಿಸಲಾಗುತ್ತದೆ ಎಂದು ಡಬ್ಲ್ಯುಪಿಸಿಯು ಪ್ರಕಟಣೆಯಲ್ಲಿ ತಿಳಿಸಿದೆ.

ಕೆಲಸಕ್ಕೆ ಸಂಬಂಧಪಟ್ಟಂತೆ ನಡೆಯುವ ವಂಚನೆಯ ಬಗ್ಗೆ ಅಂದರೆ, ಸಂಬಳದಲ್ಲಿ ಮೋಸ, ಜೀತ ಪದ್ಧತಿ, ದೈಹಿಕ ಹಿಂಸೆ, ನಿಂದನೆ, ಅಪಾಯಕಾರಿ ಕೆಲಸದ ಸ್ಥಳಗಳಲ್ಲಿ ಸಂಭವಿಸುವ ಅಪಘಾತಗಳಿಗೆ ಕೊಡಬೇಕಾದ ಪರಿಹಾರ ಧನ ಕೊಡದೇ ಇರುವುದು, ಕೋವಿಡ್ ಪಿಡುಗು ಹಾಗೂ ಲಾಕ್‌ಡೌನ್‌ನಂತಹ ಸಂಕಷ್ಟದ ಸಮಯದಲ್ಲಿ ಅಗತ್ಯ ಸೇವೆಗಳನ್ನು ಪಡೆದುಕೊಳ್ಳಲು ಕಷ್ಟವಾಗಿದ್ದವರು ಈ ಸಹಾಯವಾಣಿ ಸಂಪರ್ಕಿಸಿದರೆ ಅವರಿಗೆ ಕಾನೂನು ನೆರವು ಒದಗಿಸಲಾಗುವುದು ಎಂದು ಸಂಘಟನೆ ಹೇಳಿದೆ.

ರಾಜ್ಯದಿಂದ ಸಿಗುವ ಸಾಮಾಜಿಕ ಭದ್ರತೆಯ ಯೋಜನೆಗಳು ಮತ್ತು ಇವುಗಳನ್ನು ಪಡೆದುಕೊಳ್ಳುವ ವಿಧಾನಗಳ ಬಗೆಗಿನ ಮಾಹಿತಿಯನ್ನೂ ಸಹಾಯವಾಣಿಯ ಮೂಲಕ ಕಾರ್ಮಿಕರಿಗೆ ನೀಡಲಾಗುತ್ತದೆ ಎಂದೂ ಅದು ಹೇಳಿದೆ.

ಸಹಾಯವಾಣಿಯ ರಾಜ್ಯ ಕಚೇರಿಯ ಸಂಪರ್ಕಕ್ಕೆ– 7204940724.

ಸಹಾಯವಾಣಿಯ ವ್ಯಾಪ್ತಿ

- ಕಾರ್ಮಿಕರಿಗಾಗಿ ಇರುವ ಪಿಎಫ್, ಇಎಸ್‌ಐ, ಗ್ರಾಚ್ಯುಟಿ ನೋಂದಣಿ ಮತ್ತು ಸರ್ಕಾರಿ ಯೋಜನೆಗಳ ಮಾಹಿತಿ
- ಹಕ್ಕುಗಳ ಉಲ್ಲಂಘನೆಯಾದಾಗ ಅನುಸರಿಸಬೇಕಾದ ಪ್ರಕ್ರಿಯೆಗಳ ಮಾಹಿತಿ
- ಪೊಲೀಸ್ ಠಾಣೆ, ನ್ಯಾಯಾಲಯಗಳಲ್ಲಿ ದೂರು ದಾಖಲಿಸಬೇಕಾದಾಗ ನೆರವು
- ಕೆಲಸದ ಸ್ಥಳಗಳಲ್ಲಿ ಲೈಂಗಿಕ ದೌರ್ಜನ್ಯ ನಡೆದರೆ ದೂರು ನೀಡುವುದಕ್ಕೆ ಸಂಬಂಧಿಸಿದ ಮಾಹಿತಿ
- ಮಧ್ಯಸ್ಥಿಕೆಯಿಂದ ಸಮಸ್ಯೆ ಬಗೆಹರಿಸುವ ಕುರಿತು ಮಾರ್ಗದರ್ಶನ

‘ವೈಲ್ಡ್ ಕರ್ನಾಟಕ’ ಸಾಕ್ಷ್ಯಚಿತ್ರಕ್ಕೆ ತಡೆ

ಬೆಂಗಳೂರು: ‘ವೈಲ್ಡ್ ಕರ್ನಾಟಕ’ ಅಥವಾ ‘ಇಂಡಿಯಾಸ್ ವೈಲ್ಡ್ ಕರ್ನಾಟಕ’ ಎಂಬ ಸಾಕ್ಷ್ಯಚಿತ್ರ ಪ್ರಸಾರಕ್ಕೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.

‘ಪ್ರತಿವಾದಿಗಳಾದ ಶರತ್ ಚಂಪತಿ ಮತ್ತು ಇತರ ನಾಲ್ವರು ಅಥವಾ ಹಕ್ಕು ಪ್ರತಿಪಾದಿಸುವ ಯಾರೊಬ್ಬರೂ ಈ ಸಾಕ್ಷ್ಯಚಿತ್ರವನ್ನು ಪ್ರಕಟಿಸಬಾರದು. ಈ ಚಿತ್ರದ ಎಲ್ಲಾ ವ್ಯವಹಾರಕ್ಕೆ ತಡೆ ನೀಡಲಾಗಿದೆ’ ಎಂದು ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ ಹೇಳಿದೆ. ವಿಚಾರಣೆ ಆ.3ಕ್ಕೆ ಮುಂದೂಡಿದೆ.

ಈ ಸಂಬಂಧ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿರುವ ರವೀಂದ್ರ ರೆಡ್ಕರ್ ಮತ್ತು ಆರ್.ಕೆ. ಉಲ್ಲಾಸ್ ಕುಮಾರ್, ‘ಈ ಚಿತ್ರವನ್ನು ಜಗತ್ತಿನಾದ್ಯಂತ ವಾಣಿಜ್ಯ ಉದ್ದೇಶಕ್ಕೆ ಬಳಸಲಾಗುತ್ತಿದೆ. ಚಿತ್ರ ನಿರ್ಮಾಣ ವಿಷಯದಲ್ಲಿ ಖಾಸಗಿ ವ್ಯಕ್ತಿಗಳೊಂದಿಗೆ ಅರಣ್ಯ ಇಲಾಖೆ ಮಾಡಿಕೊಂಡಿರುವ ಒಡಂಬಡಿಕೆಯು ಕೆಟಿಪಿಪಿ(ಕರ್ನಾಟಕ ಪಾರದರ್ಶಕ) ಕಾಯ್ದೆ ಪ್ರಕಾರ ಇಲ್ಲ. ಹೀಗಾಗಿ, ಸಾಕ್ಷ್ಯಚಿತ್ರದ ಪ್ರಸಾರಕ್ಕೆ ತಡೆ ನೀಡಬೇಕು’ ಎಂದು ಕೋರಿದ್ದಾರೆ.

ಚಿತ್ರಾವಳಿ



ಆರ್‌ಟಿಐ ಕಾರ್ಯಕರ್ತರ ಕೊಲೆ ಮತ್ತು ದಾಳಿ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಿ ಆರೋಪಿಗಳನ್ನು ಕೂಡಲೇ ಬಂಧಿಸಿ ಚಾರ್ಜ್‌ಶೀಟ್ ಸಲ್ಲಿಸಬೇಕು ಹಾಗೂ ಮೃತರ ಕುಟುಂಬಗಳಿಗೆ ಸರ್ಕಾರ ಪರಿಹಾರ ನೀಡಬೇಕು ಎಂದು ಆಗ್ರಹಿಸಿ ವಕೀಲರು ಹಾಗೂ ಆರ್‌ಟಿಐ ಕಾರ್ಯಕರ್ತರ ನಿಯೋಗ ಗೃಹಸಚಿವ ಬಸವರಾಜ ಬೊಮ್ಮಾಯಿ ಅವರಿಗೆ ಸೋಮವಾರ ಮನವಿ ಸಲ್ಲಿಸಿತು. ವಕೀಲರಾದ ಸುಧಾ ಕಾಟವ, ಎಸ್‌.ಉಮಾಪತಿ, ಆರ್‌ಟಿಐ ಕಾರ್ಯಕರ್ತ ಕೆ.ಸಿ.ರಾಜಣ್ಣ, ಮಂಜುನಾಥ್, ನರಸಿಂಹಮೂರ್ತಿ ಇದ್ದರು.



ಬಕ್ರೀದ್ ಅಂಗವಾಗಿ ಚಾಮರಾಜಪೇಟೆಯ ಈದ್ಗಾ ಮೈದಾನದಲ್ಲಿ ತರಹೇವಾರಿ ಕುರಿಗಳು ಮಾರಾಟಕ್ಕೆ ಬಂದಿರುವುದು –ಪ್ರಜಾವಾಣಿ ಚಿತ್ರ

ಏಕಾದಶಿ ವಿಶೇಷ ಪೂಜೆ



ರಾಮದೇವರಿಗೆ ಹೂವಿನ ಅಲಂಕಾರ

ದಾಬಸ್ ಪೇಟೆ: ಇಲ್ಲಿನ ರಾಮದೇವರ ಬೆಟ್ಟದ ರಾಮ ಪಾದುಕೆ ದೇವಾಲಯದಲ್ಲಿ ಪ್ರಥಮ ಏಕಾದಶಿ ಪ್ರಯುಕ್ತ ಮಂಗಳವಾರ ವಿಶೇಷ ಪೂಜೆ ನೆರವೇರಿತು.

ಮುಂಜಾನೆಯಿಂದಲೇ ದೇವರಿಗೆ ವಿಶೇಷ ಅಭಿಷೇಕ ಹಾಗೂ ವಿವಿಧ ಪೂಜಾ ಕೈಂಕರ್ಯಗಳು ನಡೆದವು.

ಭಕ್ತರು ಹಲಸಿನ ಹಣ್ಣಿನಿಂದ ಪ್ರಸಾದ ಮಾಡಿ, ದೇವರಿಗೆ ನೈವೇದ್ಯ ಸಲ್ಲಿಸಿದರು. ಸುತ್ತಮುತ್ತಲ ಗ್ರಾಮಗಳು ಹಾಗೂ ದೂರದ ಊರುಗಳಿಂದ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ದೇವರ ದರ್ಶನಕ್ಕೆ ಆಗಮಿಸಿದ್ದರು.

ಬೆರಟೇನ ಅಗ್ರಹಾರದ ಚೌಡೇಶ್ವರಿ ಕೆರೆಗೆ ಹರಿಯುತ್ತಿರುವ ತ್ಯಾಜ್ಯದ ನೀರು

ಮನೆಗಳಿಗೆ ನುಗ್ಗುವ ಕೆರೆಯ ‘ತ್ಯಾಜ್ಯ’ ನೀರು

ಪ್ರಜಾವಾಣಿ ವಾರ್ತೆ

ಬೊಮ್ಮನಹಳ್ಳಿ: ಹೊಸೂರು ರಸ್ತೆಯ ಬೆರಟೇನ ಅಗ್ರಹಾರದ ಚೌಡೇಶ್ವರಿ ಕೆರೆಗೆ ತ್ಯಾಜ್ಯದ ನೀರು ಹರಿಸಲಾಗುತ್ತಿದ್ದು, ಕಲುಷಿತಗೊಂಡಿರುವ ನೀರು ರಸ್ತೆ ಹಾಗೂ ಅಪಾರ್ಟ್‌ಮೆಂಟ್ ಸಮುಚ್ಚಯಕ್ಕೆ ನುಗ್ಗಿರುವುದರಿಂದ ನಿವಾಸಿಗಳಿಗೆ ಸಮಸ್ಯೆಯಾಗಿದೆ.

ಬೇಗೂರು ವಾರ್ಡ್‌ಗೆ ಒಳಪಡುವ ಈ ಕೆರೆಗೆ ವಿವಿಧ ಅಪಾರ್ಟ್‌ಮೆಂಟ್ ಸಮುಚ್ಚಯಗಳು, ಗಾರ್ಮೆಂಟ್ಸ್ ಕಾರ್ಖಾನೆಗಳು ಹಾಗೂ ಮನೆಗಳ ತ್ಯಾಜ್ಯದ ನೀರು ಸೇರ್ಪಡೆಯಾಗುತ್ತಿದೆ. ಕೆರೆ ತುಂಬಿದಾಗ ಅಕ್ಕಪಕ್ಕದ ಬಡಾವಣೆಗಳಿಗೆ ಹರಿದು, ಜನರು ಮೂಗುಮುಚ್ಚಿ ನಡೆದಾಡುವ ಸ್ಥಿತಿ ಎದುರಾಗಿದೆ.

ಕೆರೆಗೆ ಹೊಂದಿಕೊಂಡಂತೆ ತಗ್ಗು ಪ್ರದೇಶದಲ್ಲಿರುವ ಗಂಗಮ್ಮ ಬಡಾವಣೆ, ಇಂದಿರಮ್ಮ ಬಡಾವಣೆ ಹಾಗೂ ಅಶ್ರೀತ್ ಬಡಾವಣೆಗಳಿಗೆ ಕೆರೆಯ ಕೊಳಚೆ ನೀರು ನುಗ್ಗಿತ್ತು. ಇದನ್ನು ತಪ್ಪಿಸಲು ಕೆರೆಯಿಂದ ಕಾಲುವೆ ತೋಡಿ, ನೀರನ್ನು ಖಾಲಿ ಜಾಗಕ್ಕೆ ಬಿಡಲಾಗಿತ್ತು. ಹೆಚ್ಚಾದ ನೀರು ಅಕ್ಕಪಕ್ಕದ ಖಾಲಿ ಜಾಗಗಳು, ರಸ್ತೆ ಹಾಗೂ ಅಪಾರ್ಟ್‌ಮೆಂಟ್ ಸಮುಚ್ಚಯದ ಒಳಗೆ ನುಗ್ಗಿ ಕಿರಿಕಿರಿ ಉಂಟು ಮಾಡುತ್ತಿದೆ.



ವಿಆರ್‌ಎನ್ ಅಪಾರ್ಟ್‌ಮೆಂಟ್ ಸಮುಚ್ಚಯದ ಆವರಣಕ್ಕೆ ನುಗ್ಗಿರುವ ಕೆರೆಯ ಕೊಳಚೆ ನೀರು.

‘ಈ ಭಾಗದಲ್ಲಿ ಕೆರೆಗೆ ನಿರ್ಮಾಣವಾಗಿದ್ದ 33 ಅಡಿಯ ರಾಜಕಾಲುವೆ ಈಗ ಕಣ್ಮರೆಯಾಗಿದೆ. ಬೇರೆ ಕೆರೆಯಿಂದ ಸಂಪರ್ಕ ಕಲ್ಪಿಸುವ ರಾಜಕಾಲುವೆಯ ಕುರುಹೂ ಇಲ್ಲದಂತಾಗಿದೆ. ಇದರಿಂದ ನೀರು ಬಡಾವಣೆಗಳಿಗೆ ನುಗ್ಗುತ್ತಿದೆ’ ಎನ್ನುವುದು ಸ್ಥಳೀಯ ನಿವಾಸಿಗಳ ಅಳಲು.

‘ಪಕ್ಕದ ಖಾಲಿ ಜಾಗಕ್ಕೆ ತ್ಯಾಜ್ಯದ ನೀರು ಬಿಟ್ಟಿದ್ದರಿಂದ ನಮ್ಮ ಅಪಾರ್ಟ್‌ಮೆಂಟ್ ತಡೆಗೋಡೆ ಬಿರುಕು ಬಿಟ್ಟಿದೆ. ಕುಡಿಯುವ ನೀರಿನ ಸಂಪ್‌ಗೂ ಕೊಳಚೆ ನೀರು ಸೇರಿ, ಬಳಕೆಗೆ ಯೋಗ್ಯವಾಗಿ ನೀರಿಗಾಗಿ ಪರದಾಡುವಂತಾಗಿದೆ. ವಾಸನೆಗೆ ಹೊರ ಬರಲು ಕಷ್ಟವಾಗುತ್ತಿದೆ’ ಎಂದು ಅಪಾರ್ಟ್‌ಮೆಂಟ್ ನಿವಾಸಿ ಪ್ರಕಾಶ್ ಬೇಸರ ವ್ಯಕ್ತಪಡಿಸಿದರು.

ಈ ಬಗ್ಗೆ ಪ್ರತಿಕ್ರಿಯಿಸಿದ ಬಿಬಿಎಂಪಿಯ ಬೊಮ್ಮನಹಳ್ಳಿ ವಲಯದ ಜಂಟಿ ಆಯುಕ್ತ ಎಂ.ರಾಮಕೃಷ್ಣ, ‘ಕೆಲ ಅಪಾರ್ಟ್‌ಮೆಂಟ್ ಸಮುಚ್ಚಯಗಳ ತ್ಯಾಜ್ಯ ನೀರನ್ನು ಕೆರೆಗೆ ಹರಿಸುತ್ತಿರುವುದು ಕಂಡು ಬಂದಿದೆ. ಈ ಸಂಬಂಧ ಕೆರೆ ನಿರ್ವಹಣೆ ಹಾಗೂ ಬೃಹತ್ ನೀರುಗಾಲುವೆ ವಿಭಾಗಕ್ಕೆ ಮಾಹಿತಿ ನೀಡಿ ಕ್ರಮ ಕೈಗೊಳ್ಳುವಂತೆ ಸೂಚಿಸಿದ್ದೇನೆ’ ಎಂದರು.

ಚೌಡೇಶ್ವರಿ ಕೆರೆ ಅತಿಕ್ರಮಣದಾರರ ದಾಳಿಯಿಂದ ತನ್ನ ಮೂಲ ಸ್ವರೂಪವನ್ನೇ ಕಳೆದುಕೊಂಡಿದೆ. ಇದರ ವಿರುದ್ಧ ಎರಡು ವರ್ಷಗಳ ಹಿಂದೆ ಸ್ಥಳೀಯ ನಿವಾಸಿಗಳು ದೂರು ಸಲ್ಲಿಸಿದ್ದರು. ಈ ಕುರಿತು ‘ಪ್ರಜಾವಾಣಿ’ ವರದಿ ಪ್ರಕಟಿಸಿತ್ತು.

ಓಂ ಬಿರ್ಲಾ, ಶೆಖಾವತ್‌, ಜೋಶಿ ಭೇಟಿ ಮಾಡಿದ ಸುಮಲತಾ

ಕೆಆರ್‌ಎಸ್‌ ರಕ್ಷಣೆ: ಕೇಂದ್ರಕ್ಕೆ ಮನವಿ

ಪ್ರಜಾವಾಣಿ ವಾರ್ತೆ



ಕೇಂದ್ರದ ಜಲಶಕ್ತಿ ಸಚಿವ ಗಜೇಂದ್ರಸಿಂಗ್ ಶೆಖಾವತ್ ಅವರನ್ನು ಮಂಗಳವಾರ ನವದೆಹಲಿಯಲ್ಲಿ ಭೇಟಿ ಮಾಡಿದ ಮಂಡ್ಯದ ಸಂಸದೆ ಸುಮಲತಾ ಅಂಬರೀಷ್ ಕೆಆರ್‌ಎಸ್ ರಕ್ಷಣೆಗೆ ಕ್ರಮ ಕೈಗೊಳ್ಳುವಂತೆ ಮನವಿ ಸಲ್ಲಿಸಿದರು

ನವದೆಹಲಿ: ಕೃಷ್ಣರಾಜಸಾಗರ (ಕೆಆರ್‌ಎಸ್) ಜಲಾಶಯವನ್ನು ಅಕ್ರಮ ಗಣಿಗಾರಿಕೆಯಿಂದ ರಕ್ಷಿಸುವಂತೆ ಮಂಡ್ಯದ ಸಂಸದೆ ಸುಮಲತಾ ಅಂಬರೀಷ್ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಲೋಕಸಭೆಯ ಸ್ಪೀಕರ್ ಓಂ ಬಿರ್ಲಾ, ಜಲಶಕ್ತಿ ಸಚಿವ ಗಜೇಂದ್ರಸಿಂಗ್ ಶೆಖಾವತ್ ಹಾಗೂ ಗಣಿ ಮತ್ತು ಕಲ್ಲಿದ್ದಲು ಖಾತೆ ಸಚಿವ ಪ್ರಲ್ಹಾದ ಜೋಶಿ ಅವರನ್ನು ಮಂಗಳವಾರ ಭೇಟಿ ಮಾಡಿ ಈ ಸಂಬಂಧ ಸುದೀರ್ಘ ಚರ್ಚೆ ನಡೆಸಿದರು.

ರೈತರ ಜೀವನಾಡಿ ಎಂದು ಹೆಸರಾಗಿರುವ ಜಲಾಶಯದ ಸುತ್ತಮುತ್ತಲ ಗ್ರಾಮಗಳ ಅಕ್ರಮ ಗಣಿಕಾರಿಕೆ ನಡೆಯುತ್ತಿದೆ. ಇದರಿಂದಾಗಿ ಜಲಾಶಯಕ್ಕೆ ಅಪಾಯ ಎದುರಾಗಿದೆ. ಕಲ್ಲಿನ ಕ್ವಾರಿಗಳಲ್ಲಿ ಬಳಸುವ ಸ್ಫೋಟಕಗಳಿಂದಾಗಿ ಇತ್ತೀಚೆಗಷ್ಟೇ ಜಲಾಶಯದ ಬಳಿಯ ಗೋಡೆ ಕುಸಿದಿರುವುದು ಅಪಾಯದ ಕರೆಗಂಟೆಯಾಗಿದೆ ಎಂದು ಅವರು ವಿವರಿಸಿದರು.

ಅಕ್ರಮ ಗಣಿಗಾರಿಕೆಯನ್ನು ಪತ್ತೆ ಮಾಡುವ ನಿಟ್ಟಿನಲ್ಲಿ ಆಯಾ ಗಣಿ ಪ್ರದೇಶಗಳಲ್ಲಿ ಡ್ರೋನ್ ಮೂಲಕ ಸಮೀಕ್ಷೆ ನಡೆಸಬೇಕು ಎಂದು ಅವರು ಸಚಿವ ಪ್ರಲ್ಹಾದ ಜೋಶಿ ಅವರನ್ನು ಕೋರಿದರು.

ಅಕ್ರಮ ಗಣಿಕಾರಿಕೆಯಿಂದ ಜಲಾಶಯದ ದೃಢತೆಯ ಮೇಲೆ ಉಂಟಾಗಲಿರುವ ದುಷ್ಪರಿಣಾಮದ ಕುರಿತು ಅಧ್ಯಯನ ನಡಸಲು ಉನ್ನತ ಮಟ್ಟದ ಸಮಿತಿ ರಚಿಸುವಂತೆಯೂ ಅವರು ಮನವಿ ಸಲ್ಲಿಸಿದರು.

ಅಕ್ರಮ ಗಣಿಗಾರಿಕೆಯಿಂದ ರಾಜ್ಯದ ಬೊಕ್ಕಸಕ್ಕೆ ಅಂದಾಜು ₹ 2000 ಕೋಟಿಯಷ್ಟು ನಷ್ಟವಾಗುತ್ತಿದೆ. ಅವ್ಯವಹಾರದಲ್ಲಿ ತೊಡಗಿರುವ ವ್ಯಕ್ತಿಗಳನ್ನು ರಾಜಕಾರಣಿಗಳು, ಅಧಿಕಾರಿಗಳು ರಕ್ಷಿಸುತ್ತಿರುವುದು ಕಂಡುಬರುತ್ತಿದೆ. ಈ ಕುರಿತು ತನಿಖೆ ನಡೆಸುವ ಮೂಲಕ ಕೇಂದ್ರ ಸರ್ಕಾರ ಜಲಾಶಯಗಳ ರಕ್ಷಣೆಗೆ ಮುಂದಾಗಬೇಕು ಎಂದು ಮನವಿ ಮಾಡಿದರು.

ಗಣಿ ಗುತ್ತಿಗೆದಾರರು ಬಾಕಿ ಉಳಿಸಿಕೊಂಡಿರುವ ರಾಯಧನವನ್ನು ಸಂಗ್ರಹಿಸಿದಲ್ಲಿ ಜಿಲ್ಲೆಯಾದ್ಯಂತ ಕೊರೊನಾ ಸಂತ್ರಸ್ತರಿಗೆ ನೆರವು ನೀಡಬಹುದು. ಚಿಕಿತ್ಸೆಗೂ ಅನುಕೂಲ ಕಲ್ಪಿಸಬಹುದು ಎಂದು ಹೇಳಿದರು.

ಕೆಆರ್‌ಎಸ್‌: ₹1,450 ಕೋಟಿ ವೆಚ್ಚದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶ್ವವಿಖ್ಯಾತ ಕೃಷ್ಣರಾಜ ಸಾಗರ ಜಲಾಶಯದಲ್ಲಿ ₹1,450 ಕೋಟಿ ವೆಚ್ಚದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಪಡಿಸಲಾಗುವುದು ಎಂದು ಪ್ರವಾಸೋದ್ಯಮ ಸಚಿವ ಸಿ.ಪಿ. ಯೋಗೇಶ್ವರ್ ತಿಳಿಸಿದ್ದಾರೆ.

ಮಂಗಳವಾರ ನಡೆದ ಪ್ರವಾಸೋದ್ಯಮ ಇಲಾಖೆಯ ಸಭೆಯಲ್ಲಿ ಈ ವಿಷಯ ತಿಳಿಸಿದರು. ಕಾವೇರಿ ನೀರಾವರಿ ನಿಗಮದ ಜತೆ ಸೇರಿ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸಲಾಗುವುದು. ಈಗಾಗಲೇ ಯೋಜನಾ ವರದಿಯನ್ನು ಸಿದ್ಧಪಡಿಸಲಾಗಿದೆ ಎಂದರು.

ಮಂಚನಬೆಲೆಯಲ್ಲಿ ರೆಸಾರ್ಟ್: ಮಾಗಡಿ ತಾಲ್ಲೂಕು ಮಂಚನಬೆಲೆ ಜಲಾಶಯದ ಸಮೀಪ ಪ್ರವಾಸಿಗರಿಗೆ ವಾಸ್ತವ್ಯ ಕಲ್ಪಿಸಲು ಅರಣ್ಯ, ವಸತಿ ಮತ್ತು ವಿಹಾರಧಾಮ (ಜೆಎಲ್‌ಆರ್) ವತಿಯಿಂದ ಸುಸಜ್ಜಿತ ರೆಸಾರ್ಟ್‌ಗಳನ್ನು ನಿರ್ಮಾಣ ಮಾಡುವ ಸಂಬಂಧ ಚರ್ಚೆ ನಡೆಸಲಾಯಿತು.

ಮಂಚನಬೆಲೆ ಜಲಾಶಯ ಪ್ರದೇಶವನ್ನು ಅತ್ಯುತ್ತಮ ಪ್ರವಾಸಿ ತಾಣವಾಗಿ ಅಭಿವೃದ್ಧಿಪಡಿಸಬೇಕು. ಬೆಂಗಳೂರಿಗೆ ಅತ್ಯಂತ ಹತ್ತಿರವಾಗಿರುವ ಈ ಪ್ರವಾಸಿ ತಾಣದಲ್ಲಿ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸಿ, ಪ್ರವಾಸಿ ಸ್ನೇಹಿ ಮಾಡಿದರೆ ಜನ ಸಾಮಾನ್ಯರೂ ಬರುತ್ತಾರೆ ಎಂದು ಹೇಳಿದರು.

ಇಲ್ಲಿ ನಿರ್ಮಾಣ ಮಾಡುವ ಜಂಗಲ್ ಲಾಡ್ಜ್ ರೆಸಾರ್ಟ್ ಪರಿಸರ ಸ್ನೇಹಿಯಾಗಿರಬೇಕು. ಅಲ್ಲಿನ ಪ್ರಕೃತಿ ಸೌಂದರ್ಯಕ್ಕೆ ಹಾಗೂ ಜಲಾಶಯಕ್ಕೆ ಯಾವುದೇ ರೀತಿಯ ಧಕ್ಕೆ ಆಗದಂತೆ ಯೋಜನೆಯನ್ನು ಕಾರ್ಯರೂಪಕ್ಕೆ ತರಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಇದಕ್ಕಾಗಿ 10 ಎಕರೆ ಕಂದಾಯ ಜಮೀನನ್ನು ಜಂಗಲ್ ಲಾಡ್ಜ್‌ಗೆ ನೀಡುವಂತೆ ರಾಮನಗರ ಜಿಲ್ಲಾಧಿಕಾರಿಯವರಿಗೆ ಸೂಚಿಸಿದರು. ಇನ್ನೆರಡು ದಿನಗಳಲ್ಲಿ ಸ್ಥಳಕ್ಕೆ ತೆರಳಿ ಜಮೀನನ್ನು ವರ್ಗಾಯಿಸುವುದಾಗಿ ಜಿಲ್ಲಾಧಿಕಾರಿ ರಾಕೇಶ್ ಕುಮಾರ್ ಹೇಳಿದರು. ಸಭೆಯಲ್ಲಿ ಪ್ರವಾಸೋದ್ಯಮ ಇಲಾಖೆ ಮತ್ತು ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳು ಭಾಗವಹಿಸಿದ್ದರು.

ಬೆಳೆ ವಿಮೆ: ಇನ್ನು ನಾಮನಿರ್ದೇಶನ ಕಡ್ಡಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರಧಾನ ಮಂತ್ರಿ ಫಸಲ್ ವಿಮೆ ಯೋಜನೆಯಡಿ ಬೆಳೆ ವಿಮೆ ಮಾಡಿಸಿಕೊಳ್ಳುವಾಗ ಇನ್ನು ಮುಂದೆ ರೈತರ ಜೊತೆ ಅವರ ಕುಟುಂಬದ ಸದಸ್ಯರನ್ನು ನಾಮನಿರ್ದೇಶನ ಮಾಡಬೇಕು' ಎಂದು ವಿಮೆ ಕಂಪನಿಗಳಿಗೆ ಕೃಷಿ ಸಚಿವ ಬಿ.ಸಿ. ಪಾಟೀಲ ಸೂಚನೆ ನೀಡಿದರು.

ಬೆಳೆ ವಿಮೆ ಸಂಬಂಧ ಕೃಷಿ ಹಾಗೂ ತೋಟಗಾರಿಕಾ ಇಲಾಖೆಯ ಅಧಿಕಾರಿಗಳ ಜೊತೆ ಅವರು ಮಂಗಳವಾರ ಪ್ರಗತಿ ಪರಿಶೀಲನಾ ಸಭೆ ನಡೆಸಿದರು.

'ಇಷ್ಟು ದಿನ ನಾಮನಿರ್ದೇಶನವನ್ನು ಪರಿಗಣಿಸುತ್ತಿರಲಿಲ್ಲ. ಇದರಿಂದ ವಿಮೆದಾರ ರೈತ ಮೃತಪಟ್ಟರೆ ವಿಮೆ ಪರಿಹಾರ ಪಡೆಯಲು ತೊಂದರೆ ಆಗುತ್ತಿತ್ತು. ಹೀಗಾಗಿ ಕಡ್ಡಾಯವಾಗಿ ನಾಮನಿರ್ದೇಶನ ಮಾಡಿಸಬೇಕು. ವಿಮೆ ಮಾಡಿಸುವ ಕಂಪನಿಗಳು ಕೃಷಿ ಇಲಾಖೆಯಲ್ಲಿ ಕಚೇರಿ ಮಾಡಿಕೊಳ್ಳದೆ ಈ ಹಿಂದೆ ಸೂಚಿಸಿದಂತೆ ಪ್ರತಿ ತಾಲ್ಲೂಕಿನಲ್ಲಿ ಪ್ರತ್ಯೇಕ ಕಚೇರಿ ತೆರೆಯಬೇಕು. ಅಲ್ಲದೆ, ಕಚೇರಿ ತೆರೆದ ಸ್ಥಳದ ಜಿಪಿಎಸ್ ಲಿಂಕ್ ಅನ್ನು ಕೃಷಿ ಇಲಾಖೆಗೆ ನೀಡಬೇಕು. ರೈತರ ಚಾಲ್ತಿಯಲ್ಲಿರುವ ಬ್ಯಾಂಕ್ ಖಾತೆಗೆ ಆಧಾರ್ ಜೋಡಿಸಿ ಬೆಳೆ ವಿಮೆಗೆ ದಾಖಲಿಸಬೇಕು' ಎಂದು ಸಚಿವರು ಸಲಹೆ ನೀಡಿದರು.

ಅತಿ ಹೆಚ್ಚು ಬೆಳೆ ವಿಮೆ: 2018-19ನೇ ಸಾಲಿನಲ್ಲಿ 12.80 ಲಕ್ಷ ರೈತರಿಗೆ ₹ 2,595.86 ಕೋಟಿ ವಿಮೆ ನಷ್ಟ ಪರಿಹಾರ ಲೆಕ್ಕ ಹಾಕಲಾಗಿದ್ದು, ಅದರಲ್ಲಿ ₹ 12.73 ಲಕ್ಷ ಫಲಾನುಭವಿಗಳಿಗೆ ₹ 2,586.27 ಕೋಟಿ ಪರಿಹಾರ ವಿಮಾ ಸಂಸ್ಥೆಯವರಿಂದ ಇತ್ಯರ್ಥಪಡಿಸಲಾಗಿದೆ. ಉಳಿದ 6,215 ರೈತರಿಗೆ ₹ 9.58 ಕೋಟಿ ಬಾಕಿ ಇದೆ. 2019-20ರಲ್ಲಿ 6.81 ಲಕ್ಷ ರೈತರಿಗೆ ₹ 771.81 ಕೋಟಿ ವಿಮೆ ನಷ್ಟ ಪರಿಹಾರ ಲೆಕ್ಕ ಹಾಕಲಾಗಿದ್ದು, ಅದರಲ್ಲಿ 6.44 ಲಕ್ಷ ಫಲಾನುಭವಿಗಳಿಗೆ ₹ 736.37 ಕೋಟಿ ಇತ್ಯರ್ಥಪಡಿಸಲಾಗಿದೆ. ಉಳಿದ 37,202 ರೈತರಿಗೆ ₹ 35.43 ಕೋಟಿ ಬಾಕಿ ಇದೆ ಎಂದು ಸಭೆಯಲ್ಲಿ ಅಧಿಕಾರಿಗಳು ಮಾಹಿತಿ ನೀಡಿದರು.

'2019-20ರ ಹಿಂಗಾರು ಮತ್ತು ಬೇಸಿಗೆ ಹಂಗಾಮಿನಲ್ಲಿ 6.81 ಲಕ್ಷ ರೈತರು ನೋಂದಣಿ ಆಗಿದ್ದಾರೆ. ಈ ಹಂಗಾಮಿನಲ್ಲಿಯೂ ಬೆಳೆ ನೋಂದಣಿಯಾದ ಪ್ರಸ್ತಾವನೆಗಳು ಬೆಳೆ ಸಮೀಕ್ಷೆಯ ದತ್ತಾಂಶಗಳೊಂದಿಗೆ ತಾಳೆ ಮಾಡುವ ಕಾರ್ಯ ಪ್ರಗತಿಯಲ್ಲಿದೆ. 2020ರ ಮುಂಗಾರು ಹಂಗಾಮಿಗೆ ಒಟ್ಟು 11.01 ಲಕ್ಷ ರೈತರು ಬೆಳೆ ವಿಮೆ ನೋಂದಣಿ ಮಾಡಿಕೊಂಡಿದ್ದಾರೆ. ಒಟ್ಟು 12.81 ಲಕ್ಷ ಹೆಕ್ಟೇರ್ ಪ್ರದೇಶವನ್ನು ಬೆಳೆ ವಿಮೆಗೆ ಒಳಪಡಿಸಲಾಗಿದೆ' ಎಂದೂ ತಿಳಿಸಿದರು.

'ಜನರನ್ನು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರವಾಹಪೀಡಿತ ಮತ್ತು ಭೂಕುಸಿತ ಉಂಟಾಗುವ ಪ್ರದೇಶಗಳ ಜನರನ್ನು ಮುಂಚಿತವಾಗಿಯೇ ಸುರಕ್ಷಿತ ಪ್ರದೇಶಗಳಿಗೆ ಸ್ಥಳಾಂತರಿಸುವಂತೆ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಕೊಡಗು, ಬಳ್ಳಾರಿ, ಹಾಸನ, ಉಡುಪಿ, ಶಿವಮೊಗ್ಗ, ಉತ್ತರ ಕನ್ನಡ, ಮಂಗಳೂರು, ಚಿಕ್ಕಮಗಳೂರು, ವಿಜಯಪುರ, ಕಲಬುರ್ಗಿ, ಮೈಸೂರು, ಕೊಪ್ಪಳ ಹಾಗೂ ಬೆಳಗಾವಿ ಜಿಲ್ಲೆಗಳ ಜಿಲ್ಲಾಧಿಕಾರಿಗಳು ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಜತೆ ಮಂಗಳವಾರ ವಿಡಿಯೊ ಸಂವಾದ ನಡೆಸಿ, ಪರಿಸ್ಥಿತಿ ಅವಲೋಕಿಸಿದರು.

ಪ್ರವಾಹವನ್ನು ತಡೆಗಟ್ಟಲು ಅತ್ಯಾಧುನಿಕ ಉಪಕರಣಗಳನ್ನು ಖರೀದಿಸಲು ತಕ್ಷಣವೇ ಹಣ ಬಿಡುಗಡೆ ಮಾಡಲಾಗುವುದು. ಜಿಲ್ಲಾಧಿಕಾರಿಗಳ ಪಿ.ಡಿ ಖಾತೆಗಳಲ್ಲಿ ಲಭ್ಯವಿರುವ ಹಣವನ್ನು ಪ್ರವಾಹ ಪರಿಸ್ಥಿತಿ ನಿಭಾಯಿಸಲು ಬಳಕೆ ಮಾಡಬೇಕು ಎಂದು ಯಡಿಯೂರಪ್ಪ ಸೂಚಿಸಿದರು.

ಸಭೆಯಲ್ಲಿ ಉಪಮುಖ್ಯಮಂತ್ರಿ ಗೋವಿಂದ ಕಾರಜೋಳ, ಕಂದಾಯ ಸಚಿವ ಆರ್.ಅಶೋಕ, ಗೃಹ ಸಚಿವ ಬಸವರಾಜ ಬೊಮ್ಮಾಯಿ, ಕಾರ್ಮಿಕ ಸಚಿವ ಶಿವರಾಮ ಹೆಬ್ಬಾರ್, ಕೃಷಿ ಸಚಿವ ಬಿ.ಸಿ.ಪಾಟೀಲ ಹಾಜರಿದ್ದರು.

ಉತ್ತರಪ್ರದೇಶ: ಫೂಲನ್ ದೇವಿ ಪತಿ ಚುನಾವಣಾ ಕಣಕ್ಕೆ

ಲಖನೌ: ಉತ್ತರ ಪ್ರದೇಶದಲ್ಲಿ 2022ರಲ್ಲಿ ನಡೆಯಲಿರುವ ವಿಧಾನಸಭಾ ಚುನಾವಣೆಯಲ್ಲಿ ಕಣಕ್ಕೆ ಇಳಿಯಲು 'ಡಕಾಯಿತರ ರಾಣಿ' ದಿವಂಗತ ಫೂಲನ್ ದೇವಿ ಅವರ ಪತಿ ಉಮೇದ್ ಕಶ್ಯಪ್ ನಿರ್ಧರಿಸಿದ್ದಾರೆ.

ಉತ್ತರಪ್ರದೇಶದಲ್ಲಿ ಪ್ರಭಾವಿ ಸಮುದಾಯವಾಗಿರುವ 'ನಿಷಾದ್' (ಮೀನುಗಾರರು, ದೋಣಿಗಾರರು) ಸಮುದಾಯದ ಬೆಂಬಲಕ್ಕಾಗಿ ಅವರು ರಾಜಕೀಯ ಪ್ರವೇಶಿಸಲಿದ್ದಾರೆ.

ಮೂಲಗಳ ಪ್ರಕಾರ, ಉಮೇದ್ ಅವರು ಈ ಸಮುದಾಯದ ಮುಖಂಡರೊಂದಿಗೆ ಸೇರಿ 'ಜಲ್‌ವಂಶಿ ಮೋರ್ಚಾ' ರಚಿಸಲಿದ್ದು, ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ತಮ್ಮ ಅಭ್ಯರ್ಥಿಗಳನ್ನು ನಿಲ್ಲಿಸಲಿದ್ದಾರೆ ಎನ್ನಲಾಗಿದೆ.

ಉತ್ತರ ಪ್ರದೇಶದಲ್ಲಿನ 50 ವಿಧಾನಸಭಾ ಕ್ಷೇತ್ರಗಳಲ್ಲಿ ಪ್ರಭಾವ ಬೀರುವಷ್ಟು ನಿಷಾದ್ ಸಮುದಾಯವು ಪ್ರಬಲವಾಗಿದೆ.

'ಕೊಡವ ಸಮುದಾಯ: ಸಮೀಕ್ಷೆ ಪರಿಶೀಲಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊಡವ ಸಮುದಾಯವನ್ನು ಬುಡಕಟ್ಟು ಜಾತಿಗಳ ಪಟ್ಟಿಗೆ ಸೇರಿಸುವ ಉದ್ದೇಶದಿಂದ ಕರ್ನಾಟಕ ಬುಡಕಟ್ಟು ಸಂಶೋಧನಾ ಸಂಸ್ಥೆ ನಡೆಸಿರುವ ಸಮೀಕ್ಷೆ ಸರಿಯಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳುವಂತೆ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶನ ನೀಡಿದೆ.

ಈ ಸಂಬಂಧ ಸಲ್ಲಿಕೆಯಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿವೇವಾರಿ ಮಾಡಿದ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ, 'ಈಗಾಗಲೇ ನಡೆಸಿರುವ ಸಮೀಕ್ಷೆಯಲ್ಲಿ ಲೋಪ ಕಂಡು ಬಂದರೆ ಹೊಸ ಸಮೀಕ್ಷೆಗೆ ಆದೇಶಿಸಲು ಸರ್ಕಾರ ಮುಕ್ತವಾಗಿದೆ' ಎಂದು ತಿಳಿಸಿತು.

2016ರ ಡಿಸೆಂಬರ್ 1ರಂದು ಕೇಂದ್ರ ಸರ್ಕಾರ ಹೊರಡಿಸಿರುವ ಆದೇಶದಲ್ಲಿ ನಿಗದಿಪಡಿಸಿರುವ ನಿಯಮಗಳ ಪ್ರಕಾರ ಸಮೀಕ್ಷೆ ನಡೆಸಿಲ್ಲ ಎಂದು ಆರೋಪಿಸಿ ಕೊಡವ ನ್ಯಾಷನಲ್ ಕೌನ್ಸಿಲ್ ಅರ್ಜಿ ಸಲ್ಲಿಸಿತ್ತು. 'ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿ ಆಧರಿಸಿ ಸಮೀಕ್ಷೆ ನಡೆಸಬೇಕು. ಆದರೆ, ಸಮೀಕ್ಷೆಗೆ ಸಿದ್ಧಪಡಿಸಿದ್ದ ನಮೂನೆಯೇ ದೋಷಯುಕ್ತವಾಗಿತ್ತು. ಅದರ ಆಧಾರದಲ್ಲಿ ನಡೆಸಿರುವ ಸಮೀಕ್ಷೆಯಿಂದ ಯಾವ ಪ್ರಯೋಜನವೂ ಆಗದು' ಎಂದು ಅರ್ಜಿದಾರರ ಪರ ವಕೀಲರು ವಾದಿಸಿದರು.

2021ರ ಜೂನ್ 5ರಂದು ಸಮೀಕ್ಷಾ ವರದಿ ಸರ್ಕಾರಕ್ಕೆ ಸಲ್ಲಿಕೆಯಾಗಿದೆ ಎಂಬುದನ್ನು ಗಮನಿಸಿದ ಪೀಠ, 'ಕೊಡವ ಸಮುದಾಯವನ್ನು ಬುಡಕಟ್ಟು ಸಮುದಾಯಗಳ ಪಟ್ಟಿಗೆ ಸೇರಿಸಲು ಸಮೀಕ್ಷಾ ವರದಿಯ ಹೊರತಾಗಿಯೂ ಹಲವು ಅಂಶಗಳನ್ನು ಪರಿಗಣಿಸಬೇಕಾಗುತ್ತದೆ. ಜೊತೆಗೆ ತನ್ನ ಆದೇಶದ ಪ್ರಕಾರ ಸಮೀಕ್ಷೆ ನಡೆದಿದೆಯೇ ಎಂಬುದನ್ನೂ ಸರ್ಕಾರ ಪರಿಶೀಲಿಸಬೇಕಾಗುತ್ತದೆ' ಎಂದು ತಿಳಿಸಿತು.

₹100 ಕೋಟಿ ಕಾರ್ಯಕ್ರಮ: ಮೌಲ್ಯಮಾಪನಕ್ಕೆ ಸೂಚನೆ

ಪ್ರಜಾವಾಣಿ ವಾರ್ತೆ



ಕೇಂದ್ರ ಪುರಸ್ಕೃತ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆ ನಡೆಯುತ್ತಿದ್ದ ವೇಳೆ ಮುಖ್ಯಮಂತ್ರಿ ಯಡಿಯೂರಪ್ಪ ಮತ್ತು ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್. ಈಶ್ವರಪ್ಪ ಮಾತುಕತೆ

ಬೆಂಗಳೂರು: ಇನ್ನು ಮುಂದೆ ₹100 ಕೋಟಿಗಿಂತ ಹೆಚ್ಚು ಅನುದಾನವಿರುವ ಕಾರ್ಯಕ್ರಮಗಳನ್ನು ಕಡ್ಡಾಯವಾಗಿ ಮೌಲ್ಯಮಾಪನ ಮಾಡಲು ಕೇಂದ್ರ ಪುರಸ್ಕೃತ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಸೂಚನೆ ನೀಡಿದರು.

ವಿಧಾನಸೌಧದಲ್ಲಿ ನಡೆದ ಸಭೆಯ ಬಳಿಕ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಸುರೇಶ್ ಕುಮಾರ್ ಸುದ್ದಿಗೋಷ್ಠಿಯಲ್ಲಿ ಈ ಕುರಿತು ವಿವರ ನೀಡಿದರು.

ಕಳೆದ ಆಯವ್ಯಯ ಭಾಷಣದಲ್ಲಿ ಈ ವಿಷಯ ಘೋಷಿಸಲಾಗಿತ್ತು. ಮೌಲ್ಯಮಾಪನವನ್ನು 'ಕರ್ನಾಟಕ ಮೌಲ್ಯ ಮಾಪನ ಪ್ರಾಧಿಕಾರ' ದಿಂದಲೇ ನಡೆಸಲಾಗುವುದು ಎಂದು ಅವರು ಹೇಳಿದರು.

ಇಂದಿನ ಸಭೆಯಲ್ಲಿ 11 ಪ್ರಮುಖ ಕೇಂದ್ರ ಪುರಸ್ಕೃತ ಕಾರ್ಯಕ್ರಮಗಳ ಪ್ರಗತಿಯ ಪರಿಶೀಲನೆ ನಡೆಸಲಾಯಿತು. 24 ವಿವಿಧ ಇಲಾಖೆಗಳಲ್ಲಿ 96 ವಿವಿಧ ಕೇಂದ್ರ ಪುರಸ್ಕೃತ ಯೋಜನೆಗಳು ಅನುಷ್ಠಾನದಲ್ಲಿವೆ. 2020–21 ನೇ ಸಾಲಿನಲ್ಲಿ ಕೇಂದ್ರ ಪುರಸ್ಕೃತ ಯೋಜನೆಗಳ ಒಟ್ಟು ಅನುದಾನ ₹39,601 ಕೋಟಿಗಳಾಗಿದ್ದು, ಇದರಲ್ಲಿ ಕೇಂದ್ರದ ಪಾಲು ₹18,715 ಕೋಟಿ ಇದ್ದು, 2021 ರ ಮಾರ್ಚ್ ಅಂತ್ಯಕ್ಕೆ ₹16,320 ಕೋಟಿ ಬಿಡುಗಡೆಯಾಗಿದೆ ಎಂದರು.

2021–22ನೇ ಸಾಲಿನಲ್ಲಿ ಕೇಂದ್ರ ಪುರಸ್ಕೃತ ಯೋಜನೆಗಳಲ್ಲಿ ಒಟ್ಟು ಅನುದಾನ ₹38,078 ಕೋಟಿಗಳಾಗಿದ್ದು, ಇದರಲ್ಲಿ ಕೇಂದ್ರದ ಪಾಲು ₹17,536 ಕೋಟಿ ಆಗಿದ್ದು, ಜೂನ್ ಅಂತ್ಯಕ್ಕೆ ₹4,074 ಕೋಟಿ ಬಿಡುಗಡೆಯಾಗಿದೆ ಎಂದರು.

ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ 2020–21 ನೇ ಸಾಲಿನಲ್ಲಿ ₹6,446 ಕೋಟಿ ಅನುದಾನ ಕೇಂದ್ರದಿಂದ ಬಿಡುಗಡೆಯಾಗಬೇಕಿದ್ದು, ₹5,605 ಕೋಟಿ ಬಿಡುಗಡೆ ಆಗಿದ್ದು, ಉಳಿದ ₹840 ಕೋಟಿ ಇದೇ ಜೂನ್‌ನಲ್ಲಿ ಬಿಡುಗಡೆ ಆಗಿದೆ. ಭೌತಿಕ ಪ್ರಗತಿಯಲ್ಲಿ ಶೇ 100 ರಷ್ಟು ಪ್ರಗತಿ ಸಾಧಿಸಲಾಗಿದೆ. 2020–21 ನೇ ಸಾಲಿನಲ್ಲಿ ₹14.85 ಕೋಟಿ ಮತ್ತು ಈ ಸಾಲಿನಲ್ಲಿ ಜುಲೈ 18 ರವರೆಗೆ 5.47 ಕೋಟಿ ಮಾನವ ದಿನಗಳನ್ನು ಸೃಷ್ಟಿಸಲಾಗಿದೆ ಎಂದು ಸುರೇಶ್‌ಕುಮಾರ್ ಹೇಳಿದರು.

ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆಯಡಿ 3ನೇ ಹಂತಕ್ಕೆ ಅನುಮೋದನೆ ಸಿಕ್ಕಿದೆ. 2020–21 ನೇ ಸಾಲಿನಲ್ಲಿ ಕೋವಿಡ್ ಕಾರಣ 495 ಕಿ.ಮೀ ರಸ್ತೆಯನ್ನು ನಿರ್ಮಾಣ ಮಾಡಲಾಗಿದೆ. 2021–22 ನೇ ಸಾಲಿಗೆ 5,611 ಕಿ.ಮೀ ರಸ್ತೆ ನಿರ್ಮಾಣದ ಗುರಿ ಹಾಕಿಕೊಳ್ಳಲಾಗಿದೆ ಎಂದು ತಿಳಿಸಿದರು.

ಪ್ರಧಾನಮಂತ್ರಿ ಆವಾಸ್ ಯೋಜನೆಯಡಿ ಕೊಳೆಗೇರಿ ಪ್ರದೇಶದಲ್ಲಿ 1.20 ಲಕ್ಷ ಮನೆಗಳ ನಿರ್ಮಾಣ ಮಾಡುವ ಗುರಿ ಹಮ್ಮಿಕೊಳ್ಳಲಾಗಿದೆ. ಅಲ್ಲದೆ, ನಗರ, ಪುರಸಭೆ, ನಗರಸಭೆ ಮತ್ತು ಪಟ್ಟಣ ಪಂಚಾಯಿತಿ ಪ್ರದೇಶದಲ್ಲಿ 69 ಸಾವಿರ ಮನೆಗಳನ್ನು ನಿರ್ಮಿಸುವ ಗುರಿ ಹಮ್ಮಿಕೊಳ್ಳಲಾಗಿದೆ ಎಂದು ಸುರೇಶ್ ವಿವರಿಸಿದರು.

ಶಾಮನೂರು, ಎಂ.ಬಿ.ಪಾಟೀಲ ವಿರುದ್ಧ ಹರಿಹಾಯ್ದ ಬಸನಗೌಡ ಪಾಟೀಲ ಯತ್ನಾಳ

ಕಾಂಗ್ರೆಸ್ ಲಿಂಗಾಯತ ನಾಯಕರಿಗೆ ನೈತಿಕತೆ ಇಲ್ಲ

ಪ್ರಜಾವಾಣಿ ವಾರ್ತೆ


ಯತ್ನಾಳ

ವಿಜಯಪುರ: 'ಯಡಿಯೂರಪ್ಪ ಪರವಾಗಿ ಮಾತನಾಡುವ ನೈತಿಕತೆ ಕಾಂಗ್ರೆಸ್ ಲಿಂಗಾಯತ ನಾಯಕರಿಗಿಲ್ಲ. ಯಡಿಯೂರಪ್ಪ ಅವರನ್ನು ತೆಗೆದರೆ ಬಿಜೆಪಿ ಹಾಳಾಗುತ್ತದೆ ಅನ್ನೋದಕ್ಕೆ ಶಾಮನೂರು, ಎಂ.ಬಿ.ಪಾಟೀಲ ಯಾರು' ಎಂದು ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಪ್ರಶ್ನಿಸಿದರು.

ನಗರದಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಸಿಎಂ ಬದಲಾವಣೆ ಮಾಡೋದು ಬಿಜೆಪಿ ಹೈಕಮಾಂಡ್ ಕೈಯಲ್ಲಿದೆ. ಬಿಜೆಪಿ ನಾಯಕತ್ವ, ಆಂತರಿಕ ವಿಚಾರದ ಬಗ್ಗೆ ಮಾತನಾಡೋಕೆ ಇವರ್ಯಾರು' ಎಂದು ಹರಿಹಾಯ್ದರು.

'ಲಿಂಗಾಯತರ ಮೂಲಕ ಬಿಜೆಪಿಯನ್ನು ಮುಗಿಸುವುದಕ್ಕೆ ಕಾಂಗ್ರೆಸ್ ಯೋಜನೆ ಹಾಕಿದೆ. ಯಡಿಯೂರಪ್ಪ ಅವರನ್ನು ತೆಗೆದು ಬಿಟ್ಟರೆ ಲಿಂಗಾಯತರೆಲ್ಲ ಕಾಂಗ್ರೆಸ್‌ಗೆ ಹೋಗೋಕೆ ಸಾಧ್ಯವಿಲ್ಲ. ರಾಜ್ಯದ ಮತದಾರರು ಜಾಣರಿದ್ದಾರೆ. ಇನ್ನೊಬ್ಬ ವೀರಶೈವ ಲಿಂಗಾಯತ ನಾಯಕನನ್ನು ಸಿಎಂ ಮಾಡಿದ್ರೆ ಇವರಿಗೇನು ತಕರಾರು' ಎಂದರು.

'ಕಾಂಗ್ರೆಸ್ ಲಿಂಗಾಯತ ನಾಯಕರು ದಿವಾಳಿಯಾಗಿದ್ದಾರೆ, ಅವರಿಗೆ ನಯಾಪೈಸೆ ಕಿಮ್ಮತ್ತಿಲ್ಲ. ಸಚಿವರಾಗಲು ಸೋನಿಯಾಗಾಂಧಿ, ರಾಹುಲ್ ಗಾಂಧಿ ಕಾಲು ಹಿಡಿಯುವ ಕಾಂಗ್ರೆಸ್ ನಾಯಕರಿಗೆ ತಾಕತ್ತಿದ್ದರೆ ಲಿಂಗಾಯತರೇ ಮುಂದಿನ ಮುಖ್ಯಮಂತ್ರಿ ಅಭ್ಯರ್ಥಿ ಎಂದು ಘೋಷಣೆ ಮಾಡಲಿ. ಬೇಕಾದರೆ ಎಂ.ಬಿ.ಪಾಟೀಲ ಅವರನ್ನೇ ಸಿಎಂ ಅಭ್ಯರ್ಥಿ ಎಂದು ಘೋಷಿಸಲಿ' ಎಂದು ಸವಾಲು ಹಾಕಿದರು.

'ಶಾಮನೂರು ಅವರಿಗ್ಯಾಕೆ ಯಡಿಯೂರಪ್ಪ ಬಗ್ಗೆ ಇಷ್ಟೊಂದು ಕಾಳಜಿ, ಪ್ರೀತಿ ಉಕ್ಕಿ ಹರಿಯುತ್ತಿದೆ? ಅಖಿಲ ಭಾರತ ವೀರಶೈವ ಮಹಾಸಭಾ ಪ್ರೈವೇಟ್ ಲಿಮಿಟೆಡ್ ಆಗಿದೆ. ಹೊಸದಾಗಿ ಯಡಿಯೂರಪ್ಪ ಮಗಳು ಈ ಕಂಪನಿಗೆ ಸೇರಿದ್ದಾರೆ. ವೀರಶೈವ ಲಿಂಗಾಯತ ಸಮುದಾಯಕ್ಕೆ ಶಾಮನೂರು ಕಾಣಿಕೆ ಏನೂ ಇಲ್ಲ' ಎಂದು ಟೀಕಿಸಿದರು.

ನಿರಾಣಿ ಲಾಬಿ: 'ಮುಖ್ಯಮಂತ್ರಿ ಕುರ್ಚಿಗಾಗಿ ಸಚಿವ ಮುರುಗೇಶ ನಿರಾಣಿ ದೊಡ್ಡ ಲಾಬಿ ನಡೆಸಿದ್ದಾರೆ. ನಿರಾಣಿ ಬಳಿ ಸಿಕ್ಕಾಪಟ್ಟೆ ಹಣವಿದೆ' ಎಂದು ಯತ್ನಾಳ ಹೇಳಿದರು.

'ಇನ್ನೆರಡು ವರ್ಷ ಯಡಿಯೂರಪ್ಪ ಸಿ.ಎಂ'

ಹೊಸಪೇಟೆ/ಚಿಕ್ಕಮಗಳೂರು : 'ಬಿಜೆಪಿಯ ಕೆಲ ಶಾಸಕರ ಹೇಳಿಕೆಗಳಿಂದ ನಾಯಕತ್ವದ ವಿಷಯವಾಗಿ ಗೊಂದಲ ಸೃಷ್ಟಿಯಾಗಿದೆಯೇ ಹೊರತು ಪಕ್ಷದ ಚೌಕಟ್ಟಿನಲ್ಲಿ ಈ ಬಗ್ಗೆ ಯಾವುದೇ ಚರ್ಚೆಯಾಗಿಲ್ಲ. ಇನ್ನೂ ಎರಡು ವರ್ಷ ಬಿ.ಎಸ್. ಯಡಿಯೂರಪ್ಪನವರೇ ಸಿ.ಎಂ ಆಗಿರ್ತಾರೆ' ಎಂದು ಶಾಸಕ ರಾಜೂಗೌಡ ವಿಶ್ವಾಸ ವ್ಯಕ್ತಪಡಿಸಿದರು.

ಯಲಬುರ್ಗಾ ಶಾಸಕ ಹಾಲಪ್ಪ ಆಚಾರ್ ಅವರು, 'ಸದ್ಯಕ್ಕಂತೂ ಸಿ.ಎಂ. ಬದಲಾವಣೆಯ ಪ್ರಶ್ನೆಯೇ ಇಲ್ಲ' ಎಂದಿದ್ದಾರೆ.

ಮೂಡಿಗೆರೆ ಶಾಸಕ ಎಂ.ಪಿ.ಕುಮಾರಸ್ವಾಮಿ, 'ದಕ್ಷಿಣ ಭಾರತದಲ್ಲಿ ಬಿಜೆಪಿ ಮೊದಲ ಬಾರಿಗೆ ಅಧಿಕಾರದ ಪಡೆಯುವಲ್ಲಿ ಯಡಿಯೂರಪ್ಪ ಅವರ ಶ್ರಮ ಇದೆ. ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಸಿದರೆ, ಪಕ್ಷಕ್ಕೆ ದುಸ್ಥಿತಿ ಬರಲಿದೆ. ಈ ಬಗ್ಗೆ ಹೈಕಮಾಂಡ್ ಸಮೀಕ್ಷೆ ನಡೆಸಲಿ' ಎಂದು ಹೇಳಿದ್ದಾರೆ.

ಸುದ್ದಿ 2 ನಿಮಿಷ

ಬಿಎಸ್‌ವೈ ವಿಚಾರ- ಕಾಂಗ್ರೆಸ್ ದ್ವಂದ್ವ ನಿಲುವು: ಎಚ್‌ಡಿಕೆ

ಬೆಂಗಳೂರು: ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ವಿಚಾರದಲ್ಲಿ ರಾಜ್ಯದ ಕಾಂಗ್ರೆಸ್ ನಾಯಕರು ದ್ವಂದ್ವ ನಿಲುವು ಪ್ರದರ್ಶಿಸುತ್ತಾ, ರಾಜಕೀಯ ಲಾಭ ಪಡೆಯಲು ಯತ್ನಿಸುತ್ತಿದ್ದಾರೆ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಆರೋಪಿಸಿದರು.

ಜೆಡಿಎಸ್ ಪ್ರಧಾನ ಕಚೇರಿ ಜೆ.ಪಿ. ಭವನದಲ್ಲಿ ಮಂಗಳವಾರ ವಿವಿಧ ಜಿಲ್ಲೆಗಳ ಪಕ್ಷದ ಮುಖಂಡರ ಸಭೆಗೂ ಮುನ್ನ ಮಾಧ್ಯಮ ಪ್ರತಿನಿಧಿಗಳ ಜತೆ ಮಾತನಾಡಿದ ಅವರು, 'ಕಾಂಗ್ರೆಸ್ ನಾಯಕರಾದ ಶಾಮನೂರು ಶಿವಶಂಕರಪ್ಪ, ಎಂ.ಬಿ. ಪಾಟೀಲ ನೇರವಾಗಿ ಯಡಿಯೂರಪ್ಪ ಬೆಂಬಲಕ್ಕೆ ನಿಂತಿದ್ದಾರೆ. ಆದರೆ, ಮತ್ತೆ ಮುಖ್ಯಮಂತ್ರಿಯಾಗಲು ಟವೆಲ್ ಹಾಸಿ ಕಾಯುತ್ತಿರುವ ಅದೇ ಪಕ್ಷದ ನಾಯಕರೊಬ್ಬರು ಹಾಲಿ ಮುಖ್ಯಮಂತ್ರಿಯನ್ನು ಹೀನಾಯವಾಗಿ ಟೀಕಿಸುತ್ತಿದ್ದಾರೆ' ಎಂದರು.

ಕಾಂಗ್ರೆಸ್ ನಾಯಕರು ಬಿಜೆಪಿಯಲ್ಲಿನ ಬೆಳವಣಿಗೆಗಳಿಂದಲೂ ರಾಜಕೀಯ ಲಾಭ ಪಡೆಯಲು ಯತ್ನಿಸುತ್ತಿದ್ದಾರೆ. ಕಾಂಗ್ರೆಸ್‌ನವರ ಇಬ್ಬಗೆಯ ನಿಲುವಿನಿಂದಾಗಿ ಸ್ವತಃ ಯಡಿಯೂರಪ್ಪ ಅವರೇ ಗೊಂದಲಕ್ಕೆ ಒಳಗಾಗುವಂತಿದೆ ಎಂದು ಹೇಳಿದರು.



ಪಕ್ಷ ತ್ಯಜಿಸಿದವರು ಬೇಡ: ಜೆಡಿಎಸ್ ತ್ಯಜಿಸಿ ಬಿಜೆಪಿಗೆ ಹೋದವರನ್ನು ಮತ್ತೆ ಪಕ್ಷಕ್ಕೆ ಸೇರಿಸಿಕೊಳ್ಳಲಾಗುವುದೇ ಎಂಬ ಪ್ರಶ್ನೆಗೆ, 'ಜೆಡಿಎಸ್ ತೊರೆದು ಹೋದವರ ಅಗತ್ಯವಿಲ್ಲ. ಹೊಸದಾಗಿ ಯುವ ನಾಯಕರನ್ನು ಗುರುತಿಸಿ ಪಕ್ಷ ಕಟ್ಟುವ ಕೆಲಸ ಮಾಡುತ್ತೇವೆ' ಎಂದರು.

ನಿರಾಣಿ ಬಳಿ 500 ಸಿ.ಡಿಗಳಿವೆ: ಉದ್ಯಮಿ ಆಲಂ ಪಾಷಾ

ಬೆಂಗಳೂರು: 'ಸಚಿವ ಮುರುಗೇಶ್ ನಿರಾಣಿ ಬಳಿ ರಾಜಕಾರಣಿಗಳು ಹಾಗೂ ಪ್ರಮುಖ ನಾಯಕರ 500 ಸಿ.ಡಿಗಳಿವೆ' ಎಂದು ಉದ್ಯಮಿ ಆಲಂ ಪಾಷಾ ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಅವರು, 'ನಿರಾಣಿ ಅವರ ಹಣದ ಅವ್ಯವಹಾರದ ಬಗ್ಗೆ ಎಸಿಬಿಗೂ ದೂರು ಕೊಟ್ಟಿದೇನೆ. ನನ್ನ ಆರೋಪ ಸುಳ್ಳಾದರೆ ನಾನು ಜೈಲಿಗೆ ಹೋಗಲು ಸಿದ್ಧ' ಎಂದರು.

'ಮುಧೋಳ, ಬೆಳಗಾವಿ, ಬಾಗಲಕೋಟೆ ಭಾಗದ ಸಾವಿರಾರು ಸಣ್ಣ ರೈತರ ಹೆಸರಲ್ಲಿ ಬೆಳೆ ಸಾಲ ಪಡೆದು ನಿರಾಣಿ ವಂಚಿಸಿದ್ದಾರೆ. ಈ ಬಗ್ಗೆ ತನಿಖೆ ಆಗಬೇಕು' ಎಂದೂ ಒತ್ತಾಯಿಸಿದರು.

'ತಮ್ಮ ವಿರುದ್ಧ ಮಾನ ಹಾನಿಕರ ಸುದ್ದಿ ಪ್ರಕಟಿಸದಂತೆ ಆರು ಜನ ಸಚಿವರು ನ್ಯಾಯಾಲಯದಿಂದ ತಡೆಯಾಜ್ಞೆ ತೆಗೆದುಕೊಂಡಿದ್ದಾರೆ. ಸಾರ್ವಜನಿಕ ವಲಯದಲ್ಲಿರುವವರು ಯಾಕೆ ತಡೆಯಾಜ್ಞೆ ತೆಗೆದುಕೊಳ್ಳಬೇಕು. ಮುರುಗೇಶ್ ನಿರಾಣಿ ಬಳಿ 500ಕ್ಕೂ ಹೆಚ್ಚು ಸಿ.ಡಿಗಳಿದ್ದು, ಮುಂದಿನ ದಿನಗಳಲ್ಲಿ ಇನ್ನೂ ಹಲವರ ಸಿ.ಡಿ ಮಾಡುತ್ತಾರೆ. ಹೀಗಾಗಿ ಅವರಿಗೆ ಸಚಿವ ಸ್ಥಾನ ಕೊಟ್ಟಿದ್ದಾರೆ' ಎಂದೂ ಆರೋಪಿಸಿದರು.

ಸಿ.ಎಂ ಯಡಿಯೂರಪ್ಪ ಬೆನ್ನಿಗೆ ಮಠಾಧೀಶರ ದಂಡು

ಒಂದನೇ ಪುಟದಿಂದ

ಬದಲಾವಣೆ ಸೂಕ್ತವಲ್ಲ– ಪೇಜಾವರ ಶ್ರೀಗಳು: 'ರಾಜ್ಯದಲ್ಲಿ ನಾಯಕತ್ವ ಬದಲಾವಣೆಗೆ ಕಾಲ ಸೂಕ್ತವಾಗಿಲ್ಲ' ಎಂದು ಪೇಜಾವರ ಮಠದ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಉಡುಪಿಯಲ್ಲಿ ಹೇಳಿದ್ದಾರೆ.

'ಯಡಿಯೂರಪ್ಪನವರು ನಾಯಕತ್ವ ಚೆನ್ನಾಗಿ ನಿಭಾಯಿಸಿದ್ದಾರೆ. ಕೋವಿಡ್ ಸಂದರ್ಭವನ್ನು ಸಮರ್ಥವಾಗಿ ಎದುರಿಸಿದ್ದಾರೆ. ನಾಯಕತ್ವ ಬದಲಾವಣೆ ಸಂಬಂಧ ಬಿಜೆಪಿಯಲ್ಲಿ ಯಾವ ಚರ್ಚೆಗಳು ನಡೆದಿವೆ ಎಂಬ ಮಾಹಿತಿ ಇಲ್ಲ. ಯಡಿಯೂರಪ್ಪ ಅವರು ರಾಜ್ಯದಲ್ಲಿ ಬಿಜೆಪಿಯನ್ನು ಕಟ್ಟಿದ ರೀತಿ ಹಾಗೂ ಅವರ ನಡೆ ಗಮನಿಸಿ ವೈಯಕ್ತಿಕ ಅಭಿಪ್ರಾಯ ಹೇಳಿದ್ದೇನೆ' ಎಂದಿದ್ದಾರೆ.

ಶೋಷಿತ ಸಮುದಾಯ ಮೇಲೆತ್ತಿದರು: 'ದಕ್ಷಿಣ ಭಾರತದಲ್ಲಿ ಪ್ರಥಮವಾಗಿ ಬಿಜೆಪಿಯನ್ನು ಅಧಿಕಾರಕ್ಕೆ ತಂದವರು ಯಡಿಯೂರಪ್ಪ. ಅವರು ಅಧಿಕಾರಕ್ಕೆ ಬಂದ ನಂತರ ಎಲ್ಲ ಶೋಷಿತ ಸಮುದಾಯದಮಠಗಳನ್ನುಮೇಲೆತ್ತಿದರು.ಅವರು ಮುಖ್ಯಮಂತ್ರಿಯಾದಾಗಲೆಲ್ಲ ಸುಗಮ ಆಡಳಿತನಡೆಸಲುಬಿಡುತ್ತಿಲ್ಲಎಂಬಚರ್ಚೆ ಸಾರ್ವಜನಿಕ ವಲಯದಲ್ಲಿ ನಡೆಯುತ್ತಿದೆ. ಇದು ಪುನರಾವರ್ತನೆ ಆಗುತ್ತಿರುವುದು ಸರಿಯಲ್ಲ' ಎಂದು ಮಾದಾರ ಚನ್ನಯ್ಯ ಸ್ವಾಮೀಜಿ ಅಭಿಪ್ರಾಯಪಟ್ಟರು.

'ಅತಿವೃಷ್ಟಿ, ಅನಾವೃಷ್ಟಿ ಜತೆಯಲ್ಲೇ ಬಂದ ಕೋವಿಡ್ ಸಂಕಷ್ಟವನ್ನು ಸಮರ್ಥವಾಗಿ ನಿಭಾಯಿಸಿದ್ದಾರೆ. ರಾಜ್ಯದ ಅಭಿವೃದ್ಧಿಗೂ ಶ್ರಮಿಸುತ್ತಿದ್ದಾರೆ. ಅವಧಿ ಮುಗಿಯುವವರೆಗೂ ಅವರಿಗೆ ಅವಕಾಶ ನೀಡಬೇಕು' ಎಂದು ಆಗ್ರಹಿಸಿದರು.

ಕೆಳಗಿಳಿಸಿದರೆ ಸರ್ಕಾರ ಪತನ: 'ಯಡಿಯೂರಪ್ಪ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಸಿದರೆ ಮತ್ತೆ ಇತಿಹಾಸ ಮರುಕಳಿಸಲಿದೆ. ಬಿಜೆಪಿ ಅಧಿಕಾರ ಕಳೆದುಕೊಳ್ಳಲಿದೆ' ಎಂದು ಬೀದರ್ ಜಿಲ್ಲೆ ಭಾಲ್ಕಿಯ ಹಿರೇಮಠ ಸಂಸ್ಥಾನದ ಬಸವಲಿಂಗ ಪಟ್ಟದ್ದೇವರು ಎಚ್ಚರಿಕೆ ನೀಡಿದ್ದಾರೆ.


ಬಾಲೆಹೊಸೂರಿನ ದಿಂಗಾಲೇಶ್ವರ ಸ್ವಾಮೀಜಿ ಅವರ ನೇತೃತ್ವದಲ್ಲಿ ವಿವಿಧ ಮಠಾಧೀಶರು ಮುಖ್ಯಮಂತ್ರಿ ಬಿ.ಎಸ್ ಯಡಿಯೂರಪ್ಪ ಅವರನ್ನು ಭೇಟಿ ಮಾಡಿದರು

'ನಾಯಕತ್ವ ಬದಲಾವಣೆ ಅಪ್ರಸ್ತುತ. ಯಡಿಯೂರಪ್ಪ ಅವರನ್ನು ಕಡೆಗಣಿಸಿದರೆ ಪಕ್ಷಕ್ಕೆ ದೊಡ್ಡ ನಷ್ಟವಾಗಲಿದೆ. ಲಿಂಗಾಯತ ಸಮುದಾಯ ಬಿಜೆಪಿಯಿಂದ ದೂರ ಸರಿಯಲಿದೆ. ಅವಧಿ ಮುಗಿಯುವವರೆಗೂ ಅವರನ್ನು ಮುಖ್ಯಮಂತ್ರಿ ಸ್ಥಾನದಲ್ಲಿ ಮುಂದುವರಿಸಬೇಕು' ಎಂದು ಒತ್ತಾಯಿಸಿದ್ದಾರೆ.

'ಜನ ಬೆಂಬಲದ ಜತೆಗೆ ಪಕ್ಷಾತೀತವಾಗಿ ಅನೇಕ ನಾಯಕರ ಬೆಂಬಲವೂ ಅವರಿಗೆ ಇದೆ. ಆದರೂ ಸ್ವಪಕ್ಷದ ಕೆಲ ನಾಯಕರು ಅವರನ್ನು ಅಧಿಕಾರದಿಂದ ಕೆಳಗಿಳಿಸುವ ಹುನ್ನಾರ ನಡೆಸಿರುವುದು ಸರಿಯಲ್ಲ' ಎಂದು ಅವರು ಹೇಳಿದ್ದಾರೆ.

'ಯಡಿಯೂರಪ್ಪ ಅವರನ್ನು ಬದಲಾವಣೆ ಮಾಡಲು ಹೊರಟರೆ ಮೂರು ಸಾವಿರಕ್ಕೂ ಹೆಚ್ಚು ಮಠಗಳು ಅವರನ್ನು ಉಳಿಸಿಕೊಳ್ಳಲು ಪ್ರಯತ್ನಿಸಲಿವೆ' ಎಂದು ಬೆಳ್ಳಾವಿ ಮಠದ ಮಹಂತಲಿಂಗೇಶ್ವರ ಸ್ವಾಮೀಜಿ ಕಿಡಿಕಾರಿದ್ದಾರೆ.

'ನಾಯಕತ್ವ ಬದಲಿಸಿದರೆ ಸಾಮೂಹಿಕ ಹೋರಾಟ'

ಒಂದನೇ ಪುಟದಿಂದ

'ಯಡಿಯೂರಪ್ಪ ಅವರೊಬ್ಬ ಜನನಾಯಕ. ರಾಜಕೀಯ ಜೀವನವನ್ನು ಏಕವ್ಯಕ್ತಿಯಿಂದ ಆರಂಭಿಸಿ ಪಕ್ಷವನ್ನು ತಳಮಟ್ಟದಿಂದ ಸಂಘಟಿಸಿದ್ದಾರೆ. ದಕ್ಷಿಣ ಭಾರತದಲ್ಲಿ ಬಿಜೆಪಿ ಸರ್ಕಾರವನ್ನು ರಚಿಸಿದ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಇಂಥ ಮೇಧಾವಿ ಹಾಗೂ ಮುತ್ಸದ್ಧಿಯನ್ನು ಅಲಕ್ಷ್ಯ ಮಾಡುವುದು ಸರಿಯಲ್ಲ. ಅವರ ಗೌರವಕ್ಕೆ ಧಕ್ಕೆ ಉಂಟಾಗುವಂತಹ ನಡೆಯನ್ನು ಸಹಿಸುವುದಿಲ್ಲ' ಎಂದು ಎಚ್ಚರಿಸಿದರು.

ಕುಂಚಿಟಿಗ ಗುರುಪೀಠದ ಶಾಂತವೀರ ಸ್ವಾಮೀಜಿ ಮಾತನಾಡಿ, 'ಯಡಿಯೂರಪ್ಪ ಕೇವಲ ವೀರಶೈವ–ಲಿಂಗಾಯತ ಸಮುದಾಯಕ್ಕೆ ಮಾತ್ರವಲ್ಲ; ಬಸವಣ್ಣ ಅವರ ಕಾಯಕ ಪ್ರಜ್ಞೆಗೆ ಸಾಕ್ಷಿಯಾಗಿ ಕೆಲಸ ಮಾಡುತ್ತಿದ್ದಾರೆ. ಅವರ ಸೇವಾ ಅವಧಿಯನ್ನು ಪೂರ್ಣಗೊಳಿಸಲು ಅವಕಾಶ ಮಾಡಿಕೊಡಬೇಕು. ಪರ್ಯಾಯ ನಾಯಕರನ್ನು ಬೆಳೆಸುವ ನಿಟ್ಟಿನಲ್ಲಿ ಯಾವ ವಿರೋಧವೂ ಇಲ್ಲ. ಆದರೆ, ಯಡಿಯೂರಪ್ಪ ಬದಲಾವಣೆ ಸಲ್ಲದು' ಎಂದರು.

ಇಳಕಲ್‌ನ ಗುರುಮಹಾಂತೇಶ್ವರ ಮಠದ ಗುರುಮಹಾಂತ ಸ್ವಾಮೀಜಿ, ಅಥಣಿ ಗಚ್ಚಿನಮಠದ ಶಿವಬಸವ ಸ್ವಾಮೀಜಿ, ಶಿರಸಿ ರುದ್ರದೇವರ ಮಠದ ಮಲ್ಲಿಕಾರ್ಜುನ ಸ್ವಾಮೀಜಿ, ಸತ್ತಿಮಠದ ಸ್ವಾಮೀಜಿ, ಚಳ್ಳಕೆರೆಯ ಬಸವಕಿರಣ ಸ್ವಾಮೀಜಿ, ಎಸ್‌ಜೆಎಂ ವಿದ್ಯಾಪೀಠದ ಕಾರ್ಯದರ್ಶಿ ಎ.ಜೆ. ಪರಮಶಿವಯ್ಯ ಇದ್ದರು.

ಅಪಾಯ ಕಟ್ಟಿಟ್ಟ ಬುತ್ತಿ: ಶ್ರೀಶೈಲ ಸ್ವಾಮೀಜಿ

ದಾವಣಗೆರೆ: 'ರಾಜ್ಯದ ಜನಾಭಿಮತ ಯಡಿಯೂರಪ್ಪ ಅವರ ಪರ ಇದ್ದು, ಚುನಾವಣೆಗಳಲ್ಲಿ ಅವರನ್ನು ಬೆಂಬಲಿಸಿದ್ದಾರೆ. ವರಿಷ್ಠರು ಅವರನ್ನು ಚೆನ್ನಾಗಿ ನಡೆಸಿಕೊಳ್ಳಬೇಕು. ಅವರು ಹಿಂದೆ ಸರಿದರೆ ಅಥವಾ ಸರಿಸುವ ಪ್ರಕ್ರಿಯೆ ಆದರೆ ಪಕ್ಷಕ್ಕೆ ತೊಂದರೆ ಕಟ್ಟಿಟ್ಟ ಬುತ್ತಿ' ಎಂದು ಶ್ರೀಶೈಲ ಮಠದ ಚನ್ನಸಿದ್ದರಾಮ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಎಚ್ಚರಿಸಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಎಲ್ಲಾ ಜನಾಂಗದವರಿಗೆ ನ್ಯಾಯ ದೊರಕಿಸಿಕೊಟ್ಟಿರುವ ಕೀರ್ತಿ ಯಡಿಯೂರಪ್ಪ ಅವರಿಗಿದ್ದು, ಅವರಿಗೆ ಏನೇ ಆದರೂ ಎಲ್ಲಾ ಜನಾಂಗದವರೂ ಅವರ ಪರವಾಗಿ ನಿಲ್ಲುತ್ತಾರೆ. ಬೇರೆ ಪಕ್ಷದ ಶಾಮನೂರು ಶಿವಶಂಕರಪ್ಪ ಅವರೂ ಬೆಂಬಲ ಸೂಚಿಸಿದ್ದಾರೆ. ಬಿಎಸ್‌ವೈ ಬಿಜೆಪಿ ಪಕ್ಷ ಕಟ್ಟಿ ಬೆಳೆಸಿದವರು. ಜನರೂ ಅವರನ್ನು ಪ್ರಶ್ನಾತೀತ ನಾಯಕ ಎಂಬ ವಿಶ್ವಾಸದಲ್ಲಿ ಬೆಂಬಲಿಸಿದ್ದಾರೆ' ಎಂದು ಹೇಳಿದರು.

ವೀರಶೈವ ಮಹಾಸಭೆ, ಪಂಚಪೀಠಗಳು ಕೂಡ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಪರವಾಗಿ ನಿಲ್ಲಲಿದ್ದು, ಶ್ರೀಶೈಲ ಮಠವೂ ಅವರ ಬೆನ್ನಿಗೆ ಇದೆ ಎಂದು ಹೇಳಿದರು.

'ರಾಜ್ಯದ ಬೆಳವಣಿಗೆಗಳ ಬಗ್ಗೆ ಸಮಾನ ಪೀಠಾಧ್ಯಕ್ಷರ ಜೊತೆ ಮಾತುಕತೆ ನಡೆಸುತ್ತೇವೆ. ಬಿ.ಎಸ್.ವೈ ಮುಂದುವರಿದರೆ ಪಕ್ಷಕ್ಕೆ ರಾಜ್ಯಕ್ಕೆ ಒಳ್ಳೆಯದು. ಬುಧವಾರ ಬೆಂಗಳೂರಿಗೆ ಪ್ರಯಾಣ ಮಾಡುತ್ತಿದ್ದು, ಈ ಬಗ್ಗೆ ಮಾಹಿತಿ ಪಡೆದು ನಂತರ ಮಾತನಾಡುತ್ತೇನೆ' ಎಂದು ಹೇಳಿದರು.

ಇದೇ 25ಕ್ಕೆ ಶಾಸಕರಿಗೆ ಭೋಜನ ಕೂಟ

ಬೆಂಗಳೂರು: ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಇದೇ 25 ರಂದು ಶಾಂಗ್ರಿಲಾ ಹೋಟೆಲ್‌ನಲ್ಲಿ ಪಕ್ಷದ ಶಾಸಕರಿಗೆ ಭೋಜನ ಕೂಟ ಏರ್ಪಡಿಸಿದ್ದು, ಹಾಜರಾಗುವಂತೆ ಎಲ್ಲ ಶಾಸಕರಿಗೂ ಅಧಿಕೃತ ಆಹ್ವಾನವನ್ನು ಕಳುಹಿಸಲಾಗಿದೆ.

'ರಾಜ್ಯ ಸರ್ಕಾರಕ್ಕೆ ಎರಡು ವರ್ಷ ಪೂರೈಸಿರುವುದರಿಂದ ಶಾಸಕರೊಂದಿಗೆ ಸೌಜನ್ಯದ ಭೇಟಿ ಮತ್ತು ಭೋಜನ ಕೂಟ ಏರ್ಪಡಿಸಲಾಗಿದೆ. ಎಲ್ಲರೂ ತಪ್ಪದೇ ಹಾಜರಾಗಬೇಕು' ಎಂದು ಸರ್ಕಾರದ ಮುಖ್ಯ ಸಚೇತಕ ವಿ.ಸುನಿಲ್ ಕುಮಾರ್ ಅವರು ಸಂದೇಶ ಕಳುಹಿಸಿದ್ದಾರೆ. 'ಅಂದು ಶಾಸಕಾಂಗ ಪಕ್ಷದ ಸಭೆ ನಡೆಯುವುದಿಲ್ಲ. ಮುಖ್ಯಮಂತ್ರಿಯವರು ಸೌಜನ್ಯದ ಮಾತುಕತೆ ನಡೆಸಲಿದ್ದಾರೆ' ಎಂದು ಮೂಲಗಳು ಹೇಳಿವೆ.

ಪಿವಿ ಬ್ರ್ಯಾಂಡ್ ಸ್ಪಾಟ್

ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ ಪಿವಿ ಬ್ರ್ಯಾಂಡ್ ಸ್ಪಾಟ್ ಪ್ರಸ್ತುತಿಯ ಲೇಖನ ಸಿದ್ಧಪಡಿಸುವಲ್ಲಿ ನಮ್ಮ ಪತ್ರಕರ್ತರ ಯಾವುದೇ ಪಾತ್ರ ಇರುವುದಿಲ್ಲ. ಸಂಸ್ಥೆಯ ಜಾಹೀರಾತು ಮತ್ತು ಬ್ರ್ಯಾಂಡ್ ವಿಭಾಗಗಳ ಪ್ರಸ್ತುತಿಯಾಗಿರುವ **'ಪಿವಿ ಬ್ರ್ಯಾಂಡ್ ಸ್ಪಾಟ್'**ನ ಮಾಹಿತಿಯನ್ನು (ಕಂಟೆಂಟ್) ಓದುಗರು ಜಾಹೀರಾತು ಎಂದೇ ಭಾವಿಸಬಹುದು.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	100.05	12,581	2,228
ಹಾರಂಗಿ	2,859	2,855.93	9,393	6,950
ಕಬಿನಿ	2,284.00	2,276	6,232	5,000
ಹೇಮಾವತಿ	2,922	2,906.12	8,582	250
ಲಿಂಗನಮಕ್ಕಿ	1,819	1,793.90	21,274	-
ಸೂಪಾ (ಮೀ)	564	542.20	13,197	-
ಮಾಣಿ	594.36	577.34	2,706	-
ತುಂಗಭದ್ರಾ	1,633	1,618.45	45,477	2,621
ಮಲಪ್ರಭಾ	2,079.50	2,065.80	1,294	194
ಘಟಪ್ರಭಾ	2,175	2,147.58	10,046	127
ಭದ್ರಾ	186	165.7	12,355	793
ಆಲಮಟ್ಟಿ (ಮೀ)	519.60	517.70	39,395	37,787
ನಾರಾಯಣಪುರ (ಮೀ)	492.25	491.28	45,130	45,130

*ನೆಲಮಟ್ಟದಿಂದ

ಶಿವಮೊಗ್ಗ: ಮತ್ತೆ ಚುರುಕುಗೊಂಡ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಿವಮೊಗ್ಗ, ಕೊಡಗು ಜಿಲ್ಲೆಯಲ್ಲಿ ಮಂಗಳವಾರ ಉತ್ತಮ ಮಳೆಯಾಗಿದ್ದರೆ, ಕರಾವಳಿ ಭಾಗದಲ್ಲಿ ಮಳೆಯ ಅಬ್ಬರ ಕಡಿಮೆಯಾಗಿದೆ.

ಶಿವಮೊಗ್ಗದ ಸಾಗರ, ಹೊಸನಗರ, ತೀರ್ಥಹಳ್ಳಿ ಭಾಗದಲ್ಲಿ ನಿರಂತರ ಮಳೆ ಸುರಿದಿದೆ. ಕೆಲವೆಡೆ ಮನೆಗಳು ಕುಸಿದಿವೆ.

ಹಾಸನ ಜಿಲ್ಲೆಯ ಸಕಲೇಶಪುರ ತಾಲ್ಲೂಕಿನ ಯಸಳೂರು ಹೋಬಳಿ ಚಂಗಡಿಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಚೌವಳ್ಳಿಯಲ್ಲಿ ಗಾಳಿ ಮಳೆಗೆ ತಡರಾತ್ರಿ ದಮಯಂತಿ ಎಂಬುವವರ ಮನೆಯ ಒಂದು ಭಾಗ ಸಂಪೂರ್ಣ ಕುಸಿದು ಬಿದ್ದಿದೆ. ಪಶ್ಚಿಮಘಟ್ಟದ ಅಂಚಿನ ಗ್ರಾಮಗಳಲ್ಲಿ ಉತ್ತಮ ಮಳೆಯಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸರಾಸರಿ 2.8 ಸೆಂ.ಮೀ. ಮಳೆ ಸುರಿದಿದೆ. ಎರಡು ಮನೆಗಳಿಗೆ ಪೂರ್ಣ, ಮೂರು ಮನೆಗಳಿಗೆ ಭಾಗಶಃ ಹಾನಿಯಾಗಿದೆ. ನದಿಗಳಲ್ಲಿ ನೀರಿನ ಹರಿವು ಕಡಿಮೆಯಾಗಿದೆ.

ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಉಪ್ಪಿನಕುದ್ರು, ವಕ್ವಾಡಿ, ಕಾರ್ಕಳ ತಾಲ್ಲೂಕಿನ ನೀರೆ, ಹೆಬ್ರಿ ತಾಲ್ಲೂಕಿನ ಅಂಡಾರು ಗ್ರಾಮದಲ್ಲಿ ಮನೆಗಳಿಗೆ ಹಾನಿಯಾಗಿದೆ. ಚಿಕ್ಕಮಗಳೂರು ಜಿಲ್ಲೆಯ ಹಲವೆಡೆ ಸಾಧಾರಣ ಮಳೆ ಸುರಿದಿದ್ದು, ಅಲ್ಲಲ್ಲಿ ಮನೆಗಳಿಗೆ ಹಾನಿಯಾಗಿದೆ.


ಕಾರ್ಗಲ್ ಸಮೀಪದ ಜೋಗ ಜಲಪಾತದಲ್ಲಿ ಮುಂಗಾರು ಮಳೆಯ ಅಬ್ಬರಕ್ಕೆ ಜಲಸಿರಿ ಹೆಚ್ಚಿದ್ದು, ಮೋಡ ಮುಸುಕಿದ ಮಂಜಿನ ನಡುವೆ ಜಲಪಾತದ ಸಿರಿಯನ್ನು ಪ್ರವಾಸಿಗರು ಕಣ್ತುಂಬಿಕೊಂಡರು

100 ಅಡಿ ದಾಟಿದ ಕೆಆರ್‌ಎಸ್

ಮಂಡ್ಯ: ಕಾವೇರಿ ಜಲಾನಯನ ಪ್ರದೇಶದಲ್ಲಿ ಮಳೆ ಸುರಿಯುತ್ತಿರುವ ಹಿನ್ನೆಲೆಯಲ್ಲಿ ಕೆಆರ್‌ಎಸ್ ಜಲಾಶಯದ ನೀರಿನ ಮಟ್ಟ ಮಂಗಳವಾರ 100.05 ಅಡಿಗೆ ತಲುಪಿದೆ.

ಏಳು ಜಿಲ್ಲೆಗಳಲ್ಲಿ 'ಯೆಲ್ಲೊ ಅಲರ್ಟ್' ಘೋಷಣೆ

ಪ್ರಜಾವಾಣಿ ವಾರ್ತೆ


ಬೆಂಗಳೂರು: ರಾಜ್ಯದ ಚಿಕ್ಕಮಗಳೂರು, ಹಾಸನ, ಕೊಡಗು, ಶಿವಮೊಗ್ಗ, ದಕ್ಷಿಣ ಕನ್ನಡ, ಉತ್ತರ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿ ಇದೇ 21 ಮತ್ತು 22ರಂದು ಭಾರಿ ಮಳೆಯಾಗುವ ಮುನ್ಸೂಚನೆ ಇರುವುದರಿಂದ 'ಯೆಲ್ಲೊ ಅಲರ್ಟ್' ಘೋಷಿಸಲಾಗಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.


'ಮುಂಗಾರು ಚುರುಕಾಗಿರುವುದರಿಂದ ಕರಾವಳಿ ಹಾಗೂ ದಕ್ಷಿಣ ಒಳನಾಡಿನ ಕೆಲವು ಜಿಲ್ಲೆಗಳಲ್ಲಿ ಹೆಚ್ಚು ಮಳೆಯಾಗಲಿದೆ. ದಕ್ಷಿಣ ಕನ್ನಡ, ಉತ್ತರ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿ ಇದೇ 25ರವರೆಗೆ ಧಾರಾಕಾರ ಮಳೆಯಾಗುವ ಮುನ್ಸೂಚನೆ ಇದೆ' ಎಂದು ಮಾಹಿತಿ ನೀಡಿದೆ.

'ಕರಾವಳಿಯಲ್ಲಿ ಗಂಟೆಗೆ 40ರಿಂದ 50 ಕಿ.ಮೀ ವೇಗದಲ್ಲಿ ಗಾಳಿ ಬೀಸುತ್ತಿದ್ದು, ಗರಿಷ್ಠ 3.6 ಮೀಟರ್‌ಗಳಷ್ಟು ಎತ್ತರದ ಅಲೆಗಳು ಏಳುವ ಸಾಧ್ಯತೆ ಇರುವುದರಿಂದ ಮೀನುಗಾರರು ಇದೇ 24ರವರೆಗೆ ಸಮುದ್ರಕ್ಕೆ ಇಳಿಯಬಾರದು' ಎಂದು ಇಲಾಖೆ ಎಚ್ಚರಿಸಿದೆ.

'ಉತ್ತರ ಒಳನಾಡಿನಲ್ಲಿ ಎರಡು ದಿನ ಮಳೆ ತಗ್ಗಲಿದೆ. ಬಾಗಲಕೋಟೆ, ಬೆಳಗಾವಿ, ಬೀದರ್, ಧಾರವಾಡ, ಗದಗ, ಹಾವೇರಿ, ಕಲಬುರ್ಗಿ, ವಿಜಯಪುರ ಜಿಲ್ಲೆಗಳಲ್ಲಿ ಜು.22ರಿಂದ ಹೆಚ್ಚು ಮಳೆಯಾಗುವ ಸಾಧ್ಯತೆ ಇದೆ. ಈ ಜಿಲ್ಲೆಗಳಲ್ಲೂ 'ಯೆಲ್ಲೊ ಅಲರ್ಟ್' ನೀಡಲಾಗಿದೆ. ಉಳಿದ ಜಿಲ್ಲೆಗಳಲ್ಲಿ ಮೋಡ ಕವಿದ ವಾತಾವರಣದೊಂದಿಗೆ ಸಾಧಾರಣ ಮಳೆಯಾಗಬಹುದು' ಎಂದು ತಿಳಿಸಿದೆ.

ಮಳೆ–ಎಲ್ಲಿ, ಎಷ್ಟು?: ಶಿವಮೊಗ್ಗ ಜಿಲ್ಲೆಯ ಹೊಸನಗರದಲ್ಲಿ ಮಂಗಳವಾರ 12 ಸೆಂ.ಮೀ ಗರಿಷ್ಠ ಮಳೆಯಾಗಿದೆ. ಕಾರ್ಕಳ 6, ಭಟ್ಕಳ 5, ಕಾರವಾರ, ತೀರ್ಥಹಳ್ಳಿ, ಸಕಲೇಶಪುರ 4, ಬೆಳ್ತಂಗಡಿ, ಉಡುಪಿ, ಶ್ರೀನಿವಾಸಪುರ, ಬಂಗಾರಪೇಟೆ, ನೆಲಮಂಗಲ 3, ಕುಂದಾಪುರ, ತರೀಕೆರೆ, ಸಾಗರ 2, ಮಂಗಳೂರು, ಪುತ್ತೂರು, ಮಾಲೂರು, ಕೋಲಾರ, ಚಿಂತಾಮಣಿ, ಅರಕಲಗೂಡು, ದೇವನಹಳ್ಳಿ, ತುಮಕೂರಿನಲ್ಲಿ ತಲಾ 1 ಸೆಂ.ಮೀ ಮಳೆಯಾಗಿದೆ.





ಮೈಕ್ರೋಸಾಫ್ಟ್ 365 ಎಂಬ ಕ್ಲೌಡ್ ಕಂಪ್ಯೂಟರ್



ಸ್ಮಾರ್ಟ್‌ಫೋನ್, ಟ್ಯಾಬ್ಲೆಟ್ ಅಥವಾ ಯಾವುದೇ ಸಾಧನವಾದರೂ ಸರಿ. ಒಂದು ಬ್ರೌಸರ್ ತೆರೆಯುವ ಸೌಲಭ್ಯವಿದ್ದರೆ ಸಾಕು. ನಿಮ್ಮ ಬಳಿ ಕಂಪ್ಯೂಟರ್ ಇದ್ದ ಹಾಗೆ!....

ಕೃಷ್ಣ ಭಟ್

ಕೊರೊನಾ ಸಾಂಕ್ರಾಮಿಕ ರೋಗದಿಂದಾಗಿ ಕಂಪನಿಗಳು ಬಾಗಿಲು ಹಾಕಿ, ಉದ್ಯೋಗಿಗಳಿಗೆ ಮನೆಯಿಂದಲೇ ಕೆಲಸ ಮಾಡುವ ಅವಕಾಶ ಒದಗಿಸುತ್ತಿರುವ ಸಮಯದಲ್ಲಿ ಕಂಪನಿಗಳಿಗೆ ಮೊದಲು ಕಾಡಿದ ಸಮಸ್ಯೆ ತಮ್ಮ ಕಂಪನಿಯ ಡೇಟಾ ಭದ್ರತೆಯದ್ದು! ಡೇಟಾ ಭದ್ರತೆಯ ಬಗ್ಗೆ ಹೆಚ್ಚು ಕಾಳಜಿ ಹೊಂದಿರುವ ಎಲ್ಲ ಕಂಪನಿಗಳೂ ತಮ್ಮ ಉದ್ಯೋಗಿಗಳಿಗೆ ಪ್ರತ್ಯೇಕ ಲ್ಯಾಪ್‌ಟಾಪ್‌ಗಳನ್ನು ಒದಗಿಸಿವೆ. ಉದ್ಯೋಗಿಗಳ ಬಳಿ ಈಗಾಗಲೇ ವೈಯಕ್ತಿಕ ಲ್ಯಾಪ್‌ಟಾಪ್ ಇದ್ದರೂ ಇನ್ನೊಂದು ಲ್ಯಾಪ್‌ಟಾಪ್ ಕಂಪನಿಯ ಕಡೆಯಿಂದ ಬಂದು ಮನೆಯಲ್ಲಿ ಕುಳಿತಿದೆ. ಪರ್ಸನಲ್ ಲ್ಯಾಪ್‌ಟಾಪ್ ಮುಗುಮ್ಮಾಗಿ ಕುಳಿತಿದ್ದರೆ, ಕಂಪನಿ ಕೊಟ್ಟ ಲ್ಯಾಪ್‌ಟಾಪ್‌ನಲ್ಲೇ ಕೆಲಸ ನಡೆಯುತ್ತಿದೆ. ಅಂದರೆ ಮನೆಯಲ್ಲಿ ಒಂದು ಹೆಚ್ಚುವರಿ ಲ್ಯಾಪ್‌ಟಾಪ್ ಖಾಲಿ ಕುಳಿತಿದೆ.

ಇಂಥ ಸನ್ನಿವೇಶವನ್ನು ನಿರ್ವಹಿಸುವುದಕ್ಕೆಂದೇ ಮೈಕ್ರೋಸಾಫ್ಟ್ ಹೊಸದೊಂದು ಸೇವೆಗೆ ಮುಂದಾಗಿದೆ. ಅದೇ ಕ್ಲೌಡ್ ಓಎಸ್. ಮೈಕ್ರೋಸಾಫ್ಟ್‌ನ ಸರ್ವರ್‌ನಲ್ಲೇ ಒಂದು ಡೆಸ್ಕ್‌ಟಾಪ್ ಕಣ್ತೆರೆದು ಕುಳಿತಿರುತ್ತದೆ. ಇದು ದೇಹವಿಲ್ಲದ ಆತ್ಮದ ಹಾಗೆ! ನಿರ್ದಿಷ್ಟ ಹಾರ್ಡ್‌ವೇರ್ ಬೇಡ. ಯಾವ ಹಾರ್ಡ್‌ವೇರ್‌ಗಾದರೂ ಇದು ಹೊಂದಿಕೊಳ್ಳುತ್ತದೆ.

ಕಂಪನಿಗಳು ತಮ್ಮ ಉದ್ಯೋಗಿಗಳಿಗಾಗಿ ಒಂದು ಡೆಸ್ಕ್‌ಟಾಪ್ ಅನ್ನು ಸೃಷ್ಟಿ ಮಾಡಿ, ಅದಕ್ಕೆ ಬೇಕಾದ ಸೆಕ್ಯೂರಿಟಿ ಸೌಲಭ್ಯಗಳನ್ನು ಅಳವಡಿಸಿ ಕೊಟ್ಟುಬಿಡಬಹುದು. ಉದ್ಯೋಗಿಗಳು ತಮ್ಮ ವೈಯಕ್ತಿಕ ಲ್ಯಾಪ್‌ಟಾಪ್‌ನಲ್ಲೇ ಒಂದು ಬ್ರೌಸರ್ ತೆರೆದುಕೊಂಡು ಈ ವರ್ಚುವಲ್ ಡೆಸ್ಕ್‌ಟಾಪ್‌ನಲ್ಲಿ ಕೆಲಸ ಮಾಡಬಹುದು. ಆಗ ಹಾರ್ಡ್‌ವೇರ್‌ಗಾಗಿ ಅಂದರೆ ಹೊಸ ಲ್ಯಾಪ್‌ಟಾಪ್ ಖರೀದಿ ಮಾಡುವ ಹಣ ಕಂಪನಿಗಳಿಗೆ ಉಳಿತಾಯವಾಗುತ್ತದೆ. ಅಷ್ಟೇ ಅಲ್ಲ, ಕೆಲವೇ ನಿಮಿಷಗಳಲ್ಲಿ ಒಂದು ವರ್ಚುವಲ್ ಡೆಸ್ಕ್‌ಟಾಪ್ ಸೃಷ್ಟಿ ಮಾಡಬಹುದಾದ್ದರಿಂದ, ಕೆಲಸಕ್ಕೆ ಕೆಲವೇ ಗಂಟೆಗಳಲ್ಲಿ ಉದ್ಯೋಗಿ ಸಿದ್ಧವಾಗುತ್ತಾನೆ. ಹಾರ್ಡ್‌ವೇರ್ ಖರೀದಿ ಮಾಡಿ, ಪ್ರತಿ ಹಾರ್ಡ್‌ವೇರ್ ಅನ್ನೂ ಕಾನ್ಫಿಗರ್ ಮಾಡುವ ತೊಂದರೆ ಇದರಲ್ಲಿಲ್ಲ.

ಅಲ್ಲದೆ, ಸಣ್ಣ ಕಂಪನಿಗಳು ಹಾಗೂ ಉದ್ದಿಮೆಗಳಿಗೆ ಈ ಸೌಲಭ್ಯ ಅತ್ಯಂತ ಅನುಕೂಲಕರವೂ ಆಗಲಿದೆ. ಯಾಕೆಂದರೆ, ಸಣ್ಣ ಉದ್ಯಮಗಳಿಗೆ ಪ್ರತ್ಯೇಕ ಐಟಿ ವಿಭಾಗವನ್ನು ಹೊಂದುವುದು ವೆಚ್ಚದಾಯಕ. ಅಂತ ಸಂದರ್ಭದಲ್ಲಿ ಈ ಸೌಲಭ್ಯ ಅತ್ಯಂತ ಅನುಕೂಲಕರವಾಗಿ ಕೆಲಸ ಮಾಡುತ್ತದೆ.

ಈ ಕ್ಲೌಡ್ ಡೆಸ್ಕ್‌ಟಾಪ್‌ಗೆ ಮೈಕ್ರೋಸಾಫ್ಟ್ 365 ಎಂಬ ಹೆಸರಿಡಲಾಗಿದೆ. ಮೈಕ್ರೋಸಾಫ್ಟ್‌ಗೂ 365 ಹೆಸರಿಗೂ ಅದೇನೋ ಆಪ್ತ ಸಂಬಂಧವಿದೆ. ಈ ಹಿಂದೆ ಕ್ಲೌಡ್ ಆಧರಿತ ಆಫೀಸ್ ಸೂಟ್‌ಗೂ ಆಫೀಸ್ 365 ಎಂದು ಹೆಸರಿಡಲಾಗಿತ್ತು.

> ಕ್ಲೌಡ್ ಡೆಸ್ಕ್‌ಟಾಪ್ ಅನ್ನು ಯಾವಾಗಲೂ ಶಟ್‌ಡೌನ್ ಮಾಡುವ ಅಗತ್ಯ ಇಲ್ಲ

ಕ್ಲೌಡ್ ಡೆಸ್ಕ್‌ಟಾಪ್‌ನ ಇನ್ನೊಂದು ಸೌಲಭ್ಯವೆಂದರೆ, ಇದನ್ನು ಯಾವಾಗಲೂ ಶಟ್‌ಡೌನ್ ಮಾಡುವ ಅಗತ್ಯ ಇರುವುದಿಲ್ಲ. ಇದು ಮೈಕ್ರೋಸಾಫ್ಟ್ ಅಜೂರ್ ಕ್ಲೌಡ್ ಸರ್ವರ್‌ನಲ್ಲಿ ಇರುವುದರಿಂದ ನೀವು ತೆರೆದಾಗಲೆಲ್ಲ ಈ ಹಿಂದೆ ಎಲ್ಲಿ ಕೆಲಸ ನಿಲ್ಲಿಸಿದ್ದಿರೋ ಅಲ್ಲಿಂದಲೇ ಕೆಲಸ ಆರಂಭಿಸಲು ಸಿದ್ಧವಾಗಿರುತ್ತದೆ.

ಹಾಗೆಂದ ಮಾತ್ರಕ್ಕೆ ಈ ಕ್ಲೌಡ್ ಡೆಸ್ಕ್‌ಟಾಪ್ ಹೊಸದೇನೂ ಅಲ್ಲ. ಈಗಾಗಲೇ ಸಣ್ಣ ಸಣ್ಣ ಪ್ರಯತ್ನಗಳು ಈ ನಿಟ್ಟಿನಲ್ಲಿ ನಡೆದಿವೆ. ಆದರೆ, ಇದೆಲ್ಲಕ್ಕಿಂತ ಒಂದು ಹೆಜ್ಜೆ ಮುಂದೆ ಹೋಗಿ ಮೈಕ್ರೋಸಾಫ್ಟ್ ಈ ಪ್ರಯೋಗ ನಡೆಸುತ್ತಿದ್ದು, ಇದರಲ್ಲಿ ಡೆಸ್ಕ್‌ಟಾಪ್ ಜೊತೆಗೆ ಮೈಕ್ರೋಸಾಫ್ಟ್‌ನ ಇತರ ಸೇವೆಗಳೂ ಸಿಗುತ್ತವೆ. ಹೀಗಾಗಿ, ಡೆಸ್ಕ್‌ಟಾಪ್ ತೆಗೆದುಕೊಂಡು ಅದಕ್ಕೆ ಬೇಕಿರುವ ಪ್ರಾಥಮಿಕ ಸಾಫ್ಟ್‌ವೇರ್‌ಗಳನ್ನೂ ಪ್ರತ್ಯೇಕವಾಗಿ ಅಳವಡಿಸಿಕೊಳ್ಳುವ ತೊಂದರೆ ಇರುವುದಿಲ್ಲ. ನಿರ್ದಿಷ್ಟ ಕಂಪನಿಯ ಕೆಲಸಕ್ಕೆ ಅಗತ್ಯದ ಸಾಫ್ಟ್‌ವೇರ್‌ಗಳು ಅಥವಾ ಆ್ಯಪ್‌ಗಳನ್ನು ಈ ಕ್ಲೌಡ್ ಪಿಸಿಗೆ ಅಳವಡಿಸಿದರೆ ಸಾಕು.

ಆಪರೇಟಿಂಗ್ ಸಿಸ್ಟಮ್‌ನ ಸಂಪೂರ್ಣ ನಿರ್ವಹಣೆ, ಅದಕ್ಕೆ ಬೇಕಾದ ಅಪ್‌ಡೇಟ್‌ಗಳು, ಭದ್ರತೆ ಎಲ್ಲವನ್ನೂ ಮೈಕ್ರೋಸಾಫ್ಟ್ ನಿರ್ವಹಿಸಲಿದೆ. ಇದು ಸದ್ಯ ವಿಂಡೋಸ್ 10ರಲ್ಲಿ ಇರಲಿದ್ದು, ಮುಂದಿನ ದಿನಗಳಲ್ಲಿ ಇತ್ತೀಚೆಗಷ್ಟೇ ಬಿಡುಗಡೆಯಾದ ವಿಂಡೋಸ್ 11ಗೂ ಅಪ್‌ಗ್ರೇಡ್ ಆಗಲಿದೆ.

ಇನ್ನೊಂದು ಅತ್ಯಂತ ಅನುಕೂಲಕರ ಸಂಗತಿಯೆಂದರೆ, ಸ್ಮಾರ್ಟ್‌ಫೋನ್ ಬಳಸಿಯೂ ಈ ಕ್ಲೌಡ್ ಪಿಸಿಗೆ ಲಾಗಿನ್ ಮಾಡಬಹುದು. ಇದಕ್ಕೆ ಲ್ಯಾಪ್‌ಟಾಪ್ ಅಥವಾ ಡೆಸ್ಕ್‌ಟಾಪ್ ಬೇಕೆಂದೇ ಇಲ್ಲ. ಸ್ಮಾರ್ಟ್‌ಫೋನ್, ಟ್ಯಾಬ್ಲೆಟ್ ಅಥವಾ ಯಾವುದೇ ಸಾಧನವಾದರೂ ಸರಿ. ಒಂದು ಬ್ರೌಸರ್ ತೆರೆಯುವ ಸೌಲಭ್ಯವಿದ್ದರೆ ಸಾಕು. ನಿಮ್ಮ ಬಳಿ ಕಂಪ್ಯೂಟರ್ ಇದ್ದ ಹಾಗೆ!

ಕೆನಡಾದ ನುನಾವತ್ ಸರ್ಕಾರ ಈಗಾಗಲೇ ತನ್ನ 3 ಸಾವಿರಕ್ಕೂ ಹೆಚ್ಚು ಉದ್ಯೋಗಿಗಳಿಗೆ ಈ ಕ್ಲೌಡ್ ಪಿಸಿ ಸೇವೆಯನ್ನು ಬಳಸಿಕೊಳ್ಳಲು ಮೈಕ್ರೋಸಾಫ್ಟ್ ಜೊತೆಗೆ ಮಾತುಕತೆ ನಡೆಸಿದೆ ಎಂದು ಹೇಳಲಾಗಿದೆ. ಈ ಸೇವೆಗೆ ವಿವಿಧ ದರದಲ್ಲಿ ಮೈಕ್ರೋಸಾಫ್ಟ್ ಶುಲ್ಕ ವಿಧಿಸುತ್ತದೆ ಎಂದು ಹೇಳಲಾಗಿದೆ. ಆಗಸ್ಟ್ 2ರಂದು ಬಿಡುಗಡೆಯಾಗಲಿರುವ ಈ ಸೇವೆಯ ದರವಿವರವನ್ನು ಮೈಕ್ರೋಸಾಫ್ಟ್ ಇನ್ನೂ ಬಹಿರಂಗೊಳಿಸಿಲ್ಲ. ಮಾಸಿಕ ಚಂದಾದಾರಿಕೆ ಆಧಾರದಲ್ಲಿ ಈ ಸೇವೆಗೆ ದರ ವಿಧಿಸುವ ಸಾಧ್ಯತೆ ಇದೆ.

ಕ್ಲಬ್‌ಹೌಸ್ ಬಳಸುವುದು ಹೇಗೆ?

ಅವಿನಾಶ್ ಬಿ.

ಕ್ಲಬ್‌ಹೌಸ್ ಎಂಬ ಧ್ವನಿ ಆಧಾರಿತ ಹೊಸ ಸಾಮಾಜಿಕ ಆ್ಯಪ್ ಈಗ ಸದ್ದು ಮಾಡುತ್ತಿದೆ. ಇದರಲ್ಲಿರುವ ಆಯ್ಕೆಗಳೇನು, ಆಹ್ವಾನ ಪಡೆಯಲು ಏನು ಮಾಡಬೇಕು, ಕ್ಲಬ್ ಆರಂಭಿಸುವುದು ಹೇಗೆ, ಅದರಲ್ಲಿರುವ ಚಾಟಿಂಗ್ ಸೌಲಭ್ಯ, ಹಣ ಮಾಡಬಹುದೇ? ರೆಕಾರ್ಡ್ ಮಾಡಬಹುದೇ? ವಿವರಗಳು ಇಲ್ಲಿವೆ:

ಸದ್ಯ ಆಹ್ವಾನಿತರಿಗೆ ಮಾತ್ರ

ಇದು ಸದ್ಯಕ್ಕೆ ಆಹ್ವಾನಿತರಿಗೆ ಮಾತ್ರ. ಹಾಗಂತ, ಒಮ್ಮೆ ಒಬ್ಬಾತ ಕ್ಲಬ್‌ಹೌಸ್ ಸೇರಿಕೊಂಡು ಬಿಟ್ಟರೆ, ಆತನಿಗೆ ಮತ್ತಷ್ಟು ಮಂದಿಯನ್ನು ಆಹ್ವಾನಿಸುವ ಅವಕಾಶ ದೊರೆಯುತ್ತದೆ. ನಿಮ್ಮಲ್ಲಿ ಕ್ಲಬ್‌ಹೌಸ್ ಖಾತೆ ಇಲ್ಲದಿದ್ದರೆ, ಈಗಾಗಲೇ ಅದರಲ್ಲಿ ಸಕ್ರಿಯವಾಗಿರುವ ಸ್ನೇಹಿತರನ್ನು ವಿನಂತಿಸಬಹುದು. ಈ 'ಆಹ್ವಾನಿತರಿಗೆ ಮಾತ್ರ' ವೈಶಿಷ್ಟ್ಯವನ್ನು ರದ್ದುಪಡಿಸಿ, ಮುಕ್ತ ಅವಕಾಶ ನೀಡುವುದಾಗಿ ಕ್ಲಬ್‌ಹೌಸ್ ಇತ್ತೀಚೆಗೆ ಹೇಳಿದೆ.

ಹೇಗೆ ಆಹ್ವಾನಿಸುವುದು?

ಕ್ಲಬ್‌ಹೌಸ್ ಸದಸ್ಯತ್ವ ಸಿಕ್ಕಿದವರು ಮೇಲ್ಭಾಗದಲ್ಲಿರುವ ಅಂಚೆ ಲಕೋಟೆಯ ಐಕಾನ್ ಒತ್ತಿದಾಗ, ತನ್ನ ಬಳಿ ಎಷ್ಟು ಆಹ್ವಾನಗಳಿವೆ ಎಂದು ತಿಳಿಯುತ್ತದೆ. ಅಲ್ಲೇ ಕೆಳಗೆ, ತನ್ನ ಸ್ನೇಹಿತರ ಮೊಬೈಲ್ ಸಂಖ್ಯೆಯನ್ನು ದಾಖಲಿಸಿದಾಗ, ಕೆಳಗೆ 'Invite' ಎಂಬ ಬಟನ್ ಒತ್ತಿದರೆ ಸಾಕು. ನೇರವಾಗಿ ಎಸ್ಸೆಮ್ಮೆಸ್ ಕಳುಹಿಸುವ ಆಯ್ಕೆ ಗೋಚರಿಸುತ್ತದೆಯಾದರೂ, ಆ ಎಸ್ಸೆಮ್ಮೆಸ್ಸನ್ನು ಕಳುಹಿಸಲೇಬೇಕೆಂದಿಲ್ಲ. ಸ್ನೇಹಿತ ತನ್ನ ನಂಬರ್ ದಾಖಲಿಸಿ, ಒಟಿಪಿ ನಮೂದಿಸಿದರೆ ಕ್ಲಬ್‌ಹೌಸ್ ಸದಸ್ಯತ್ವ ಪಡೆದಂತೆಯೇ!

ಹೆಸರು: ಪ್ರೊಫೈಲ್, ಹ್ಯಾಂಡಲ್, ಕ್ಲಬ್

ಇಲ್ಲಿ ಮೂರು ಹೆಸರುಗಳು ಪ್ರಮುಖವಾಗುತ್ತವೆ. ಒಂದು ಎಲ್ಲರಿಗೂ ಕಾಣಿಸುವ ನಮ್ಮದೇ ಹೆಸರು. ಇದನ್ನು ಪದೇ ಪದೇ ಬದಲಾಯಿಸಿಕೊಳ್ಳುವಂತಿಲ್ಲ. ಎರಡನೆಯದು ಹ್ಯಾಂಡಲ್. ಇದು ನಮ್ಮ ಗುರುತು. ಉದಾಹರಣೆಗೆ ಪ್ರಜಾವಾಣಿ ಎಂಬುದು ಹೆಸರು. @prajavani ಎಂಬುದು ಪ್ರಜಾವಾಣಿ ಕ್ಲಬ್‌ಹೌಸ್ ಪ್ರೊಫೈಲ್‌ನ ಗುರುತು (ಹ್ಯಾಂಡಲ್). ನಮ್ಮ ಪ್ರೊಫೈಲ್‌ನ ಕೆಳಭಾಗದಲ್ಲಿ ಇರುವ + (ಪ್ಲಸ್) ಗುರುತು ಕ್ಲಿಕ್ ಮಾಡಿ, ಹೊಸ ಕ್ಲಬ್ ತೆರೆಯಬಹುದು. ಉದಾಹರಣೆಗೆ, ಪ್ರಜಾವಾಣಿ ಕ್ಲಬ್ (clubhouse.com/club/prajavani). ಪ್ರತ್ಯೇಕ ಕ್ಲಬ್ ತೆರೆದು, ಅದರಲ್ಲಿ ಯಾವುದಾದರೂ ಕೊಠಡಿ (room) ತೆರೆದು, ಜನರನ್ನು ಆಹ್ವಾನಿಸಿ ಯಾವುದೇ ವಿಷಯದ ಕುರಿತು ಚರ್ಚಿಸಬಹುದು. ಚರ್ಚೆ ಆರಂಭಿಸಿದ ಬಳಿಕ end room ಎಂಬುದನ್ನು ಒತ್ತಬೇಕು.



ಧ್ವನಿ ಆಧಾರಿತ ಸಂಭಾಷಣೆಯ ತಾಣ ಕ್ಲಬ್‌ಹೌಸ್

ಕ್ಲಬ್ ಆರಂಭಿಸುವಾಗ, ಸೆಟ್ಟಿಂಗ್ಸ್‌ನಲ್ಲಿ ಆ ಕ್ಲಬ್ ಬಗ್ಗೆ ವಿವರಣೆ, ವಿಷಯ, ಕ್ಲಬ್ ನಿಯಮಗಳನ್ನು ರೂಪಿಸಲು ಆಯ್ಕೆ ದೊರೆಯುತ್ತದೆ. ನಾವು ಆರಂಭಿಸುವುದು ಶಾಶ್ವತ ಕ್ಲಬ್ ಆಗಿದ್ದು, ಒಮ್ಮೆ ತೆರೆದದ್ದನ್ನು ಡಿಲೀಟ್ ಮಾಡುವ ಆಯ್ಕೆ ಇಲ್ಲ. ಹೀಗಾಗಿ ನಮ್ಮ ಬ್ರ್ಯಾಂಡ್, ವಿಷಯದ ಬಗ್ಗೆ ಸ್ಪಷ್ಟವಾದ ಹೆಸರಿನಲ್ಲಿ ಕ್ಲಬ್ ಆರಂಭಿಸಬೇಕು. ಗಮನದಲ್ಲಿರಲಿ, ಕ್ಲಬ್‌ಗೆ ಯಾರು ಸದಸ್ಯರಾಗಬೇಕೆಂಬುದನ್ನು ನಾವೇ ಆಯ್ಕೆ ಮಾಡಬಹುದು, ಆದರೆ ಅನುಯಾಯಿಗಳು (ಫಾಲೋವರ್ಸ್) ಯಾರು ಬೇಕಿದ್ದರೂ ಆಗಬಹುದು.

ಹಿಂಬಾಗಿಲಲ್ಲಿ ಚಾಟಿಂಗ್

ಇತ್ತೀಚೆಗೆ ಕ್ಲಬ್‌ಹೌಸ್ ಹಿಂಬಾಗಿಲಲ್ಲಿ (ಬ್ಯಾಕ್ ಚಾನೆಲ್) ಚಾಟ್ ಮಾಡುವ ಆಯ್ಕೆ ನೀಡಿದೆ. ಇದು ಗೌಪ್ಯ ಸಂಭಾಷಣೆ. ಮಾಡರೇಟರ್‌ಗಳು ಮುಂದೇನು ಮಾಡಬೇಕೆಂದು ಪರಸ್ಪರ ಚರ್ಚಿಸಿ ನಿರ್ಧಾರ ಕೈಗೊಳ್ಳುವುದಕ್ಕೂ ಇದು ಸೂಕ್ತ. ಧ್ವನಿ ಮೂಲಕ ಸಂಭಾಷಣೆ ಆಯ್ಕೆಯೂ ಇದೆ. ಆರಂಭಿಕ ಸ್ಕ್ರೀನ್‌ನಲ್ಲಿ ಎಡದಿಂದ ಬಲಕ್ಕೆ ಸ್ವೈಪ್ ಮಾಡಿದಾಗ, ಯಾರೆಲ್ಲ ಅನುಯಾಯಿಗಳಿರುತ್ತಾರೋ, ಅವರನ್ನು ಗೌಪ್ಯ ಕೊಠಡಿಗೆ ಆಹ್ವಾನಿಸಬಹುದು.

ಕ್ಲಬ್ ಒಳಗೆ

ಕೇಳುಗರಲ್ಲಿ ಯಾರನ್ನೇ ಆದರೂ, ಮೇಲ್ಭಾಗದ ವೇದಿಕೆಗೆ ಕರೆಯುವ ಅಧಿಕಾರವು ಮಾಡರೇಟರ್‌ಗಳಿಗೆ ಇರುತ್ತದೆ. ಕೇಳುಗರು ಇದನ್ನು ಒಪ್ಪಬಹುದು ಅಥವಾ ನಯವಾಗಿ ನಿರಾಕರಿಸಬಹುದು. 'Dismiss' ಎಂಬುದನ್ನು ಒತ್ತಿದರೆ, 'ಅವರೀಗ ಸದ್ಯ ಮಾತನಾಡಲು ಇಚ್ಛಿಸುತ್ತಿಲ್ಲ' ಎಂಬ ಸಂದೇಶವು ಮಾಡರೇಟರ್‌ಗೆ ಹೋಗುತ್ತದೆ.

ಚರ್ಚಾ ಕೊಠಡಿ ಆರಂಭಿಸುವುದು

ಮೊದಲ ಸ್ಕ್ರೀನ್‌ನಲ್ಲೇ ಇರುವ 'Start Room' ಒತ್ತಿದರೆ, ಮುಕ್ತ, ಸೋಷಿಯಲ್, ಗುಪ್ತ ಮತ್ತು ನಾವು ಸದಸ್ಯರಾಗಿರುವ ಕ್ಲಬ್‌ಗಳವರಿಗೆ ಮಾತ್ರ ಎಂಬ ಆಯ್ಕೆಗಳು ಕಾಣಿಸುತ್ತವೆ. ಮೇಲ್ಭಾಗದಲ್ಲಿ 'Add a Topic' ಅಂತ ಇರುವಲ್ಲಿ ಯಾವ ವಿಷಯದ ಬಗ್ಗೆ ಚರ್ಚೆ ಎಂಬುದನ್ನು ನಮೂದಿಸಬೇಕು. ಇದೇ ಚರ್ಚೆಯನ್ನು ನಾಳೆಯೋ, ನಾಡಿದ್ದೋ ನಿಗದಿಪಡಿಸಬೇಕಿದ್ದರೆ, ಆರಂಭಿಕ ಸ್ಕ್ರೀನ್‌ನ ಮೇಲ್ಭಾಗದಲ್ಲಿರುವ ಕ್ಯಾಲೆಂಡರ್ ಐಕಾನ್ ಒತ್ತಿ, ಬಲ ಮೇಲ್ತುದಿಯಲ್ಲಿ ಕ್ಯಾಲೆಂಡರ್‌ಗೆ ಪ್ಲಸ್ ಗುರುತು ಇರುವ ಐಕಾನ್ ಒತ್ತಿ ಮುಂದುವರಿಯಬಹುದು.

ಹಾಲ್‌ವೇ ಎಂದರೇನು? ಸದಸ್ಯರು ಚರ್ಚಾ ಕೊಠಡಿ ಆರಂಭಿಸಬಹುದೇ? ಹಣ ಮಾಡಬಹುದೇ? ರೆಕಾರ್ಡ್ ಮಾಡುವುದು ಹೇಗೆ? **ಈ ಮಾಹಿತಿಗಾಗಿ Prajavani.net ನೋಡಿ.**



ಕ್ಲಬ್‌ಹೌಸ್‌ನ ಹಾಲ್ ವೇ ಕಾಣಿಸುವುದು ಹೀಗೆ.

ಸಿಇಟಿ ದಿಕ್ಸೂಚಿ

Chemistry – States of Matter, Gases, Liquids & Solids

1. For and ideal gas, compressibility factor is

(1) 0 (2) 1 (3) –1 (4) +2

2. 0.4 g of dihydrogen is made to react with 7.1 g of dichlorine to form hydrogen chloride. The volume of hydrogen chloride formed at 273 K and 1 bar pressure is

(1) 90.8 L (2) 9.08 L

(3) 45.4 L (4) 4.54 L

3. The rms velocity of hydrogen is $\sqrt{7}$ times the rms velocity of nitrogen. If T is the temperature of the gas, which of the following is true?

(1) $T_{H_2} = \sqrt{7}\, T_{N_2}$ (2) $T_{N_2} = T_{H_2}$

(3) $T_{N_2} = \sqrt{7}\, T_{H_2}$ (4) $T_{N_2} = 2\, T_{H_2}$

4. 25 g of each of the following gasses are taken at 27°C and 600 mm pressure. Which of these will have the least volume?]

(1) HCl (2) HBr

(3) HI (4) HF

5. The statement that is NOT correct is

(1) Van der Waals constant 'a' measures extent of intermolecular attractive forces for real gases.

(2) Boyle point depends on the nature of real gas.

(3) Compressibility factor measures the deviation of real gas from ideal behaviour.

(4) Critical temperature is the lowest temperature at which liquefaction of a gas first occurs.

6. Density of carbon monoxide is maximum at

(1) 0.5 atm and 273 K

(2) 4 atm and 500 K

(3) 2 atm and 600 K

(4) 6 atm and 1092 K

7. Which of the following gases has the highest value of RMS-velocity at 298 K?

(1) CH_4 (2) CO

(3) Cl_2 (4) CO_2

8. A liquid can exist only,

(1) Between triple point and critical point

(2) At any temperature above melting point

(3) Between melting point and critical point

(4) Between boiling and melting points.

9. A liquid can exist only,

(1) Between triple point and critical point

(2) At any temperature above melting point

(3) Between melting point and critical point

(4) Between boiling and melting points.

10. Which of the following equations does NOT represent Charles's law for a given mass of gas at constant pressure?

(1) log V = log K + log T

(2) V/T = K

(3) d(ln V)/dT = 1/T

(4) log K = log V + log T

11. The pressure of real gases is less than that of ideal gas because of


(1) Intermolecular attraction

(2) Finite size of particles

(3) Increase in the number of collisions

(4) Increase in the kinetic energy of the molecules

12. Plot of Maxwell's distribution of velocities is given below:



Which of the following is correct about this plot?

(1) $T_1 < T_2$ (2) $f_1 > f_2$

(3) $T_1 > T_2$ (4) $v_1 < v_2$

Answers

1. Answer (2)

Solution :For an ideal gas, the value of compressibility factor is 1.

2. Answer (4)

Solution : $\underset{0.2\ \text{moles}}{H_2} + \underset{0.1\ \text{moles}}{Cl_2} \rightarrow \underset{0.2\ \text{moles}}{2HCl}$

Cl_2 is limiting reagent ∴ no of moles of

HCl = 0.2

pv = nRT

$\frac{1}{1.013} \times v = 0.2 \times 0.0821 \times 273$

v = 4.54 lit

3. Answer (4)

$$\text{Solution : } \frac{C_{H_2}}{C_{N_2}} = \sqrt{7} = \sqrt{\frac{T_{H_2} \times 28}{2 \times T_{N_2}}}$$

$$7 = \frac{14T_{H_2}}{T_{N_2}}$$

4. Answer (3)

Solution :HI has the least number of moles. Therefore, volume occupied is least

5. Answer (4)

Solution :Critical temp is the maximum temp at which gas can be liquefied

6. Answer (2)

Solution :Density

$$d = \frac{PM}{RT}, \text{ i.e } d \propto \frac{P}{T}$$

7. Answer (1)

$$\text{Solution : } C_{rms}\ \alpha \sqrt{\frac{T}{M}}$$

$$M_{CH_4} = 16\,g\,/$$

which least molar mass

8. Answer (4)

Solution :

The critical point is the highest temperature and pressure at which a pure material can exist in vapour/liquid equilibrium. At a temperature higher than the critical temperature, the substance cannot exist as a liquid, no matter what the pressure. Since the triple point is a point there is only one temperature and one pressure where the three phases will exist

9. Answer (4)

Solution :

The critical point is the highest temperature and pressure at which a pure material can exist in vapour/liquid equilibrium. At a temperature higher than the critical temperature, the substance cannot exist as a liquid, no matter what the pressure. Since the triple point is a point there is only one temperature and one pressure where the three phases will exist

10. Answer (4)

Solution :Charles law: V/T = K

If we take log on both sides then log V-log T = log K.

11. Answer (1)

Solution :

The intermolecular attraction between the particles of a real gas is much less hence the pressure of real gas is less than that of an ideal gas. Their energy is less ∵ they do not collide with each other at an impact. The pressure of real gases is less than that of ideal gas because of intermolecular attraction.

12. Answer (3)

Solution :On increasing temperature molecular velocity increases

$\therefore T_1 > T_2$

(ಪ್ರಶ್ನೋತ್ತರ ಸಂಯೋಜನೆ: ಆಕಾಶ್ ಇನ್‌ಸ್ಟಿಟ್ಯೂಟ್, ಬೆಂಗಳೂರು)

ಪೊಲೀಸ್ ಕಾನ್‌ಸ್ಟೇಬಲ್ ನೇಮಕಾತಿ ಪರೀಕ್ಷೆಯ ಮಾದರಿ ಪ್ರಶ್ನೆಗಳು

ಭಾಗ- 27

362. ಮಾಗೋಡು ಜಲಪಾತದ ಉಗಮವಾಗಿದ್ದು ಯಾವ ನದಿಯಿಂದ

ಎ) ಶರಾವತಿ

ಬಿ) ಕಾಳಿ

ಸಿ) ಬೇಡ್ತಿ

ಡಿ) ಕಾವೇರಿ

363. ಈ ಕೆಳಗಿನವುಗಳಲ್ಲಿ ಜಾಗತಿಕ ತಾಪಮಾನಕ್ಕೆ ಕಾರಣ ಯಾವುದು?

ಎ) ಮಿಥೇನ್

ಬಿ) ಕಾರ್ಬನ್ ಡೈ ಆಕ್ಸೈಡ್

ಸಿ) ವಾಟರ್ ವೇಪರ್

ಡಿ) ಈ ಮೇಲಿನ ಎಲ್ಲವೂ

364. ಈ ಕೆಳಗಿನವರಲ್ಲಿ ಮೊಟ್ಟಮೊದಲ ಬಾರಿ ಯಾವ ಭಾರತೀಯ ಬ್ರಿಟಿಷ್ ಪಾರ್ಲಿಮೆಂಟ್‌ಗೆ ಆಯ್ಕೆಯಾಗಿದ್ದರು?

ಎ) ಆರ್.ಸಿ. ದತ್ತ

ಬಿ) ದಾದಾಬಾಯಿ ನವರೋಜಿ

ಸಿ) ರಾಮ್ ಮೋಹನ್ ರಾಯ್

ಡಿ) ಮೇಘಾನಂದ ದೇಸಾಯಿ

365. ಮೌರ್ಯರ ಕಾಲದಲ್ಲಿ ತೆರಿಗೆ ವಂಚನೆಗೆ ಯಾವ ಶಿಕ್ಷೆ ವಿಧಿಸಲಾಗುತ್ತಿತ್ತು?

ಎ) ಮರಣದಂಡನೆ

ಬಿ) ವಸ್ತುಗಳ ಮುಟ್ಟುಗೋಲು

ಸಿ) ಜೈಲು

ಡಿ) ಗಡಿಪಾರು

366. ಯಾವ ಮೊಘಲ್ ಚಕ್ರವರ್ತಿಯು ತಂಬಾಕು ಸೇವನೆಯನ್ನು ನಿಷೇಧಿಸಿದ್ದರು?

ಎ) ಬಾಬರ್

ಬಿ) ಜಹಾಂಗೀರ್

ಸಿ) ಔರಂಗಜೇಬ್

ಡಿ) ಮೊಹಮ್ಮದ್ ಷಾ

367. 'ಪಂಜಾಬ್ ಕೇಸರಿ' ಎಂದು ಯಾರನ್ನು ಕರೆಯಲಾಗುತ್ತದೆ?

ಎ) ಭಗತ್ ಸಿಂಗ್

ಬಿ) ಲಾಲಾ ಲಜಪತ್ ರಾಯ್

ಸಿ) ರಾಜ ಗುರು

ಡಿ) ಸುಖದೇವ್

368. ಹೊಯ್ಸಳರ ರಾಜಧಾನಿ ಯಾವುದು?

ಎ) ಹಲ್ಮಿಡಿ

ಬಿ) ಬೊಮ್ಮಸಂದ್ರ

ಸಿ) ದ್ವಾರಸಮುದ್ರ

ಡಿ) ಶಿವನಸಮುದ್ರ

369. ಈ ಕೆಳಗಿನವರಲ್ಲಿ ಇತ್ತೀಚೆಗೆ ರಾಷ್ಟ್ರ ಕವಿ ಪುರಸ್ಕಾರಕ್ಕೆ ಆಯ್ಕೆಯಾದವರು ಯಾರು?

ಎ) ದೇವನೂರು ಮಹಾದೇವ

ಬಿ) ಕೆ.ಎಸ್.ನಿಸಾರ್ ಅಹಮದ್

ಸಿ) ಚಂಪಾ

ಡಿ) ಎಸ್.ಎಲ್.ಭೈರಪ್ಪ

370. 'ಮಾನವ ಜನ್ಮ ಬಲು ದೊಡ್ಡದು' ಎಂದು ಪ್ರತಿಪಾದಿಸಿದವರು ಯಾರು?

ಎ) ಕನಕದಾಸ

ಬಿ) ಸೂರದಾಸ

ಸಿ) ಪುರಂದರದಾಸ

ಡಿ) ರಾಮದಾಸ

371. ಕನ್ನಡ ಭಾಷೆಯ ಇತಿಹಾಸವನ್ನು ಬರೆದವರು

ಎ) ಇ.ಪಿ. ರೈಸ್

ಬಿ) ಎಡ್ವರ್ಡ್ ರೈಸ್

ಸಿ) ಕಿಟೆಲ್

ಡಿ) ಬಿ.ಎಲ್.ರೈಸ್

372. ಕರ್ನಾಟಕದ ಉನ್ನತ ಶಿಕ್ಷಣ ಸಚಿವರು ಯಾರು?

ಎ) ಲಕ್ಷ್ಮಣ ಸವದಿ

ಬಿ) ರಾಮಲಿಂಗ ರೆಡ್ಡಿ

ಸಿ) ಡಾ.ಸಿ.ಎನ್. ಅಶ್ವತ್ಥನಾರಾಯಣ

ಡಿ) ಬಸವರಾಜ ರಾಯರೆಡ್ಡಿ

373. ಕರ್ನಾಟಕದ ಅತೀ ಹಳೆಯ ಅಣೆಕಟ್ಟು ಯಾವುದು?

ಎ) ಕೃಷ್ಣರಾಜ ಸಾಗರ

ಬಿ) ವಾಣಿವಿಲಾಸ

ಸಿ) ತುಂಗಭದ್ರಾ

ಡಿ) ಹಿಪ್ಪರಗಿ ಬ್ಯಾರೇಜ್

374. 'ಮೆಕ್ ಮೋಹನ್' ಗಡಿ ಯಾವ ದೇಶಗಳ ಮಧ್ಯೆ ಇದೆ?

ಎ) ಭಾರತ-ಪಾಕಿಸ್ತಾನ

ಬಿ) ಭಾರತ-ಚೀನಾ

ಸಿ) ಅಫ್ಘಾನಿಸ್ತಾನ-ಪಾಕಿಸ್ತಾನ

ಡಿ) ಭಾರತ-ಬಾಂಗ್ಲಾದೇಶ

375. ದ್ರವದ ನಾಲ್ಕನೆಯ ಹಂತ

ಎ) ಆವಿ

ಬಿ) ಅನಿಲ

ಸಿ) ಪ್ಲಾಸ್ಮಾ

ಡಿ) ಅರೆಘನ

(ಪ್ರಶ್ನೋತ್ತರ ಸಂಯೋಜನೆ: ಸ್ಲೇಟ್ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರ, ಧಾರವಾಡ)

ಭಾಗ 26ರ ಉತ್ತರ

351. ಸಿ, 352. ಬಿ, 353. ಡಿ, 354. ಸಿ, 355. ಬಿ, 356. ಬಿ, 357. ಸಿ, 358. ಬಿ, 359. ಎ, 360. ಡಿ



ಸುಭಾಷಿತ

ಒಂದೇ ಬಾರಿಗೆ 10,000 ಕಿಕ್‌ಗಳನ್ನು ಕೊಡುವುದನ್ನು ಅಭ್ಯಾಸ ಮಾಡಿದ ವ್ಯಕ್ತಿಗೆ ನಾನು ಹೆದರುವುದಿಲ್ಲ. ಆದರೆ ಒಂದು ಕಿಕ್ ಅನ್ನು 10,000 ಬಾರಿ ಅಭ್ಯಾಸ ಮಾಡಿರುವ ವ್ಯಕ್ತಿಯ ಬಗ್ಗೆ ನಾನು ಭಯಪಡುತ್ತೇನೆ.

–ಬ್ರೂಸ್ ಲೀ

ಪೆಗಾಸಸ್ ಕಣ್ಗಾವಲು ಪ್ರಕರಣ ನುಣುಚಿಕೊಳ್ಳುವುದು ಬೇಡ, ತನಿಖೆ ಆಗಲಿ

ಭಾರತದ ಗಣನೀಯ ಸಂಖ್ಯೆಯ ಜನರ ಮೊಬೈಲ್‌ಗಳಿಗೆ ಪೆಗಾಸಸ್ ಎಂಬ ಕುತಂತ್ರಾಂಶವನ್ನು (ಮಾಲ್‌ವೇರ್) ನುಗ್ಗಿಸಿ, ಅವರ ಮೇಲೆ ಗೂಢಚರ್ಯೆ ನಡೆಸಲು ಯತ್ನಿಸಲಾಗಿದೆ ಎಂಬುದು ಬಹಿರಂಗವಾಗಿದೆ. ಇದು ನೈತಿಕ, ರಾಜಕೀಯ ಮತ್ತು ಕಾನೂನಿನ ಗಂಭೀರ ಪ್ರಶ್ನೆಗಳನ್ನು ಮೂಡಿಸಿದೆ. ಸಾಂವಿಧಾನಿಕ ಪದ್ಧತಿಗಳು ಮತ್ತು ಪ್ರಜಾಸತ್ತಾತ್ಮಕ ನಡತೆಯ ಮೇಲೆ ಪರಿಣಾಮ ಬೀರುವಂತಹದ್ದು. ಇಸ್ರೇಲ್‌ನ ಎನ್‌ಎಸ್‌ಒ ಗ್ರೂಪ್ ಎಂಬ ಕಂಪನಿಯು ಈ ಕುತಂತ್ರಾಂಶವನ್ನು ಪೂರೈಸುತ್ತಿದೆ. ಕಣ್ಗಾವಲಿನ ಗುರಿಯಾಗಿದ್ದವರ ಬಗೆಗಿನ ಮಾಹಿತಿಯು ಸೋರಿಕೆಯಾಗಿದೆ. ಹೀಗೆ ಸೋರಿಕೆಯಾದ ಮಾಹಿತಿಯಲ್ಲಿದ್ದ ದೂರವಾಣಿ ಸಂಖ್ಯೆಗಳ ಪೈಕಿ 300 ಸಂಖ್ಯೆಗಳು ಯಾರಿಗೆ ಸೇರಿದವು ಎಂಬುದನ್ನು ಗುರುತಿಸಲಾಗಿದೆ. ಈಗ ಕೇಂದ್ರದಲ್ಲಿ ಸಚಿವರಾಗಿ ಇರುವವರು, ವಿರೋಧ ಪಕ್ಷಗಳ ನಾಯಕರು, ಉದ್ಯಮಿಗಳು, ಸರ್ಕಾರಿ ಅಧಿಕಾರಿಗಳು, ವಿಜ್ಞಾನಿಗಳು, ಹಕ್ಕುಗಳ ಹೋರಾಟಗಾರರು, ವಕೀಲರು, ಪತ್ರಕರ್ತರು ಸೇರಿದಂತೆ ಹಲವು ಮಂದಿಯ ಮೇಲೆ ಗೂಢಚರ್ಯೆ ನಡೆಸಲು ಉದ್ದೇಶಿಸಲಾಗಿತ್ತು ಎಂಬುದು ಮಾಹಿತಿ ಸೋರಿಕೆಯಿಂದ ಬಯಲಿಗೆ ಬಂದಿದೆ. ಸೋರಿಕೆಯು ಇನ್ನೊಂದು ಮಹತ್ವದ ಅಂಶಕ್ಕೂ ಬೆಳಕು ಚೆಲ್ಲಿದೆ– ಸರ್ಕಾರವನ್ನು ಕಟುವಾಗಿ ಟೀಕಿಸುತ್ತಿರುವ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಗೂಢಚರ್ಯೆಯ ಗುರಿಯಾಗಿದ್ದರು ಎಂದು ವರದಿಯು ಹೇಳಿದೆ; ಜತೆಗೆ ಅವರ ನಿಕಟವರ್ತಿಗಳ ಮೇಲೆಯೂ ನಿಗಾ ಇರಿಸಲಾಗಿದೆ ಎಂಬುದು ಹೊಸ ಅರಿವು. ಈಗ ಕೇಂದ್ರದಲ್ಲಿ ಮಾಹಿತಿ ತಂತ್ರಜ್ಞಾನ ಸಚಿವರಾಗಿರುವ ಅಶ್ವಿನಿ ವೈಷ್ಣವ್ ಅವರೂ ಕಣ್ಗಾವಲಿನಲ್ಲಿದ್ದ ವ್ಯಕ್ತಿಗಳ ಪಟ್ಟಿಯಲ್ಲಿ ಇದ್ದರು.



ಗೂಢಚರ್ಯೆ ಆರೋಪದ ಬಗ್ಗೆ ಸ್ವತಂತ್ರವಾದ ತನಿಖೆ ನಡೆಯಬೇಕು. ಇದರ ಹಿಂದೆ ಯಾರಿದ್ದಾರೆ ಎಂಬುದು ಗೊತ್ತಾಗಬೇಕು

ಇಂತಹದೊಂದು ನಿಗಾ ವ್ಯವಸ್ಥೆಯು ಸರ್ಕಾರದಿಂದ ನೇರವಾಗಿ ಅಥವಾ ಸರ್ಕಾರದ ಒತ್ತಾಸೆಯಿಂದ ಮಾತ್ರ ನಡೆಯಲು ಸಾಧ್ಯ ಎಂಬುದು ಸ್ಪಷ್ಟ. ಆದರೆ, ಈ ಗೂಢಚರ್ಯೆಯ ಜತೆಗೆ ಯಾವುದೇ ಸಂಬಂಧ ಇಲ್ಲ, ಇದರ ಹೊಣೆಗಾರಿಕೆ ಹೊರಲೂ ಸಾಧ್ಯವಿಲ್ಲ ಎಂದು ಕೇಂದ್ರ ಸರ್ಕಾರ ಹೇಳಿದೆ. ಸಂಸತ್ತಿನ ಮುಂಗಾರು ಅಧಿವೇಶನ ಆರಂಭದ ಮುನ್ನಾದಿನವೇ ಗೂಢಚರ್ಯೆ ಮಾಹಿತಿ ಸೋರಿಕೆಯ ವರದಿ ಪ್ರಕಟವಾಗಿರುವುದು ಭಾರತದ ಪ್ರಜಾಪ್ರಭುತ್ವದ ಹೆಸರು ಕೆಡಿಸುವ ಪ್ರಯತ್ನದ ಭಾಗ ಎಂದು ಸ್ವತಃ ಸಂತ್ರಸ್ತರೂ ಆಗಿರುವ ಸಚಿವ ಅಶ್ವಿನಿ ವೈಷ್ಣವ್ ಹೇಳಿದ್ದಾರೆ. ಸರ್ಕಾರ ಮತ್ತು ಸಚಿವ ಅಶ್ವಿನಿ ಅವರು ಕಡೆಗಣಿಸಿರುವ ಒಂದು ಅಂಶ ಇಲ್ಲಿ ಇದೆ. ಬಹಿರಂಗವಾಗಿರುವ ಮಾಹಿತಿಯು ಭಾರತಕ್ಕೆ ಮಾತ್ರ ಸಂಬಂಧಿಸಿದ್ದು ಅಲ್ಲ. ಹಾಗೆಯೇ ಈ ಮಾಹಿತಿಯನ್ನು ಬಹಿರಂಗಪಡಿಸಿದ್ದು ಅಂತರರಾಷ್ಟ್ರೀಯ ಮಟ್ಟದ ತನಿಖಾ ಸಂಸ್ಥೆ. ಜಗತ್ತಿನಾದ್ಯಂತ 50 ಸಾವಿರಕ್ಕೂ ಹೆಚ್ಚು ಜನರ ಮೊಬೈಲ್ ಫೋನ್‌ಗೆ ಪೆಗಾಸಸ್ ಕುತಂತ್ರಾಂಶವು ನುಸುಳುವಂತೆ ಮಾಡಲಾಗಿದೆ ಎಂದು ಈ ಸಂಸ್ಥೆಯ ವರದಿಯು ಹೇಳಿದೆ. ಹಾಗಾಗಿ, ಸಂಸತ್ತಿನ ಮುಂಗಾರು ಅಧಿವೇಶನ ಆರಂಭವಾಗುವ ಹಿಂದಿನ ದಿನವೇ ಈ ಮಾಹಿತಿ ಬಹಿರಂಗಪಡಿಸಬೇಕು ಎಂಬ ವಿಚಾರದಲ್ಲಿ ಯಾರಿಗೂ ಆಸಕ್ತಿ ಇರುವುದಕ್ಕೆ ಸಾಧ್ಯ ಇಲ್ಲ. ಅದೇನೇ ಇರಲಿ. ಇಲ್ಲಿ ಈಗ ಸಮಯ ಯಾವುದು ಎಂಬುದು ಮುಖ್ಯ ಅಲ್ಲವೇ ಅಲ್ಲ, ಬದಲಿಗೆ ಬಹಿರಂಗವಾಗಿರುವ ವಿಚಾರವೇ ಹೆಚ್ಚು ಮಹತ್ವದ್ದಾಗಿದೆ. ಇದಕ್ಕೆ ಸಂಬಂಧಿಸಿದಂತಹ ಕೆಲವು ವರದಿಗಳು ಎರಡು ವರ್ಷಗಳ ಹಿಂದೆಯೂ ಬಹಿರಂಗ ಆಗಿದ್ದವು. ಹಾಗಾಗಿಯೇ, ಕುತಂತ್ರಾಂಶದ ಮೂಲಕ ಗೂಢಚರ್ಯೆಯ ವಿಚಾರವು ಬಹಳ ಹಿಂದೆಯೇ ಬಹಿರಂಗವಾಗಿದೆ. ಇದಕ್ಕೆ ಸಂಬಂಧಿಸಿದ ಪ್ರಶ್ನೆಗಳಿಗೆ ಈಗಾಗಲೇ ಉತ್ತರ ಕೂಡ ನೀಡಲಾಗಿದೆ ಎಂಬುದು ಕೇಂದ್ರ ಸರ್ಕಾರದ ನಿಲುವು. ಈ ಉತ್ತರ ಕೂಡ ದಾರಿ ತಪ್ಪಿಸುವಂತಹುದೇ ಆಗಿದೆ. ಪೆಗಾಸಸ್ ಕುತಂತ್ರಾಂಶವನ್ನು ಖರೀದಿಸಲಾಗಿದೆಯೇ ಎಂದು ಮಾಹಿತಿ ಹಕ್ಕು ಕಾಯ್ದೆ ಅಡಿಯಲ್ಲಿ 2019ರಲ್ಲಿ ಪ್ರಶ್ನೆ ಕೇಳಲಾಗಿತ್ತು. ಕುತಂತ್ರಾಂಶ ಖರೀದಿಯನ್ನು ಸರ್ಕಾರವು ಆಗ ನಿರಾಕರಿಸಿರಲಿಲ್ಲ.

ಸರ್ಕಾರ ಎಷ್ಟೇ ನಿರಾಕರಿಸಿದರೂ ಪೆಗಾಸಸ್ ಕುತಂತ್ರಾಂಶದ ಮೂಲಕ ಗೂಢಚರ್ಯೆ ನಡೆಸಿದವರು ಯಾರು ಎಂದರೆ ಮೊದಲ ಅನುಮಾನ ಸರ್ಕಾರದ ಬಗ್ಗೆಯೇ ಬರುತ್ತದೆ. ಪೆಗಾಸಸ್ ಕುತಂತ್ರಾಂಶವನ್ನು ಸರ್ಕಾರಗಳಿಗೆ ಮಾತ್ರ ಮಾರಾಟ ಮಾಡುವುದಾಗಿ ಇಸ್ರೇಲ್‌ನ ಕಂಪನಿ ಎನ್‌ಎಸ್‌ಒ ಗ್ರೂಪ್ ಹೇಳಿದೆ. ಆದರೆ, ಭಾರತ ಸರ್ಕಾರಕ್ಕೆ ಮಾರಾಟ ಮಾಡಲಾಗಿದೆಯೇ ಎಂಬ ಪ್ರಶ್ನೆಗೆ ಉತ್ತರಿಸಲು ಕಂಪನಿಯು ನಿರಾಕರಿಸಿದೆ. ನಿಚ್ಚಳವಾಗಿರುವ ಇನ್ನೊಂದು ಅಂಶವೂ ಸರ್ಕಾರದತ್ತಲೇ ಬೊಟ್ಟು ಮಾಡುತ್ತದೆ. ಗೂಢಚರ್ಯೆಯ ಪಟ್ಟಿಯಲ್ಲಿದ್ದವರಲ್ಲಿ ಹೆಚ್ಚಿನವರು ಸರ್ಕಾರದ ವಿರುದ್ಧ ಇರುವವರು ಅಥವಾ ಕಿರುಕುಳ ನೀಡಬೇಕು ಎಂದು ಸರ್ಕಾರ ಬಯಸಬಹುದಾದ ಸಾಧ್ಯತೆ ಇರುವವರು. ಸರ್ಕಾರವನ್ನು ಬೆಂಬಲಿಸುವವರ ಮೇಲೆ ಕೂಡ ವಿಶೇಷ ಕಾರಣಗಳಿಗಾಗಿ ನಿಗಾ ಇರಿಸಲಾಗಿದೆ ಎಂದು ವರದಿಯು ಹೇಳುತ್ತಿದೆ. ಗೂಢಚರ್ಯೆ ಆರೋಪದ ಬಗ್ಗೆ ಸ್ವತಂತ್ರವಾದ ತನಿಖೆ ನಡೆಯಬೇಕು. ಗೂಢಚರ್ಯೆಯ ಹಿಂದೆ ಯಾರಿದ್ದಾರೆ ಎಂಬುದನ್ನು ಗುರುತಿಸಬೇಕು ಮತ್ತು ಕೃತ್ಯದ ಹೊಣೆಯನ್ನು ಅವರ ಮೇಲೆ ಹೊರಿಸಬೇಕು. ಇಡೀ ಪ್ರಕರಣದಲ್ಲಿ ತನಗೆ ಯಾವುದೇ ಪಾತ್ರ ಇಲ್ಲ ಎಂದಾದರೆ, ತನಿಖೆಗೆ ಸಂಬಂಧಿಸಿ ವಿಶೇಷ ಮುತುವರ್ಜಿಯನ್ನು ಸರ್ಕಾರವು ವಹಿಸಬೇಕು. ಇಷ್ಟು ದೊಡ್ಡ ಮಟ್ಟದ ಗೂಢಚರ್ಯೆಯ ಬಗೆಗಿನ ಸತ್ಯವು ಬಯಲಾಗಬೇಕು. ಈ ರೀತಿಯ ಗೂಢಚರ್ಯೆಯು ರಾಷ್ಟ್ರೀಯ ಭದ್ರತೆಯ ಮೇಲೆ ಪರಿಣಾಮ ಬೀರುತ್ತದೆ; ಪೆಗಾಸಸ್ ಪ್ರಕರಣದ ವರದಿಯೇ ಷಡ್ಯಂತ್ರ ಎಂದು ತಳ್ಳಿಹಾಕುವುದು ಸರಿಯಾದ ನಡೆ ಅಲ್ಲ. ಪ್ರಜಾಪ್ರಭುತ್ವ ವ್ಯವಸ್ಥೆಯು ಕಣ್ಗಾವಲು ಮತ್ತು ಪೌರರ ಖಾಸಗಿತನದ ಉಲ್ಲಂಘಿಸುವಿಕೆ ಮೂಲಕ ನಡೆಯುವುದು ಸಾಧ್ಯವಿಲ್ಲ. ರಾಜಕೀಯ ಕಾರಣಗಳಿಗಾಗಿ, ಕಾನೂನುಬಾಹಿರವಾಗಿ ಗೂಢಚರ್ಯೆ ನಡೆಸುವ ಸರ್ಕಾರವು ಪ್ರಜಾಸತ್ತಾತ್ಮಕ ನ್ಯಾಯಸಮ್ಮತಿಯನ್ನು ಕಳೆದುಕೊಳ್ಳುತ್ತದೆ.

ನೂರಿಪ್ಪತ್ತು ವರ್ಷಗಳ ಹಿಂದಿನ ಕಾದಂಬರಿಯೊಂದರಲ್ಲಿ ಕಾಣುವ ಇಂದಿನ ಬಿಂಬಗಳು

ಟಾಲ್‌ಸ್ಟಾಯ್ ಸೃಷ್ಟಿಸಿದ ಕಾಲದ ಕನ್ನಡಿ



ವಿಶ್ಲೇಷಣೆ

ನಟರಾಜ್ ಹುಳಿಯಾರ್

ಇಲ್ಲಿ ಹೊಸ ಹುಡುಗರು ನ್ಯಾಯ ಕೇಳುತ್ತಿದ್ದಾರೆ. ವಿದ್ಯಾವಂತ ಹುಡುಗಿಯರು ಬಂಡೆದ್ದಿದ್ದಾರೆ. ಹೊಟ್ಟೆಪಾಡಿಗಾಗಿ ಸಣ್ಣಪುಟ್ಟ ಅಪರಾಧ ಮಾಡಿದವರು, ಯಾವ ಅಪರಾಧವನ್ನೂ ಮಾಡದಿರುವವರು ಜೈಲಿನಲ್ಲಿ ಕೊಳೆಯುತ್ತಿದ್ದಾರೆ. ತಪ್ಪಿತಸ್ಥರಿಗೆ ಶಿಕ್ಷೆ ಕೊಡುತ್ತಿರುವವರು ಕೈದಿಗಳಿಗಿಂತ ಭೀಕರ ತಪ್ಪುಗಳನ್ನು ಮಾಡಿದ್ದಾರೆ. ಆಡಳಿತದ ಆಯಕಟ್ಟಿನಲ್ಲಿರುವವರು ಅಧಿಕಾರ, ಸಂಬಳ, ಲಂಚ, ರುಷುವತ್ತುಗಳನ್ನು ಕಾಯ್ದುಕೊಳ್ಳುವುದರಲ್ಲೇ ತಲ್ಲೀನರಾಗಿದ್ದಾರೆ. ಪೊಲೀಸರು ಹಿಂಸೆಯ ಹೊಸಹೊಸ ರೂಪಗಳನ್ನು ಕಂಡುಹಿಡಿದು ಪ್ರಯೋಗಿಸುತ್ತಿದ್ದಾರೆ. 'ಜೈಲಿನಲ್ಲಿರುವವರಿಗೆ ಶಿಕ್ಷೆ ಕೊಡಲು ಜೈಲಿನ ಹೊರಗಿರುವ ನಮಗೆ ಹಕ್ಕೇನಿದೆ?' ಎಂಬ ಪ್ರಶ್ನೆ 'ರೆಸರೆಕ್ಷನ್' (ಮರುಹುಟ್ಟು) ಕಾದಂಬರಿಯಲ್ಲಿ ಮತ್ತೆಮತ್ತೆ ಎದುರಾಗುತ್ತದೆ. 1899ರಲ್ಲಿ ಟಾಲ್‌ಸ್ಟಾಯ್ ಬರೆದ ಕೊನೆಯ ಕಾದಂಬರಿಯಲ್ಲಿ ಹಬ್ಬಿರುವ ವ್ಯಗ್ರತೆಯು ಇಂಡಿಯಾ ಸೇರಿದಂತೆ ಎಲ್ಲ ದೇಶಗಳ ಇವತ್ತಿನ ಸ್ಥಿತಿಯನ್ನೂ ಹೇಳುತ್ತಿದೆ ಅನ್ನಿಸತೊಡಗುತ್ತದೆ.

'ರೆಸರೆಕ್ಷನ್' ಕಾದಂಬರಿಯ ಕೇಂದ್ರ ಪಾತ್ರ 35ರ ಹರೆಯದ ಸೂಕ್ಷ್ಮ ಮನಸ್ಸಿನ ಸಿರಿವಂತ ನೆಕ್ಲುಡೋಫ್; ಆದರೆ ಗಿರಾಕಿಯೊಬ್ಬನಿಗೆ ವಿಷವಿಕ್ಕಿದ ಆಪಾದನೆಯ ಮೇಲೆ ವಿಚಾರಣೆ ಎದುರಿಸುತ್ತಿರುವ ಮಾಸ್ಲೋವಾ, ಕಾದಂಬರಿಯ ನಿಜವಾದ ಕೇಂದ್ರ ಪಾತ್ರ. ಇದು 19ನೇ ಶತಮಾನದ ಝಾರ್ ದೊರೆಯ ರಷ್ಯಾ. ಇಲ್ಲಿನ ನ್ಯಾಯಾಲಯಗಳ ನ್ಯಾಯಮಂಡಳಿಗಳಲ್ಲಿ ಸಮಾಜದ ಗಣ್ಯರೆನಿಸಿಕೊಂಡವರು ಸದಸ್ಯರು. ಮಾಸ್ಲೋವಾ ಕೇಸಿನ ದಿನ ನ್ಯಾಯ ನೀಡಲಿರುವ ಗಣ್ಯರಿಗೆ 'ತುರ್ತು' ಕೆಲಸಗಳಿವೆ. ಮಂಡಳಿಯ ಅಧ್ಯಕ್ಷನಿಗೆ ತನ್ನ ಪ್ರೇಯಸಿಯನ್ನು ಕಾಣಲು ಹೊರಡುವ ಕಾತರ. ಬೆಳಗಿನ ಜಾವದ ತನಕ ಪಾರ್ಟಿಯೊಂದರಲ್ಲಿ ಕುಡಿದು ಇಸ್ಪೀಟಾಡುತ್ತಿದ್ದ ಪಬ್ಲಿಕ್ ಪ್ರಾಸಿಕ್ಯೂಟರ್‌ಗೆ ಮಾಸ್ಲೋವಾ ಕೇಸಿನ ಎಳೆಗಳೇ ಸ್ಪಷ್ಟವಿಲ್ಲ. ಬ್ರ್ಯಾಂಡಿಯ ಸುವಾಸನೆ ಬೀರುವ ಮತ್ತೊಬ್ಬ ಸದಸ್ಯನಿಗೆ ಬಾಯಿಗೆ ಬಂದದ್ದನ್ನು ಹೇಳುವ ಚಪಲ...

ನ್ಯಾಯಮಂಡಳಿಯಲ್ಲಿ ಇಂಥ ಬೂಟಾಟಿಕೆ ಗಣ್ಯರ ಜೊತೆ ಕೂತು ಚಡಪಡಿಸುತ್ತಿರುವ ನೆಕ್ಲುಡೋಫ್ ತನ್ನ ಕಾಲದ ಕ್ರಾಂತಿಕಾರಿ ಚಿಂತನೆಗೆ ತಕ್ಕಂತೆ 'ಭೂಮಿ ಎಲ್ಲರಿಗೂ ಸೇರಿದ್ದು; ಅದು ಖಾಸಗಿ ಸ್ವತ್ತಲ್ಲ' ಎಂದು ತೀರ್ಮಾನಿಸಿರುವ ಹೊಸ ಕಾಲದ ವ್ಯಕ್ತಿ. ತಂದೆಯಿಂದ ಬಂದ ಸಾವಿರಾರು ಎಕರೆ ಭೂಮಿಯನ್ನು ರೈತರಿಗೆ ಹಂಚಿರುವ ನೆಕ್ಲುಡೋಫ್, ತಾಯಿಯಿಂದ ಬಂದಿರುವ ಸಾವಿರಾರು ಎಕರೆಯನ್ನೂ ರೈತರಿಗೆ ಹಂಚಲಿರುವವನು. ಮಾಸ್ಲೋವಾ ಕೋರ್ಟಿಗೆ ಬಂದಾಗ ಗಂಡಸರೆಲ್ಲ ಅವಳ ಸೌಂದರ್ಯ ಕಂಡು ಬಾಯಿಬಾಯಿ ಬಿಡುತ್ತಿದ್ದರೆ, ನೆಕ್ಲುಡೋಫ್ ಅವಳನ್ನು ನೋಡಿ ಬೆಚ್ಚಿ ಬೀಳುತ್ತಾನೆ. ತಾನು ಹರೆಯದಲ್ಲಿ ಪ್ರೇಮಿಸಿ ಕೈಬಿಟ್ಟು ಹೋದ ಕಟುಶಾಳೇ ಮಾಸ್ಲೋವಾ ಎಂಬ ಸತ್ಯ ಅವನ ಮುಖಕ್ಕೆ ರಾಚುತ್ತದೆ. ಅದು ಅವನ ಜ್ಞಾನೋದಯದ ಮೊದಲ ಘಟ್ಟ. ಆ ಕೇಸಿನಲ್ಲಿ ಮಾಸ್ಲೋವಾ ನಿರಪರಾಧಿ ಎಂಬುದು ಗೊತ್ತಾಗಿ, ಆಕೆಗೆ ನ್ಯಾಯ ಒದಗಿಸಲು ಪ್ರಯತ್ನಿಸುತ್ತಾನೆ; ಹೃದಯಹೀನ ನ್ಯಾಯಮಂಡಳಿ ಅವಳಿಗೆ ನಾಲ್ಕು ವರ್ಷ ಸೈಬೀರಿಯಾ ಜೈಲುವಾಸದ ಶಿಕ್ಷೆ ಕೊಡುತ್ತದೆ. ನೆಕ್ಲುಡೋಫ್ ಅವಳ ಪರವಾಗಿ ಅಪೀಲು ಸಲ್ಲಿಸುತ್ತಾನೆ. ಜೈಲಿನಲ್ಲಿ ಮಾಸ್ಲೋವಾಳನ್ನು ಕಂಡು, ಕಾನೂನು ಹೋರಾಟ ಮಾಡಿ ಅವಳನ್ನು ಬಿಡಿಸಲು ಹೊರಡುತ್ತಾನೆ; ಅವಳನ್ನೇ ಮದುವೆಯಾಗಲು ಸಿದ್ಧನಿದ್ದಾನೆ. ಇಲ್ಲಿಂದಾಚೆಗೆ ಅವನಿಗೆ ನಿಜವಾದ ರಷ್ಯಾದ ದರ್ಶನವಾಗುತ್ತದೆ:


ಆ ಜೈಲಿನಲ್ಲಿರುವ ಯಾರ ಕತೆ ಕೇಳಿದರೂ ಅವೆಲ್ಲ ಜೈಲಿನ ಹೊರಗೆ ಇರುವವರು ಮಾಡಿರುವ 'ಅಪರಾಧ'ಗಳಂತೆಯೇ ಕಾಣುತ್ತವೆ. ನೆಕ್ಲುಡೋಫ್‌ನ ಬೇಜವಾಬ್ದಾರಿತನದಿಂದ ಮಾಸ್ಲೋವಾ ಹೆತ್ತ ಮಗು ಆರೈಕೆಯಿಲ್ಲದೆ ತೀರಿಕೊಂಡಿದೆ. ಮಾಸ್ಲೋವಾ ವೇಶ್ಯೆಯಾಗಿ ಬದುಕು ನೂಕಿ, ಕೇಸೊಂದರಲ್ಲಿ ಶಿಕ್ಷೆಗೆ ಗುರಿಯಾಗಿದ್ದಾಳೆ. ಇವನ್ನೆಲ್ಲ ನೋಡುತ್ತಾ ತನ್ನನ್ನೂ ಸಮಾಜವನ್ನೂ ಪರೀಕ್ಷೆಗೆ ಒಳಪಡಿಸುವ ನೆಕ್ಲುಡೋಫ್‌ಗೆ ನಾಡಿನ ಪ್ರಭುತ್ವ, ಧರ್ಮ, ಅಧಿಕಾರಿ ವರ್ಗ, ಪೊಲೀಸ್ ವ್ಯವಸ್ಥೆ ಎಲ್ಲವೂ ಒಂದಾಗಿ ತಂತಮ್ಮ ವರ್ಗಗಳ ಹಿತರಕ್ಷಣೆಗಾಗಿ ಇಡೀ ನಾಡನ್ನೇ ಜೈಲಾಗಿಸಿರುವ ರೀತಿ ಹತ್ತಿರದಿಂದ ಕಾಣತೊಡಗುತ್ತದೆ.

ಇತ್ತ ಜೈಲಿನ ಹೊರಗಿರುವ ರೈತರ, ಮಹಿಳೆಯರ ಬಡತನ, ಅಸಹಾಯಕತೆಗಳಿಗೂ ಜೈಲಿನಲ್ಲಿರುವ ನಿರ್ಗತಿಕರ ಸ್ಥಿತಿಗೂ ಅಂಥ ವ್ಯತ್ಯಾಸವಿಲ್ಲ. ಈ ಅನ್ಯಾಯಗಳ ವಿರುದ್ಧ ದನಿಯೆತ್ತುತ್ತಿರುವ ಲಿಬರಲ್ ಹುಡುಗ ಹುಡುಗಿಯರು ರಾಜಕೀಯ ಕೈದಿಗಳಾಗಿ ಜೈಲಿನಲ್ಲಿದ್ದರೂ ಅವರ ಚೈತನ್ಯ ಮಾತ್ರ ಬತ್ತಿಲ್ಲ. ನೆಕ್ಲುಡೋಫ್‌ಗೆ ತಾನು ಇವರೆಲ್ಲರ ಜೊತೆ ನಿಲ್ಲಬೇಕೆಂಬುದು ಸ್ಪಷ್ಟವಾಗತೊಡಗುತ್ತದೆ. ಆದರೂ ಅವನಿಗೆ ಈ ಹುಡುಗ, ಹುಡುಗಿಯರ ಬಗೆಗೆ ಅನುಮಾನಗಳಿವೆ. ಯಾಕೆಂದರೆ, ಮನುಷ್ಯ ತಾನು ಯಾವ ವರ್ಗದ ಭಾಗಿಯಾಗಿದ್ದಾನೋ ಆ ವರ್ಗದ ಧೋರಣೆಗಳು ಅವನನ್ನು ನಿಯಂತ್ರಿಸುತ್ತಲೇ ಇರುತ್ತವೆ. ತನ್ನ ಪ್ರಜ್ಞೆಯಲ್ಲಿ ದೊಡ್ಡ ಪಲ್ಲಟವಾಗದೆ ನೆಕ್ಲುಡೋಫ್ ವರ್ಗಧೋರಣೆಗಳನ್ನು ಮೀರಲಾರ.


ಈ ಸ್ಥಿತಿಗಳನ್ನೆಲ್ಲ ಟಾಲ್‌ಸ್ಟಾಯ್ ಸ್ವತಃ ಹಾದು ಬಂದವನು. ತನ್ನ ಕೊನೆಯ ಕಾದಂಬರಿ ಬರೆಯುವ ಹೊತ್ತಿಗೆ ಎಪ್ಪತ್ತು ತಲುಪಿದ್ದ ಟಾಲ್‌ಸ್ಟಾಯ್ ಹಿರೀಕರಿಂದ ಬಂದ ಸಾವಿರಾರು ಎಕರೆ ಜಮೀನನ್ನು ತ್ಯಜಿಸಹೊರಟು ತನ್ನ ಕುಟುಂಬದ ವಿರೋಧ ಎದುರಿಸಿದವನು. ಅದೇ ಆಗ ಬೀಸುತ್ತಿರುವ ಕಮ್ಯುನಿಸಮ್ಮಿನ ಗಾಳಿಯ ಬಗ್ಗೆ ಅವನಲ್ಲಿ ಅನುಮಾನ, ಆತಂಕಗಳಿವೆ; ಆದರೆ ಭೂಮಿಯ ಬಗ್ಗೆ, ಖಾಸಗಿ ಸ್ವತ್ತಿನ ಬಗ್ಗೆ ಕಮ್ಯುನಿಸ್ಟರು ಎತ್ತುತ್ತಿರುವ ಪ್ರಶ್ನೆಗಳು ಅವನೊಳಗಿನಿಂದಲೂ ಮೂಡಿವೆ. ಬರಬರುತ್ತಾ ಅವನಿಗೆ ಭೂಮಾಲೀಕರು, ಶ್ರೀಮಂತರು ಹಾಗೂ ರಾಜಪ್ರಭುತ್ವಗಳ ಹಿಡಿತಗಳ ವಿರುದ್ಧ ಪ್ರಶ್ನೆಯೆತ್ತಿರುವ ಕಮ್ಯುನಿಸಮ್ಮಿನ ಕಾಲದಲ್ಲಿ ರಷ್ಯಾದ ಅಸಮಾನತೆಗಳು, ರಾಜಕೀಯ ಪ್ರಶ್ನೆಗಳು, ನ್ಯಾಯದ ಪ್ರಶ್ನೆಗಳು ಗೋಚರವಾಗತೊಡಗುತ್ತವೆ; ಈ ಪ್ರಶ್ನೆಗಳು ಮಾಸ್ಲೋವಾಳ ಪರ ಕಾನೂನು ಹೋರಾಟದಲ್ಲಿ ಮತ್ತೆ ಮತ್ತೆ ಜೈಲಿಗೆ ಭೇಟಿ ಕೊಡುವ ನೆಕ್ಲುಡೋಫ್‌ಗೂ ಅರ್ಥವಾಗತೊಡಗುತ್ತವೆ. ಮಾಸ್ಲೋವಾಳನ್ನು ಬಿಡಿಸುವ ಪ್ರಯತ್ನ ಕೈಗೂಡದೆ, ಅವಳ ಜೈಲುಶಿಕ್ಷೆ ಮುಗಿಯುವವರೆಗೂ ತಾನೂ ಸೈಬೀರಿಯಾದಲ್ಲಿದ್ದು, ನಂತರ ಅವಳನ್ನು ಮದುವೆಯಾಗಲು ಕೈದಿಗಳ ಜೊತೆಗೇ ಸೈಬೀರಿಯಾಕ್ಕೆ ಹೊರಡುತ್ತಾನೆ. ಆ ದೀರ್ಘ ಪ್ರಯಾಣದಲ್ಲಿ ಒಂದು ಕರ್ತವ್ಯಭ್ರಷ್ಟ ವ್ಯವಸ್ಥೆ ತಾನೇ ಜನರನ್ನು ಅಪರಾಧಿಗಳನ್ನಾಗಿಸಿ, ಶಿಕ್ಷೆ ಕೊಡುವ ಧೂರ್ತ ಮುಖಗಳು ಕಾಣತೊಡಗುತ್ತವೆ. ಕೊನೆಗೆ ಅಪೀಲೊಂದರಲ್ಲಿ ಮಾಸ್ಲೋವಾಗೆ ಬಿಡುಗಡೆ ದೊರೆತರೂ, ಬಿಡುಗಡೆಯಾಗಲೊಲ್ಲದೆ ಜೈಲಿನಲ್ಲೇ ಉಳಿಯುತ್ತಾಳೆ. ರಾಜಕೀಯ ಹೋರಾಟದಲ್ಲಿ ಭಾಗಿಯಾಗಿ ಸೈಬೀರಿಯಾ ಜೈಲಿಗೆ ಹೊರಟಿರುವ ಹೋರಾಟಗಾರನನ್ನೇ ಮದುವೆಯಾಗಲು ನಿರ್ಧರಿಸುವ ಮಾಸ್ಲೋವಾ, ನೆಕ್ಲುಡೋಫ್‌ಗೆ ವಿದಾಯ ಹೇಳುತ್ತಾಳೆ. ತಾರುಣ್ಯದಲ್ಲಿ ಸುಖ, ಸವಲತ್ತುಗಳನ್ನು ಅನುಭವಿಸಿ, ನಂತರ ವಿಷಾದ, ನಿರಾಶೆಗಳನ್ನು ಹಾದು ಹೋಗುತ್ತಿರುವ ನೆಕ್ಲುಡೋಫ್, ಟಾಲ್‌ಸ್ಟಾಯ್ ಸೃಷ್ಟಿಸಿದ ರಷ್ಯನ್ ಬುದ್ಧನಂತೆ ಕಾಣತೊಡಗುತ್ತಾನೆ.

ನೂರಿಪ್ಪತ್ತು ವರ್ಷಗಳ ಹಿಂದಿನ ಕಾದಂಬರಿಯೊಂದನ್ನು ಈಗ ಚರ್ಚಿಸಲು ಕಾರಣಗಳಿವೆ: ಕ್ರಾಂತಿಗಿಂತ ಹಿಂದಿನ ದಶಕಗಳ ರಷ್ಯನ್ ಸಮಾಜವನ್ನು ಪ್ರಾಮಾಣಿಕವಾಗಿ, ನಿಷ್ಠುರವಾಗಿ ನೋಡುತ್ತಿದ್ದ ಟಾಲ್‌ಸ್ಟಾಯ್ ಸ್ವಂತದ ಸುಳ್ಳುಗಳನ್ನು ಸೀಳಿ ನೋಡಿಕೊಂಡು, ತನ್ನ ವ್ಯಕ್ತಿತ್ವವನ್ನೇ ತೀವ್ರ ಪರೀಕ್ಷೆಗೆ ಒಳಪಡಿಸಿ, ಲೋಕವನ್ನೂ ಪರೀಕ್ಷಿಸಿದ; ತನ್ನ ಕಾಲದ ವಿರೋಧಾಭಾಸಗಳು, ನಿಯಂತ್ರಣ, ದಮನಗಳನ್ನು ಕಂಡು ಅವನು ಬರೆದ 'ರೆಸರೆಕ್ಷನ್' ಇವತ್ತಿನ ನೂರಾರು ದೇಶಗಳ ಸ್ಥಿತಿಗೆ ಹಿಡಿದ ಕನ್ನಡಿಯಂತಿದೆ.

ನೂರು ವರ್ಷಗಳ ಕೆಳಗೆ ಲೆನಿನ್, 'ಭೂಮಾಲೀಕ ವರ್ಗದ ವಿರೋಧಾಭಾಸಗಳನ್ನು ಅರಿಯಲು ಭೂಮಾಲೀಕ ಟಾಲ್‌ಸ್ಟಾಯ್ ಕಾದಂಬರಿಗಳನ್ನು ಓದಿ' ಎಂದು ಕಮ್ಯುನಿಸ್ಟ್ ಕಾರ್ಯಕರ್ತರಿಗೆ ಹೇಳಿದ್ದ. 'ಟಾಲ್‌ಸ್ಟಾಯ್ ರಷ್ಯನ್ ಕ್ರಾಂತಿಯ ಕನ್ನಡಿ' ಎಂದಿದ್ದ. ಇವತ್ತು ಈ ಕನ್ನಡಿ ಎಲ್ಲ ರೀತಿಯ ಆಳ್ವಿಕೆಗಳ ಕ್ರೌರ್ಯವನ್ನೂ ಬಿಂಬಿಸುವಂತಿದೆ. ಕಮ್ಯುನಿಸ್ಟ್ ದೇಶಗಳಾದ ಚೀನಾ, ರಷ್ಯಾ, ಕ್ಯೂಬಾಗಳಿರಲಿ, 'ಪ್ರಜಾಪ್ರಭುತ್ವ' ರಾಷ್ಟ್ರಗಳೆಂದುಕೊಂಡಿರುವ ಇಂಡಿಯಾ, ಅಮೆರಿಕ, ಇಸ್ರೇಲ್, ನೈಜೀರಿಯಾಗಳಿರಲಿ, ನಾಡನ್ನೇ ಜೈಲಾಗಿಸುವ ಕ್ರೂರ ಮನಸ್ಸುಗಳು ಎಲ್ಲೆಡೆ ಇರುತ್ತವೆ; ಜೊತೆಗೆ, ನಾಡನ್ನು ಪೊರೆಯುವ ತಲೆಮಾರುಗಳೂ ಸೃಷ್ಟಿಯಾಗುತ್ತಿರುತ್ತವೆ ಎಂಬುದನ್ನು ಕಾದಂಬರಿ ತೋರಿಸುತ್ತದೆ. ಶೇಕ್ಸ್‌ಪಿಯರ್ ನಂತರ ಜಗತ್ತಿನ ಬಹುದೊಡ್ಡ ಲೇಖಕನಾದ ಟಾಲ್‌ಸ್ಟಾಯ್ ಕೊಟ್ಟಿರುವ ಕನ್ನಡಿಯಲ್ಲಿ ತೆರೆದ ಮನಸ್ಸಿನಿಂದ ಇಣುಕಬಲ್ಲವರಿಗೆಲ್ಲ ತಂತಮ್ಮ ದೇಶಗಳ ನಗ್ನ ಸತ್ಯಗಳು, ಕ್ರೂರ ಮುಖಗಳು ಕಾಣಬಲ್ಲವು.



ಚುರುಮುರಿ



ಆಡಿಯೊ ತನಿಖೆ

• ಮಣ್ಣೆ ರಾಜು

'ಪಕ್ಷದ ಅಧ್ಯಕ್ಷರ ಆಡಿಯೊದ ಮೂಲ ಗಾಯಕರು ಯಾರು ಸಾರ್?...' ಮಾಧ್ಯಮದವರು ಜನನಾಯಕರಿಗೆ ಮುಗಿಬಿದ್ದರು.

'ತನಿಖೆ ಮಾಡ್ತೀವಿ, ಸತ್ಯಾಂಶ ಹೊರಬೀಳುತ್ತದೆ, ತಪ್ಪಿತಸ್ಥರು ಸಿಕ್ಕಿಬೀಳ್ತಾರೆ' ಅಂದ್ರು.

'ಆಡಿಯೊ ಹಿಂದೆ ಮೀರ್ ಸಾದಿಕ್ ಇದ್ದಾರೋ, ವೀರ ಸಾಧಕರು ಇದ್ದಾರೋ ಸಾರ್?'

'ಗೊತ್ತಿಲ್ಲ, ಯಾರೇ ಮಹಾನ್ ಸಾಧಕರು ಇದ್ದರೂ ಸುಮ್ಮನೇ ಬಿಡಲ್ಲ...' ನಾಯಕರು ಕೆರಳಿದರು.

'ಮಹಾ ನಾಯಕರನ್ನು ಮಣಿಸಲು, ಮಹಾ ನಾಯಕಿಯನ್ನು ತಣಿಸಲು ಈ ಆಡಿಯೊ ಮಾಡಲಾಗಿದೆಯಂತೆ, ಹೌದಾ ಸಾರ್?' ಸುದ್ದಿಗಾರ ಕೆಣಕಿದ. 'ಗೊತ್ತಿಲ್ಲಾರೀ...'

'ಆಡಿಯೊ ತನಿಖೆಯನ್ನು ಯಾವ ಧ್ವನಿತಜ್ಞರಿಗೆ ವಹಿಸ್ತೀರಿ ಸಾರ್?'

'ನಮ್ಮ ಪಾರ್ಟಿಯವರಿಗೂ ಅಲ್ಲ, ಆ ಪಾರ್ಟಿಯವರಿಗೂ ಅಲ್ಲ, ಥರ್ಡ್ ಪಾರ್ಟಿ ಇನ್ಸ್‌ಪೆಕ್ಷನ್‌ಗೆ ವಹಿಸ್ತೀವಿ'.

'ಥರ್ಡ್ ಪಾರ್ಟಿ ಅಂದ್ರೆ... ಜೆಡಿಎಸ್ಸಾ?'

'ಏನು ಪ್ರಶ್ನೆ ಅಂತ ಕೇಳ್ತೀರ್ರೀ?... ಅವರಿಗೆ ಯಾಕ್ರೀ ಒಪ್ಪಿಸಬೇಕು? ಅವರು ನಮ್ಮ ಪಾರ್ಟಿಯಿಂದ ಸಾಮಾಜಿಕ, ವೈಚಾರಿಕ ಅಂತರ ಕಾಪಾಡಿಕೊಂಡಿದ್ದಾರೆ' ನಾಯಕರು ರೇಗಿದರು.

'ಆಡಿಯೊ ಸಂಬಂಧದ ವಿಡಿಯೊ ಸಿಕ್ಕಿದೆಯಾ ಸಾರ್? ವಿಡಿಯೊದಲ್ಲಿ ವ್ಯಕ್ತಿಯನ್ನು ಗುರುತಿಸಬಹುದು, ರೇಡಿಯೊದಲ್ಲಿ ಧ್ವನಿ ಗುರುತಿಸೋದು ಕಷ್ಟ ಅಲ್ವಾ ಸಾರ್?'

'ರೇಡಿಯೋನೂ ಅಲ್ಲ, ಆಕಾಶವಾಣಿನೂ ಅಲ್ಲ, ಅದು ಅಶರೀರವಾಣಿ ಕಣ್ರೀ... ಸದ್ಯಕ್ಕೆ ವಾಣಿ ಸಿಕ್ಕಿದೆ, ತನಿಖೆ ನಂತರ ಶರೀರ ಪತ್ತೆಯಾಗುತ್ತದೆ. ತನಿಖೆ ಮುಗಿಸಿ ಆಡಿಯೊದ ಸತ್ಯಾಂಶಕ್ಕೆ ಕನ್ನಡಿಗರ ಎದುರು ಕನ್ನಡಿ ಹಿಡಿಯುತ್ತೇವೆ' ಎಂದರು ನಾಯಕರು.

'ಅದಕ್ಕೆ ಇನ್ನೆಷ್ಟು ದಿನ ಕಾಯಬೇಕು ಸಾರ್?'

'ನೀವು ಕಾಯಲೂಬೇಡಿ, ನನ್ನ ಹತ್ರ ಬರಲೂಬೇಡಿ, ತನಿಖೆಯ ಸಂಪೂರ್ಣ ಮಾಹಿತಿಯನ್ನು ನಾನೇ ಆಡಿಯೊ ಮಾಡಿ ನಿಮಗೆ ಕಳಿಸ್ತೀನಿ, ನೀವಿನ್ನು ಹೊರಡಿ...' ಎಂದು ನಾಯಕರು ಸುದ್ದಿಗಾರರನ್ನು ಸಾಗಹಾಕಿದರು.

ದಿನದ ಟ್ವೀಟ್

ಸಾವು ಸಾಬೀತುಪಡಿಸಬೇಕಿದೆ!



ಆಮ್ಲಜನಕದ ಕೊರತೆಯಿಂದ ಸಾವು ಸಂಭವಿಸಿಲ್ಲ ಎಂದು ಸರ್ಕಾರ ಹೇಳಿದರೆ, ಅದು ಸಹಜವೇ. ಕೋವಿಡ್– 19ರಿಂದ ಸಂಭವಿಸುವ ಸಾವನ್ನು ದಾಖಲೆಸಹಿತ ಪುರಾವೆಗಳು ಮತ್ತು ಪ್ರತ್ಯಕ್ಷದರ್ಶಿಗಳ ಮೂಲಕ ಸಾಬೀತುಪಡಿಸಬೇಕಾದ ಅವಶ್ಯಕತೆ ಬರಬಹುದು.

ಗಿರೀಶ್ ಅರೋರ, ಸಾಮಾಜಿಕ ಕಾರ್ಯಕರ್ತ

ಕಿಡಿನುಡಿ



ಮೇಕೆದಾಟು ಯೋಜನೆ ಆರಂಭವಾಗದು ಎಂಬ ಭರವಸೆಯನ್ನು ಕೇಂದ್ರ ಸರ್ಕಾರ ನೀಡಿರುವುದಾಗಿ ತಮಿಳುನಾಡು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಹೇಳಿದ್ದಾರೆ. ಹಾಗಿದ್ದರೆ, ಮೇಕೆದಾಟು ಯೋಜನೆ ವಿಚಾರದಲ್ಲಿ ಕೇಂದ್ರವು ಕರ್ನಾಟಕಕ್ಕೆ ಅಭಯ ನೀಡಿದೆ ಎಂಬ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಮತ್ತು ಬಿಜೆಪಿ ನಾಯಕರ ಹೇಳಿಕೆಗಳು ಸುಳ್ಳೆ? ಕೇಂದ್ರ ಹಾಗೂ ರಾಜ್ಯದಲ್ಲಿ ಒಂದೇ ಪಕ್ಷ ಅಧಿಕಾರದಲ್ಲಿದ್ದರೆ ಆಗುವ ಲಾಭ ಇದೇನಾ?

ಎಚ್.ಡಿ. ಕುಮಾರಸ್ವಾಮಿ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

25 ವರ್ಷಗಳ ಹಿಂದೆ

ಭಾನುವಾರ, 21-7-1996

• **ಬುಡಕಟ್ಟು ಸಮಸ್ಯೆ ಅಧ್ಯಯನಕ್ಕೆ ಆಯೋಗ**

ನವದೆಹಲಿ, ಜುಲೈ 20 (ಪಿಟಿಐ)– ಪರಿಶಿಷ್ಟ ಬುಡಕಟ್ಟು ವರ್ಗದವರ ಸಮಸ್ಯೆಗಳನ್ನು ಅರಿಯಲು ಸಂಯುಕ್ತರಂಗ ಸರ್ಕಾರವು ರಾಷ್ಟ್ರೀಯ ಮಟ್ಟದಲ್ಲಿ ಉನ್ನತ ಅಧಿಕಾರದ ಆಯೋಗವೊಂದನ್ನು ರಚಿಸಲಿದೆ.

ಈ ಸಂಬಂಧ ಎಲ್ಲಾ ರಾಜ್ಯಗಳ ಮುಖ್ಯಮಂತ್ರಿಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಆಡಳಿತಾಧಿಕಾರಿಗಳಿಗೆ ಪತ್ರ ಬರೆಯಲಾಗಿದೆ. ಆಯೋಗವು ಪರಿಶಿಷ್ಟ ವರ್ಗದವರ ಸದ್ಯದ ಪರಿಸ್ಥಿತಿ, ಸಮಸ್ಯೆ ಮತ್ತು ಅವರ ಆಶಯಗಳ ಕುರಿತು ವರದಿ ನೀಡಲಿದೆ ಎಂದು ಸಮಾಜ ಕಲ್ಯಾಣ ಖಾತೆಯ ಸಚಿವ ಬಲವಂತ ಸಿಂಗ್ ರಾಮೂವಾಲಿಯಾ ಅವರು ತಿಳಿಸಿದ್ದಾರೆ.

50 ವರ್ಷಗಳ ಹಿಂದೆ

ಬುಧವಾರ, 21-7-1971

• **ಪಕ್ಷಾಂತರಕ್ಕೆ ವೀರೇಂದ್ರ ಸೇರಿ ಹಲವರ ತವಕ**

ನವದೆಹಲಿ, ಜುಲೈ 20– ಸಂಸ್ಥಾ ಕಾಂಗ್ರೆಸ್ಸಿನ ಬಹುಪಾಲು ಎಲ್ಲ ಪ್ರಮುಖ ಘಟಾನುಘಟಿ ನಾಯಕರು ಆಡಳಿತ ಕಾಂಗ್ರೆಸ್ಸನ್ನು ಸೇರಿಕೊಳ್ಳಲು ಕಾತರದಿಂದಿರುವಂತೆ ಕಾಣುತ್ತದೆ.

ಇಂದಿರಾ ಗಾಂಧಿ ಅವರ ಪಕ್ಷಕ್ಕೆ ಸೇರಿಕೊಳ್ಳಲು ಆದಷ್ಟು ಲಾಭದಾಯಕ ಷರತ್ತುಗಳಿಗಾಗಿ ಅವರೆಲ್ಲ ವೈಯಕ್ತಿಕವಾಗಿ ಯತ್ನಿಸುತ್ತಿದ್ದಾರೆ. ಪಕ್ಷಾಂತರಕ್ಕೆ ಒಟ್ಟಿಗೆ ಸಂಧಾನ ನಡೆಸುವುದು ಅವರ ಅಪೇಕ್ಷೆಯಾಗಿತ್ತು. ಆದರೆ ಅದು ಕೈಗೂಡಲಿಲ್ಲ.

ಶ್ರೀಮತಿ ಗಾಂಧಿ ಅವರ ಪಕ್ಷದೊಡನೆ ಪುನರ್ಮಿಲನಕ್ಕೆ ತಮ್ಮ ಸತ್ ಪ್ರಭಾವ ಬೀರಬೇಕೆಂದು ಕೇಳಲು, ಮೈಸೂರಿನ ಮಾಜಿ ಮುಖ್ಯಮಂತ್ರಿ ವೀರೇಂದ್ರ ಪಾಟೀಲರು ಕೆಲವೇ ವಾರಗಳ ಹಿಂದೆ ಡಿ.ಪಿ. ಮಿಶ್ರಾ ಅವರನ್ನು ಸಂಧಿಸಿದ್ದರು.

ಯಾವ ನಿರ್ದಿಷ್ಟ ಆಶ್ವಾಸನೆಯನ್ನೂ ಕೊಡದೆ ಮಿಶ್ರಾ ಅವರು ಪಾಟೀಲರ ಅಪೇಕ್ಷೆಯನ್ನು ಇಂದಿರಾ ಗಾಂಧಿ ಅವರಿಗೆ ತಿಳಿಸಿದರು. ಇಲ್ಲಿನವರೆಗೆ ಶ್ರೀಮತಿ ಗಾಂಧಿ ಯಾವ ಉತ್ತರವನ್ನೂ ಕೊಟ್ಟಿಲ್ಲ.

ಸಂಗತ

ಮೈಮೇಲೆ ಬಂದೀತು 'ಮಾಹಿತಿ ದೇವರು'!

ಸುದ್ದಿ ಸುನಾಮಿಯಾದ ಮೊಬೈಲ್ ಫೋನ್‌ನ ಉಪಟಳ ಬಹುಮುಖಿ

• ಯೋಗಾನಂದ

ಹೋಟೆಲಿನಲ್ಲಿ ಆ ಯುವಕ ಕೇಸರಿಬಾತ್‌ಗೆ ಆರ್ಡರ್ ಮಾಡಿದ್ದ. ಪರಿಚಾರಕ ಮೇಜಿಗೆ ಅದನ್ನು ತಂದಿಡುವುದಕ್ಕೂ ಇವನ ಮೊಬೈಲು ರಿಂಗಣಿಸುವುದಕ್ಕೂ ಕಾಕತಾಳೀಯವಾಗಿತ್ತು. ಮುಂದೇನು ಗೊತ್ತಿದ್ದದ್ದೆ. ಸಂಭಾಷಿಸುತ್ತಲೇ ಯುವಕ ಸಿಹಿ ಸೇವಿಸಿದ. ಆದರೆ ಒಂದು ಐಬು. ಚಪ್ಪರಿಸಬೇಕಿದ್ದವ ತಿಂದ!


ಮಾಲ್‌ಗೆ ಬಂದ ನವದಂಪತಿಯ ಪಾಡು ಅದೇ. ಅವರವರ ಮೊಬೈಲ್ ದೆಸೆಯಿಂದ ಖರೀದಿ ಸುಖವನ್ನೇ ಮರೆತಿದ್ದರು. ಮೈಮೇಲೆ 'ದೇವರು' ಬರುತ್ತದೆ ಎನ್ನುತ್ತಾರೆ. ಅದರ ಸತ್ಯಾಸತ್ಯತೆ ಹೇಗೂ ಇರಲಿ. ಮೊಬೈಲಿನ ಅತಿ ಮೋಹಕ್ಕೆ ಬಿದ್ದರೆ 'ಮಾಹಿತಿ ದೇವರು' ಮೈಮೇಲೆ ಬರುವುದಂತೂ ಖರೆ.

ಈ 'ದೇವರು' ಯಾರಿಗಾದರೂ ಎಲ್ಲೇ ಆದರೂ ಹೇಗೇ ಇದ್ದರೂ ಬರಬಹುದು. ವಾಹನಗಳನ್ನು ಚಲಾಯಿಸುವಾಗ ಬಂದರಂತೂ ಪರಿಣಾಮ ಘೋರ. ಮಾಹಿತಿಗಳು ಪುಂಖಾನುಪುಂಖವಾಗಿ ಹರಿದುಬರುತ್ತಿದ್ದರೆ ಒಂಟಿತನ ನೀಗುವುದೆನ್ನುವುದು ಹುಸಿ. ಹಾಗೆ ನೋಡಿದರೆ ಸುದ್ದಿ ಸುನಾಮಿಯಿಂದ ಒಬ್ಬಂಟಿತನ, ಉದ್ವೇಗ ಮತ್ತೂ ಹೆಚ್ಚುವುದು. ಆನೆಯಿಂದ ಆಳನ್ನು ರಕ್ಷಿಸುವವ ಒಬ್ಬನೇ, ದೃಶ್ಯ ಕ್ಲಿಕ್ಕಿಸುವವರು ಐವರು!

ಯಾವುದೇ ಸಾಧನ, ಪರಿಕರ ಒಳ್ಳೆಯದೂ ಅಲ್ಲ, ಕೆಟ್ಟದ್ದೂ ಅಲ್ಲ. ಒಳಿತು-ಕೆಡುಕು ಅದನ್ನು ಬಳಸುವುದನ್ನೇ ಅವಲಂಬಿಸಿದೆ. ಮನುಷ್ಯ ಸ್ವಭಾವತಃ ಚಿತ್ತಭ್ರಮಣೆ, ಮನಸ್ಸಿನ ಚಾಪಲ್ಯಕ್ಕೆ ಸುಲಭವಾಗಿ ಆಕರ್ಷಿತನಾಗುತ್ತಾನೆ. ಮಾದಕವಸ್ತು, ಜೂಜಿನಂತಹ ವ್ಯಸನಗಳಂತೆ ಮಾಹಿತಿ ದಾಹವೂ. ಮೈಮೇಲೆ ಬರುವ 'ಮಾಹಿತಿ ದೇವರ' ಉಪಟಳ ಬಹುಮುಖಿ. ಪ್ರಥಮತಃ ಎದುರಿಗಿರುವವರು ದೂರವಾಗಿ, ದೂರವಿರುವವರು ಹತ್ತಿರವಾಗಿರುತ್ತಾರೆ! ತನ್ನ ಕುಟುಂಬದವರೊಂದಿಗೆ ಹೆಚ್ಚಿನ ಸಮಯವಿದ್ದರೆ ಅಸೂಯೆಯಿರಬೇಕು ಈ 'ದೈವ'ಕ್ಕೆ. ರಕ್ತದೊತ್ತಡ ಏರಿಕೆ, ನಿದ್ರಾಹೀನತೆ, ಮುಖಚರ್ಯೆಯಲ್ಲಿ ಅತಿ ಹಿಗ್ಗು ಅಥವಾ ಅತಿ ಕುಗ್ಗು ಎದ್ದುಕಾಣುವುದು. ಬೆರಳ ತುದಿಯಿಂದ ಕೊನೆಗಾಣದ ಮೆಸೇಜ್‌ಗಳನ್ನು ಇಳಿಬೀಳಿಸುವಾಗಲಂತೂ ವ್ಯಕ್ತಿ ಅದೃಶ್ಯ ಜಾದೂಗಾರ ನಿಯಂತ್ರಿಸುವ ಮಾಯಾ ದರ್ಪಣದ ಮುಂದೆ ಗರಬಡಿದಂತೆ ತೋರುತ್ತಾನೆ. ದೈಹಿಕ ಮತ್ತು ಮಾನಸಿಕ ಆರೋಗ್ಯ ಹದಗೆಡುವುದು. ಕರೆ ರವಾನೆ, ಸ್ವೀಕಾರ ಹೊರತಾಗಿ ಯಾವುದೇ ಸಂಗತಿಗಳಲ್ಲಿ ಆಸಕ್ತಿ ಕುಂದುತ್ತದೆ. ದೃಷ್ಟಿದೋಷ, ಆಯಾಸ, ಕುತ್ತಿಗೆ, ಬೆನ್ನು, ಮಣಿಕಟ್ಟಿನಲ್ಲಿ ನೋವು ಕಾಣಿಸಿಕೊಳ್ಳುತ್ತದೆ. ವ್ಯಕ್ತಿ ಯಾವ ಹಂತ ತಲುಪಬಹುದೆಂದರೆ, ನಿಮಿಷ ಮೊಬೈಲ್ ರಿಂಗಣಿಸದಿದ್ದರೆ ತಾನೇ ಕರೆ ಮಾಡಿ ಹಲೋ ಎನ್ನಬಹುದು! ಅತ್ತ ಕರೆ ಸ್ವೀಕರಿಸಿದವರಿಗೂ ಇದೇ ಬಗೆಯ 'ದೇವರು' ಮೈಮೇಲಿರುತ್ತದೆಂದು ಬೇರೆ ಹೇಳಬೇಕಿಲ್ಲ.

ಅಂದಹಾಗೆ ಅತ್ತ ಕಡೆಯವರು ಎಲ್ಲ ಅಗತ್ಯ ವಿವರ ನೀಡಿದ್ದರೂ ಇತ್ತ ಕಡೆಯಿಂದ ಮತ್ತೆ ಮತ್ತೆ 'ಇನ್ನೇನು?', 'ಆಮೇಲೆ ಫೋನಾಯಿಸುವೆ', 'ಫೋನ್ ಮಾಡು' ಮುಂತಾದ ಉದ್ಗಾರಗಳು ನಿಲ್ಲುವುದೇ ಇಲ್ಲ. ವಿಜ್ಞಾನ ಅಂಗೈನಲ್ಲಿ ವಿಶ್ವದರ್ಶನ ಮಾಡಿಸಿಕೊಟ್ಟಿದೆ. ಅತಳ, ವಿತಳ, ಪಾತಾಳದಲ್ಲಿ ಯಾವುದೇ ಸುದ್ದಿ ಅಡಗಿರಲಿ ಬೆಳಕಿನಷ್ಟೇ ವೇಗದಲ್ಲಿ ನಮ್ಮತ್ತ ಲಗ್ಗೆಯಿಡುವುದು ಸರಿ. ಆದರೆ ರಾಶಿ ರಾಶಿ ಕಥೆ, ಕಗ್ಗ, ಅಂಕಿಅಂಶಗಳನ್ನೆಲ್ಲ ಇಟ್ಟುಕೊಂಡು ಮಾಡಬೇಕಾದ್ದೇನು? ಒಂದು ದಿನದಲ್ಲಿ ಇಪ್ಪತ್ತನಾಲ್ಕು ತಾಸುಗಳು ಮಾತ್ರ ತಾನೆ?

ಸಾಮಾಜಿಕ ಜಾಲತಾಣದಲ್ಲಿ ಮುಳುಗಿದ್ದರೆ ನಾಳೆಗಳ ಬಗೆಗಿನ ಅಮೂಲ್ಯ ಯೋಜನೆ, ಕನಸುಗಳು ಕಳೆದು ಹೋಗುತ್ತವೆ. ಬೆಳಕಿಲ್ಲದ ಹಾದಿಯಲ್ಲಾದರೂ ಸಾಗಬಹುದು. ಆದರೆ ಕನಸಿಲ್ಲದ ಹಾದಿಯಲ್ಲಿ? ವಿಶ್ವಮಾನ್ಯ ವಿಜ್ಞಾನಿ ಆಲ್ಬರ್ಟ್ ಐನ್‌ಸ್ಟೀನ್ 'ತಂತ್ರಜ್ಞಾನವು ಮನುಷ್ಯರ ಪರಸ್ಪರತೆಯನ್ನು ಹಿಂದಿಕ್ಕಿ, ಜಗತ್ತು ಎಲ್ಲಿ ಮೂರ್ಖರ ಪೀಳಿಗೆ ಹೊಂದೀತೋ ಎನ್ನುವ ಆತಂಕ ನನಗೆ' ಎಂದಿದ್ದರು. ಅವರು ಕಾಲವಾದ ಏಳು ದಶಕಗಳೊಳಗೆ ಅವರು ಪಟ್ಟ ಭಯಕ್ಕೆ ಸಮರ್ಥನೆಯೇ?



ಮಾಹಿತಿ ದೇವರಿಂದ ಮುಕ್ತರಾಗುವುದು ತ್ರಾಸ, ಆದರೆ ಸಾಧ್ಯ. ಮೊಬೈಲ್ ಹೊರತಾಗಿ ದಿನಮಾನಗಳನ್ನು ಅನುಸಂಧಾನಿಸುವಂತೆ ಮೆದುಳನ್ನು ತರಬೇತುಗೊಳಿಸುವುದೇ ರಾಜಮಾರ್ಗ. ಮುಖ್ಯವಾದ ಕಾರ್ಯಗಳಲ್ಲಿ ತೊಡಗುವಾಗ ಮೊಬೈಲ್ ಆಫ್ ಮಾಡುವುದೇನು ಘನ ಸಾಹಸವೇ? ಮೊಬೈಲ್ ಅನಿವಾರ್ಯವಾಗದ ಗಹನವಾದ ಅದೆಷ್ಟೋ ಕೆಲಸಗಳುಂಟು. ಹಾಗಾಗಿ ಹೊರಗೆ ಹೊರಡುವಾಗ ಅದನ್ನು ಸಾಧ್ಯವಾದಷ್ಟು ಮನೆಯಲ್ಲೇ ಇರಿಸಿದರೆ ಯೋಜಿತ ದಿನಚರಿ ಸರಾಗ. ಮೊದಲಿನ ಉತ್ತಮ ಹವ್ಯಾಸಗಳಲ್ಲಿ, ನೆರೆಹೊರೆಯವರೊಡನೆ ಉಭಯ-ಕುಶಲೋಪರಿಯಲ್ಲಿ, ವ್ಯಾಯಾಮದಲ್ಲಿ, ಓದು ಬರಹದಲ್ಲಿ ತನ್ಮಯರಾದರೆ 'ಮಾಹಿತಿ ದೇವರು' ನಿಸ್ಸಂದೇಹವಾಗಿ ಶಾಂತವಾಗುವುದು. ತುರ್ತು ಸಂದರ್ಭಗಳಿದ್ದಾಗ್ಯೂ ಇಷ್ಟು ನಿಮಿಷ ಎಂದು ಟೈಮರ್ ನಿಗದಿಪಡಿಸಿಕೊಂಡರೂ ಆಯಿತು, ಬಳಕೆ ನಿಯಂತ್ರಿಸಬಹುದು.

ಗಮನಿಸಬೇಕಿದ್ದು ಇಲ್ಲೂ ಒಂದಿದೆ. ಮಾತೆಯೊಬ್ಬಳು ತನ್ನ ಕೂಸಿಗೆ ಮೊಲೆಯುಣಿಸುವ ಸಮಯಕ್ಕೆ ಸ್ಮಾರ್ಟ್ ಫೋನಿನಲ್ಲಿ ಅಲಾರ್ಮ್ ಇಟ್ಟಿರುತ್ತಾಳೆ. ಆಗಿದ್ದೇ ಬೇರೆ. ಅಲಾರ್ಮ್ ಸದ್ದಿಗೆ ಮಗು ಬೆದರುತ್ತದೆ. ಅದನ್ನು ಸಂತೈಸಲು ಆಕೆಗೆ ಅರ್ಧ ತಾಸೇ ಹಿಡಿಯುತ್ತದೆ. ಒಂದು ಮೌಲಿಕ ತೀರ್ಮಾನಕ್ಕೆ ಬರುತ್ತಾಳೆ: ಅರೆ! ಫೋನ್ ಎಷ್ಟೇ ಸ್ಮಾರ್ಟ್ ಆಗಲಿ, ಅದಕ್ಕೆ ಕರುಳಿಲ್ಲ. ತನಗಿದೆ. ಹಾಗಾಗಿ ನಾಳೆಯಿಂದ, ಜೈವಿಕ ಗಡಿಯಾರವಾದ ತಾನೇ ಮಮತೆಯಿಂದ ಕೂಸನ್ನು ಎಚ್ಚರಿಸುವೆ. 'ಮಾಹಿತಿ ದೇವರು' ಎರಗುವುದನ್ನು ತಪ್ಪಿಸಲು ಇದಕ್ಕೂ ಬೇರೆ ಸಂಕಲ್ಪವುಂಟೆ?

ವಾಚಕರ ವಾಣಿ

'ರಸಿಕ ಪಕ್ಷಿ'

'ಬರೆದಂತೆ ಬದುಕಿದರು ಈ ಕವಿ' (ವಾ.ವಾ., ಜುಲೈ 10). ಜಯವಂತ ಕಾಡದೇವರ ಅವರು ಬ.ಗಿ.ಯಲ್ಲಟ್ಟಿಯವರ ಬಗೆಗೆ ಬರೆದಿದ್ದಾರೆ. ನಾನು ಕಾಲೇಜು ವಿದ್ಯಾರ್ಥಿಯಾಗಿದ್ದಾಗಲೆ (ಸುಮಾರು 63 ವರ್ಷಗಳ ಹಿಂದೆ) ಯಲ್ಲಟ್ಟಿಯವರ 'ರಸಿಕ ಪಕ್ಷಿ' ಎಂಬ ಕವನ ಸಂಕಲನ ಹೊರಬಂತು. ಆ ಕಾಲಕ್ಕೆ ಅದೊಂದು ಗಮನಾರ್ಹ ಕೃತಿ (ಈಗ ಹೆಸರುವಾಸಿಯಾಗಿರುವ ಬಹುಮಂದಿ ಕವಿಗಳು ಆಗ ಎಲ್ಲಿದ್ದರು?).

ಕವಿ ಈಶ್ವರ ಸಣಕಲ್ಲರನ್ನು ನೆನಪಿಸುತ್ತಾರೆ, ಯಲ್ಲಟ್ಟಿ. ಸಣಕಲ್ಲರ ಪ್ರಸಿದ್ಧ ಸೂಕ್ತಿಯಿದು: 'ಜಗವೆಲ್ಲ ನಗುತಿರಲಿ, ಜಗದಳುವು ನನಗಿರಲಿ!'.

ಸಿ.ಪಿ.ಕೆ., ಮೈಸೂರು

ಬೇಕಾಗಿದೆ ಉರಗ ನಿರ್ವಹಣೆ ತರಬೇತಿ

ಹಾವು ಕಂಡರೆ ಭಕ್ತಿಗಿಂತ ಭಯವೇ ಹೆಚ್ಚು ನಮ್ಮಲ್ಲಿ. ಆಹಾರ ಸರಪಳಿಯ ಅತ್ಯಮೂಲ್ಯ ಕೊಂಡಿಯಾಗಿರುವ ಉರಗಗಳ ಕುರಿತು ಅಖಿಲೇಶ್ ಚಿಪ್ಪಳಿ ಅವರ ವಿಶ್ಲೇಷಣೆಯು (ಪ್ರ.ವಾ., ಜುಲೈ 17) ಜನಸಾಮಾನ್ಯರಲ್ಲಿನ ಆತಂಕಗಳನ್ನು ಕೆಲಮಟ್ಟಿಗಾದರೂ ದೂರ ಮಾಡುವಲ್ಲಿ ಸಹಕಾರಿಯಾಗಿದೆ. ಹಾವುಗಳಿಂದ ಕಚ್ಚಿಸಿಕೊಂಡವರು ಭಯ ಹಾಗೂ ಅಜ್ಞಾನದಿಂದ ಒಂದು ಕಡೆ ಸಾಯುತ್ತಿದ್ದರೆ, ಮತ್ತೊಂದೆಡೆ ವಿವೇಚನಾರಹಿತ ಅಭಿವೃದ್ಧಿ ಯೋಜನೆಗಳಿಂದ ಉರಗಗಳು ತಮ್ಮ ವಾಸಸ್ಥಾನಗಳನ್ನು ಕಳೆದುಕೊಳ್ಳುತ್ತಿರುವುದಲ್ಲದೆ, ಮಾನವನ ಕೈಯಲ್ಲಿ ಬಡಿಸಿಕೊಂಡೂ ನಶಿಸುತ್ತಿವೆ. ಆದರೂ ಅನೇಕ ವನ್ಯಜೀವಿ ಪ್ರೇಮಿಗಳು ಜನಸಾಮಾನ್ಯರಲ್ಲಿ ಅರಿವು ಮೂಡಿಸುವ ಮೂಲಕ ಹಾಗೂ ಹಾವುಗಳನ್ನು ಹಿಡಿದು ಸುರಕ್ಷಿತ ಸ್ಥಳಗಳಲ್ಲಿ ಬಿಡುವುದರೊಂದಿಗೆ ಮಾನವ ಹಾಗೂ ಉರಗಗಳ ನಡುವಿನ ಸಂಘರ್ಷವನ್ನು ಕಡಿಮೆ ಮಾಡುತ್ತಿದ್ದಾರೆ.

ಅಲ್ಲಲ್ಲಿ ಅರಣ್ಯ ಇಲಾಖೆಯಲ್ಲಿನ ಕೆಲ ಆಸಕ್ತ ಸಿಬ್ಬಂದಿಯು ಈ ದಿಸೆಯಲ್ಲಿ ಅತ್ಯುತ್ತಮ ಕಾಯಕ ನಿರ್ವಹಿಸುತ್ತಿದ್ದಾರೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಇಲಾಖೆಯ ಸುಮಾರು 25 ಸಿಬ್ಬಂದಿ ಹಾವುಗಳ ನಿರ್ವಹಣೆ ಮಾಡುವುದನ್ನು ಕಲಿತಿದ್ದಾರೆ. ಆದರೆ ರಾಜ್ಯದ ಇತರ ಜಿಲ್ಲೆಗಳಲ್ಲಿ ಈ ಕಾರ್ಯ ಪರಿಣಾಮಕಾರಿಯಾಗಿ ಇಲ್ಲವಾಗಿದೆ. ಅರಣ್ಯ ಇಲಾಖೆ ಅಷ್ಟೇ ಅಲ್ಲದೆ ಕೃಷಿ, ತೋಟಗಾರಿಕೆ, ನಗರಾಭಿವೃದ್ಧಿ ಹಾಗೂ ಪ್ರವಾಸೋದ್ಯಮದಂತಹ ಇಲಾಖೆಗಳು ತಮ್ಮ ಆಯ್ದ ಸಿಬ್ಬಂದಿಗೆ ಉರಗಗಳ ನಿರ್ವಹಣೆ ತರಬೇತಿಯನ್ನು ತುರ್ತಾಗಿ ನೀಡಬೇಕಾಗಿದೆ.

ಮಹಾಂತೇಶ ಗಂಗಯ್ಯ ಓಶಿಮಠ, ಕೈಗಾ

ಮೌಖಿಕ ರೂಪದ ನಿಯಮ

ಬೋಧಕಿಯರ ವಸ್ತ್ರಸಂಹಿತೆ ಕುರಿತು ಚಿಕ್ಕಮಗಳೂರಿನ ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕರು ವಿವೇಕಯುತ ಸುತ್ತೋಲೆ ಹೊರಡಿಸಿರುವುದನ್ನು ಶ್ಲಾಘಿಸಲಾಗಿದೆ (ಪ್ರ.ವಾ., ಜುಲೈ 19). ಈಗಲೂ ಶಾಲೆಗಳಲ್ಲಿ ಶಿಕ್ಷಕಿಯರು ಸೀರೆ ತೊಟ್ಟು ಬರಬೇಕೆಂಬ ನಿಯಮವಿದೆ. ಇದು ಲಿಖಿತ ರೂಪದಲ್ಲಿ ಇಲ್ಲ. ಹಾಗೆ ಮಾಡಿದರೆ ಸಂವಿಧಾನದ ಪ್ರಕಾರ ಸ್ವಾತಂತ್ರ್ಯವನ್ನು ಕಸಿದುಕೊಂಡಂತಾಗುತ್ತದೆ. ಹೀಗಾಗಿ ಇದು ಮೌಖಿಕ ರೂಪದಲ್ಲಿ ಇರುತ್ತದೆ.

ಶಿಕ್ಷಕಿಯರ ಉಡುಗೆ ತೊಡುಗೆ ಮಕ್ಕಳ ಮೇಲೆ ಪ್ರಭಾವ ಬೀರುತ್ತವೆ ಎಂಬುದು ಕೆಲವರ ವಾದ. ಎಲ್ಲ ಕ್ಷೇತ್ರಗಳಲ್ಲೂ ಆಧುನಿಕತೆಯನ್ನು ಬಯಸುತ್ತಿರುವ ನಾವು ಹೊಸ ಶಿಕ್ಷಣ ನೀತಿಯನ್ನು ಜಾರಿಗೆ ತಂದಿದ್ದೇವೆ. ಆನ್‌ಲೈನ್ ಕಲಿಕೆಗೆ ಹೊಂದಿಕೊಳ್ಳುತ್ತಿದ್ದೇವೆ. ಹೀಗಿರುವಾಗ ಶಿಕ್ಷಕಿಯರು ಉಡುಗೆಯ ಶೈಲಿ ಬದಲಿಸಿಕೊಳ್ಳುವುದರಲ್ಲಿ ತಪ್ಪಿಲ್ಲ. ಹಾಗೆಂದು ಇಷ್ಟ ಬಂದ ಹಾಗೆ ಬಟ್ಟೆ ತೊಡುವುದು ಅಂತಲ್ಲ. ಶಿಕ್ಷಕಿಯರಿಗೆ ತಾವು ಯಾವ ಸ್ಥಳದಲ್ಲಿ ಇದ್ದೇವೆ ಹಾಗೂ ತಮ್ಮನ್ನು ಮಕ್ಕಳು ಅನುಸರಿಸುತ್ತಾರೆ ಎಂಬ ಸಾಮಾಜಿಕ, ವೈಯಕ್ತಿಕ ಪರಿಜ್ಞಾನವಿರಬೇಕು.

ಸ್ನೇಹಾ ರೆಡ್ಡಿ, ಜಮಖಂಡಿ

ಮಕ್ಕಳ ಮೇಲಿನ ಒತ್ತಡ ಕಡೆಗಣಿಸುವಂತಿಲ್ಲ

ನಿರ್ಮಾಣ ಹಂತದಲ್ಲಿರುವ ಕಟ್ಟಡವೊಂದರಿಂದ 'ಹೊಡಿ ಹೊಡಿ, ತಲೆಗೆ ಹೊಡಿ, ಹ್ಞಾಂ ತೆಳಗ ಬಾ ಹೊಡಿ' ಎಂದು ನಾಲ್ಕಾರು ಕೂಗುಗಳು ಮೊಳಗುತ್ತಿದ್ದವು. ಯಾವುದೋ ಮಾರಾಮಾರಿ ನಡೆಯುತ್ತಿರಬಹುದು ಎಂದು ಅನ್ನಿಸಿ ಆತಂಕದಿಂದ ನೋಡಹೋದರೆ, ಎಂಟ್ಹತ್ತು ಶಾಲಾ ಮಕ್ಕಳು ಸುತ್ತಣ ಪರಿಸರವನ್ನು ಮರೆತು ಮೊಬೈಲ್ ಗೇಮ್‌ನಲ್ಲಿ ತಲ್ಲೀನರಾಗಿದ್ದರು! ಮೇಲ್ನೋಟಕ್ಕೆ ಇದೊಂದು ತಮಾಷೆಯ ಸಂಗತಿಯಂತೆ ಕಂಡರೂ ಮಕ್ಕಳ ಮನಸ್ಸಿನ ಮೇಲೆ ಬೀಳುತ್ತಿರುವ ಒತ್ತಡಗಳನ್ನು ಕಡೆಗಣಿಸುವಂತಿಲ್ಲ. ಹದಿವಯಸ್ಸಿನ ಮಕ್ಕಳದು ಸದಾ ಹೊಯ್ದಾಡುವ ಮನಃಸ್ಥಿತಿ. ಪೋಷಕ- ಶಿಕ್ಷಕ ಮತ್ತು ಸಮಾಜದಿಂದ ಬರುವ ಒತ್ತಡಗಳ ಜೊತೆಗೆ ವಯೋಸಹಜ ಒತ್ತಡಗಳೂ ಸೇರಿ ಅವರ ಮನಸ್ಸು ಸದಾ ವ್ಯಘ್ರವೂ ತೀವ್ರ ಸ್ಪಂದನಕಾರಿಯೂ ಆಗಿರುತ್ತದೆ. ಬಹುಶಃ ಈ ಒತ್ತಡದಿಂದ ಹೊರಜಾರುವ ಯತ್ನದಲ್ಲಿ ಮೊಬೈಲ್ ಅವರಿಗೆ ಆಶಾಕಿರಣದಂತಾಗಿದೆ. ಆದರೆ ಇದೇ ಅವರಿಗೆ ಕುತ್ತು ತಂದರೇನು ಗತಿ? ಈಗ ಇವರನ್ನು ನಿರ್ಲಕ್ಷ್ಯ ಮಾಡಿದರೆ ಮುಂದೆ ಇದೇ ಮಕ್ಕಳು ತಪ್ಪು ದಾರಿ ಹಿಡಿದರೆ ಯಾರನ್ನು ದೂರುವುದು? ಹೇಗೆ ಸರಿಪಡಿಸುವುದು? ಇಂತಹ ಹಲವು ಜಟಿಲ ಸಮಸ್ಯೆಗಳಿಗೆ ಶೀಘ್ರದಲ್ಲಿ ಪರಿಹಾರ ಕಂಡುಕೊಳ್ಳಬೇಕಿದೆ.

ಮಹೇಶ್ವರ ಹುರುಕಡ್ಲಿ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

ಗಿಡ ನೆಡುವ ಸಮಸ್ಯೆ: ಬೇಕು ಮಾರ್ಗದರ್ಶನ

ಗಿಡ ನೆಡುವ ಕಾರ್ಯಕ್ರಮದ ಬಗ್ಗೆ ವಿಶ್ಲೇಷಿಸಿರುವ (ಪ್ರ.ವಾ., ಜುಲೈ 19) ಡಾ. ಸಂಜಯ್ ಗುಬ್ಬಿ ಅವರು ಈ ಕಾರ್ಯದಲ್ಲಿ ಜನರ ಪಾಲ್ಗೊಳ್ಳುವಿಕೆಯಿಂದ ಉಂಟಾಗುವ ಸಮಸ್ಯೆಗಳನ್ನು ಕೆಲವು ಉದಾಹರಣೆಗಳ ಮೂಲಕ ವಿವರಿಸಿದ್ದಾರೆ. ಲೇಖನ ಮಾಹಿತಿಯುಕ್ತವಾಗಿದೆ. ಆದರೆ ಜನಸಾಮಾನ್ಯರು ಏನು ಮಾಡಬೇಕು ಎಂಬ ವಿಚಾರವನ್ನು ಅವರು ತಿಳಿಸಿಲ್ಲ. ಈ ದಿಸೆಯಲ್ಲಿ ಅರಣ್ಯ ಅಧಿಕಾರಿಗಳು ಜನರಿಗೆ ಸೂಕ್ತ ಮಾರ್ಗದರ್ಶನ ಕೊಡಬಹುದಲ್ಲವೇ?

ನಗರಗಳ ಆಸುಪಾಸು ಗಿಡಗಳನ್ನು ನೆಟ್ಟ ಕೂಡಲೇ ಆ ಪ್ರದೇಶದ ಜೀವವೈವಿಧ್ಯ ನಾಶವಾಗುವುದೇ? ಹಾಗಾದರೆ ಅರಣ್ಯ ನಾಶದಿಂದಾಗುತ್ತಿರುವ ಜೀವವೈವಿಧ್ಯ ಹಾನಿಗೆ ಪರಿಹಾರೋಪಾಯಗಳೇನು? ಈ ವಿವರಗಳೂ ಇದ್ದಿದ್ದರೆ ಲೇಖನಕ್ಕೆ ಸಮಗ್ರತೆ ದಕ್ಕುತ್ತಿತ್ತು. ಜನಸಾಮಾನ್ಯರಿಂದ ವೈಜ್ಞಾನಿಕವಾಗಿ ಅರಣ್ಯ ನಿರ್ಮಿಸುವುದು ಸಾಧ್ಯವೇ ಎಂಬ ಪ್ರಶ್ನೆಯೂ ಏಳುತ್ತದೆ. ಆಲ, ಅರಳಿ, ಬಸರಿ ಮುಂತಾದ ಗಿಡಗಳು ರಾಜ್ಯದೆಲ್ಲೆಡೆ ಬೆಳೆಯುತ್ತವೆ. ಅವು ನೂರಾರು ಜೀವಿಗಳಿಗೆ ಆಶ್ರಯ ನೀಡುತ್ತವಲ್ಲವೇ? ಅಕೇಶಿಯಾ ಮತ್ತು ನೀಲಗಿರಿ ನೆಡುತೋಪುಗಳಿಂದ ಆಗುತ್ತಿರುವ ಹಾನಿಯ ವಿಶ್ಲೇಷಣೆ ಏನು?


ಡಾ. ಎಸ್.ಶಿಶುಪಾಲ, ದಾವಣಗೆರೆ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಸಹಕಾರಿ ರಂಗದ ಕಬ್ಜಾ ವನ ಸುಡುವ ಕಪಿಚೇಷ್ಟೆ



• ಕೆ.ಪಿ.ಸುರೇಶ



ಹೆಗ್ಗಣಕ್ಕೊಂದು ಸ್ವಭಾವವಿದೆ. ಬಿಲದಿಂದ ಹೊರಬಂದು ಏನು ಕಾಣುತ್ತೋ- ಗಡ್ಡೆ, ಬೇರು, ಮೊಟ್ಟೆ, ಏನೇ ಇರಲಿ- ಅದನ್ನು ಕೊರೆದು ಎತ್ತಿ ಹಾಕಿ ಕೆಡಿಸುವುದು. ಅದು ತನ್ನ ಸ್ವಭಾವ ಬಿಡದು. ಸಹಕಾರಿ ರಂಗವನ್ನು ನಿಯಂತ್ರಿಸುವ ಹೆಜ್ಜೆಯನ್ನು ಕೇಂದ್ರ ಸರಕಾರ ಇಟ್ಟು ಅದಕ್ಕೆ ತನ್ನ ನಂ. 2 ಅಮಿತ್ ಶಾ ಅವರನ್ನೇ ಸಚಿವರಾಗಿ ನೇಮಿಸಿದಾಗ ಬೇಡವೆಂದರೂ ಇದು ನೆನಪಾಯಿತು.

ಈಗಾಗಲೇ ನ್ಯಾಯಾಂಗ, ಕಾರ್ಯಾಂಗ, ತನಿಖಾ ಸಂಸ್ಥೆ ಇತ್ಯಾದಿಗಳನ್ನು ಸರ್ಕಾರಕ್ಕೆ 'ಸಹಕಾರ' ನೀಡುವಂತೆ ಮಣಿಸಿರುವ ಅಮಿತ್ ಶಾ ಈಗ ಸಹಕಾರಿ ಸಚಿವರಾಗಿರುವುದು ಉಚಿತವೇ ಆಗಿದೆ. ಸಂವಿಧಾನದ ಪ್ರಕಾರ ರಾಜ್ಯದ ಪಟ್ಟಿಯಲ್ಲಿರುವ ಈ ರಂಗವನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳುವ ಕೇಂದ್ರ ಸರ್ಕಾರದ ನಿರ್ಧಾರ ಅನಿರೀಕ್ಷಿತವೇನಲ್ಲ. ಇದು ಒಂಟಿ ನಿರ್ಧಾರವೂ ಅಲ್ಲ. ಈಗಾಗಲೇ, ಕೃಷಿಯಂಥಾ ರಾಜ್ಯ ಪಟ್ಟಿಯ ಕ್ಷೇತ್ರದಲ್ಲಿ ಕೇಂದ್ರ ಕಾನೂನುಗಳನ್ನು ಜಾರಿ ಮಾಡಿ, ಅದಕ್ಕೆ ಪೂರಕವಾಗುವಂತೆ ಈ ನಿಯಂತ್ರಣದ ಹೆಜ್ಜೆ ಇರಿಸಿದೆ. ಆದರೆ 97ನೇ ಸಂವಿಧಾನ ತಿದ್ದುಪಡಿಯಲ್ಲಿ ಅಡಕಗೊಳಿಸಿದ್ದ ಅಂಶಗಳನ್ನು ಅಸಿಂಧುಗೊಳಿಸಿರುವ ಸುಪ್ರೀಂ ಕೋರ್ಟಿನ ಕ್ರಮ, ಮೋದಿ ಸರ್ಕಾರಕ್ಕೆ ಅಪಶಕುನವಾಗಿ ಪರಿಣಮಿಸಿದೆ.

ಖಾಸಗೀಕರಣ, ಜಾಗತೀಕರಣದ ಕಾರ್ಯಸೂಚಿಗೆ ಒಂದು ವಿನ್ಯಾಸ ಇದೆ. ಸರ್ಕಾರಿ ನಿಯಂತ್ರಣ ಅಥವಾ ನಿರ್ವಹಣೆಯಲ್ಲಿರುವ ವ್ಯವಸ್ಥೆ ಅಥವಾ ಸಂಸ್ಥೆಗಳನ್ನು ದುರ್ಬಲಗೊಳಿಸಿ ಕಡಿಮೆ ಎನಿಸುವ ದಿಕ್ಕಿನಲ್ಲಿ ಇದಕ್ಕೆ ಪಯಣವಾಗಿ ಖಾಸಗೀಕರಣವನ್ನು ನೆಲಗೊಳಿಸುವುದು ಲಾಗಾಯ್ತಿನಿಂದ ಬಂದಿರುವ ರೂಢಿ. ಸರ್ಕಾರಕ್ಕೆ ಆದ ಈ ಸಂಸ್ಥೆಗಳು ಅಥವಾ ಕ್ಷೇತ್ರಗಳಲ್ಲಿ ಭ್ರಷ್ಟತೆ ಮತ್ತು ಅದಕ್ಷತೆ ಇದೆ ಎಂದಾದಲ್ಲಿ ಅದು ತನ್ನ ಆಡಳಿತ ಲೋಪದ ಪುರಾವೆಯೇ ವಿನಾ ಸಂಸ್ಥೆಯ ಅಥವಾ ವ್ಯವಸ್ಥೆಯ ಸಂರಚನಾತ್ಮಕ ದೋಷವಾಗಲು ಸಾಧ್ಯವಿಲ್ಲ. ತನ್ನದೇ ಆಡಳಿತ ಯಂತ್ರವನ್ನು ತಿದ್ದುವ ಸಂಕಲ್ಪ ಬಲ ಇಲ್ಲದಿರುವ ಸರ್ಕಾರವು ದೇಶದ ಗತಿ ಬದಲಾಯಿಸುತ್ತದೆಂದು ಹೇಗೆ ನಂಬುವುದು?

ಈ ವೈರುಧ್ಯಕ್ಕೆ ಯಾವ ಸರ್ಕಾರವೂ ಅಪವಾದವಲ್ಲ. ಇರಲಿ. ಸಹಕಾರಿ ಕ್ಷೇತ್ರ ಭ್ರಷ್ಟಾಚಾರದ ಕೂಪವಾಗಿದೆ, ರಾಜಕಾರಣಿಗಳ ಅಡ್ಡೆಯಾಗಿದೆ ಇತ್ಯಾದಿ ಆರೋಪಗಳಲ್ಲಿ ಸತ್ಯವಿದೆ. ಇರುವ ನಿಯಮಗಳ ಲೋಪವನ್ನು ಬಳಸಿ ಅಥವಾ ಅದನ್ನು ಮೀರಿ ಇಂಥಾ ಪ್ರಕ್ರಿಯೆ ನಡೆಯುತ್ತದೆ.

ನಿಯಮಾವಳಿಗಳನ್ನು ನೋಡಿದರೆ ಅದರಲ್ಲಿ ದೋಷವಿದೆ ಎಂಬುದನ್ನು ಯಾರೂ ತಳ್ಳಿಹಾಕಲು ಸಾಧ್ಯವಿಲ್ಲ; ಹೆಚ್ಚೆಂದರೆ ಕಾಲಕ್ಕೆ ತಕ್ಕಂತೆ ಕೆಲವು ಬದಲಾವಣೆ ಅಥವಾ ಸೇರ್ಪಡೆ ಮಾಡಬಹುದೆಂಬ ಮಾತು ಬಿಟ್ಟರೆ ಅನ್ಯ ದೋಷಾರೋಪಣೆ ಏನೂ ಇಲ್ಲ.

ದೇಶದಲ್ಲಿ 98 ಸಾವಿರ ಸಹಕಾರಿ ಸಂಸ್ಥೆಗಳಿದ್ದು ಅದರಲ್ಲಿ 97 ಸಾವಿರ ಸಂಸ್ಥೆಗಳು ಗ್ರಾಮೀಣ ಕೃಷಿ ಸಹಕಾರಿಗಳೇ! ಎರಡು ಶೇಕಡಾದಷ್ಟು ಮಾತ್ರ ನಗರ ಸಹಕಾರಿಗಳಿವೆ. ಸಾಲ ನೀಡಿಕೆಯ ಸಹಕಾರಿಗಳಲ್ಲಿರುವ ಸಂರಚನಾತ್ಮಕ ವ್ಯವಸ್ಥೆಯೇ ಬೇರೆ, ಸಂಗ್ರಹ-ಮಾರುಕಟ್ಟೆಯ ಹೊಣೆಗಾರಿಕೆ ಇರುವ ಕ್ಯಾಂಪ್ಕೋ, ಕೆ.ಎಂ.ಎಫ್. ಸಹಕಾರಿಗಳ ಸಂರಚನೆಯೇ ಬೇರೆ. ಈಗ ಈ ಅಮಿತ್ ಶಾ ಯಾವುದನ್ನು 'ಬಲಪಡಿಸುವ' ಗುರಿ ಪಡೆದಿದ್ದಾರೆ ಎಂಬುದು ಇನ್ನೂ ನಿಗೂಢ.

ಆದರೆ ಸರ್ಕಾರ ಮುಂದಿಟ್ಟಿರುವ ಟೀಸರ್‌ನಲ್ಲಿ, ವ್ಯವಹಾರ ಸುಗಮಗೊಳಿಸುವ ವ್ಯವಸ್ಥೆ ಎಂಬ ಪದ ಪುಂಜ ಇದೆ. ಈ 'ಈಸ್ ಆಫ್ ಡೂಯಿಂಗ್ ಬ್ಯುಸಿನೆಸ್' ಎಂಬುದೇ ಕಾರ್ಪೊರೇಟ್ ನುಸುಳುವಿಕೆಗೆ ಇರುವ ಸಂಕೇತ ಪದಪುಂಜ. ಈ ನಿಯಂತ್ರಣದ ಹವಣಿಕೆಯ ಹಿಂದೆ ಏನೇನು ಧ್ಯಾನವಿದೆ ಎಂಬುದನ್ನು ನೋಡೋಣ.

ಇವೆಲ್ಲಾ ಆಕಸ್ಮಿಕ ಅಲ್ಲ

ಮೊನ್ನೆ, ಕೃಷಿ ಮಾರುಕಟ್ಟೆ ಬಲಪಡಿಸಲು ಎ.ಪಿ.ಎಂ.ಸಿ. ಕಾಯ್ದೆ, ಅಷ್ಟೇ ಅಲ್ಲ ಕೃಷಿ ಸಹಕಾರಿ ಬ್ಯಾಂಕುಗಳಿಗೂ ಮೂಲಸಂರಚನೆ ನಿರ್ಮಾಣಕ್ಕೆ ಧನ ಪ್ರಾಪ್ತಿ ಯೋಗ ಕರುಣಿಸುವುದಾಗಿ ಕೇಂದ್ರ ಸರ್ಕಾರ ಹೇಳಿದೆ. ಆದರೆ ಇದರಲ್ಲೊಂದು ಕೊಕ್ಕೆ ಇದೆ. ಈ ಧನ ರಾಶಿ ಸಾಲವೇ ಹೊರತು, ಅನುದಾನವಲ್ಲ. ಕೋಟಿಗಟ್ಟಲೆ ಸಾಲ ಮಾಡುವ ಶಕ್ತಿ ಈ ಸಹಕಾರಿಗಳಿಗೆ ಇರುವುದು ಸಂಶಯ. ಆದರೆ ಈ ಸಾಲ ಪಡೆದು ಮೂಲ ಸಂರಚನೆ ಸೃಷ್ಟಿಸುವಂತೆ ಕೇಂದ್ರದಿಂದ ಒತ್ತಡ ಬರುವುದು ಖಚಿತ. ವಿದ್ಯುತ್ ರಂಗದ ಸುಧಾರಣೆಗೆ ಕೇಂದ್ರ ಹಾಕಿರುವ ಶರತ್ತುಗಳನ್ನು ನೆನಪಿಸಿಕೊಳ್ಳಿ.

ಈಗ ಕಾರ್ಪೊರೇಟ್ ಪ್ರವೇಶಕ್ಕೆ ಹೊಸ ಕಾಯ್ದೆ ಅನುವು ಮಾಡಿಕೊಟ್ಟಿದೆಯಾದರೂ ಯಾವ ಕಾರ್ಪೊರೇಟ್ ಸಂಸ್ಥೆ ಕೂಡಾ ತಾನಾಗಿಯೇ ಹಳ್ಳಿಗಳಿಗೆ ನುಗ್ಗಿ ಸಂಗ್ರಹಿಸುವ ಗೋಜಿಗೆ ಹೋಗುವುದಿಲ್ಲ. ಇದನ್ನು ಮಾಡಲು ಸಂಸ್ಥೆಗಳು ಬೇಕಾಗಿವೆ. ಈಗಾಗಲೇ ಸಹಕಾರಿ ಸಂಸ್ಥೆಗಳು, ರೈತ ಉತ್ಪಾದಕ ಸಂಘಗಳು ಈ ಸಂಗ್ರಾಹಕ ಪಾತ್ರ ವಹಿಸಲು ಸರ್ಕಾರ ಪರವಾನಗಿ ಕೊಟ್ಟಿದೆಯಷ್ಟೇ ಅಲ್ಲ, ಅದನ್ನು ಪ್ರೋತ್ಸಾಹಿಸುತ್ತಿದೆ.

ಆದ್ದರಿಂದ ಅಮಿತ್ ಶಾ ಅವರಿಗೆ ನೀಡಲಾಗಿರುವ ಸುಪಾರಿ ಎರಡಂಶಗಳ ಕಾರ್ಯಸೂಚಿ ಎಂದು ಖಚಿತವಾಗಿ ಊಹಿಸಬಹುದು.

1. ಈ ಎಲ್ಲಾ ಸಹಕಾರಿ ಸಂಸ್ಥೆಗಳನ್ನು ನಿಯಮಾವಳಿ ಮತ್ತು ಅನುದಾನಗಳ ಮೂಲಕ ನಿಯಂತ್ರಿಸಿ ಅವು ಕಾರ್ಪೊರೇಟ್‌ಗಳ ಕೃಷಿ ವ್ಯವಹಾರಗಳ ಮಧ್ಯವರ್ತಿ/ ಸೂಲಗಿತ್ತಿಯಾಗುವಂತೆ ರೂಪಾಂತರಿಸುವುದು. 2. ಮಹಾರಾಷ್ಟ್ರ, ಕರ್ನಾಟಕ ಮುಂತಾದ ರಾಜ್ಯಗಳಲ್ಲಿ ಬೇರು ಮಟ್ಟದ ರಾಜಕೀಯ ನಿಯಂತ್ರಣದ ಸ್ವರೂಪ ಈ ಸಹಕಾರಿ ಸಂಸ್ಥೆಗಳಿಗಿದ್ದು ಅದನ್ನು ಒಡೆದು ಅವುಗಳನ್ನು ಸಂಪೂರ್ಣ ತನ್ನ ಪಕ್ಷ ಮೂಲ ರಾಜಕೀಯದ ಸಂಸ್ಥೆಯಾಗಿ ರೂಪಾಂತರಿಸುವುದು.

ಇದರೊಂದಿಗೆ ಇನ್ನೊಂದು ದೂರಗಾಮಿ ಯೋಜನೆಯೂ ಇದೆ. ಈಗ ರಾಷ್ಟ್ರೀಕೃತ ಬ್ಯಾಂಕುಗಳಿಗೆ ಕೃಷಿಯಂಥಾ ಆದ್ಯತಾ ವಲಯಕ್ಕೆ ನಿರ್ದಿಷ್ಟ ಪ್ರಮಾಣದ ಸಾಲ ನೀಡುವ ಹೊಣೆಗಾರಿಕೆಯಿದೆ. ಇದು ರಗಳೆಯ ವ್ಯವಹಾರ! ಇಡೀ ಕೃಷಿ ಸಾಲನೀಡಿಕೆಯನ್ನು ಸಹಕಾರಿ ರಂಗಕ್ಕಷ್ಟೇ ಸೀಮಿತಗೊಳಿಸಿ ಬ್ಯಾಂಕುಗಳನ್ನು ಈ ಹೊಣೆಗಾರಿಕೆಯಿಂದ ಮುಕ್ತಗೊಳಿಸಿದರೆ ಬ್ಯಾಂಕುಗಳನ್ನು ಖಾಸಗೀಕರಣಗೊಳಿಸಿ ಕಾರ್ಪೊರೇಟ್ ಸಾಲ ನೀಡಿಕೆಯ ತೂಬುಗಿಂಡಿಯಾಗಿಸುವುದು ಸುಲಭ. ಸತತವಾಗಿ ರಾಜ್ಯ ಪಟ್ಟಿಯ ಕ್ಷೇತ್ರಗಳನ್ನು ಕಬ್ಜಾ ಮಾಡುತ್ತಾ ಅವುಗಳ ಸ್ಥಳೀಯ ಸ್ವಾಯತ್ತೆಯನ್ನು ಮುರಿದು, ಅವುಗಳನ್ನು ತನ್ನ ನಿಯಮಾವಳಿಗಳನ್ನು ಅನುಸರಿಸುವ ಗುಮಾಸ್ತಗಿರಿಗೆ ಇಳಿಸುವುದು ಅಮಿತ್ ಶಾ ಅವರಿಗಿರುವ ಹೊಣೆ. ಈಗ ದೇಶದಲ್ಲಿ ಯಾವ ಯಾವ ಸಂಸ್ಥೆ/ ಕ್ಷೇತ್ರ ಸ್ವಾಯತ್ತವಾಗಿದೆ ಎಂಬುದನ್ನು ತಲಾಶ್ ಮಾಡಿ ಅದನ್ನು ಕೇಂದ್ರೀಕೃತ ನಿಯಂತ್ರಣಗೊಳಿಸುವ ಕಾರ್ಯಸೂಚಿ ಇದು.

ಆದರೆ ಈ 'ನಿಯೋಗ'ದ ಉತ್ಸಾಹ ಮಹಾ ಭಾರತಕ್ಕೇ ಸರಿ. ವರ್ತಮಾನದಲ್ಲಿ ಈ ನಿಯೋಗದ ಕಾರ್ಯೋತ್ಸಾಹ ದೇಶವನ್ನು ಅಂದರೆ ಅದರ ಜನಸಮುದಾಯಗಳನ್ನು ಇನ್ನಷ್ಟು ರೋಗಿಷ್ಟಗೊಳಿಸುತ್ತದೆ. 'ಒಣ ಹುಲ್ಲಿಗೆ ಇಟ್ಟ ಬೆಂಕಿ ಹಸಿ ಹುಲ್ಲನ್ನೂ ಸುಡುತ್ತದೆ' ಎಂಬುದು ಮೆಕ್ಸಿಕೋದ ಗಾದೆ. ಈ ಸರ್ಕಾರದ ಹವಣಿಕೆಯನ್ನು ನೋಡಿಯೇ ಈ ಗಾದೆ ಸೃಷ್ಟಿಸಿದ್ದಿರಬಹುದು.



ಗ್ರಾಮೀಣ/ಕೃಷಿಗೆ ಸಂಬಂಧಿಸಿದ ಪ್ರತೀ ಯೋಜನೆಯಲ್ಲೂ ಕೇಂದ್ರ ಸರ್ಕಾರ ಆರ್ಥಿಕ ಹೊರೆ ಇಳಿಸಿಕೊಳ್ಳಲು ಇನ್ನಿಲ್ಲದ ಆಟ ಆಡುತ್ತಿರುವ ಉದಾಹರಣೆ ಗಮನಿಸಿ: ರೈತರ ಬೆಳೆ ಸಾಲದ ಬಡ್ಡಿ ಸಬ್ಸಿಡಿಗೆ ₹24 ಸಾವಿರ ಕೋಟಿ ಬೇಕು ಎಂದು ಕೃಷಿ ಇಲಾಖೆ ಮನವಿ ಸಲ್ಲಿಸಿದರೆ ನರೇಂದ್ರ ಮೋದಿ ನೇತೃತ್ವದ ಸರ್ಕಾರ ಈ ಮೊತ್ತವನ್ನು ₹17,863 ಕೋಟಿಗೆ ಇಳಿಸಿತು. ಈ ಹಿಂದೆ ಗ್ರಾಮೀಣ ಸಂತೆಗಳ ಆಧುನೀಕರಣಕ್ಕೆ ₹2 ಸಾವಿರ ಕೋಟಿ ಅನುದಾನ ನಿಗದಿ ಮಾಡಿ ಅದರಲ್ಲಿ ಶೇ 1ರಷ್ಟು ಕೂಡಾ ವೆಚ್ಚವಾಗಿರಲಿಲ್ಲ. ನಿಯಮಾವಳಿಗಳ ಕೊಕ್ಕೆಯ ಮೂಲಕ ಸರ್ಕಾರ ಅನುದಾನ ವಿನಿಯೋಗವಾಗದಂತೆ ನೋಡಿಕೊಳ್ಳುವುದಿದೆ.

ಲೇಖಕ: ಗ್ರಾಮೀಣ-ಕೃಷಿ ಆರ್ಥಿಕ ತಜ್ಞ

ನಿಜ ಅರ್ಥದಲ್ಲಿ ಸಹಕಾರದ ಲಾಭ ದೊರೆಯಲಿ



ಬಂಡೆಪ್ಪ ಕಾಶೆಂಪೂರ

ಸಹಕಾರ ಕ್ಷೇತ್ರ ಈಗ ಹಲವು ರಾಜಕಾರಣಿಗಳು ಹಾಗೂ ಪ್ರಭಾವಿಗಳ ಕಪಿಮುಷ್ಠಿಯಲ್ಲಿದೆ. ಅನೇಕರು ಸಹಕಾರ ಕ್ಷೇತ್ರವನ್ನು ರಾಜಕೀಯ ದಾಳ ಮಾಡಿಕೊಂಡಿದ್ದಾರೆ. ಸಹಕಾರ ಎನ್ನುವುದು ಎಲ್ಲ ಸಮುದಾಯದವರನ್ನು ಒಳಗೊಂಡಿರಬೇಕು. ಆದರೆ, ಪ್ರಬಲ ಸಮುದಾಯ ಹಾಗೂ ಮನೆತನಗಳು ಸಹಕಾರ ಕ್ಷೇತ್ರವನ್ನು ತಮ್ಮ ಹಿಡಿತದಲ್ಲಿಟ್ಟುಕೊಂಡಿವೆ. ಡಿಸಿಸಿ ಬ್ಯಾಂಕ್‌ಗಳು ಹಾಗೂ ಸಹಕಾರ ಸಕ್ಕರೆ ಕಾರ್ಖಾನೆಗಳು ಇದಕ್ಕೆ ಉತ್ತಮ ನಿದರ್ಶನ.

ಎಲ್ಲ ಸಮುದಾಯದ ಜನರಿಗೂ ನಿಜ ಅರ್ಥದಲ್ಲಿ ಸಹಕಾರದ ಲಾಭ ದೊರೆಯಬೇಕು ಎನ್ನುವುದೇ ಸಹಕಾರ ಸಚಿವಾಲಯ ಸ್ಥಾಪನೆಯ ಉದ್ದೇಶವಾಗಬೇಕು. ಸಹಕಾರ ಕ್ಷೇತ್ರದಿಂದ ಬಂದ ರಾಜಕಾರಣಿಗಳ ಶಕ್ತಿಗುಂದಿಸುವ ಉದ್ದೇಶದಿಂದಲೇ ಪ್ರತ್ಯೇಕ ಸಚಿವಾಲಯ ಸ್ಥಾಪನೆ ಮಾಡಲಾಗುತ್ತಿದೆ ಎಂದು ಊಹಿಸಿಕೊಳ್ಳುವುದಕ್ಕಿಂತಲೂ ಹಾಲು ಉತ್ಪಾದಕರು, ಕೃಷಿಕರು, ಕುಶಲಕರ್ಮಿಗಳು, ಮಹಿಳಾ ಸ್ವಸಹಾಯ ಸಂಘಗಳಿಗೆ ಅಧಿಕಾರ ಒದಗಿಸಿಕೊಡುವ ಹಾಗೂ ಇವರ ಮೂಲಕ ಸಹಕಾರ ಕ್ಷೇತ್ರವನ್ನು ಬಲಪಡಿಸುವ ಉದ್ದೇಶವೂ ಇರಬಹುದು.

ಸಹಕಾರ ಕ್ಷೇತ್ರ ಸಾರ್ವಜನಿಕರಿಗೆ ಅನುಕೂಲವಾಗುವ ರೀತಿಯಲ್ಲಿ 'ಅರೆ ಸರ್ಕಾರ'ವಾಗಿ ಕೆಲಸ ಮಾಡಬೇಕು. ಸಹಕಾರ ಕ್ಷೇತ್ರದಲ್ಲಿ ಸಾರಿಗೆ ಸಂಸ್ಥೆ, ಆಸ್ಪತ್ರೆಗಳು ಬರಬೇಕು. ಅಧಿಕಾರ ವಿಕೇಂದ್ರೀಕರಣ ಆಗಬೇಕು.

2006ರಲ್ಲಿ ನಾನು ಇಸ್ರೇಲ್‌ಗೆ ಹೋಗಿದ್ದೆ. ನಮ್ಮ ರೈತರು ಅಲ್ಲಿಯ ಹಾಗೆ ₹1 ಕೋಟಿ ಕೊಟ್ಟು ಕೃಷಿ ಯಂತ್ರ ಖರೀದಿಸಲು ಸಾಧ್ಯವಿಲ್ಲ. ಸಹಕಾರ ಕ್ಷೇತ್ರದ ಮೂಲಕ ಸಾಗುವಳಿ ಮಾಡಿದರೆ ಕೃಷಿಕರಿಗೆ ಒಳಿತಾಗಲಿದೆ. ಕೃಷಿ ಕ್ಷೇತ್ರವೂ ಅಭಿವೃದ್ಧಿ ಕಾಣಲಿದೆ. ಸಹಕಾರ ರಾಜ್ಯದ ಪಟ್ಟಿಯಲ್ಲಿರುವ ಇಲಾಖೆಯಾಗಿದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರ ಸೇರಿಕೊಂಡು ಒಳ್ಳೆಯ ಕೆಲಸ ಮಾಡಲು ಸಾಧ್ಯವಿದೆ.

ಮೊದಲು ಕೇಂದ್ರದಲ್ಲಿ ಕೃಷಿ ಇಲಾಖೆ ವ್ಯಾಪ್ತಿಯಲ್ಲಿ ಸಹಕಾರ ಬರುತ್ತಿತ್ತು. ಇನ್ನು ಕೇಂದ್ರದಲ್ಲಿ ಸಹಕಾರಕ್ಕೆ ಪ್ರಾತಿನಿಧ್ಯ ಸಿಗಲಿದೆ. ಗ್ರಾಮೀಣ ಪ್ರದೇಶದ ಸಹಕಾರ ಸಂಘಗಳಿಗೆ ಬಲ ದೊರೆಯಲಿದೆ. ರಾಜ್ಯದಲ್ಲಿ 80 ಲಕ್ಷ ರೈತರಿದ್ದಾರೆ. ಅದರಲ್ಲಿ 22 ಲಕ್ಷ ರೈತರು ₹13 ಸಾವಿರ ಕೋಟಿ ಸಾಲ ಪಡೆದಿದ್ದಾರೆ. ರೈತರ ಸಹಕಾರ ಸಂಘಗಳು ಅಸ್ತಿತ್ವಕ್ಕೆ ಬಂದರೆ ಬಡ್ಡಿ ರಹಿತವಾಗಿ ಸಾಲ ಪಡೆಯುವ ಅವಕಾಶವೂ ಬರಬಹುದು.

ಬಂಡೆಪ್ಪ ಕಾಶೆಂಪೂರ
ವಿಧಾನಸಭೆಯ ಜೆಡಿಎಸ್ ಶಾಸಕಾಂಗ ಪಕ್ಷದ ಉಪ ನಾಯಕ

ಗೃಹದಷ್ಟೇ ಸಹಕಾರ ಸಚಿವಾಲಯವೂ ಪ್ರಭಾವಶಾಲಿ



ಸಂಜೀವ ಮಠಂದೂರು


ದೇಶದಲ್ಲಿ ಬ್ಯಾಂಕಿಂಗ್ ವ್ಯವಸ್ಥೆಯಷ್ಟೇ ಸಹಕಾರಿ ಕ್ಷೇತ್ರವೂ ಬಲಿಷ್ಠವಾಗಿ ಬೆಳೆಯುತ್ತಿದೆ. ಬಹುತೇಕ ಕೃಷಿಕರು ಸಹಕಾರಿ ಕ್ಷೇತ್ರವನ್ನೇ ಅವಲಂಬಿಸಿದ್ದಾರೆ. ರೈತರಿಗೆ ಇನ್ನಷ್ಟು ನೆರವಾಗುವ ಉದ್ದೇಶದಿಂದ ಕೇಂದ್ರ ಸರ್ಕಾರವು ಸಹಕಾರ ಸಚಿವಾಲಯವನ್ನು ಸ್ಥಾಪಿಸಿದೆ.

ಕೇಂದ್ರದಲ್ಲಿ ಸಹಕಾರಿ ಕ್ಷೇತ್ರವು ಈತನಕ ಕೃಷಿ ಸಚಿವಾಲಯದ ಅಧೀನದಲ್ಲೇ ಇತ್ತು. ಅದನ್ನು ಪ್ರತ್ಯೇಕಿಸುವ ಮೂಲಕ ಸಹಕಾರಿ ಕ್ಷೇತ್ರಕ್ಕೆ ಹೊಸ ದಿಕ್ಕನ್ನು ನೀಡಲು ಸರ್ಕಾರ ಮುಂದಾಗಿದೆ. ರೈತರಿಗೆ ಸಹಾಯಧನ, ಸಾಲಮನ್ನಾ, ಬಡ್ಡಿ ಮನ್ನಾ ಇನ್ನಿತರ ನೆರವು ಪಡೆಯಲು ಅನುಕೂಲವಾಗಲಿದೆ.

ಸಹಕಾರ ಸಚಿವಾಲಯ ಹೊಸ ಖಾತೆಯಾಗಿರುವುದರಿಂದ ಅದನ್ನು ನಿರ್ವಹಿಸಲು ಪ್ರಭಾವಿ ವ್ಯಕ್ತಿ ಬೇಕಾಗುತ್ತದೆ. ಆ ಉದ್ದೇಶದಿಂದ ಪ್ರಧಾನಿ ನರೇಂದ್ರ ಮೋದಿ ಅವರು ಅಮಿತ್ ಶಾ ಹೆಗಲಿಗೆ ಹಾಕಿರಬಹುದು. ಕೃಷಿ ಕಾಯ್ದೆಯನ್ನು ವಿರೋಧಿಸಿ ದೆಹಲಿಯಲ್ಲಿ ಪ್ರತಿಭಟನೆ ನಡೆಯುತ್ತಿದೆ. ಈ ಸಂದರ್ಭದಲ್ಲಿ ಸಹಕಾರ ಸಚಿವಾಲಯದ ಮೂಲಕ ರೈತರಿಗೆ ನೆರವಾಗುವ ಅವಕಾಶ ಇರುವುದರಿಂದ ಸಮರ್ಥ ವ್ಯಕ್ತಿಗೆ ಖಾತೆ ನೀಡಲಾಗಿದೆ. ಈ ಮೂಲಕ ಗೃಹ ಇಲಾಖೆಯಷ್ಟೇ ಸಹಕಾರ ಸಚಿವಾಲಯವೂ ಪ್ರಭಾವಶಾಲಿ ಎಂಬ ಸಂದೇಶವನ್ನು ರವಾನಿಸಲಾಗಿದೆ.

ಸಂಜೀವ ಮಠಂದೂರು
ಪುತ್ತೂರು ಶಾಸಕ, ಬಿಜೆಪಿ ಸಹಕಾರ ಪ್ರಕೋಷ್ಠದ ರಾಜ್ಯ ಸಂಚಾಲಕ

ಉದ್ದೇಶ ಏನು ಎಂಬುದೇ ಸ್ಪಷ್ಟವಾಗಿಲ್ಲ



ಶಿವಾನಂದ ಪಾಟೀಲ

ಕೇಂದ್ರ ಸರ್ಕಾರ ಸಹಕಾರ ಸಚಿವಾಲಯ ಸ್ಥಾಪಿಸಿದೆ. ಆದರೆ, ಅದರ ಉದ್ದೇಶ ಏನು ಎಂಬುದನ್ನೇ ಹೇಳಿಲ್ಲ. ಸಹಕಾರ ರಾಜ್ಯ ಪಟ್ಟಿಯಲ್ಲಿರುವ ವಿಷಯವಾಗಿತ್ತು. ಈಗ ಕೇಂದ್ರ ಸರ್ಕಾರ ಅದನ್ನೂ ತನ್ನ ಸುಪರ್ದಿಗೆ ತೆಗೆದುಕೊಳ್ಳಲು ಹೊರಟಿದೆ.

ಸಹಕಾರ ಕ್ಷೇತ್ರದ ಬಲವರ್ಧನೆಗೆ ರಾಜ್ಯದ ಜೊತೆಗೆ ಕೇಂದ್ರದ ಸಹಭಾಗಿತ್ವ ಹೇಗಿರುತ್ತದೆ. ಕೇಂದ್ರ ಸರ್ಕಾರವೂ ಆರ್ಥಿಕ ನೆರವು ನೀಡಿ ಈ ಕ್ಷೇತ್ರದ ಸಬಲೀಕರಣಕ್ಕೆ ಒತ್ತು ನೀಡಿ ಮತ್ತಷ್ಟು ಜನರಿಗೆ ಸಹಾಯ ಮಾಡುವ ಉದ್ದೇಶ ಹೊಂದಿದೆಯೇ ಎಂಬುದನ್ನು ಸ್ಪಷ್ಟಪಡಿಸಬೇಕು.

ಜಿಲ್ಲಾ ಕೇಂದ್ರ ಸಹಕಾರಿ (ಡಿಸಿಸಿ) ಬ್ಯಾಂಕ್‌ಗಳು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಅಧೀನದಲ್ಲಿದ್ದರೂ ಅದರ ನೇರ ನಿಯಂತ್ರಣಕ್ಕೆ ಒಳಪಟ್ಟಿರಲಿಲ್ಲ. ಡಿಸಿಸಿ ಬ್ಯಾಂಕ್‌ಗಳ ಸಮ್ಮತಿಯನ್ನೂ ಪಡೆಯದೆ ಅವುಗಳನ್ನು ಆರ್‌ಬಿಐ ನಿಯಂತ್ರಣಕ್ಕೆ ತೆಗೆದುಕೊಂಡಿದೆ. ಇದೇ ಮಾದರಿಯಲ್ಲಿ ಸಹಕಾರಿ ಸಂಸ್ಥೆಗಳನ್ನೂ ನಿಯಂತ್ರಣಕ್ಕೆ ತೆಗೆದುಕೊಳ್ಳುವ ಉದ್ದೇಶದಿಂದಲೇ ಕೇಂದ್ರ ಸರ್ಕಾರ ಹೊಸ ಸಹಕಾರ ಸಚಿವಾಲಯ ಆರಂಭಿಸಿದರೆ ಅದು ಸರಿಯಾದ ಕ್ರಮವಲ್ಲ. ಪಟ್ಟಣ ಸಹಕಾರ ಬ್ಯಾಂಕ್‌ಗಳಲ್ಲಿ ಶೇ 50ರಷ್ಟು ವೃತ್ತಿಪರ ನಿರ್ದೇಶಕರು ಇರಬೇಕು ಎಂಬ ನಿಯಮ ಮಾಡಿದ್ದು, ಸಹಕಾರ ಕ್ಷೇತ್ರಕ್ಕೂ ಅದನ್ನು ಅನ್ವಯಿಸಿದರೆ ಸಹಕಾರಿಗಳಿಗೆ ಏನು ಕೆಲಸ ಉಳಿಯುತ್ತದೆ. ಡಿಸಿಸಿ ಬ್ಯಾಂಕ್‌ಗಳ ಮೇಲೆ ಸರ್ಕಾರ ನಿಯಂತ್ರಣ ಸಾಧಿಸಿದರೆ ಸಹಕಾರಿ ಕ್ಷೇತ್ರದಲ್ಲಿರುವವರ ಉತ್ಸಾಹವೇ ಕುಗ್ಗಿ ಹೋಗುತ್ತದೆ.

ರಾಜ್ಯ ಸರ್ಕಾರಗಳು ಸಹಕಾರ ಇಲಾಖೆಯನ್ನು ಸರಿಯಾಗಿ ನಿಭಾಯಿಸುತ್ತಿಲ್ಲ ಎಂಬ ಆರೋಪವನ್ನು ನಾನು ಅಲ್ಲಗಳೆಯುವುದಿಲ್ಲ. ಅದರಲ್ಲೂ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ ಸಂಸ್ಥೆಗಳು ಮತ್ತು ರಾಜ್ಯಗಳನ್ನು ಮಾದರಿಯಾಗಿ ತೆಗೆದುಕೊಳ್ಳಬೇಕು. ಇಲ್ಲಿ ಲೋಪ-ದೋಷ ಇವೆ ಎಂದು ಹಿಡಿತ ಸಾಧಿಸಲು ಹೊರಟರೆ ಅದು ಸಹಕಾರ ತತ್ವದ ಮೂಲ ಉದ್ದೇಶಕ್ಕೇ ಕೊಡಲಿ ಪೆಟ್ಟು ನೀಡಿದಂತಾಗುತ್ತದೆ.

ದೇಶದ ಸಹಕಾರಿ ಕ್ಷೇತ್ರದಲ್ಲಿ ನಮ್ಮ ರಾಜ್ಯದ ಸಾಧನೆಯು ದೊಡ್ಡಮಟ್ಟದಲ್ಲಿದೆ. ಸಕ್ಕರೆ ಉತ್ಪಾದನೆ ಕ್ಷೇತ್ರದಲ್ಲಿಯೂ ಸಹಕಾರ ತತ್ವದಲ್ಲಿ ನಾವು ಸಾಧನೆ ಮಾಡಿದ್ದೇವೆ. ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಸಂಸ್ಥೆ (ಎನ್‌ಡಿಡಿಬಿ) ರಾಷ್ಟ್ರಮಟ್ಟದಲ್ಲಿಯೇ ಮಾದರಿಯಾದ ಸಹಕಾರ ಸಂಸ್ಥೆಯಾಗಿದೆ. ಸಹಕಾರ ಸಂಘಗಳಿಗೆ ನೆರವು ನೀಡಿ ಸಹಕಾರ ಕ್ಷೇತ್ರವನ್ನು ಬಲವರ್ಧನೆ ಮಾಡುವ ಉದ್ದೇಶ ಇದ್ದರೆ ಸ್ವಾಗತ. ಇದು ನಿಯಂತ್ರಣದ ಅಸ್ತ್ರವಾದರೆ ಸರಿಯಲ್ಲ.

ಶಿವಾನಂದ ಪಾಟೀಲ
ವಿಜಯಪುರ ಡಿಸಿಸಿ ಬ್ಯಾಂಕ್ ಅಧ್ಯಕ್ಷ, ಬಸವನ ಬಾಗೇವಾಡಿ ಶಾಸಕ

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

ಬ್ರಿಟನ್‌ನ ಬಹುರಾಷ್ಟ್ರೀಯ ಕಂಪನಿ ಕ್ಯಾಡ್‌ಬರಿ ತಯಾರಿಸುವ ಡೈರಿ ಮಿಲ್ಕ್ ಹೆಸರಿನ ಚಾಕೊಲೆಟ್ ಸುಪ್ರಸಿದ್ಧ. ಆದರೆ ಈ ಚಾಕೊಲೆಟ್ ತಯಾರಿ ವೇಳೆ ದನದ ಮಾಂಸ ಬಳಸಲಾಗುತ್ತಿದೆ ಎಂಬುದಾಗಿ ಮಧು ಪೂರ್ಣಿಮಾ ಕಿಶ್ವಾರ್ ಎಂಬ ಮಹಿಳೆ ಮಾಡಿದ ಟ್ವೀಟ್ ಸಾಕಷ್ಟು ಸುದ್ದಿಯಾಗಿದೆ. ಅವರು ಬಳಸಿಕೊಂಡಿರುವ ಸ್ಕ್ರೀನ್‌ಶಾಟ್‌ನಲ್ಲಿ ಈ ಮಾಹಿತಿ ಇದೆ. ಸನಾತನ ಪರಂಪರೆಯಲ್ಲಿ ದನದ ಮಾಂಸ ಬಳಕೆಗೆ ನಿಷೇಧವಿದ್ದು, ಕ್ಯಾಡ್‌ಬರಿ ಸಂಸ್ಥೆಯು ಹಣ ಗಳಿಸುವ ಉದ್ದೇಶದಿಂದ ಈ ಯತ್ನಕ್ಕೆ ಕೈಹಾಕಿದೆ ಎಂದು ಜಾಲತಾಣ ಬಳಕೆದಾರರು ಕಿಡಿಕಾರಿದ್ದಾರೆ.



ಕ್ಯಾಡ್‌ಬರಿ ಚಾಕೊಲೆಟ್‌ನಲ್ಲಿ ದನದ ಮಾಂಸ ಬಳಕೆ ಕುರಿತ ಸುದ್ದಿ ವೈರಲ್ ಆಗಿದೆ

ಸ್ವತಃ ಕ್ಯಾಡ್‌ಬರಿ ಸಂಸ್ಥೆಯು ಮಧು ಅವರ ಟ್ವೀಟ್‌ಗೆ ಉತ್ತರ ನೀಡಿದೆ. ವೈರಲ್ ಆಗಿರುವ ಸ್ಕ್ರೀನ್‌ಶಾಟ್ ಭಾರತದ ಉತ್ಪನ್ನಗಳಿಗೆ ಸಂಬಂಧಿಸಿದ್ದಲ್ಲ ಎಂದು ಸ್ಪಷ್ಟನೆ ನೀಡಿದೆ. ಆಸ್ಟ್ರೇಲಿಯಾದಲ್ಲಿ ತಯಾರಾಗುವ ಉತ್ಪನ್ನಗಳಿಗೆ ಸಂಬಂಧಿಸಿದ ಮಾಹಿತಿ ಅದಾಗಿದ್ದು, ಭಾರತದಲ್ಲಿ ಸಸ್ಯಜನ್ಯ ಉತ್ಪನ್ನಗಳನ್ನು ಮಾತ್ರ ಬಳಸಿ ಚಾಕೊಲೆಟ್ ತಯಾರಿಸಲಾಗುತ್ತದೆ ಎಂದು ತಿಳಿಸಿದೆ. ಭಾರತೀಯ ಆಹಾರ ಗುಣಮಟ್ಟ ಪ್ರಾಧಿಕಾರವು ಹಸಿರು ಚುಕ್ಕೆಯ ಪ್ರಮಾಣಪತ್ರ ನೀಡಿದ್ದು, ಅದು ಶಾಖಾಹಾರಕ್ಕೆ ಸಂಬಂಧಿಸಿದೆ ಎಂದು ಲಾಜಿಕಲ್ ಇಂಡಿಯನ್ ಫ್ಯಾಕ್ಟ್ ಚೆಕ್ ವೇದಿಕೆ ಸ್ಪಷ್ಟಪಡಿಸಿದೆ.

ಬೆರಗಿನ ಬೆಳಕು

ಗುರುರಾಜ ಕರಜಗಿ

ಆಪತ್ತಿನ ಮುನ್ಸೂಚನೆ

ಅಚ್ಚುತ ಋಷಿ ಬ್ರಾಹ್ಮಣನನ್ನು ಬೀಳ್ಕೊಡುತ್ತ ಹೇಳಿದ, 'ಬ್ರಾಹ್ಮಣ, ಇದೇ ದಾರಿಯಲ್ಲಿ ಮುಂದುವರೆದು ಹೋಗು. ಮುಂದೆ ಒಂದು ವಿಶೇಷ ದೃಶ್ಯ ನಿನಗೆ ಕಾದಿದೆ. ಅಲ್ಲಿ ನೆಲ ತುಂಬ ಸುಂದರ. ಅದರ ಮೇಲೆ ಹುಲ್ಲಿನ ಹಸಿರು ಹಾಸು ಇದೆ. ಆ ಹುಲ್ಲು ಎಂದಿಗೂ, ಎಲ್ಲಿಯೂ ನಾಲ್ಕು ಅಂಗುಲಕ್ಕಿಂತ ಉದ್ದವಿರುವುದಿಲ್ಲ. ನವಿಲಿನ ಕತ್ತಿಗೆ ಸಮನಾದ, ಹತ್ತಿಯಂತೆ ಕೋಮಲವಾದ ಹುಲ್ಲು ಎಲ್ಲೆಡೆಯೂ ಇದೆ. ಅಲ್ಲಿ ಮಾವು, ನೇರಳೆ, ಬೇಲ, ಹಣ್ಣಾದ ಅತ್ತಿಯ ಮರಗಳು ನೂರಾರು ಇವೆ. ಅಲ್ಲಿಯೇ ಸ್ಫಟಿಕದ ಬಣ್ಣದ ಮೀನುಗಳಿಂದ ತುಂಬಿದ ಪವಿತ್ರವಾದ, ಸುಗಂಧಿತವಾದ ನದಿ ಹರಿಯುತ್ತದೆ. ಅದರ ಮುಂದೆಯೇ ತುಂಬ ಮನೋಹರವಾದ ಪುಷ್ಕರಿಣಿ ಇದೆ. ಅದು ದೇವತೆಗಳ ನಂದನವನದ ಕಮಲಗಳಿಂದ ಮುಚ್ಚಿ ಹೋಗಿದೆ. ಮುಂದೆ ಸಾಗಿದರೆ ಅಲ್ಲಿ ನಿನಗೆ ಮುಚಲಿಂದ ಸರೋವರ ಗೋಚರವಾಗುತ್ತದೆ. ಆ ಸರೋವರದಲ್ಲಿ ಅರಳಿದ ಕಮಲಗಳಿಗೆ ಲೆಕ್ಕವೇ ಇಲ್ಲ. ಸರೋವರದ ಸುತ್ತಮುತ್ತಲಿನ ಕೆಲವು ಬಳ್ಳಿಗಳ ಗಂಧ ಇಡೀ ದಿನವಿದ್ದರೆ, ಕೆಲವು ಪುಷ್ಪಗಳ ಸುವಾಸನೆ ತಿಂಗಳುಗಟ್ಟಲೆ ಇರುತ್ತದೆ. ಹೀಗಾಗಿ ಇಡೀ ಪ್ರದೇಶವೇ ಸುಗಂಧಮಯವಾಗಿದೆ'.

'ಸರೋವರದ ಬಲಭಾಗದಲ್ಲಿ ಒಂದು ಕಾಲುದಾರಿ ಇದೆ. ಅದು ನೇರವಾಗಿ ಆಶ್ರಮಕ್ಕೇ ಹೋಗುತ್ತದೆ. ಅಲ್ಲಿಗೆ ಹೋಗುವವನಿಗೆ ಹಸಿವು, ನೀರಡಿಕೆ, ಆಯಾಸವಾಗುವುದೇ ಇಲ್ಲ. ಮಕ್ಕಳು, ಹೆಂಡತಿಯರೊಂದಿಗೆ ವೆಸ್ಸಂತರ ಬೋಧಿಸತ್ವ ಅಲ್ಲಿಯೇ ವಾಸವಾಗಿದ್ದಾನೆ. ಸನ್ಯಾಸಿಯ ವೇಷದಲ್ಲಿರುವ ಆತ ಜಟಾಧಾರಿಯಾಗಿ, ಕರ್ಮಗಳನ್ನು ಮಾಡುತ್ತ, ನೆಲದ ಮೇಲೆ ಚರ್ಮ ಹಾಸಿಕೊಂಡು ಮಲಗುತ್ತಾನೆ'. ಇದನ್ನು ಕೇಳಿ ಬ್ರಾಹ್ಮಣ ಅಚ್ಚುತ ಋಷಿಗೆ ಪ್ರದಕ್ಷಿಣೆ, ನಮಸ್ಕಾರ ಮಾಡಿ ಅಲ್ಲಿಂದ ಹೊರಟ. ಮುಂದೆ ಸರೋವರಕ್ಕೆ ಬರುವ ಹೊತ್ತಿಗೆ ಕತ್ತಲಾಗುತ್ತಿತ್ತು. ಆತ ಯೋಚನೆ ಮಾಡಿದ. ಈಗಲೇ ಆಶ್ರಮಕ್ಕೆ ಹೋದರೆ ವೆಸ್ಸಂತರನ ಪತ್ನಿ ಮಾದ್ರಿ ಅಲ್ಲಿಯೇ ಇರುತ್ತಾಳೆ. ಯಾವಾಗಲೂ ಸ್ತ್ರೀಯರ ಬುದ್ಧಿ, ಮುಂದಾಲೋಚನೆ ಬಹಳ ಚುರುಕು. ನಾನು ಏನಾದರೂ ಬೇಡಲು ಬಂದಿದ್ದೇನೆಂದು ತಿಳಿದು ದಾನ ಕೊಡುವಲ್ಲಿ ಅಡ್ಡಿಯನ್ನುಂಟು ಮಾಡುವಳು. ನಾಳೆ ಆಕೆ ಆಶ್ರಮದಿಂದ ಹೊರಗೆ ಹೋದ ಮೇಲೆ ನಾನು ಆಶ್ರಮವನ್ನು ಸೇರುವುದು ಒಳ್ಳೆಯದು. ಹೀಗೆ ಯೋಚಿಸಿ ಸರೋವರದ ಪಕ್ಕದಲ್ಲೆ ಆರಾಮವಾದ ಜಾಗೆಯನ್ನು ಆರಿಸಿಕೊಂಡು ಮಲಗಿದ. ಅದೇ ದಿನ ರಾತ್ರಿ ಬ್ರಾಹ್ಮೀ ಮುಹೂರ್ತದಲ್ಲಿ ಮಾದ್ರಿದೇವಿಗೆ ಒಂದು ಕನಸು ಬಿತ್ತು. ಅದರಲ್ಲಿ ಒಬ್ಬ ಕಪ್ಪುಬಣ್ಣದ ಮನುಷ್ಯ, ಕಾಷಾಯ ವಸ್ತ್ರಗಳನ್ನು ಧರಿಸಿದ್ದಾನೆ. ಹೂಮಾಲೆಯನ್ನು ಕೊರಳಿಗೆ ಹಾಕಿಕೊಂಡು, ಕತ್ತಿ ಹಿಡಿದು ಬರುತ್ತಿದ್ದಾನೆ. ಆತ ಪರ್ಣಶಾಲೆಗೆ ಬಂದು ಮಾದ್ರಿಯನ್ನು ಹೊರಗಳೆದು, ಆಕೆಯ ಜಟೆಯನ್ನು ಹಿಡಿದು ನೆಲದ ಮೇಲೆ ಕೆಡವಿದ್ದಾನೆ. ಅವಳ ಎರಡೂ ಕಣ್ಣುಗಳನ್ನು ಕಿತ್ತು, ಎರಡೂ ಕೈಗಳನ್ನು ಕತ್ತರಿಸಿದ್ದಾನೆ. ನಂತರ ವಿಕಾರವಾಗಿ ನಗುತ್ತ, ಆಕೆಯ ಎದೆಯನ್ನು ಕತ್ತಿಯಿಂದ ಸೀಳಿ, ರಕ್ತವನ್ನು ಕುಡಿಯುತ್ತ, ಹೃದಯದ ಮಾಂಸವನ್ನು ತೆಗೆದುಕೊಂಡು ಹೊರಟುಹೋದ. ಆ ದೃಶ್ಯದಿಂದ ಎಚ್ಚರಾದ ಆಕೆಗೆ ಭಾರೀ ಹೆದರಿಕೆಯಾಯಿತು. ಈ ಕನಸಿನ ಅರ್ಥವೇನಿದ್ದಿರಬಹುದು? ಕನಸುಗಳ ಅರ್ಥವನ್ನು ಹೇಳುವುದರಲ್ಲಿ ವೆಸ್ಸಂತರನನ್ನು ಮೀರಿಸಿದವರಿಲ್ಲ. ಅವನನ್ನೇ ಕೇಳಿ ಸಮಾಧಾನ ಪಡೆಯಲೆಂದು ಅವನ ಕುಟೀರದೆಡೆಗೆ ನಡೆದಳು ಮಾದ್ರಿದೇವಿ.

ಗುಂಡಣ್ಣ



ದಿನ ಭವಿಷ್ಯ

ಬುಧವಾರ ಜುಲೈ 21, 2021

ಶ್ರೀ ಪ್ಲವ ನಾಮ ಸಂವತ್ಸರ ದಕ್ಷಿಣಾಯಣ ಗ್ರೀಷ್ಮ ಋತು ಆಷಾಢ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಪುಷ್ಯ ದ್ವಾದಶಿ ಗಂ. 20-28 (ಹ. 2-21) ಬುಧವಾರ ನಿತ್ಯ ನಕ್ಷತ್ರ ಜ್ಯೇಷ್ಠ ಗಂ. 28-10 (ಸಾ. 5-26) ಬ್ರಹ್ಮ ನಾಮ ಯೋಗ ಗಂ. 24-21 ಬಾಲವ ಕರಣ ಗಂ. 20-28 ವಿಷಾಭಾವಃ ಅಮೃತ ಗಂ. 7-49 ರಾಹುಕಾಲ: ಮ. ಗಂ. 12-00 ರಿಂದ 1-30 ಗುಳಿಕ ಕಾಲ ಬೆ. ಗಂ 10-30 ರಿಂದ 12-00 ಯಮಗಂಡ ಕಾಲ ಬೆ. ಗಂ 7-30 ರಿಂದ 9-00 : ಸೂರ್ಯೋದಯ: 6-06 ಸೂರ್ಯಾಸ್ತ: 6-46 ಅದೃಷ್ಟ ಸಂಖ್ಯೆ 1, 8

ಮೇಷ: ಆರೋಗ್ಯದಲ್ಲಿನ ಸುಧಾರಣೆಯಿಂದಾಗಿ ಮಾನಸಿಕ ತೃಪ್ತಿ. ಹೊಸ ಚಿಂತನೆಗೆ ಸಕಾಲ. ದೂರದೇಶ ಪ್ರಯಾಣ ಕೈಗೊಳ್ಳುವ ಸಾಧ್ಯತೆ ಕಂಡುಬರುವುದು. ವಿವಾಹಾಕಾಂಕ್ಷಿಗಳಿಗೆ ಕಂಕಣ ಬಲ ಕಾಣುವುದು.

ವೃಷಭ: ಸಕಾಲಿಕ ಸಹಕಾರದಿಂದ ಕಾರ್ಯಸಿದ್ಧಿಯಾಗಲಿದೆ. ಆರ್ಥಿಕವಾಗಿ ನಾನಾ ರೀತಿಯಲ್ಲಿ ಧನಸಂಗ್ರಹದ ನಿರೀಕ್ಷೆ. ಬ್ಯಾಂಕ್ ಮುಂತಾದ ಹಣಕಾಸು ಸಂಸ್ಥೆ ನಡೆಸುವವರಿಗೆ ಆದಾಯದಲ್ಲಿ ವೃದ್ಧಿ. ಆರೋಗ್ಯದಲ್ಲಿ ವ್ಯತ್ಯಯವಾದೀತು.

ಮಿಥುನ: ಉದ್ಯೋಗಸ್ಥರಿಗೆ ಸ್ಥಾನ ಬದಲಾವಣೆ ಲಕ್ಷಣಗಳು ಗೋಚರಿಸುವವು. ನೂತನ ವ್ಯಾಪಾರ ವ್ಯವಹಾರದಲ್ಲಿ ತೊಡಗಿಕೊಳ್ಳಲು ಸಕಾಲ. ಗೃಹೋಪಕರಣಗಳನ್ನು ಖರೀದಿಸಲಿದ್ದೀರಿ. ಸಂಗಾತಿಯ ಮನಸ್ಸಿಗೆ ಮುದ ನೀಡುವಿರಿ.

ಕರ್ಕಾಟಕ: ವಿವಾದಿತ ಆಸ್ತಿ ನಿಮ್ಮ ಪಾಲಿಗೆ ದೊರಕಲಿದೆ. ಕೃಷಿ, ಹೈನುಗಾರಿಕೆಗಳಲ್ಲಿ ತೊಡಗಿದವರಿಗೆ ಹೆಚ್ಚಿನ ಅನುಕೂಲ. ಶುಭ ಕಾರ್ಯಗಳಿಗಾಗಿ ಓಡಾಟ ಮಾಡಬೇಕಾದೀತು. ಸುಖಕರ ಪ್ರವಾಸ ಸಾಧ್ಯತೆ.

ಸಿಂಹ: ರಾಜಕೀಯ ವ್ಯಕ್ತಿಗಳಿಗೆ ನಿರೀಕ್ಷಿತ ಕಾರ್ಯಸಾಧನೆ ತೃಪ್ತಿ ತರಲಿದೆ. ಮಕ್ಕಳ ಉನ್ನತ ವಿದ್ಯಾಭ್ಯಾಸದ ಯೋಗ ಹರುಷ ತರುವುದು. ಸಂತಾನ ಭಾಗ್ಯದ ಸಂತಸ ಮೂಡಿಬರಲಿದೆ. ಸಂಗಾತಿಯ ಆರೋಗ್ಯದ ಬಗ್ಗೆ ಕಾಳಜಿ ಇರಲಿ.

ಕನ್ಯಾ: ದಾಂಪತ್ಯದಲ್ಲಿ ಸಂತಾನ ಭಾಗ್ಯದಿಂದ ಹೆಚ್ಚಿನ ಸಂತೋಷವನ್ನು ಹಂಚಿಕೊಳ್ಳುವ ಸಾಧ್ಯತೆ. ಕಾರ್ಯ ರಂಗದಲ್ಲಿ, ಸಾಹಿತಿಗಳಿಗೆ, ಕಲಾವಿದರಿಗೆ ಹೆಚ್ಚಿನ ಗೌರವಾದರ. ವಿವಾಹದ ಮಾತುಕತೆಗಳಲ್ಲಿ ಭಾಗಿಯಾಗುವ ಸಾಧ್ಯತೆ.

ತುಲಾ: ವಿದ್ಯಾರ್ಥಿಗಳಿಗೆ ಸಂಶೋಧಕರಿಗೆ ನಿರೀಕ್ಷಿತ ಪ್ರಗತಿ. ಉದ್ಯೋಗಸ್ಥರಿಗೆ ಮೇಲಧಿಕಾರಿಗಳ ಸಹಕಾರದೊಂದಿಗೆ ಪದೋನ್ನತಿಯ ಸಾಧ್ಯತೆ. ಮನೆಯವರೊಂದಿಗೆ ಮನಸ್ತಾಪ ತಪ್ಪಿಸಲು ಸಂಯಮ ಅಗತ್ಯ.

ವೃಶ್ಚಿಕ: ಭರವಸೆಯ ವ್ಯವಹಾರ ನಡೆಸಲಿದ್ದೀರಿ. ಅವಕಾಶವೊಂದರಿಂದ ಉತ್ತೇಜಿತರಾಗುತ್ತೀರಿ. ಭೂ ಖರೀದಿ ಮಾರಾಟ ವ್ಯವಹಾರದಲ್ಲಿ ಲಾಭ. ಹಿರಿಯರ ಆರೋಗ್ಯದಲ್ಲಿನ ವ್ಯತ್ಯಯ. ವೈದ್ಯಕೀಯ ವೆಚ್ಚ ಭರಿಸಬೇಕಾದೀತು.

ಧನು: ವ್ಯಾಪಾರಸ್ಥರಿಗೆ ವ್ಯವಹಾರಗಳಲ್ಲಿ ಚೇತರಿಕೆ. ಧಾರ್ಮಿಕ ಕಾರ್ಯಗಳಲ್ಲಿ ಭಾಗವಹಿಸುವ ಸಾಧ್ಯತೆ. ದಲ್ಲಾಳಿ ವ್ಯವಹಾರಸ್ಥರಿಗೆ ಉತ್ತಮ ಆದಾಯ. ಮಹಿಳೆಯರು ಅವಘಡ ತಪ್ಪಿಸಿಕೊಳ್ಳಲು ಎಚ್ಚರಿಕೆಯಿಂದಿರುವುದು ಒಳಿತು.

ಮಕರ: ಹೊಸ ಯಂತ್ರಗಳನ್ನು ಖರೀದಿ ಮಾಡುವ ಸಾಧ್ಯತೆ. ದೂರದ ಸುಖಕರ ಪ್ರಯಾಣ ಮಾಡಲಿದ್ದೀರಿ. ಸಂಗಾತಿಯ ಆಶೋತ್ತರಗಳನ್ನು ಈಡೇರಿಸಲಿದ್ದೀರಿ. ಮನೆಯಲ್ಲಿ ನೆಮ್ಮದಿಯ ವಾತಾವರಣ.

ಕುಂಭ: ವಸ್ತ್ರಾಭರಣ ವ್ಯಾಪಾರಿಗಳಿಗೆ ಉತ್ತಮ ವ್ಯವಹಾರದಿಂದಾಗಿ ಅಧಿಕ ಲಾಭ. ರೈತರಿಗೆ, ವಿದ್ಯಾರ್ಥಿಗಳಿಗೆ ಶ್ರಮಕ್ಕೆ ತಕ್ಕ ಪ್ರತಿಫಲ. ಆಧ್ಯಾತ್ಮಿಕ ಕಾರ್ಯಗಳಲ್ಲಿ ಭಾಗವಹಿಸುವ ಸಾಧ್ಯತೆ.

ಮೀನ: ದಿನಸಿ ವ್ಯಾಪಾರಿಗಳಿಗೆ ಉತ್ತಮ ಧನಲಾಭ. ಕೆಲಸ ಕಾರ್ಯಗಳಲ್ಲಿ ಸಫಲತೆಯನ್ನು ಹೊಂದಲಿದ್ದೀರಿ. ಔಷಧ, ರಾಸಾಯನಿಕ ವಸ್ತುಗಳ ವ್ಯಾಪಾರಸ್ಥರಿಗೆ ಲಾಭ. ಮತ್ಸ್ಯೋದ್ಯಮದಲ್ಲಿ ತೊಡಗಿದವರಿಗೆ ಉತ್ತಮ ಆದಾಯ.


ನಿಮ್ಮ ಜನ್ಮದಿನ 21-ಜುಲೈ ಇಂದು ಅತ್ಯಂತ ಶುಭದಾಯಕ. ಕೈಗೊಂಡ ಕಾರ್ಯಗಳಲ್ಲಿ ನಿರೀಕ್ಷೆಗೂ ಮೀರಿದ ಯಶಸ್ಸನ್ನು ಹೊಂದಲಿದ್ದೀರಿ. ಮಿತ್ರರೊಡನೆ ಪುಣ್ಯ ಕ್ಷೇತ್ರ ಹಾಗೂ ಪ್ರೇಕ್ಷಣೀಯ ಸ್ಥಳಗಳ ಪ್ರವಾಸ ಸಾಧ್ಯತೆ. ವಿದ್ಯಾರ್ಥಿಗಳು ಶಿಕ್ಷಣದಲ್ಲಿನ ಸಾಧನೆಯ ಪುರಸ್ಕಾರ ಪಡೆಯಲಿದ್ದೀರಿ. ಜೀವನದಲ್ಲಿ ಸಂಗಾತಿಯ ಸಹಕಾರದಿಂದಾಗಿ ಸದಾ ಉಲ್ಲಸಿತರಾಗಿರುವಿರಿ.

ಪದಬಂಧ 4664

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಉತ್ತೇಜನ ನೀಡುವ ವರ್ತಕ ! (4)
2.ಆಣೆಯಲ್ಲಿಯೇ ಈ ನಿಂದೆಯೇ! (4)
4.ಬೆಳದಿಂಗಳನ್ನು ಸೇವಿಸುವುದೆಂದು ನಂಬಲಾಗಿರುವ ಹಕ್ಕಿ (4)
7.ಜನಗಣತಿಗಾಗಿ ನಿರ್ಮಿಸಿರುವ ವೇದಿಕೆ (3)
8.ಜಾಣನ ಬಳಿ ಹಾರಿಬಂದ ಮಕ್ಷಿಕ (2)
9.ಬಲ್ಲವನೊಡನಿರುವ ಪತಿ (3)
10.ಪಂಗಡದವರು ಕುಳಿತಿರುವ ಸಾಲು (2)
11.ಹಸೆ ಹಾಕುವ ಜಾಗದಲ್ಲಿ ಬೆಳೆದಿರುವ ಪಾಚಿ (3)
12.ತಮ್ಮನು ತೋರಿಸಿರುವ ಭೇದಭಾವ (4)
14.ಬೇಡವಾದವರ ಮೇಲೆ ಬೆಳೆಸಿಕೊಂಡಿರುವ ಶತ್ರುತ್ವ (4)
15.ಅಡವಿ ಸೇರಲು ಹೀಗೆ ಆತುರವೇ? (4)

ಮೇಲಿಂದ ಕೆಳಕ್ಕೆ
1.ಪಂಚಭೂತಗಳನ್ನೊಳಗೊಂಡ ಜಗತ್ತು (3)
3.ಪತಿಯೊಂದಿಗಿರುವ ಕಾಲಾಳು (3)
5.ಹಂತ ಹಂತವಾಗಿ ಎಂದು ಹೀಗೆನ್ನಿ (3)
6.ಖಡ್ಗ ಹಿಡಿದು ಮಾಡುವ ಸಾಧನೆ (5)
7.ಈತ ಬಲು ಆಲಸಿಯೇ ಬಿಡಿ! (5)
10.ಖಂಡಿತಾ ಇವನು ವಿದ್ವಾಂಸ! (3)
11.ಹಾವು ಇದ್ದಲ್ಲಿಯೇ ಈ ಮರದ ಮೆಟ್ಟು! (3)
13.ಮಡಿವಂತ ಏರಿರುವ ಅಟ್ಟ (3)



4663ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಜನಜನಿತ 3.ಶತಕ 5.ಸದ್ವಿನಿಯೋಗ 7.ರುಮಾಲು 9.ಕರಟ 11.ಊರ್ವಶಿ 13.ಹೊಲಸುನಾತ 15.ಸಂಪುಟ 16.ದುರುಪಯೋಗ
ಮೇಲಿಂದ ಕೆಳಕ್ಕೆ: 1.ಜಗದ್ಗುರು 2.ನಿಶ್ವಾಸ 4.ತರಂಗ 6.ನಿಕಟ 8.ಮಾತು 9.ಕಡಸು 10.ಪರ್ವ 12.ಶಿಲಾಯುಗ 13.ಹೊಳಪು 14.ತವರು

ಸುಡೊಕು 5050

		4		7	1	2		3
						6		
5	2		8		9		4	7
		5	4			3		
	6			9			7	
3		7			8	5		9
4	1			8			3	
		2	7		4	9		1
7		9		3			2	

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5049 ಸುಡೊಕು

2	4	8	3	7	1	5	6	9
9	5	6	4	8	2	3	7	1
7	3	1	9	5	6	2	8	4
6	9	4	1	3	8	7	5	2
5	7	2	6	4	9	1	3	8
8	1	3	7	2	5	9	4	6
3	6	7	2	1	4	8	9	5
4	2	5	8	9	3	6	1	7
1	8	9	5	6	7	4	2	3


ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ
ಸಕಲೇಶಪುರ
ಕೂಳೆ 600-650
ನಡುಗೋಲು 700-750
ರಾಶಿ 800-850
ರಾಶಿ ಉತ್ತಮ 900-950
ಜರಡಿ 1000-1050
ಹೆರಕಿದ್ದು 1200-1300
ಹಸಿರು ಸಾಧಾರಣ 800-850
ಹಸಿರು ಉತ್ತಮ 1100-1050
ಹಸಿರು ಅತಿ ಉತ್ತಮ 1300-1400
ಕಾಳು ಮೆಣಸು 385
ಅಡಿಕೆ
ಬಂಟ್ವಾಳ
ಕೋಕ 10000-22500
ಹೊಸತು 23500-43000
ಹಳತು 42500-52000
ಚಿತ್ರದುರ್ಗ
ಅಪಿ 42419-42829
ಬೆಟ್ಟೆ 35610-36079
ಕೆಂಪುಗೋಟು 29600-30000
ರಾಶಿ 41939-42369
ಸಿದ್ದಾಪುರ
ಬಿಳಿಗೋಟು 27899-32989
ಚಾಲಿ 35399-38299
ಕೋಕ 26489-29899
ಕೆಂಪುಗೋಟು 29599-31012
ರಾಶಿ 38299-40509
ತಟ್ಟಿಬೆಟ್ಟೆ 31099-33089
ಶಿರಸಿ
ಬೆಟ್ಟೆ 26699-39199
ಬಿಳಿಗೋಟು 20511-33899
ಚಾಲಿ 33109-38962
ರಾಶಿ 37899-41199
ಯಲ್ಲಾಪುರ
ಬಿಳಿಗೋಟು 26891-33869
ಚಾಲಿ 34899-38770
ಕೋಕ 20899-31092
ಕೆಂಪುಗೋಟು 28299-32899
ರಾಶಿ 39619-44319
ತಟ್ಟಿಬೆಟ್ಟೆ 33499-38700
ಶಿವಮೊಗ್ಗ (ಎಪಿಎಂಸಿ)
ಗೊರಬಲು 17009-34509
ರಾಶಿ 37199-41869
ಸರಕು 49000-75100
ಸಾಗರ
ಬಿಳಿಗೋಟು 30399-32299
ಚಾಲಿ 34699-36529
ಕೋಕ 30169-30169
ಕೆಂಪುಗೋಟು 30899-31599
ರಾಶಿ 36009-42499
ಸಿಪ್ಪೆಗೋಟು 11969-20609

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	11850	11400	11000	156.25 ಸೆಂಟ್ಸ್
ಎಸಿ	4700	4400	4350	
ಆರ್‌ಪಿ	5700	5600	5750	ಲಂಡನ್
ಆರ್‌ಸಿ	3300	3250	3375	1732 ಡಾಲರ್ಸ್

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	15,752
ಇಂದಿನ ಅಂತ್ಯ	15,632
▼	120
ದಿನದ ಕನಿಷ್ಠ	15,578

ವಿನಿಮಯ ದರ

$ ಡಾಲರ್	74.61
£ ಪೌಂಡ್	101.83
€ ಯುರೊ	88.03
¥ ಯೆನ್ (100ಕ್ಕೆ)	68

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು
100 ಮೊಟ್ಟೆಗೆ ₹525
12 ಮೊಟ್ಟೆಗೆ ₹70
ಮೈಸೂರು
100 ಮೊಟ್ಟೆಗೆ ₹525

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈಂಡ್)	₹1470 (1480)
ಸೋಯಾ (ರಿಫೈಂಡ್)	₹1395 (1400)
ಸೂರ್ಯಕಾಂತಿ (ರಿಫೈಂಡ್)	₹1450(1430)
ಪಾಮೋಲಿನ್	₹1215(1215)

ಬೆಂಗಳೂರು ಈರುಳ್ಳಿ ಧಾರಣೆ

ಕ್ವಿಂಟಲ್‌ಗೆ

ದೊಡ್ಡ	₹1800-2000
ಮಧ್ಯಮ	₹1600-1800
ಸಣ್ಣ	₹1000-1600

ಮುಂಬೈ ಧಾರಣೆ

ಶೇಂಗಾ
20-7-2021

ಜಾವಾ 70/80(ಹೊಸ)	10150-10200
ಜಾವಾ 80/90(ಹೊಸ)	9250-9300
ದಪ್ಪ ಮಧ್ಯಪ್ರದೇಶ(ಹೊಸ)	10000-10100
ದಪ್ಪ ಗುಜರಾತ್(ಹೊಸ)	9400-9500

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1480 (1490)
ಒಂದು ವಾರದ ಡೆಲಿವರಿ	1475 (1485)
ಸೋಯಾ ಕಚ್ಚಾ	1360 (1370)
ಪಾಮ್ ವಾರದ ಡೆಲಿವರಿ	1213 (1213)
ಸೂರ್ಯಕಾಂತಿ ಎಣ್ಣೆ ಕಚ್ಚಾ	1380 (1380)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)
ಅಪರಂಜಿ ಚಿನ್ನ 10 ಗ್ರಾಂ
48,000 (48,100)
ಬೆಳ್ಳಿ ಕೆ.ಜಿ 66,900 (67,900)
ಆವರಣದಲ್ಲಿ ಹಿಂದಿನ ದಿನದ ಧಾರಣೆ

ಪಿಂಚಣಿ ನಿಧಿ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸುಪ್ರತಿಮ್ ಮಾಹಿತಿ

ಪಿಂಚಣಿ ನಿಧಿ ಐಪಿಒಗಳಲ್ಲಿ ಹೂಡಿಕೆ

ಮುಂಬೈ (ಪಿಟಿಐ): ಪಿಂಚಣಿ ನಿಧಿ ನಿರ್ವಹಣೆ ಮಾಡುವವರಿಗೆ (ಪಿಎಫ್‌ಎಂ) ಪಿಂಚಣಿ ಹಣವನ್ನು ಬೇರೆ ಬೇರೆ ಕಂಪನಿಗಳ ಷೇರುಗಳಲ್ಲಿ ಐಪಿಒ (ಆರಂಭಿಕ ಸಾರ್ವಜನಿಕ ಹೂಡಿಕೆ) ಮೂಲಕವೂ ತೊಡಗಿಸಲು ಅವಕಾಶ ಸಿಗಲಿದೆ. ಅಲ್ಲದೆ, ಈಗ ಅವಕಾಶ ಇರುವುದಕ್ಕಿಂತ ಹೆಚ್ಚಿನ ಸಂಖ್ಯೆಯ ಕಂಪನಿಗಳ ಷೇರುಗಳಲ್ಲಿ ಹಣವನ್ನು ತೊಡಗಿಸಲು ಸಾಧ್ಯವಾಗಲಿದೆ.

ಪಿಂಚಣಿ ನಿಧಿಗಳಲ್ಲಿ ಹಣ ತೊಡಗಿಸುವವರ ಸಂಖ್ಯೆಯನ್ನು ಒಂದು ಕೋಟಿಯಷ್ಟು ಹೆಚ್ಚಿಸಬೇಕು ಎಂಬ ಗುರಿಯನ್ನು ಪಿಂಚಣಿ ನಿಧಿ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ (ಪಿಎಫ್‌ಆರ್‌ಡಿಎ) ಹೊಂದಿದೆ. ಹಾಲಿ ಆರ್ಥಿಕ ವರ್ಷದ ಅಂತ್ಯದೊಳಗೆ ಈ ಗುರಿ ತಲುಪಬೇಕು ಎಂಬುದು ಅದರ ಉದ್ದೇಶ. 'ಸಾಂಕ್ರಾಮಿಕದ ಅವಧಿಯಲ್ಲಿ ಪಿಂಚಣಿ ಬಗ್ಗೆ ಜನರ ಆಸಕ್ತಿ ಹೆಚ್ಚಾಗಿದೆ' ಎಂದು ಪಿಎಫ್‌ಆರ್‌ಡಿಎ ಅಧ್ಯಕ್ಷ ಸುಪ್ರತಿಮ್ ವಂದ್ಯೋಪಾಧ್ಯಾಯ ವರದಿಗಾರರಿಗೆ ತಿಳಿಸಿದರು.

ಈಕ್ವಿಟಿಗಳಲ್ಲಿ ಹೂಡಿಕೆ ಮಾಡಬಹುದಾದ ಮೊತ್ತವನ್ನು ವಿನಿಯೋಗಿಸುವ ವಿಚಾರದಲ್ಲಿ ಪಿಎಫ್‌ಎಂಗಳಿಗೆ ಈಗ ಕೆಲವು ನಿರ್ಬಂಧಗಳು ಇವೆ. ಅವರು ₹ 5 ಸಾವಿರ ಕೋಟಿಗಿಂತ ಹೆಚ್ಚಿನ ಮಾರುಕಟ್ಟೆ ಬಂಡವಾಳ ಹೊಂದಿರುವ ಕಂಪನಿಗಳ, ಆಪ್ಷನ್ಸ್ ಆ್ಯಂಡ್ ಫ್ಯೂಚರ್ಸ್ ವಿಭಾಗದಲ್ಲಿ ವಹಿವಾಟು ನಡೆಸುವ ಷೇರುಗಳಲ್ಲಿ ಮಾತ್ರ ಹೂಡಿಕೆ ಮಾಡಬಹುದು.

ಇದರಿಂದಾಗಿ ನಿಧಿ ನಿರ್ವಹಣೆ ಮಾಡುವವರಿಗೆ ಹೆಚ್ಚಿನ ಕಡೆಗಳಲ್ಲಿ ಹೂಡಿಕೆ ಮಾಡಲು ಆಗುತ್ತಿಲ್ಲ. ರಾಷ್ಟ್ರೀಯ ಪಿಂಚಣಿ ಯೋಜನೆ (ಎನ್‌ಪಿಎಸ್) ಆರಂಭವಾದಾಗಿನಿಂದ ನಿಧಿ ನಿರ್ವಹಣೆ ಮಾಡುವವರು ಈಕ್ವಿಟಿ ಹೂಡಿಕೆಗಳ ಮೇಲೆ ವಾರ್ಷಿಕ ಸರಾಸರಿ ಶೇ 11.31ರಷ್ಟು (ಸಿಎಜಿಆರ್) ಲಾಭ ತಂದುಕೊಟ್ಟಿದ್ದಾರೆ. 'ನಿರ್ಬಂಧಗಳ ಕಾರಣದಿಂದಾಗಿ ಅವೆನ್ಯು ಸೂಪರ್ ಮಾರ್ಕೆಟ್‌ನಂತಹ ಕಂಪನಿಗಳಲ್ಲಿ ಹೂಡಿಕೆ ಮಾಡಲು ನಿಧಿ ನಿರ್ವಾಹಕರಿಗೆ ಸಾಧ್ಯವಾಗಲಿಲ್ಲ' ಎಂದು ಅಧಿಕಾರಿಗಳು ಹೇಳಿದ್ದಾರೆ.

'ಇನ್ನು ಎರಡು ಅಥವಾ ಮೂರು ದಿನಗಳಲ್ಲಿ ನಾವು ನಿರ್ಬಂಧಗಳು ಕಡಿಮೆ ಇರುವ ನಿಯಮಗಳನ್ನು ಅಧಿಸೂಚನೆಯಲ್ಲಿ ಪ್ರಕಟಿಸಲಿದ್ದೇವೆ' ಎಂದು ವಂದ್ಯೋಪಾಧ್ಯಾಯ ತಿಳಿಸಿದರು. ಹೊಸ ನಿಯಮಗಳ ಅನ್ವಯ ನಿಧಿ ನಿರ್ವಾಹಕರು ಪಿಂಚಣಿ ನಿಧಿಯಲ್ಲಿನ ಹಣವನ್ನು ಐಪಿಒಗಳಲ್ಲಿ ಕೂಡ ಹೂಡಿಕೆ ಮಾಡಬಹುದು. ರಾಷ್ಟ್ರೀಯ ಷೇರುಪೇಟೆ ಹಾಗೂ ಮುಂಬೈ ಷೇರುಪೇಟೆಯ ಮುಂಚೂಣಿ 200 ಕಂಪನಿಗಳ ಷೇರುಗಳಲ್ಲಿ ಕೂಡ ತೊಡಗಿಸಬಹುದು.

'ಈಕ್ವಿಟಿಯಿಂದ ಸಿಗುವ ಲಾಭದ ಪ್ರಮಾಣ ಹೆಚ್ಚಿರುವ ಕಾರಣ ಅಲ್ಲಿ ಹೂಡಿಕೆ ಜಾಸ್ತಿ ಆಗಬೇಕು' ಎಂದು ವಂದ್ಯೋಪಾಧ್ಯಾಯ ಅಭಿಪ್ರಾಯ ವ್ಯಕ್ತಪಡಿಸಿದರು.

ಮುಖ್ಯಾಂಶಗಳು
- ಹೆಚ್ಚಿನ ಸಂಖ್ಯೆಯ ಕಂಪನಿಗಳ ಷೇರುಗಳಲ್ಲಿ ಹೂಡಿಕೆಗೆ ಅವಕಾಶ
- ಪಿಂಚಣಿ ನಿಧಿಗಳಲ್ಲಿ ಹೂಡಿಕೆದಾರರ ಸಂಖ್ಯೆ ಹೆಚ್ಚಿಸಲು ಪ್ರಾಧಿಕಾರದ ನಿರ್ಧಾರ

'ದೇಶದಲ್ಲಿವೆ 350 ಇ.ವಿ. ಚಾರ್ಜಿಂಗ್ ಕೇಂದ್ರ'

ನವದೆಹಲಿ (ಪಿಟಿಐ): ವಿದ್ಯುತ್ ಚಾಲಿತ ವಾಹನಗಳ ತಯಾರಿಕೆ ಉತ್ತೇಜಿಸುವ 2ನೇ ಹಂತದ ಯೋಜನೆಯಲ್ಲಿ (ಫೇಮ್–2) ಜೂನ್ 6ರವರೆಗಿನ ಮಾಹಿತಿಯ ಪ್ರಕಾರ, ದೇಶದ ವಿವಿಧ ನಗರಗಳಲ್ಲಿ ಒಟ್ಟು 350 ಇ.ವಿ. ಚಾರ್ಜಿಂಗ್ ಕೇಂದ್ರಗಳು ಇವೆ ಎಂದು ಸರ್ಕಾರವು ಲೋಕಸಭೆಗೆ ಮಾಹಿತಿ ನೀಡಿದೆ.

ಚಂಡೀಗಢ, ದೆಹಲಿ, ಜೈಪುರ, ರಾಂಚಿ ಮತ್ತು ಆಗ್ರಾವನ್ನೂ ಒಳಗೊಂಡು ಹಲವು ನಗರಗಳಲ್ಲಿ ಈ ಚಾರ್ಜಿಂಗ್ ಕೇಂದ್ರಗಳು ಇವೆ ಎಂದು ಬೃಹತ್ ಕೈಗಾರಿಕೆಗಳ ರಾಜ್ಯ ಸಚಿವ ಕೃಷನ್ ಪಾಲ್ ಗುರ್ಜರ್ ಅವರು ಲೋಕಸಭೆಗೆ ಮಾಹಿತಿ ನೀಡಿದ್ದಾರೆ.

ಪ್ರಶ್ನೋತ್ತರ



ಯು.ಪಿ.ಪುರಾಣಿಕ್
ಬ್ಯಾಂಕಿಂಗ್‌-ಹಣಕಾಸು ತಜ್ಞ
uppuranik@gmail.com
ಮೊ: 9448015300

ರಾಜಶೇಖರ್, ಮೈಸೂರು
- **ಪ್ರಶ್ನೆ: ಎಲ್‌ಐಸಿ ಈಚೆಗೆ ಬಿಡುಗಡೆ ಮಾಡಿದ 'ನ್ಯೂ ಜೀವನ್ ಶಾಂತಿ' ಪಾಲಿಸಿಯ ವೈಶಿಷ್ಟ್ಯವೇನು? ಇದನ್ನು ಯಾರು ಮಾಡಿಸಬಹುದು? ಎಲ್‌ಐಸಿಯ ಅಧಿಕಾರಿಗಳನ್ನು ಸಂಪರ್ಕಿಸಲು ಅವರ ದೂರವಾಣಿ ಸಂಖ್ಯೆ ತಿಳಿಸಿ.**

ಉತ್ತರ: 'ನ್ಯೂ ಜೀವನ್ ಶಾಂತಿ' ಯೋಜನೆಯು ಎಲ್‌ಐಸಿಯ, ಪಿಂಚಣಿ ಪಡೆಯುವ ಯೋಜನೆ ಆಗಿದೆ. 30 ವರ್ಷದಿಂದ 79 ವರ್ಷದವರೆಗಿನವರು ಒಂಟಿಯಾಗಿ, ಜಂಟಿಯಾಗಿ ಈ ಯೋಜನೆಯಲ್ಲಿ ಹೂಡಿಕೆ ಮಾಡಬಹುದು. ಕನಿಷ್ಠ ಹೂಡಿಕೆ ₹ 1.50 ಲಕ್ಷ. ಗರಿಷ್ಠ ಹೂಡಿಕೆಗೆ ಮಿತಿ ಇಲ್ಲ. ಹೂಡಿಕೆ ಮಾಡಿದ ಒಂದು ವರ್ಷದ ನಂತರ ಪಿಂಚಣಿ ಪಡೆಯಬಹುದಾಗಿದೆ ಹಾಗೂ ಒಂದು ವರ್ಷದ ಅವಧಿಗೆ ಹೂಡಿಕೆಯ ಶೇ 105ರಷ್ಟು ಜೀವ ವಿಮೆ ರಕ್ಷಣೆ ಕೂಡಾ ಇರುತ್ತದೆ. ಇದೊಂದು ಜೀವಾವಧಿ ಹೂಡಿಕೆ ಹಾಗೂ ಜೀವನಪರ್ಯಂತ ಪ್ರತಿ ತಿಂಗಳೂ ಪಿಂಚಣಿ ಪಡೆಯಬಹುದಾಗಿದೆ. ಪಾಲಿಸಿದಾರ ಮರಣ ಹೊಂದಿದಾಗ, ನಾಮ ನಿರ್ದೇಶನ ಹೊಂದಿದ ವ್ಯಕ್ತಿ ಸಂಪೂರ್ಣ ಹಣ ಪಡೆಯಬಹುದು. ಜಂಟಿ ಪಾಲಿಸಿಯಾದಲ್ಲಿ ಉಳಿದ ವ್ಯಕ್ತಿ ಅವರ ಜೀವಿತಕಾಲದ ತನಕವೂ ಪಿಂಚಣಿ ರೂಪದಲ್ಲಿ ಹಣ ಪಡೆಯಬಹುದು. ಹೂಡಿಕೆದಾರರು ಪಾಲಿಸಿ ಮಾಡಿಸಿದ ವರ್ಷ ಗರಿಷ್ಠ ₹ 1.50 ಲಕ್ಷ ಸೆಕ್ಷನ್ 80ಸಿ ಆಧಾರದ ಮೇಲೆ ಒಟ್ಟು ಆದಾಯದಿಂದ ಕಳೆದು ತೆರಿಗೆ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗೆ ಸಮೀಪದ ಎಲ್‌ಐಸಿ ಕಚೇರಿಗೆ ಭೇಟಿ ಕೊಡಿ.

ಚಂದ್ರಮತಿ, ಉಡುಪಿ
- **ಪ್ರಶ್ನೆ: ನನ್ನ ಮಗ ಹಾಗೂ ಮಗಳು ಬೆಂಗಳೂರಿನಲ್ಲಿ ಸಾಫ್ಟ್‌ವೇರ್ ಎಂಜಿನಿಯರ್ ಆಗಿ ಬಹುರಾಷ್ಟ್ರೀಯ ಕಂಪನಿಗಳಲ್ಲಿ ಕೆಲಸ ಮಾಡುತ್ತಾರೆ. ಇಬ್ಬರೂ ಅವಿವಾಹಿತರು. ಮಗನಿಗೆ ವಾರ್ಷಿಕ ₹ 11.50 ಲಕ್ಷ, ಮಗಳಿಗೆ ವಾರ್ಷಿಕ ₹ 10.80 ಲಕ್ಷ ಸಂಬಳ ಇದೆ. ಮಗನ ವಯಸ್ಸು 28 ವರ್ಷ, ಮಗಳ ವಯಸ್ಸು 26 ವರ್ಷ. ನಿಮ್ಮ ಅಂಕಣ ನೋಡಿ, ಪ್ರತೀ ವರ್ಷ ಆರ್‌.ಡಿ. ಮಾಡುತ್ತಾ ಬಂದು ಮಕ್ಕಳನ್ನು ಓದಿಸಿದ್ದೇನೆ ಹಾಗೂ ಪ್ರತಿ ವರ್ಷ 10 ಗ್ರಾಂ ಬಂಗಾರ ಕೊಳ್ಳುತ್ತಾ ಬಂದೆ. ಮಕ್ಕಳು ಉತ್ತಮ ಉಳಿತಾಯ ಮಾಡಲು, ತೆರಿಗೆ ಉಳಿಸಲು ಸಲಹೆ ನೀಡಿ. ಈ ವಿಚಾರದಲ್ಲಿ ಅವರಿಗೆ ಏನೂ ಅನುಭವ ಇಲ್ಲ. ಸಾಲಮಾಡಿ ಮನೆ ಕಟ್ಟಿಸಬೇಕೆಂದಿದ್ದಾರೆ.**

ಉತ್ತರ: ಆರ್‌.ಡಿ. ಒಂದು ಕ್ರಮಬದ್ಧವಾದ ಉಳಿತಾಯ. ನೀವು ಇಂತಹ ಉಳಿತಾಯ ಮಾಡಿ ಮಕ್ಕಳನ್ನು ಓದಿಸಿರುವುದು ನನಗೆ ತುಂಬಾ ಖುಷಿ ತಂದಿದೆ. ನಿಮಗೆ ಸಾಧ್ಯವಾದರೆ ಬಂಗಾರದ ನಾಣ್ಯ ಕೊಳ್ಳುವ ಪ್ರಕ್ರಿಯೆಯನ್ನು ಮಕ್ಕಳ ಮದುವೆಯ ತನಕ ಮುಂದುವರಿಸಿ. ಮಕ್ಕಳು ಗೃಹಸಾಲ ಪಡೆದು ಮನೆ ಮಾಡಿಕೊಳ್ಳುವುದಾದರೆ ಮಾಡಿಕೊಳ್ಳಲಿ. ಇದೊಂದು ಉತ್ತಮ ಹೂಡಿಕೆ. ಸೆಕ್ಷನ್ 80ಸಿ ಹಾಗೂ 24 (ಬಿ) ಆಧಾರದ ಮೇಲೆ ಕಂತು ಬಡ್ಡಿಯಲ್ಲಿ ತೆರಿಗೆ ವಿನಾಯಿತಿ ಪಡೆಯಬಹುದು. ಸದ್ಯ ಅವರು ಕೊಡುವ ಮನೆಬಾಡಿಗೆ, ಗೃಹ ಸಾಲದಿಂದ ಉಳಿಸಬಹುದಾದ ತೆರಿಗೆ ಇವೆರಡರಿಂದಲೇ ಸಾಲದ ಬಹುಪಾಲು ಇಎಂಐ ತುಂಬಬಹುದು. ನೀವು ಹೇಗೆ ಆರ್‌.ಡಿ. ಮಾಡಿ ಮಕ್ಕಳನ್ನು ಓದಿಸಿದ್ದೀರೋ ಅದೇ ದಾರಿಯನ್ನು ಮಕ್ಕಳೂ ಅನುಸರಿಸಲಿ. ನಿಮ್ಮ ಇಬ್ಬರೂ ಮಕ್ಕಳು ಕನಿಷ್ಠ ₹ 50 ಸಾವಿರ ವಾರ್ಷಿಕ ಎನ್‌ಪಿಎಸ್ ಮಾಡಿ, ಪ್ರತ್ಯೇಕವಾಗಿ ತೆರಿಗೆ ವಿನಾಯಿತಿ ಪಡೆಯಲು ತಿಳಿಸಿ (ಸೆಕ್ಷನ್ 80ಸಿಸಿಡಿ–1ಬಿ). ನಿಮ್ಮ ಕುಟುಂಬಕ್ಕೆ ಉಜ್ವಲ ಭವಿಷ್ಯ ಹಾರೈಸುತ್ತೇನೆ.

ಸೋಮಶೇಖರ್, ರಾಯಚೂರು
- **ಪ್ರಶ್ನೆ: ನನ್ನ ವಯಸ್ಸು 65 ವರ್ಷ. ನಿವೃತ್ತ ಸರ್ಕಾರಿ ನೌಕರ. ತಿಂಗಳ ಪಿಂಚಣಿ ₹ 48 ಸಾವಿರ. ವಾರ್ಷಿಕ ಬಡ್ಡಿ ವರಮಾನ ₹ 2,87,975. ಸ್ವಂತ ಮನೆ ಇದೆ. ಎರಡು ಮನೆಗಳ ಬಾಡಿಗೆಯಿಂದ ತಿಂಗಳಿಗೆ ₹ 40 ಸಾವಿರ ಬರುತ್ತದೆ. ತೆರಿಗೆ ಹಾಗೂ ರಿಟರ್ನ್ಸ್ ತುಂಬುವ ವಿಚಾರದಲ್ಲಿ ಸಲಹೆ ನೀಡಿ.**

ಉತ್ತರ: ನಿಮ್ಮ ವಾರ್ಷಿಕ ಪಿಂಚಣಿ ವರಮಾನ ₹ 5.76 ಲಕ್ಷ. ಬಡ್ಡಿ ಆದಾಯ ₹ 2,82,975. ಇವೆರಡರಿಂದ ನಿಮ್ಮ ವರಮಾನ ₹ 8,58,975 ಆಗುತ್ತದೆ. ಇದರಲ್ಲಿ ಸೆಕ್ಷನ್ 80ಟಿಟಿಬಿ ಅಡಿ ಬಡ್ಡಿಯಲ್ಲಿ ₹ 50 ಸಾವಿರ ಹಾಗೂ ಸೆಕ್ಷನ್ 16 (1ಎ)–ಸ್ಟ್ಯಾಂಡರ್ಡ್ ಡಿಡಕ್ಷನ್ ₹ 50 ಸಾವಿರ ಕಳೆದಾಗ ನಿಮ್ಮ ವರಮಾನ ₹ 7,58,975 ಆಗುತ್ತದೆ. ಇದೇ ವೇಳೆ ನಿಮಗೆ ₹ 40 ಸಾವಿರ ಬಾಡಿಗೆ ಬರುವುದರಿಂದ ಸೆಕ್ಷನ್ 24 (ಎ) ಆಧಾರದ ಮೇಲೆ ಶೇ 30ರಷ್ಟು ಇದರಲ್ಲಿ ಕಳೆದಾಗ ನಿಮ್ಮ ಬಾಡಿಗೆ ವರಮಾನ ವಾರ್ಷಿಕ ₹ 2,36,000 ಆಗುತ್ತದೆ. ಪಿಂಚಣಿ ಬಡ್ಡಿ, ಬಾಡಿಗೆ, ಇವುಗಳಿಂದ ಬರುವ ವರಮಾನದಲ್ಲಿ ಇಲ್ಲಿ ತಿಳಿಸಿದಂತೆ ವಿನಾಯಿತಿ ಪಡೆದ ನಂತರ ನಿಮ್ಮ ವಾರ್ಷಿಕ ಆದಾಯ ₹ 9,94,975 ಆಗುತ್ತದೆ. ನೀವು ₹ 3 ಲಕ್ಷಗಳ ತನಕ ತೆರಿಗೆ ವಿನಾಯಿತಿ ಪಡೆದು ನಂತರದ ಆದಾಯಕ್ಕೆ ತೆರಿಗೆ ಕೊಡಬೇಕಾಗುತ್ತದೆ. ಸ್ವಲ್ಪ ತೆರಿಗೆ ಉಳಿಸಲು ವಾರ್ಷಿಕ ₹ 1.50 ಲಕ್ಷವನ್ನು 5 ವರ್ಷಗಳ ಠೇವಣಿ ಮಾಡಿ. ಹಾಗೂ ಗರಿಷ್ಠ ₹ 50 ಸಾವಿರಕ್ಕೆ ಆರೋಗ್ಯ ವಿಮೆ ಮಾಡಿಸಿ. ಈ ಬಾರಿ ನೀವು ಸೆಪ್ಟೆಂಬರ್ 30ರೊಳಗೆ ರಿಟರ್ನ್ಸ್ ಸಲ್ಲಿಸಲು ಮರೆಯದಿರಿ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ
ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ. ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001.
ಇ–ಮೇಲ್: businessdesk@prajavani.co.in

ಆಧಾರ್: ಮನೆ ಬಾಗಿಲಲ್ಲೇ ಮೊಬೈಲ್ ಸಂಖ್ಯೆ ಅಪ್ಡೇಟ್

ನವದೆಹಲಿ (ಪಿಟಿಐ): ಆಧಾರ್ ಕಾರ್ಡ್‌ನಲ್ಲಿ ಮೊಬೈಲ್ ದೂರವಾಣಿ ಸಂಖ್ಯೆ ತಪ್ಪಾಗಿದ್ದರೆ ಅದನ್ನು ಪೋಸ್ಟ್‌ಮ್ಯಾನ್ ಸಹಾಯದಿಂದ ಮನೆ ಬಾಗಿಲಿನಲ್ಲೇ ಸರಿಪಡಿಸುವ ಅವಕಾಶ ಲಭ್ಯವಾಗಲಿದೆ.

ಆಧಾರ್ ಕಾರ್ಡ್ ಹೊಂದಿರುವವರ ಮೊಬೈಲ್ ದೂರವಾಣಿ ಸಂಖ್ಯೆ ಅಪ್ಡೇಟ್ ಮಾಡಲು ಭಾರತೀಯ ಅಂಚೆ ಪೇಮೆಂಟ್ಸ್ ಬ್ಯಾಂಕ್ (ಐಪಿಪಿಬಿ) ಮತ್ತು ಭಾರತೀಯ ವಿಶಿಷ್ಟ ಗುರುತಿನ ಚೀಟಿ ಪ್ರಾಧಿಕಾರ ಒಪ್ಪಂದ ಮಾಡಿಕೊಂಡಿವೆ. ಐಪಿಪಿಬಿಯ 650 ಶಾಖೆಗಳು, 1.46 ಲಕ್ಷ ಪೋಸ್ಟ್‌ಮ್ಯಾನ್‌ಗಳು ಹಾಗೂ ಗ್ರಾಮೀಣ ಅಂಚೆ ಸೇವಕರ (ಜಿಡಿಎಸ್) ಮೂಲಕ ಈ ಸೇವೆ ಪಡೆದುಕೊಳ್ಳಬಹುದು.

'ಎಲ್ಲ ಕಡೆಗಳಲ್ಲಿಯೂ ಇರುವ ಅಂಚೆ ಕಚೇರಿಗಳು, ಪೋಸ್ಟ್‌ಮ್ಯಾನ್ ಮತ್ತು ಜಿಡಿಎಸ್ ನೆರವಿನಿಂದ ಮೊಬೈಲ್ ದೂರವಾಣಿ ಸಂಖ್ಯೆಯನ್ನು ಅಪ್ಡೇಟ್ ಮಾಡಿಸಿಕೊಳ್ಳುವ ಸೇವೆಯು ಡಿಜಿಟಲ್ ಕಂದಕವನ್ನು ಮುಚ್ಚುವ ಐಪಿಪಿಬಿಯ ಉದ್ದೇಶವನ್ನು ಈಡೇರಿಸುವಂತಿದೆ' ಎಂದು ಐಪಿಪಿಬಿ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಜೆ. ವೆಂಕಟ್ರಾಮು ಹೇಳಿದ್ದಾರೆ.

ಮೂರನೇ ದಿನವೂ ಸೂಚ್ಯಂಕ ಇಳಿಕೆ

ಮುಂಬೈ (ಪಿಟಿಐ): ದೇಶದ ಷೇರುಪೇಟೆಗಳು ಸತತ ಮೂರನೇ ದಿನವೂ ಮಾರಾಟದ ಒತ್ತಡಕ್ಕೆ ಒಳಗಾಗಿ ಇಳಿಕೆ ಕಂಡಿವೆ.

ಕೊರೊನಾ ವೈರಾಣುವಿನ ಡೆಲ್ಟಾ ರೂಪಾಂತರಿ ತಳಿಯು ವೇಗವಾಗಿ ಹರಡುತ್ತಿರುವುದರಿಂದ ಜಾಗತಿಕ ಮಾರುಕಟ್ಟೆಯಲ್ಲಿ ಮಂಗಳವಾರ ಮಾರಾಟದ ಒತ್ತಡ ಹೆಚ್ಚಾಯಿತು. ಇದು ದೇಶಿ ಷೇರುಪೇಟೆಗಳ ಮೇಲೆ ಪರಿಣಾಮ ಬೀರಿತು ಎಂದು ತಜ್ಞರು ಹೇಳಿದ್ದಾರೆ.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕವು 355 ಅಂಶ ಇಳಿಕೆ ಕಂಡಿದ್ದರೆ, ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 120 ಅಂಶ ಇಳಿಕೆ ಆಗಿದೆ.

ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ 27 ಪೈಸೆ ಹೆಚ್ಚಾಗಿ ಒಂದು ಡಾಲರ್‌ಗೆ ₹ 74.61ಕ್ಕೆ ತಲುಪಿದೆ.

ಐ.ಟಿ. ಪೋರ್ಟಲ್‌ನ ಕೆಲ ಸಮಸ್ಯೆ ಪರಿಹಾರ: ಕೇಂದ್ರ

ನವದೆಹಲಿ (ಪಿಟಿಐ): ಹೊಸ ಆದಾಯ ತೆರಿಗೆ ಪೋರ್ಟಲ್‌ನಲ್ಲಿ ತಾಂತ್ರಿಕ ಸಮಸ್ಯೆಗಳು ಇರುವುದನ್ನು ಇನ್ಫೊಸಿಸ್ ಒಪ್ಪಿಕೊಂಡಿದ್ದು, ಕೆಲವು ಆರಂಭಿಕ ಹಂತದ ಸಮಸ್ಯೆಗಳನ್ನು ಪರಿಹರಿಸಿದೆ ಎಂದು ಕೇಂದ್ರ ಸರ್ಕಾರವು ಮಂಗಳವಾರ ರಾಜ್ಯಸಭೆಗೆ ತಿಳಿಸಿದೆ.

ಹೊಸ ಜಾಲತಾಣ www.incometax.gov.inಗೆ ಜೂನ್ 7ರಂದು ಚಾಲನೆ ನೀಡಲಾಗಿತ್ತು. ಅಂದಿನಿಂದಲೂ ತಾಂತ್ರಿಕ ಸಮಸ್ಯೆಗಳು ಕಾಣಿಸಿಕೊಳ್ಳುತ್ತಿರುವ ಬಗ್ಗೆ ತೆರಿಗೆ ಪಾವತಿದಾರರು ಮತ್ತು ತೆರಿಗೆ ವೃತ್ತಿಪರರರು ಸರ್ಕಾರಕ್ಕೆ ದೂರು ನೀಡುತ್ತಲೇ ಬಂದಿದ್ದರು. ಇದರಿಂದಾಗಿ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಜೂನ್ 22ರಂದು ಇನ್ಫೊಸಿಸ್ ತಂಡದೊಂದಿಗೆ ಸಭೆ ನಡೆಸಿ, ಸಮಸ್ಯೆಗಳನ್ನು ಪರಿಹರಿಸುವಂತೆ ಸೂಚನೆ ನೀಡಿದ್ದರು.

ಪೋರ್ಟಲ್‌ನಲ್ಲಿ ಇರುವ ಸಮಸ್ಯೆಗಳ ಕುರಿತಾಗಿ 700ಕ್ಕೂ ಅಧಿಕ ಇ–ಮೇಲ್‌ಗಳು ಬಂದಿದ್ದು, 2 ಸಾವಿರಕ್ಕೂ ಅಧಿಕ ಸಮಸ್ಯೆಗಳು ಇರುವ ಬಗ್ಗೆ ತಿಳಿಸಲಾಗಿದೆ. ತೆರಿಗೆದಾರರು, ತೆರಿಗೆ ವೃತ್ತಿಪರರು ಮತ್ತು ಭಾರತೀಯ ಲೆಕ್ಕ ಪರಿಶೋಧಕ ಸಂಸ್ಥೆ (ಐಸಿಎಐ) ಒಳಗೊಂಡು ಹಲವರು ಸಮಸ್ಯೆಗಳ ಕುರಿತು ದೂರು ನೀಡಿದ್ದರು ಎಂದು ಹಣಕಾಸು ಖಾತೆ ರಾಜ್ಯ ಸಚಿವ ಪಂಕಜ್ ಚೌಧರಿ ಅವರು ರಾಜ್ಯಸಭೆಗೆ ಮಾಹಿತಿ ನೀಡಿದ್ದಾರೆ.

ಪೋರ್ಟಲ್‌ನಲ್ಲಿ ತಾಂತ್ರಿಕ ಸಮಸ್ಯೆಗಳಿರುವುದನ್ನು ಇನ್ಫೊಸಿಸ್ ಒಪ್ಪಿಕೊಂಡಿದೆ. ಇವುಗಳನ್ನು ಪರಿಹರಿಸುತ್ತ ಬರಲಾಗುತ್ತಿದೆ. ನಿಧಾನಗತಿಯ ಕಾರ್ಯಾಚರಣೆ, ಕೆಲವು ವೈಶಿಷ್ಟ್ಯಗಳು ಲಭ್ಯವಿಲ್ಲದೇ ಇರುವುದು ಸೇರಿದಂತೆ ಆರಂಭಿಕ ಹಂತದ ಕೆಲವು ಸಮಸ್ಯೆಗಳನ್ನು ನಿವಾರಣೆ ಮಾಡಿರುವುದಾಗಿ ಕಂಪನಿಯು ತಿಳಿಸಿರುವುದಾಗಿ ಅವರು ಹೇಳಿದ್ದಾರೆ.

ಮಣಿಪುರ ಕಾಂಗ್ರೆಸ್‌ನಲ್ಲಿ ಬಿಕ್ಕಟ್ಟು: ಬಿಜೆಪಿಯತ್ತ ಎಂಟು ಶಾಸಕರ ಚಿತ್ತ?

ಪ್ರಜಾವಾಣಿ ವಾರ್ತೆ

ಗುವಾಹಟಿ: ಮಣಿಪುರದ ಕಾಂಗ್ರೆಸ್ ಘಟಕದಲ್ಲಿ ಬಿಕ್ಕಟ್ಟು ಉದ್ಭವಿಸಿದೆ. ಮಣಿಪುರ ಪ್ರದೇಶ ಕಾಂಗ್ರೆಸ್ ಸಮಿತಿ (ಪಿಸಿಸಿ) ಅಧ್ಯಕ್ಷ ಗೋವಿನ್‌ದಾಸ್ ಕೊಂತೌಜಮ್ ಮತ್ತು ಪಕ್ಷದ ಕನಿಷ್ಠ 8 ಶಾಸಕರು ಬಿಜೆಪಿ ಹೈಕಮಾಂಡ್‌ನ ಜೊತೆ ಸಂಪರ್ಕದಲ್ಲಿದ್ದು, ಪಕ್ಷಾಂತರಕ್ಕೆ ಸಜ್ಜಾಗಿದ್ದಾರೆ ಎಂಬ ವರದಿಗಳಿವೆ.

ಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ಕೊಂತೌಜಮ್ ರಾಜೀನಾಮೆ ಸಲ್ಲಿಸಿದ್ದಾರೆ. ಈ ಬೆಳವಣಿಗೆಯು ಕಾಂಗ್ರೆಸ್ ಪಕ್ಷದಲ್ಲಿ ಆಂತರಿಕ ತುಮುಲವನ್ನು ಹೆಚ್ಚಿಸಿದೆ. ಈ ಕುರಿತು ಪ್ರತಿಕ್ರಿಯಿಸಲು ಕಾಂಗ್ರೆಸ್ ವಕ್ತಾರರು ನಿರಾಕರಿಸಿದ್ದಾರೆ.

ಪಕ್ಷದ ಅಧ್ಯಕ್ಷೆ ಸೋನಿಯಾಗಾಂಧಿ ನಿರ್ದೇಶನದಂತೆ ರಾಜ್ಯ ಉಸ್ತುವಾರಿ ಭಕ್ತ ಚರಣ್ ಅವರು ಬುಧವಾರ ರಾಜ್ಯಕ್ಕೆ ಬರುತ್ತಿದ್ದು, ಮುಖಂಡರ ಜೊತೆಗೆ ಚರ್ಚಿಸುವರು. ರಾಜ್ಯದ ಬೆಳವಣಿಗೆಗಳ ಅರಿವು ಸೋನಿಯಾಗಾಂಧಿ ಅವರಿಗೆ ಇದೆ ಎಂದು ವಕ್ತಾರರಾದ ನಿಂಗೊಂಬಮ್ ಭೂಪೇಂದ್ರ ಹೇಳಿದರು.

ಮಣಿಪುರ 2017ರವರೆಗೂ ಕಾಂಗ್ರೆಸ್‌ನ ಭದ್ರನೆಲೆಯಾಗಿತ್ತು. ಬಿಜೆಪಿ 2017ರಲ್ಲಿ ನಾಗಾ ಪೀಪಲ್ಸ್ ಫ್ರಂಟ್ ಮತ್ತು ನ್ಯಾಷನ್ ಪೀಪಲ್ಸ್ ಪಾರ್ಟಿ ಸಹಯೋಗದಲ್ಲಿ ಅಧಿಕಾರಕ್ಕೆ ಏರಿತ್ತು. 28 ಸ್ಥಾನ ಗೆದ್ದು ಅತಿದೊಡ್ಡ ಪಕ್ಷವಾಗಿ ಕಾಂಗ್ರೆಸ್ ಹೊರಹೊಮ್ಮಿದ್ದರೂ, 21 ಸ್ಥಾನವನ್ನಷ್ಟೇ ಗೆದ್ದಿದ್ದ ಬಿಜೆಪಿ ನೇತೃತ್ವದ ಮೈತ್ರಿಕೂಟ ಸರ್ಕಾರ ರಚಿಸುವುದನ್ನು ತಡೆಯಲು ಆಗಿರಲಿಲ್ಲ. ಮಣಿಪುರದಲ್ಲಿ ಮುಂದಿನ ವರ್ಷ ಸಾರ್ವತ್ರಿಕ ಚುನಾವಣೆ ನಡೆಯಲಿದೆ.

ಸಂಕ್ಷಿಪ್ತ ಸುದ್ದಿ

ಭಾರತಕ್ಕೆ ರಾಣಾ ಹಸ್ತಾಂತರ: ಸಮ್ಮತಿ

ವಾಷಿಂಗ್ಟನ್: 2008ರಲ್ಲಿ ನಡೆದ ಮುಂಬೈ ಮೇಲಿನ ಉಗ್ರರ ದಾಳಿ ಪ್ರಕರಣದ ಆರೋಪಿ, ಪಾಕಿಸ್ತಾನ ಮೂಲದ ಕೆನಡಾ ಉದ್ಯಮಿ ತಹವ್ವುರ್ ರಾಣಾನನ್ನು ಭಾರತಕ್ಕೆ ಹಸ್ತಾಂತರಿಸಲು ಅಮೆರಿಕದ ಅಧ್ಯಕ್ಷ ಜೋ ಬೈಡನ್ ಆಡಳಿತ ಒಪ್ಪಿಗೆ ನೀಡಿದೆ.


ರಾಣಾ

ರಾಣಾ ಹಸ್ತಾಂತರ ಕುರಿತ ಅರ್ಜಿಯ ವಿಚಾರಣೆ ನಡೆಸುತ್ತಿರುವ ಲಾಸ್‌ಏಂಜಲೀಸ್‌ನ ಕೋರ್ಟ್‌ಗೆ ಈ ಮಾಹಿತಿ ನೀಡಲಾಗಿದೆ.


ಇಸ್ರೊ ಗೂಢಚರ್ಯೆ: ಶ್ರೀಕುಮಾರ್‌ಗೆ ಮಧ್ಯಂತರ ರಕ್ಷಣೆ

ಅಹಮದಾಬಾದ್: ಕೇರಳದ 'ಇಸ್ರೊ ಗೂಢಚರ್ಯೆ' ಪ್ರಕರಣದಲ್ಲಿ ಸಿಬಿಐ ಬಂಧಿಸುವ ಭೀತಿಯಿಂದ ನಿರೀಕ್ಷಣಾ ಜಾಮೀನು ಕೋರಿ ಅರ್ಜಿ ಸಲ್ಲಿಸಿರುವ ಮಾಜಿ ಪೊಲೀಸ್ ಮಹಾನಿರ್ದೇಶಕ ಆರ್‌.ಬಿ. ಶ್ರೀಕುಮಾರ್ ಅವರಿಗೆ ಗುಜರಾತ್ ಹೈಕೋರ್ಟ್ ಸೋಮವಾರ ಮಧ್ಯಂತರ ನಿರೀಕ್ಷಣಾ ಜಾಮೀನು ಮಂಜೂರು ಮಾಡಿದೆ.

ಶ್ರೀಕುಮಾರ್ ಬಂಧಿಸದಂತೆ ನ್ಯಾಯಮೂರ್ತಿ ಎ.ಎಸ್. ಸುಪೇಹಿಯಾ ಸಿಬಿಐಗೆ ನೋಟಿಸ್ ನೀಡಿದ್ದಾರೆ. ಇಸ್ರೊ ವಿಜ್ಞಾನಿ ನಂಬಿ ನಾರಾಯಣನ್ ಅವರ ಮೇಲೆ 1994ರಲ್ಲಿ ಬೇಹುಗಾರಿಕೆ ನಡೆಸಿದ ಪ್ರಕರಣದಲ್ಲಿ ಶ್ರೀಕುಮಾರ್ ಸೇರಿ 18 ಪೊಲೀಸರ ವಿರುದ್ಧ ಸಿಬಿಐ ಪ್ರಕರಣ ದಾಖಲಿಸಿದೆ.

ತ್ಯಾಗ, ಸೋದರತ್ವ ಸಾರುವ ಹಬ್ಬ

• ಮಹಮ್ಮದ್ ನೂಮಾನ್



ಇಂದು ಬಕ್ರೀದ್

ಹಜ್ ಯಾತ್ರಿಕರು ಧಾರ್ಮಿಕ ವಿಧಿ ವಿಧಾನದಲ್ಲಿ ಪಾಲ್ಗೊಂಡಿರುವುದು

ಮುಸ್ಲಿಮರ ಪ್ರಮುಖ ಹಬ್ಬಗಳಲ್ಲಿ 'ಬಕ್ರೀದ್' ಕೂಡ ಒಂದು. ಇಸ್ಲಾಮಿಕ್ ಕ್ಯಾಲೆಂಡರಿನ 'ದುಲ್‌ಹಜ್ಜ್' ತಿಂಗಳ 10ರಂದು ಈ ಹಬ್ಬ ಆಚರಿಸಲಾಗುತ್ತದೆ. ಇಸ್ಲಾಮಿನ ಇತಿಹಾಸವನ್ನು ಸ್ಮರಿಸುವ ಈ ಹಬ್ಬ ಮನುಷ್ಯನಲ್ಲಿ ಮುಖ್ಯವಾಗಿ ಇರಬೇಕಾದ ಸಹೋದರತೆ, ತ್ಯಾಗ, ಸಮರ್ಪಣಾ ಮನೋಭಾವ, ಬದ್ಧತೆಯ ಗುಣಗಳನ್ನು ನೆನಪಿಸುತ್ತದೆ.

ಸುಮಾರು ನಾಲ್ಕು ಸಾವಿರ ವರ್ಷಗಳಿಗೂ ಹಿಂದೆ ಹುಟ್ಟಿದ್ದ ಪ್ರವಾದಿ ಇಬ್ರಾಹಿಂ ಅವರ ತ್ಯಾಗ-ಬಲಿದಾನಗಳ ನೆನಪಿನಲ್ಲಿ 'ಬಕ್ರೀದ್' ಆಚರಿಸಲಾಗುತ್ತದೆ. ಇಬ್ರಾಹಿಂ ಅವರು ಪ್ರವಾದಿ ಮುಹಮ್ಮದ್ ಅವರಿಗಿಂತ ಎರಡೂವರೆ ಸಾವಿರ ವರ್ಷಗಳ ಹಿಂದೆ ಹುಟ್ಟಿದ ಪ್ರವಾದಿ. ಹಜ್ ಯಾತ್ರೆಗೆ ಸೌದಿ ಅರೇಬಿಯಾದ ಮಕ್ಕಾಕ್ಕೆ ತೆರಳಿದವರು ನಡೆಸುವ ಧಾರ್ಮಿಕ ವಿಧಿ-ವಿಧಾನ ಈ ಹಬ್ಬದೊಂದಿಗೆ ಕೊನೆಗೊಳ್ಳುತ್ತದೆ.

ಹಬ್ಬದ ಆಚರಣೆ, ಪ್ರಾಮುಖ್ಯ: ಹಬ್ಬದ ದಿನ ಬೆಳಿಗ್ಗೆ ಮಸೀದಿ ಹಾಗೂ ಈದ್ಗಾಗಳಲ್ಲಿ ವಿಶೇಷ ನಮಾಜ್ ಇರುತ್ತದೆ. ಮಕ್ಕಳು, ಹಿರಿಯರು ಹೊಸ ಉಡುಪು ತೊಟ್ಟು ಪ್ರಾರ್ಥನೆಯಲ್ಲಿ ಪಾಲ್ಗೊಳ್ಳುವರು. ಪರಸ್ಪರ ಶುಭಾಶಯ ತಿಳಿಸಿ, ಗೆಳೆಯರ ಮತ್ತು ಸಂಬಂಧಿಕರ ಮನೆಗೆ ಭೇಟಿ ನೀಡಿ ಸೌಹಾರ್ದತೆಯ ಸಂದೇಶವನ್ನು ಸಾರುತ್ತಾರೆ. ಮನೆಗಳಲ್ಲಿ ವಿಶೇಷ ಖಾದ್ಯಗಳನ್ನು ತಯಾರಿಸಲಾಗುತ್ತದೆ. ಗೆಳೆಯರು, ಬಂಧುಗಳನ್ನು ಆಹ್ವಾನಿಸಿ ಜೊತೆಯಾಗಿ ಊಟ ಮಾಡಿ, ಸಂಭ್ರಮ ಹಂಚಿಕೊಳ್ಳುವರು.

ಹಬ್ಬದ ದಿನ ದಾನವಾಗಿ ದೊರೆಯುವ ಮಾಂಸ, ಹಣ, ದಿನಸಿ ಸಾಮಗ್ರಿಗಳಿಂದ ಎಷ್ಟೋ ಬಡ ಕುಟುಂಬಗಳು ಪ್ರಯೋಜನ ಪಡೆಯುತ್ತವೆ. ಶ್ರೀಮಂತರು ಮತ್ತು ಬಡವರ ನಡುವೆ ನಂಬಿಕೆ, ವಿಶ್ವಾಸ ಮೂಡುತ್ತದೆ. ಬಕ್ರೀದ್ ಹೆಸರಿನಲ್ಲಿ ನಡೆಯುವ ಸೌಹಾರ್ದ ಕೂಟಗಳು ಸಮಾಜದಲ್ಲಿ ಶಾಂತಿ ನೆಲೆಸಲು ಹಾದಿಯೊದಗಿಸುತ್ತದೆ. ಹೊಸ ಬಟ್ಟೆ, ಹಬ್ಬದ ಉಡುಗೊರೆ, ವಿಶೇಷ ಖಾದ್ಯಗಳ ತಯಾರಿಗೆ ಅಗತ್ಯ ವಸ್ತುಗಳ ಖರೀದಿಯು ಹಲವು ಕೋಟಿ ರೂಪಾಯಿಗಳ ವಹಿವಾಟಿಗೆ ಕಾರಣವಾಗಿ, ಆರ್ಥಿಕತೆಯ ಮೇಲೂ ಸಕಾರಾತ್ಮಕ ಪರಿಣಾಮ ಉಂಟುಮಾಡುತ್ತದೆ.

ಜಾನುವಾರು ಬಲಿ ಏಕೆ?: ಪ್ರವಾದಿ ಇಬ್ರಾಹಿಂ ಅವರ ಜೀವನದಲ್ಲಿ ನಡೆದಿದ್ದ ಘಟನೆಯೊಂದರ ನೆನಪಿನಲ್ಲಿ ಹಬ್ಬದ ದಿನ ಜಾನುವಾರು ಬಲಿ ನೀಡಲಾಗುತ್ತದೆ.

ಅಲ್ಲಾಹನ ಆದೇಶದಂತೆ ಇಬ್ರಾಹಿಂ, ತಮ್ಮ ಪುತ್ರ ಇಸ್ಮಾಯಿಲ್ ಅವರನ್ನು ಬಲಿಯರ್ಪಿಸಲು ಮುಂದಾಗುತ್ತಾರೆ. ತಮ್ಮ ಮಗನನ್ನೇ ದೇವರ ಇಚ್ಛೆಯಂತೆ ಬಲಿ ನೀಡಲು ಸಿದ್ಧವಾಗಿದ್ದ ಇಬ್ರಾಹಿಂ ಅವರ ಭಕ್ತಿಯನ್ನು ಅಲ್ಲಾಹನು ಮೆಚ್ಚಿ ಪುತ್ರನ ಬದಲು ಒಂದು ಟಗರನ್ನು ಬಲಿಯರ್ಪಿಸುವಂತೆ ಸೂಚಿಸುತ್ತಾರೆ ಎಂಬುದು ಮುಸ್ಲಿಮರ ನಂಬಿಕೆ. ಪ್ರವಾದಿ ಇಬ್ರಾಹಿಂಗೆ ತಮ್ಮ ಜೀವನದಲ್ಲಿ ಎದುರಾದ ಕೊನೆಯ ಪರೀಕ್ಷೆ ಇದಾಗಿತ್ತು.

ಆರ್ಥಿಕವಾಗಿ ಸಬಲರಾಗಿರುವ ಪ್ರತಿಯೊಬ್ಬರೂ ಪ್ರಾಣಿಬಲಿ ನೀಡಬೇಕು. ಬಲಿ ಅರ್ಪಿಸಿದ ಪ್ರಾಣಿಯಿಂದ ಲಭಿಸಿದ ಮಾಂಸವನ್ನು ಸಮನಾಗಿ ಮೂರು ಪಾಲು ಮಾಡಬೇಕು. ಅದರಲ್ಲಿ ಒಂದು ಅಂಶವನ್ನು ಸ್ವತಃ ಬಳಸಿಕೊಳ್ಳಬಹುದು. ಇನ್ನೆರಡು ಪಾಲುಗಳನ್ನು ಸಂಬಂಧಿಕರು ಹಾಗೂ ಬಡವರಿಗೆ ಹಂಚಬೇಕು.

ಪವಿತ್ರ ಹಜ್: ಹಜ್ ಯಾತ್ರೆಯ ಸಂದರ್ಭದಲ್ಲಿ ಈ ಹಬ್ಬ ಆಚರಿಸಲಾಗುತ್ತದೆ. ಜೀವನದಲ್ಲಿ ಒಂದು ಬಾರಿಯಾದರೂ ಹಜ್ ಯಾತ್ರೆ ಕೈಗೊಳ್ಳಬೇಕು ಎಂದು ಇಸ್ಲಾಂ ಹೇಳುತ್ತದೆ. ಪ್ರತಿವರ್ಷವೂ ಹಜ್‌ನಲ್ಲಿ ವಿಶ್ವದ ವಿವಿಧ ದೇಶಗಳ 20 ಲಕ್ಷಕ್ಕೂ ಅಧಿಕ ಯಾತ್ರಿಕರು ಪಾಲ್ಗೊಳ್ಳುವರು. ಈ ಬಾರಿ ಕೋವಿಡ್ ಕಾರಣ ಸೌದಿ ಅರೇಬಿಯಾ ಸರ್ಕಾರ ವಿದೇಶಿಯರಿಗೆ ಅವಕಾಶ ನೀಡಿಲ್ಲ. ತನ್ನ ದೇಶದ 60 ಸಾವಿರ ಮಂದಿಗೆ ಅನುಮತಿ ನೀಡಿದೆ. ಕೋವಿಡ್ ಲಸಿಕೆ ಪಡೆದ 18ರಿಂದ 65 ವರ್ಷದೊಳಗಿನವರು ಮಾತ್ರ ಈ ಬಾರಿಯ ಹಜ್‌ನಲ್ಲಿ ಪಾಲ್ಗೊಂಡರು.

ಕೋವಿಡ್ ಕರಿನೆರಳಲ್ಲೇ ಆಚರಣೆ

ಕಳೆದ ವರ್ಷದಂತೆ ಈ ಬಾರಿಯೂ ಕೋವಿಡ್ ಕರಿನೆರಳಲ್ಲೇ 'ಬಕ್ರೀದ್' ಆಚರಣೆ ನಡೆಯಲಿದೆ. ಈದ್ಗಾ ಮೈದಾನಗಳಲ್ಲಿ ನಡೆಯುವ ಸಾಮೂಹಿಕ ಪ್ರಾರ್ಥನೆಗೆ ರಾಜ್ಯ ಸರ್ಕಾರ ನಿರ್ಬಂಧ ವಿಧಿಸಿದೆ. ಕೋವಿಡ್‌ನ ಎಲ್ಲ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಂಡು ಮಸೀದಿಗಳ ಸಾಮರ್ಥ್ಯದ ಶೇ 50ರಷ್ಟು ಮಂದಿಗೆ ಮಾತ್ರ ಪ್ರಾರ್ಥನೆಗೆ ಅವಕಾಶ ನೀಡಿದೆ.

ಮಣಿಪುರ ಸರ್ಕಾರಕ್ಕೆ 'ಸುಪ್ರೀಂ' ನೋಟಿಸ್

ನವದೆಹಲಿ: ಹಸುವಿನ ಸಗಣಿ ಮತ್ತು ಗಂಜಲದ ಕುರಿತು ಫೇಸ್‌ಬುಕ್‌ನಲ್ಲಿ ಹೇಳಿಕೆ ಪ್ರಕಟಿಸಿ ರಾಷ್ಟ್ರೀಯ ಭದ್ರತಾ ಕಾಯ್ದೆಯಡಿ ಬಂಧನಕ್ಕೆ ಒಳಗಾಗಿದ್ದ ಹೋರಾಟಗಾರನಿಗೆ ಪರಿಹಾರ ನೀಡಬೇಕೆಂದು ಕೋರಿರುವ ಅರ್ಜಿಗೆ ಪ್ರತಿಕ್ರಿಯಿಸುವಂತೆ ಸುಪ್ರೀಂ ಕೋರ್ಟ್ ಮಂಗಳವಾರ ಮಣಿಪುರ ಸರ್ಕಾರಕ್ಕೆ ಸೂಚಿಸಿದೆ.

ಸಂತ್ರಸ್ತನಿಗೆ ಪರಿಹಾರ ನೀಡುವಂತೆ ಅರ್ಜಿದಾರರು ಮನವಿ ಸಲ್ಲಿಸಿದ್ದರಿಂದ ಉನ್ನತ ನ್ಯಾಯಾಲಯವು ಮಣಿಪುರ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಿತು.

ಆಮ್ಲಜನಕ ಕೊರತೆಯಿಂದ ಯಾರೂ ಸತ್ತಿಲ್ಲ: ಸಂಸತ್ತಿಗೆ ಸರ್ಕಾರದ ಮಾಹಿತಿ

ನವದೆಹಲಿ: ಕೋವಿಡ್ –19ರ ಎರಡನೇ ಅಲೆಯ ಸಂದರ್ಭದಲ್ಲಿ, ಆಮ್ಲಜನಕದ ಕೊರತೆಯಿಂದ ಕೋವಿಡ್ ರೋಗಿಗಳು ಮೃತಪಟ್ಟ ಬಗ್ಗೆ ರಾಜ್ಯಗಳಿಂದ ವರದಿಯಾಗಿಲ್ಲ ಎಂದು ಆರೋಗ್ಯ ಖಾತೆಯ ರಾಜ್ಯ ಸಚಿವೆ ಭಾರತಿ ಪವಾರ್ ಮಂಗಳವಾರ ರಾಜ್ಯಸಭೆಗೆ ತಿಳಿಸಿದರು.

ಎರಡನೇ ಅಲೆಯ ಸಂದರ್ಭದಲ್ಲಿ ಸಾಕಷ್ಟು ಕೋವಿಡ್ ರೋಗಿಗಳು ಆಸ್ಪತ್ರೆಯಲ್ಲಿ, ರಸ್ತೆಯಲ್ಲಿ ಮೃತಪಟ್ಟಿದ್ದು ಆಮ್ಲಜನಕ ಕೊರತೆಯಿಂದಲೇ ಅಲ್ಲವೇ ಎಂಬ, ಕಾಂಗ್ರೆಸ್ ಸದಸ್ಯ ಕೆ.ಸಿ. ವೇಣುಗೋಪಾಲ್ ಅವರ ಪ್ರಶ್ನೆಗೆ ಸಚಿವೆ ಉತ್ತರಿಸಿದ್ದಾರೆ. 'ಆರೋಗ್ಯ ವಿಷಯವು ಆಯಾ ರಾಜ್ಯಗಳಿಗೇ ಸಂಬಂಧಿಸಿದ್ದಾಗಿದ್ದು, ಕೋವಿಡ್ ಪ್ರಕರಣಗಳು ಹಾಗೂ ಸಾವಿನ ಸಂಖ್ಯೆಯ ವರದಿಯನ್ನು ನಿಯಮಿತವಾಗಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಿವೆ. ಆದರೆ, ಆಮ್ಲಜನಕದ ಕೊರತೆಯಿಂದ ಸಾವು ಸಂಭವಿಸಿದ ಬಗ್ಗೆ ರಾಜ್ಯಗಳಿಂದಾಗಲೀ, ಕೇಂದ್ರಾಡಳಿತ ಪ್ರದೇಶಗಳಿಂದಾಗಲೀ ವರದಿ ಬಂದಿಲ್ಲ' ಎಂದು ಸಚಿವೆ ಹೇಳಿದ್ದಾರೆ.

ಆ ಸಂದರ್ಭದಲ್ಲಿ ದೇಶದಲ್ಲಿ ವೈದ್ಯಕೀಯ ಆಮ್ಲಜನಕದ ಬೇಡಿಕೆ ಹಿಂದೆಂದಿಗಿಂತಲೂ ಹೆಚ್ಚು ಇತ್ತು. ಮೊದಲ ಅಲೆಯ ಸಂದರ್ಭದಲ್ಲಿ ನಿತ್ಯ 3,095 ಟನ್‌ನಷ್ಟು ಇದ್ದ ಬೇಡಿಕೆ ಎರಡನೇ ಅಲೆಯಲ್ಲಿ 9,000 ಟನ್‌ಗಳಿಗೆ ಏರಿತು ಎಂದು ತಿಳಿಸಿದರು.

ಆಮ್ಲಜನಕದ ಕೊರತೆಯಿಂದ ದೇಶದಲ್ಲಿ ಯಾರೊಬ್ಬರೂ ಮೃತಪಟ್ಟಿಲ್ಲ ಎಂದು ತಪ್ಪು ಮಾಹಿತಿ ನೀಡುವ ಮೂಲಕ ಸಚಿವರು ಸದನವನ್ನು ತಪ್ಪು ದಾರಿಗೆಳೆಯುತ್ತಿದ್ದು, ಅವರ ವಿರುದ್ಧ ಹಕ್ಕುಚ್ಯುತಿ ಮಂಡಿಸುವುದಾಗಿ ವೇಣುಗೋಪಾಲ್ ಹೇಳಿದರು.

'ಆಮ್ಲಜನಕ ಕೊರತೆಯಿಂದ, 'ಯಾರೂ ಮೃತಪಟ್ಟಿಲ್ಲ' ಎಂದು ಸಚಿವರು ಹೇಳಿಲ್ಲ. ಆಮ್ಲಜನಕ ಕೊರತೆಯಿಂದ ಮೃತಪಟ್ಟ ಬಗ್ಗೆ 'ವರದಿಗಳು ಬಂದಿಲ್ಲ' ಎಂದಷ್ಟೇ ಹೇಳಿದ್ದಾರೆ' ಎಂದ ಕಾಂಗ್ರೆಸ್ ಮುಖಂಡ ಪಿ.ಚಿದಂಬರಂ, 'ಕುರುಡು ಹಾಗೂ ಕಿವುಡು ಸರ್ಕಾರಕ್ಕೆ ಸತ್ಯವನ್ನು ನೋಡಲು ಹಾಗೂ ಕೇಳಲು ಎರಡೂ ಆಗದು' ಎಂದು ಟೀಕಿಸಿದರು.

ಕೇರಳ: ಕೋವಿಡ್ ನಿರ್ಬಂಧ ಸಡಿಲಿಕೆ ನಿರ್ಧಾರ ಸರಿಯಲ್ಲ'

ನವದೆಹಲಿ (ಪಿಟಿಐ): ಕೇರಳದ ಕೆಲ ಪ್ರದೇಶಗಳಲ್ಲಿ ಕೋವಿಡ್ ದೃಢಪ್ರಮಾಣ ಈಗಲೂ ಹೆಚ್ಚಿದೆ. ಹೀಗಿದ್ದರೂ, ಬಕ್ರೀದ್ ಹಿನ್ನೆಲೆಯಲ್ಲಿ ನಿರ್ಬಂಧಗಳನ್ನು ಸಡಿಲಿಸಲು ಅನುಮತಿ ನೀಡಿರುವ ಆ ರಾಜ್ಯ ಸರ್ಕಾರದ ಕ್ರಮ ಸರಿಯಲ್ಲ ಎಂದು ಸುಪ್ರೀಂಕೋರ್ಟ್ ಮಂಗಳವಾರ ಹೇಳಿದೆ.

ನಿರ್ಬಂಧಗಳ ಸಡಿಲಿಕೆಯಿಂದಾಗಿ ಕೊರೊನಾ ಸೋಂಕು ಮತ್ತಷ್ಟು ವ್ಯಾಪಕವಾಗುವುದು ಕಂಡುಬಂದಲ್ಲಿ ಕಠಿಣ ಕ್ರಮ ಕೈಗೊಳ್ಳುವುದಾಗಿ ಸುಪ್ರೀಂಕೋರ್ಟ್ ಎಚ್ಚರಿಸಿದೆ.

ಈ ಕುರಿತ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಆರ್.ಎಫ್.ನರೀಮನ್ ಹಾಗೂ ಬಿ.ಆರ್.ಗವಾಯಿ ಅವರಿರುವ ನ್ಯಾಯಪೀಠ, 'ಕೇರಳ ಸರ್ಕಾರದ ರೀತಿಯಲ್ಲೇ ನಿರ್ಬಂಧಗಳ ಸಡಿಲಿಕೆಗೆ ಅನುಮತಿ ನೀಡುವ ಮೂಲಕ ದೇಶದ ಜನತೆಯನ್ನು ಕೋವಿಡ್ ಸಂಕಷ್ಟಕ್ಕೆ ದೂಡಿದಂತಾಗುತ್ತಿದೆ' ಎಂದು ಕಳವಳ ವ್ಯಕ್ತಪಡಿಸಿತು.

'ಸಂವಿಧಾನದ 21ನೇ ವಿಧಿ ಎಲ್ಲರಿಗೂ ಬದುಕುವ ಹಕ್ಕನ್ನು ನೀಡಿದೆ. ಕೇರಳ ಸರ್ಕಾರ ಇದನ್ನು ಗಮನದಲ್ಲಿಟ್ಟುಕೊಳ್ಳಬೇಕು' ಎಂದೂ ನ್ಯಾಯಪೀಠ ನಿರ್ದೇಶನ ನೀಡಿತು.

3ನೇ ಅಲೆ: ಮೂರು ತಿಂಗಳಲ್ಲಿ ವೈದ್ಯಕೀಯ ಸೌಕರ್ಯ ಹೆಚ್ಚಿಸಲು ಯೋಜನೆ

ಮರಣ ತಡೆಗೆ ಐಸಿಯು ಹಾಸಿಗೆ ದ್ವಿಗುಣ

• ವರುಣ ಹೆಗಡೆ

ಬೆಂಗಳೂರು: ಕೋವಿಡ್ ಮೂರನೇ ಅಲೆಯು ಈ ವರ್ಷದ ಅಂತ್ಯದೊಳಗೆ ಕಾಣಿಸಿಕೊಳ್ಳುವ ಬಗ್ಗೆ ವೈದ್ಯಕೀಯ ತಜ್ಞರು ಎಚ್ಚರಿಸಿದ್ದಾರೆ. ಆದ್ದರಿಂದ ರಾಜ್ಯದ ಜಿಲ್ಲಾ ಮತ್ತು ತಾಲ್ಲೂಕು ಆಸ್ಪತ್ರೆಗಳಲ್ಲಿ ತೀವ್ರ ನಿಗಾ ಘಟಕ (ಐಸಿಯು) ಹಾಸಿಗೆ ಹಾಗೂ ವೈದ್ಯಕೀಯ ಆಮ್ಲಜನಕ ಸಂಪರ್ಕ ಹೊಂದಿರುವ ಹಾಸಿಗೆಗಳ ಸಂಖ್ಯೆಯನ್ನು ದ್ವಿಗುಣಗೊಳಿಸಲು ಆರೋಗ್ಯ ಇಲಾಖೆ ಮುಂದಾಗಿದೆ.

2ನೇ ಅಲೆಯಲ್ಲಿ ದಿಢೀರ್ ಕೋವಿಡ್ ಪ್ರಕರಣಗಳ ಸಂಖ್ಯೆ ಏರಿಕೆ ಕಂಡ ಪರಿಣಾಮ ಆಸ್ಪತ್ರೆಗಳಲ್ಲಿ ಹಾಸಿಗೆಗಳ ಸಮಸ್ಯೆ ತಲೆದೋರಿದ್ದವು. ಸೋಂಕಿತರು ಐಸಿಯು ಹಾಸಿಗೆ, ವೈದ್ಯಕೀಯ ಆಮ್ಲಜನಕ ಸಂಪರ್ಕ ಹೊಂದಿರುವ ಹಾಸಿಗೆಗಳಿಗಾಗಿ ಆಸ್ಪತ್ರೆಯಿಂದ ಆಸ್ಪತ್ರೆಗೆ ಅಲೆದಾಟ ನಡೆಸಬೇಕಾದ ಪರಿಸ್ಥಿತಿ ನಿರ್ಮಾಣವಾಗಿತ್ತು. ಕಳೆದೊಂದು ತಿಂಗಳಿಂದ ಸಕ್ರಿಯ ಪ್ರಕರಣಗಳ ಸಂಖ್ಯೆ ಇಳಿಕೆ ಕಂಡಿರುವ ಕಾರಣ ಆಸ್ಪತ್ರೆಗಳಲ್ಲಿ ಶೇ 85 ರಷ್ಟು ಹಾಸಿಗೆಗಳು ಖಾಲಿ ಉಳಿದಿವೆ.

ಮೂರನೇ ಅಲೆಯ ಕಾರಣ 50 ಸಾವಿರಕ್ಕೂ ಅಧಿಕ ಹಾಸಿಗೆಗಳನ್ನು ಹಾಗೇ ಉಳಿಸಿಕೊಳ್ಳಲಾಗಿದೆ. ಅದಾಗಿಯೂ ಜಿಲ್ಲಾ ಆಸ್ಪತ್ರೆಗಳಲ್ಲಿ ತಲಾ 25 ಐಸಿಯು ಹಾಸಿಗೆಗಳನ್ನು ಅಳವಡಿಕೆ ಮಾಡಲಾಗುತ್ತಿದೆ. 18 ವರ್ಷದೊಳಗಿನವರಿಗೆ ಲಸಿಕೆ ಸದ್ಯ ಲಭ್ಯವಿರದ ಕಾರಣ ಮೂರನೇ ಅಲೆಯಲ್ಲಿ 3.4 ಲಕ್ಷ ಮಕ್ಕಳು ಕೋವಿಡ್ ಪೀಡಿತರಾಗುವ ಸಾಧ್ಯತೆಯ ಬಗ್ಗೆ ರಾಜ್ಯ ಸರ್ಕಾರ ರಚಿರುವ ಡಾ. ದೇವಿಪ್ರಸಾದ್ ಶೆಟ್ಟಿ ನೇತೃತ್ವದ ತಜ್ಞರ ಸಮಿತಿಯು ಲೆಕ್ಕಾಚಾರ ಹಾಕಿದೆ. ಹೀಗಾಗಿ, ಆಸ್ಪತ್ರೆಗಳಲ್ಲಿ ವೈದ್ಯಕೀಯ ಮೂಲಸೌಕರ್ಯವನ್ನು ಹೆಚ್ಚಿಸಲಾಗುತ್ತಿದೆ.

ಮಕ್ಕಳ ಚಿಕಿತ್ಸೆಗೆ ವ್ಯವಸ್ಥೆ: ಜಿಲ್ಲಾ ಹಾಗೂ ತಾಲ್ಲೂಕು ಆಸ್ಪತ್ರೆಗಳಲ್ಲಿ ಬಿ.ಪಿ. ಮಾನಿಟರ್‌ಗಳು, ಆಮ್ಲಜನಕ ಸಾಂದ್ರಕ ಸಾಧನಗಳು, ಮಕ್ಕಳ ಹಾಸಿಗೆಗಳಿಗೆ ವೆಂಟಿಲೇಟರ್‌ಗಳ ಅಳವಡಿಕೆ ಸೇರಿದಂತೆ ವಿವಿಧ ವೈದ್ಯಕೀಯ ಸಾಧನಗಳನ್ನು ಅಳವಡಿಸಿಕೊಳ್ಳಲಾಗುತ್ತಿದೆ. ಮೂರು ತಿಂಗಳೊಳಗೆ ಈ ಪ್ರಕ್ರಿಯೆಗಳು ಪೂರ್ಣಗೊಳ್ಳಲಿವೆ ಎಂದು ಇಲಾಖೆ ಮೂಲಗಳು ತಿಳಿಸಿವೆ.

'ಮಕ್ಕಳಿಗೆ ಸದ್ಯ ಲಸಿಕೆ ಇರದ ಕಾರಣ ಅವರು ಮೂರನೇ ಅಲೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸೋಂಕಿತರಾಗುವ ಬಗ್ಗೆ ತಜ್ಞರು ಕಳವಳ ವ್ಯಕ್ತಪಡಿಸಿದ್ದಾರೆ. ಹಾಗಾಗಿ, ಐಸಿಯು ಹಾಸಿಗೆಗಳನ್ನು ಜಿಲ್ಲಾ ಹಾಗೂ ತಾಲ್ಲೂಕು ಆಸ್ಪತ್ರೆಗಳಲ್ಲಿ ಹೆಚ್ಚಳ ಮಾಡಲಾಗುತ್ತಿದೆ. ಜಿಲ್ಲಾ ಆಸ್ಪತ್ರೆಗಳಲ್ಲಿ 13 ಕಿಲೋ ಲೀಟರ್ ಸಾಮರ್ಥ್ಯದ ದ್ರವರೂಪದ ವೈದ್ಯಕೀಯ ಆಮ್ಲಜನಕ ಟ್ಯಾಂಕ್ ಅಳವಡಿಕೆ ಮಾಡಲಾಗುತ್ತಿದೆ. ತಾಲ್ಲೂಕಾ ಆಸ್ಪತ್ರೆಗಳಲ್ಲಿ 6 ಕಿಲೋ ಲೀಟರ್ ಸಾಮರ್ಥ್ಯದ ಟ್ಯಾಂಕ್ ಅಳವಡಿಸಲಾಗುವುದು' ಎಂದು ಆರೋಗ್ಯ ಇಲಾಖೆಯ ಆಯುಕ್ತ ಡಾ.ಕೆ.ವಿ.ತ್ರಿಲೋಕ ಚಂದ್ರ ತಿಳಿಸಿದರು.



ಕೋವಿಡ್ ನಿಯಮ ಪಾಲಿಸದಿದ್ದರೆ ಮೂರನೇ ಅಲೆ ಕಾಣಿಸಿಕೊಳ್ಳಲಿದೆ ಎಂದು ತಜ್ಞರು ಎಚ್ಚರಿಸಿದ್ದಾರೆ. ಎಲ್ಲರಿಗೂ ಲಸಿಕೆ ಸಿಗುವವರೆಗೆ ಮುನ್ನೆಚ್ಚರಿಕೆ ಕ್ರಮಗಳನ್ನು ಅನುಸರಿಸಬೇಕು

ಡಾ.ಕೆ.ವಿ. ತ್ರಿಲೋಕ ಚಂದ್ರ, ಆರೋಗ್ಯ ಇಲಾಖೆ ಆಯುಕ್ತ

3,249 ಐಸಿಯು ಹಾಸಿಗೆ ಅಳವಡಿಕೆ

ಮೊದಲ ಅಲೆಯಲ್ಲಿ 9.73 ಲಕ್ಷ ಮಂದಿ ಕೋವಿಡ್ ಪೀಡಿತರಾಗಿದ್ದರು. ಸೋಂಕಿನ ತೀವ್ರತೆ ಕಡಿಮೆಯಿದ್ದರೂ 12 ಸಾವಿರಕ್ಕೂ ಅಧಿಕ ಮಂದಿ ಸಾವಿಗೀಡಾಗಿದ್ದರು. ಎರಡನೇ ಅಲೆಯಲ್ಲಿ ನಾಲ್ಕು ತಿಂಗಳ ಅವಧಿಯಲ್ಲಿ 19 ಲಕ್ಷಕ್ಕೂ ಅಧಿಕ ಮಂದಿ ಸೋಂಕಿತರಾಗಿದ್ದಾರೆ. ಸೋಂಕಿನ ತೀವ್ರತೆಗೆ 24 ಸಾವಿರಕ್ಕೂ ಅಧಿಕ ಮಂದಿ ಸಾವಿಗೀಡಾಗಿದ್ದಾರೆ. ಮೂರನೇ ಅಲೆಯಲ್ಲಿ ಕೋವಿಡ್ ಮರಣ ತಡೆಯಲು ಜಿಲ್ಲಾ ಹಾಗೂ ತಾಲ್ಲೂಕು ಆಸ್ಪತ್ರೆಗಳಲ್ಲಿ 3,249 ಐಸಿಯು ಹಾಸಿಗೆಗಳನ್ನು ಅಳವಡಿಕೆ ಮಾಡಲಾಗುತ್ತಿದೆ.

ಜಿಲ್ಲಾ ಆಸ್ಪತ್ರೆಗಳಲ್ಲಿ 475 ಐಸಿಯು ಹಾಸಿಗೆಗಳು ಹಾಗೂ 1,015 ವೈದ್ಯಕೀಯ ಆಮ್ಲಜನಕ ಸಂಪರ್ಕ ಹೊಂದಿರುವ ಹಾಸಿಗೆಗಳನ್ನು ಹೊಸದಾಗಿ ವ್ಯವಸ್ಥೆ ಮಾಡಲಾಗುತ್ತದೆ. ತಾಲ್ಲೂಕಾ ಆಸ್ಪತ್ರೆಗಳಲ್ಲಿ 2,774 ಐಸಿಯು ಹಾಸಿಗೆ ಮತ್ತು 7,300 ವೈದ್ಯಕೀಯ ಆಮ್ಲಜನಕ ಸಂಪರ್ಕ ಹೊಂದಿರುವ ಹಾಸಿಗೆಗಳನ್ನು ಅಳವಡಿಕೆ ಮಾಡಲಾಗುತ್ತದೆ. ಮಕ್ಕಳಿಗಾಗಿಯೇ 3 ಸಾವಿರ ಹಾಸಿಗೆಗಳನ್ನು ಸೇರ್ಪಡೆ ಮಾಡಲಾಗುತ್ತದೆ. ಮಕ್ಕಳ ವೆಂಟಿಲೇಟರ್‌ಗಳ ಸಂಖ್ಯೆಯನ್ನು ಸಾವಿರಕ್ಕೆ ಏರಿಕೆ ಮಾಡಲಾಗುತ್ತದೆ ಎಂದು ಇಲಾಖಾ ಮೂಲಗಳು ತಿಳಿಸಿವೆ.



ಉದ್ಯಮಿ ಜೆಫ್ ಬೆಜೊಸ್ ಅವರು ಸಹ ಪ್ರಯಾಣಿಕಿ ವ್ಯಾಲಿ ಫಂಕ್ ಅವರ ಜೊತೆ ವಿಮಾನದ ಬಳಿ ಇರುವುದು

ಜೆಫ್ ಬೆಜೊಸ್‌ರಿಂದ ಬಾಹ್ಯಾಕಾಶ ಯಾತ್ರೆ

ವ್ಯಾನ್ ಹಾರ್ನ್, ಅಮೆರಿಕ (ಎ.ಪಿ): ಅಮೆಜಾನ್ ಕಂಪನಿಯ ಸ್ಥಾಪಕ ಜೆಫ್ ಬೆಜೊಸ್ ಮಂಗಳವಾರ ತಮ್ಮದೇ ಕಂಪನಿಯ 'ಬ್ಲೂ ಹೊರಿಜಿನ್' ಗಗನನೌಕೆಯಲ್ಲಿ ಸಹ ಪ್ರಯಾಣಿಕರೊಂದಿಗೆ ಬಾಹ್ಯಾಕಾಶ ಪ್ರಯಾಣ ಕೈಗೊಂಡರು. ಈ ಮೂಲಕ ಅಂತರಿಕ್ಷಕ್ಕೆ ಪ್ರಯಾಣಿಸಿದ ಎರಡನೇ ಬಿಲಿಯನೇರ್ ಎಂಬ ಹಿರಿಮೆಗೆ ಅವರು ಪಾತ್ರರಾದರು.

ಬೆಜೊಸ್ ಅವರ ಜೊತೆಗೆ ಸಹೋದರ ಮ್ಯಾಕ್, ನೆದರ್‌ಲೆಂಡ್ಸ್‌ನ 18 ವರ್ಷದ ಯುವಕ, ಟೆಕ್ಸಾಸ್‌ನ 82 ವರ್ಷದ ವ್ಯಕ್ತಿಯು ಸೇರಿದಂತೆ ಆಯ್ದ ಪ್ರಯಾಣಿಕರು ಪ್ರಯಾಣಿಸಿದರು.

ಅಪೊಲೊ 11 ಚಂದ್ರಯಾನದ 52ನೇ ವರ್ಷಾಚರಣೆಯ ದಿನವೂ ಇದಾಗಿದ್ದು, ಚಾರಿತ್ರಿಕ ಮಹತ್ವದ ಕಾರಣಕ್ಕಾಗಿ ಬೆಜೊಸ್ ಇದೇ ದಿನವನ್ನು ಆಯ್ಕೆ ಮಾಡಿಕೊಂಡಿದ್ದರು.

ಎಸ್‌ಸಿ, ಎಸ್‌ಟಿ ಮಾತ್ರ ಜಾತಿಗಣತಿ'

ನವದೆಹಲಿ: 'ಪರಿಶಿಷ್ಟ ಜಾತಿ (ಎಸ್‌ಸಿ) ಮತ್ತು ಪರಿಶಿಷ್ಟ ಪಂಗಡ (ಎಸ್‌ಟಿ) ಹೊರತುಪಡಿಸಿ ಇತರ ಜನಸಂಖ್ಯೆಯ ಜಾತಿಗಣತಿಯನ್ನು ನಡೆಸದೆ ಇರಲು ಕೇಂದ್ರ ಸರ್ಕಾರ ನಿರ್ಧರಿಸಿದೆ' ಎಂದು ಲೋಕಸಭೆಗೆ ಮಂಗಳವಾರ ಕೇಂದ್ರ ಗೃಹ ಖಾತೆ ರಾಜ್ಯ ಸಚಿವ ನಿತ್ಯಾನಂದ್ ರಾಯ್ ಮಾಹಿತಿ ನೀಡಿದರು.

'ಮಹಾರಾಷ್ಟ್ರ ಮತ್ತು ಒಡಿಶಾ ಸರ್ಕಾರಗಳು ಮುಂಬರುವ ಜನಗಣತಿಯಲ್ಲಿ ಜಾತಿಯ ಕುರಿತು ವಿವರಗಳನ್ನು ಸಂಗ್ರಹಿಸಲು ಕೋರಿವೆ. ಆದರೆ, ನೀತಿಗೆ ಅನುಗುಣವಾಗಿ ಭಾರತ ಸರ್ಕಾರವು ಇತರ ಜನಸಂಖ್ಯೆಯ ಜಾತಿವಾರು ಜನಗಣತಿ ಮಾಡದಿರಲು ನಿರ್ಧರಿಸಿದೆ' ಎಂದು ಅವರು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

'ಕೋವಿಡ್ ನಿರ್ವಹಣೆ: ಟೀಕೆಗೆ ತಕ್ಕ ಉತ್ತರ ನೀಡಿ'

ನವದೆಹಲಿ: ಕೋವಿಡ್–19 ಸಾಂಕ್ರಾಮಿಕ ಸ್ಥಿತಿಯನ್ನು ಸರ್ಕಾರವು ನಿಭಾಯಿಸುತ್ತಿರುವ ಬಗ್ಗೆ ವಿರೋಧ ಪಕ್ಷಗಳು ಸದನದ ಒಳಗೆ ಹಾಗೂ ಹೊರಗೆ ಮಾಡುತ್ತಿರುವ ಟೀಕೆಗಳಿಗೆ ತಕ್ಕ ಉತ್ತರ ನೀಡುವಂತೆ ಪ್ರಧಾನಿ ನರೇಂದ್ರ ಮೋದಿ, ಪಕ್ಷದ ಸಂಸದರಿಗೆ ಮಂಗಳವಾರ ಸೂಚಿಸಿದರು.

ಬಿಜೆಪಿ ಸಂಸದೀಯ ಸಭೆಯಲ್ಲಿ ಮಾತನಾಡಿದ ಅವರು, ವಿರೋಧ ಪಕ್ಷಗಳು, ರಾಜಕೀಯ ಲಾಭಕ್ಕಾಗಿ ಕೋವಿಡ್–19 ವಿಷಯವನ್ನು ಬಳಸಿಕೊಳ್ಳುತ್ತಿರುವುದಾಗಿ ಹರಿಹಾಯ್ದರು.

ಸಂಭಾವ್ಯ ಕೋವಿಡ್–19ನ ಮೂರನೇ ಅಲೆಯಿಂದ ಜನರನ್ನು ರಕ್ಷಿಸಲು, ಸಂಸದರು ಅಗತ್ಯ ಪೂರ್ವತಯಾರಿ ಮಾಡಿಕೊಳ್ಳಬೇಕು. ತಮ್ಮ ತಮ್ಮ ಕ್ಷೇತ್ರದಲ್ಲಿ ಲಸಿಕೆ ಅಭಿಯಾನ ಸಮರ್ಪಕವಾಗಿ ನಡೆಯುವಂತೆ ನೋಡಿಕೊಳ್ಳಬೇಕು. ಲಸಿಕೆ ಪ್ರಯೋಜನಗಳ ಬಗ್ಗೆ ಜನರಿಗೆ ಮಾಹಿತಿ ನೀಡಿ, ಲಸಿಕೆ ಪಡೆಯುವ ಬಗ್ಗೆ ಹಿಂಜರಿಕೆಯನ್ನು ತೊಡೆದು ಹಾಕಬೇಕು ಎಂದು ಹೇಳಿದರು. ಲಸಿಕೆ ನೀಡುವಲ್ಲಿ ಆಗುವ ಪೋಲು ತಪ್ಪಿಸುವಂತೆಯೂ ಸಲಹೆ ನೀಡಿದರು.

ಸಂಸತ್ತಿನಲ್ಲಿ ಹಾಜರಿರುವುದರ ಜೊತೆಗೆ ಸದನದ ಕಲಾಪದಲ್ಲಿ ಭಾಗವಹಿಸಬೇಕು ಎಂದು ಸೂಚಿಸಿದ ಪ್ರಧಾನಿ, ಕಲಾಪವನ್ನು ಹಾಳುಗೆಡಹುವ ವಿರೋಧ ಪಕ್ಷಗಳ ಯತ್ನವನ್ನು ತಡೆಯಬೇಕು ಎಂದರು.

ಸರ್ಕಾರವು ಕೋವಿಡ್–19 ನಿರ್ವಹಣೆಯ ಬಗೆಗೆ ಚರ್ಚಿಸಲು ಸಿದ್ಧವಿದೆ ಎಂದ ಮೋದಿ, ಸದನದ ಕಲಾಪಗಳಿಗೆ ಅಡ್ಡಿ ಮಾಡುವ ಮೂಲಕ ವಿರೋಧ ಪಕ್ಷಗಳು ಬೇಜವಾಬ್ದಾರಿಯಿಂದ ನಡೆದುಕೊಳ್ಳುತ್ತಿರುವುದಾಗಿ ಆರೋಪಿಸಿದರು.

ಕೋವಿಡ್ ಸಾಂಕ್ರಾಮಿಕದ ಸಂದರ್ಭದಲ್ಲೂ ಬಹಳಷ್ಟು ಜನರಿಗೆ ಪಡಿತರ ಒದಗಿಸಲಾಗಿದೆ. ಜನರಿಗೆ ಪರಿಹಾರ ಒದಗಿಸುವುದು ಓಲೈಕೆ ಅಲ್ಲ ಎಂದರು.

ಸಭೆಯ ಕುರಿತು ಮಾಹಿತಿ ನೀಡಿದ ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ, 'ಕೋವಿಡ್ ಸಂದರ್ಭವನ್ನು ಮಾನವೀಯತೆಯಿಂದ ನೋಡಬೇಕು, ರಾಜಕೀಯವಾಗಿ ಅಲ್ಲ. ಈ ಬಗ್ಗೆ ವಿರೋಧ ಪಕ್ಷಗಳ ವರ್ತನೆ ಬಗ್ಗೆ ಪ್ರಧಾನಿ ಅಸಮಾಧಾನ ವ್ಯಕ್ತಪಡಿಸಿದರು' ಎಂದು ತಿಳಿಸಿದರು.

40 ಕೋಟಿ ಜನರಿಗೆ ಪ್ರತಿಕಾಯ ಶಕ್ತಿ ಕಡಿಮೆ: ಐಸಿಎಂಆರ್ ಸಮೀಕ್ಷೆ

ಕೋವಿಡ್: ಆತಂಕ ಪೂರ್ಣ ಮರೆಯಾಗಿಲ್ಲ

ನವದೆಹಲಿ (ಪಿಟಿಐ): ಭಾರತದಲ್ಲಿ ಮೂರನೇ ಎರಡರಷ್ಟು ಜನರು ಕೋವಿಡ್ ಪ್ರತಿಕಾಯ ಶಕ್ತಿಯನ್ನು ಹೊಂದಿದ್ದಾರೆ. ಆದರೆ, ಉಳಿದಂತೆ ಇನ್ನೂ 40 ಕೋಟಿ ಜನರು ಸೋಂಕು ಬಾಧಿತರಾಗುವ ಆತಂಕವಿದೆ.

ಆರು ವರ್ಷ ಮೀರಿದವರಲ್ಲಿ ಪ್ರತಿಕಾಯ ಶಕ್ತಿ ಕುರಿತು ದೇಶವ್ಯಾಪಿ ನಡೆದ ಸಮೀಕ್ಷೆಯಲ್ಲಿ ಈ ಅಂಶ ವ್ಯಕ್ತವಾಗಿದೆ. ಈ ಕಾರಣದಿಂದ ಕೋವಿಡ್ ವಿರುದ್ಧದ ಹೋರಾಟದಲ್ಲಿ ತೃಪ್ತಭಾವ ಹೊಂದುವ ಸ್ಥಿತಿ ಇಲ್ಲ ಎಂದು ಕೇಂದ್ರ ಹೇಳಿದೆ.

ಐಸಿಎಂಆರ್‌ನ 4ನೇ ರಾಷ್ಟ್ರೀಯ ಕೋವಿಡ್ ಪರಿಸ್ಥಿತಿ ಸಮೀಕ್ಷೆ ಪ್ರಕಾರ, ಒಟ್ಟಾರೆಯಾಗಿ ಆಶಾದಾಯಕ ಸ್ಥಿತಿ ಇದ್ದರೂ ಪೂರ್ಣ ತೃಪ್ತ ಸ್ಥಿತಿಯೂ ಇಲ್ಲ. ಕೋವಿಡ್ ಮಾರ್ಗಸೂಚಿಗಳ ಪಾಲನೆ ಅಗತ್ಯ ಎಂದು ಸರ್ಕಾರ ತಿಳಿಸಿದೆ.

ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿ (ಐಸಿಎಂಆರ್) ಜೂನ್ ಮತ್ತು ಜುಲೈ ತಿಂಗಳಲ್ಲಿ ಈ ಸಮೀಕ್ಷೆ ನಡೆಸಿದೆ. 28,975 ಮಂದಿ ಸಾರ್ವಜನಿಕರು, 7,252 ಆರೋಗ್ಯ ಕಾರ್ಯಕರ್ತರ ಅಭಿಪ್ರಾಯಗಳನ್ನು ಪಡೆಯಲಾಗಿದ್ದು, ನಾಲ್ಕನೇ ಸುತ್ತಿನ ಈ ಸಮೀಕ್ಷೆಯು 21 ರಾಜ್ಯಗಳ 70 ಜಿಲ್ಲೆಗಳಲ್ಲಿ ನಡೆದಿತ್ತು.

ಹಿರಿಯ ಅಧಿಕಾರಿಯೊಬ್ಬರು, 'ಅಂಕಿ ಅಂಶದ ಪ್ರಕಾರ ಶೇ 85 ಆರೋಗ್ಯ ಕಾರ್ಯಕರ್ತರು ಪ್ರತಿಕಾಯ ಶಕ್ತಿ ಹೊಂದಿದ್ದಾರೆ. ಹತ್ತನೇ ಒಂದರಷ್ಟು ಕಾರ್ಯಕರ್ತರು ಇನ್ನೂ ಲಸಿಕೆಯನ್ನು ಪಡೆಯಬೇಕಾಗಿದೆ' ಎಂದು ತಿಳಿಸಿದರು.

ಕೋವಿಡ್ ಮಾರ್ಗಸೂಚಿಗಳ ಕಡ್ಡಾಯ ಪಾಲನೆಯನ್ನು ಪ್ರತಿಪಾದಿಸಿರುವ ಕೇಂದ್ರ ಸರ್ಕಾರ, ಸಾರ್ವಜನಿಕ, ಧಾರ್ಮಿಕ, ರಾಜಕೀಯ ವೇದಿಕೆಗಳಲ್ಲಿ ಗುಂಪುಗೂಡುವುದನ್ನು ತಪ್ಪಿಸಬೇಕು. ಅನಗತ್ಯವಾಗಿ ಪ್ರಯಾಣ ಮಾಡುವುದರಿಂದ ದೂರವಿರಬೇಕು. ಪೂರ್ಣ ಲಸಿಕೆ ಪಡೆದಿದ್ದರಷ್ಟೇ ಪ್ರಯಾಣಿಸಬೇಕು ಎಂದಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದೇಶದ ವಿವಿಧೆಡೆ ಸೋಂಕು ಪ್ರಕರಣ ತಗ್ಗಿರುವ ಕಾರಣ ಶಾಲೆಗಳನ್ನು ಪುನರಾರಂಭಿಸಬಹುದೇ ಎಂಬ ಪ್ರಶ್ನೆಗೆ ಈ ಪ್ರತಿಕ್ರಿಯೆ ನೀಡಿದರು. ಕೆಲವು ದೇಶಗಳಲ್ಲಿ 1 ಮತ್ತು 2ನೇ ಅಲೆಯ ಸಂದರ್ಭದಲ್ಲಿಯೂ ಪ್ರಾಥಮಿಕ ಶಾಲೆಗಳನ್ನು ಬಂದ್ ಮಾಡಿರಲಿಲ್ಲ ಎಂದು ಉಲ್ಲೇಖಿಸಿದರು.

ರಾಜ್ಯ ಕೋವಿಡ್ ಅಂಕಿ-ಅಂಶ

28,86,702 ▲ ಒಟ್ಟು ಸೋಂಕಿತರು (28,85,238 ನಿನ್ನೆಯ ವಿವರ)

26,256 ▼ ಸಕ್ರಿಯ ಪ್ರಕರಣಗಳು

28,24,197 ▲ ಗುಣಮುಖರಾದವರು

36,226 ▲ ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	1,464	▲
ಗುಣಮುಖ	2,706	▼
ಸಾವು	29	▼

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಕಪ್ಪುಶಿಲೀಂಧ್ರ: 45,432 ಪ್ರಕರಣ

ನವದೆಹಲಿ (ಪಿಟಿಐ): ದೇಶದಾದ್ಯಂತ ಜುಲೈ 15ರವರೆಗೆ 45,432 ಕಪ್ಪು ಶಿಲೀಂಧ್ರ ಸೋಂಕು ಪ್ರಕರಣಗಳು ಪತ್ತೆಯಾಗಿವೆ. ಈ ಪೈಕಿ 21,085 ಜನರು ಚಿಕಿತ್ಸೆ ಪಡೆಯುತ್ತಿದ್ದರೆ, 4,252 ಜನರು ಮೃತಪಟ್ಟಿದ್ದಾರೆ.

ಆರೋಗ್ಯ ಸಚಿವ ಮನ್‌ಸುಖ್ ಮಾಂಡವಿಯ ಅವರು ಮಂಗಳವಾರ ಲಿಖಿತ ಉತ್ತರದಲ್ಲಿ ರಾಜ್ಯಸಭೆಗೆ ಈ ಮಾಹಿತಿ ನೀಡಿದ್ದು, ಒಟ್ಟು ಪ್ರಕರಣಗಳಲ್ಲಿ ಶೇ 84.4ರಷ್ಟು ರೋಗಿಗಳು ಕೋವಿಡ್ ಪೀಡಿತರಾಗಿದ್ದರು ಎಂದು ತಿಳಿಸಿದ್ದಾರೆ.

'18 ವರ್ಷ ಮೀರಿದವರಿಗಾಗಿ 188 ಕೋಟಿ ಡೋಸ್ ಲಸಿಕೆ'

ನವದೆಹಲಿ (ಪಿಟಿಐ): ದೇಶದಲ್ಲಿ 18 ವರ್ಷದ ಮೀರಿದ ಜನಸಂಖ್ಯೆ 94 ಕೋಟಿ ಇದ್ದು, ಇವರೆಲ್ಲರಿಗೂ ನೀಡಲು ಒಟ್ಟು 188 ಕೋಟಿ ಡೋಸ್ ಲಸಿಕೆ ಅಗತ್ಯವಿದೆ ಎಂದು ಕೇಂದ್ರ ಸರ್ಕಾರ ಮಂಗಳವಾರ ತಿಳಿಸಿದೆ.

ಒಂದೇ ಡೋಸ್ ನೀಡಬಹುದಾದ ಲಸಿಕೆಗೆ ಅನುಮೋದನೆ ಮತ್ತು ಅದರ ಬಳಕೆ ಆರಂಭವಾದ ಬಳಿಕ ಈ ಸಂಖ್ಯೆ ಕಡಿಮೆಯೂ ಆಗಬಹುದು ಎಂದು ಸರ್ಕಾರ ರಾಜ್ಯಸಭೆಗೆ ನೀಡಿದ ಲಿಖಿತ ಉತ್ತರದಲ್ಲಿ ತಿಳಿಸಿದೆ.

'ಪ್ರಾಥಮಿಕ ಶಾಲೆಗಳನ್ನೇ ಆರಂಭಿಸಿ'

ಶಾಲೆಗಳನ್ನು ಪುನರಾರಂಭಿಸಲು ಒಮ್ಮೆ ನಿರ್ಧರಿಸಿದರೆ, ಮೊದಲಿಗೆ ಪ್ರಾಥಮಿಕ ಹಂತದ ಶಾಲೆಗಳನ್ನೇ ಆರಂಭಿಸುವುದು ಉತ್ತಮ ಎಂದು ಐಸಿಎಂಆರ್ ಸಲಹೆ ಮಾಡಿದೆ.

ವಯಸ್ಕರಿಗಿಂತಲೂ ಮಕ್ಕಳು ಸಾಂಕ್ರಾಮಿಕ ಸೋಂಕುಗಳನ್ನು ಚೆನ್ನಾಗಿ ನಿಭಾಯಿಸಬಲ್ಲರು. ಆದರೆ, ಪ್ರಾಥಮಿಕ ಶಾಲೆ ಪುನರಾರಂಭಿಸುವುದೇ ಆದಲ್ಲಿ ಶಾಲೆಯ ಎಲ್ಲ ಶಿಕ್ಷಕರು, ಸಿಬ್ಬಂದಿಗೆ ಲಸಿಕೆ ನೀಡಿರುವುದು ಕಡ್ಡಾಯವಾಗಿದೆ ಎಂದು ಐಸಿಎಂಆರ್ ಪ್ರಧಾನ ನಿರ್ದೇಶಕ ಬಲರಾಂ ಭಾರ್ಗವ ಮಂಗಳವಾರ ಅಭಿಪ್ರಾಯಪಟ್ಟರು.

ದ್ವಿತೀಯ ಪಿಯು: 600ಕ್ಕೆ 600 ಪಡೆದ 2,239 ವಿದ್ಯಾರ್ಥಿಗಳು

ಒಂದನೇ ಪುಟದಿಂದ

'ಎಸ್ಸೆಸ್ಸೆಲ್ಸಿ ಅಥವಾ ಇತರ ಮಂಡಳಿಗಳ 10ನೇ ತರಗತಿಯಲ್ಲಿ ಪಡೆದ ವಿಷಯವಾರು ಅಂಕಗಳಲ್ಲಿ ಶೇ 45ರಷ್ಟು ಅಂಕ, ಪ್ರಥಮ ಪಿಯುಸಿಯಲ್ಲಿ ಪಡೆದಿರುವ ಶೇ 45ರಷ್ಟು ಅಂಕ, ದ್ವಿತೀಯ ಪಿಯುಸಿಯಲ್ಲಿ ವಿದ್ಯಾರ್ಥಿಯ ಶೈಕ್ಷಣಿಕ ಚಟುವಟಿಕೆಗೆ ಶೇ 10ರಷ್ಟು ಅಂಕಗಳು ಮತ್ತು ಪ್ರಥಮ ಪಿಯುಸಿಯಲ್ಲಿ ಪಡೆದ ಅಂಕಗಳಿಗೆ ಶೇ 5 ಕೃಪಾಂಕ ನೀಡಿ ಫಲಿತಾಂಶ ನಿರ್ಣಯಿಸಲಾಗಿದೆ' ಎಂದರು.

'ಪರೀಕ್ಷೆ ನೋಂದಾಯಿಸಿಕೊಂಡಿದ್ದ ಪುನರಾವರ್ತಿತ ವಿದ್ಯಾರ್ಥಿಗಳಿಗೆ ವಿಷಯಾವಾರು ಕನಿಷ್ಠ ಉತ್ತೀರ್ಣ ಅಂಕಗಳು ಮತ್ತು ವಿಷಯವಾರು ಗರಿಷ್ಠ ಅಂಕಗಳಿಗೆ ಶೇ 5ರಷ್ಟು ಕೃಪಾಂಕ ನೀಡಿ ಫಲಿತಾಂಶ ಘೋಷಿಸಲಾಗಿದೆ' ಎಂದೂ ತಿಳಿಸಿದರು.

762 ಮಕ್ಕಳಿಗೂ ಪರೀಕ್ಷೆಗೆ ಅವಕಾಶ: ಈ ಬಾರಿ ದ್ವಿತೀಯ ಪಿಯುಸಿ ತರಗತಿಗಳಿಗೆ ನೋಂದಾಯಿಸಿಕೊಂಡಿದ್ದರೂ, ಪರೀಕ್ಷೆಗೆ ನೋಂದಾಯಿಸಿಕೊಳ್ಳದ ಒಟ್ಟು 762 ವಿದ್ಯಾರ್ಥಿಗಳಿಗೆ ಆಗಸ್ಟ್‌ನಲ್ಲಿ ನಡೆಯಲಿರುವ ವಾರ್ಷಿಕ ಪರೀಕ್ಷೆಗೆ ನೋಂದಾಯಿಸಿಕೊಂಡು ಹಾಜರಾಗಲು ಅವಕಾಶ ನೀಡಲಾಗಿದೆ' ಎಂದು ಹೇಳಿದರು.

ಫಲಿತಾಂಶ ಪಡೆಯಲು ವಿದ್ಯಾರ್ಥಿಗಳು https://karresults.nic.in ಈ ಲಿಂಕ್ ಕ್ಲಿಕ್ಕಿಸಬಹುದು.

ಆಗಸ್ಟ್‌ನಲ್ಲಿ ಪರೀಕ್ಷೆ

'ಈ ಫಲಿತಾಂಶ ಒಪ್ಪಿಕೊಳ್ಳಲು ಇಲ್ಲವೇ ಅಥವಾ ತಿರಸ್ಕರಿಸಲು ಅವಕಾಶ ನೀಡಲಾಗಿದೆ. ತಿರಸ್ಕರಿಸುವ ವಿದ್ಯಾರ್ಥಿಗಳು ಆಗಸ್ಟ್‌ನಲ್ಲಿ ನಡೆಯಲಿರುವ ವಾರ್ಷಿಕ ಪರೀಕ್ಷೆಗೆ ನೋಂದಾಯಿಸಿಕೊಳ್ಳಲು ಇದೇ 30 ಕೊನೆಯ ದಿನ. ಜೊತೆಗೆ, 2020-21ನೇ ಸಾಲಿನಲ್ಲಿ ದ್ವಿತೀಯ ಪಿಯುಸಿ ಪರೀಕ್ಷೆಗೆ ನೋಂದಾಯಿಸಿಕೊಂಡಿದ್ದ ಖಾಸಗಿ ಅಭ್ಯರ್ಥಿಗಳಿಗೂ ಪರೀಕ್ಷೆ ನಡೆಯಲಿದೆ. ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಗಳನ್ನು ಆಗಸ್ಟ್ 19ರಿಂದ ಸೆಪ್ಟೆಂಬರ್ 3ರವರೆಗೆ ನಡೆಸಲು ಉದ್ದೇಶಿಸಲಾಗಿದೆ. ಎಂದು ಸುರೇಶ್‌ಕುಮಾರ್ ತಿಳಿಸಿದರು.

ಅಂಕಿಅಂಶ

6,66,497 ಪರೀಕ್ಷೆಗೆ ನೋಂದಾಯಿಸಿದವರು

95,628 ಉನ್ನತ ಶ್ರೇಣಿ

3,55,078 ಪ್ರಥಮ ಶ್ರೇಣಿ

1,47,055 ದ್ವಿತೀಯ ಶ್ರೇಣಿ

68,729 ಉತ್ತೀರ್ಣ

7 ಫಲಿತಾಂಶ ತಡೆ

ಸಂಯೋಜನೆವಾರು ವಿದ್ಯಾರ್ಥಿಗಳ ಫಲಿತಾಂಶ

ಸಂಯೋಜನೆ	ವಿದ್ಯಾರ್ಥಿಗಳು	ಉನ್ನತ ಶ್ರೇಣಿ	ಪ್ರಥಮ ಶ್ರೇಣಿ	ದ್ವಿತೀಯ ಶ್ರೇಣಿ	ಉತ್ತೀರ್ಣ
ಕಲಾ	1,95,034	5,974	86,113	74,119	28,826
ವಾಣಿಜ್ಯ	2,51,686	22,479	1,46,908	55,825	26,471
ವಿಜ್ಞಾನ	2,19,777	67,175	1,22,057	17,111	13,432

ಎಲ್ಲಿಯ ವಿದ್ಯಾರ್ಥಿಗಳು ಎಷ್ಟು?

5,18,903 ನಗರ ಅಭ್ಯರ್ಥಿಗಳು

1,47,594 ಗ್ರಾಮೀಣ ಅಭ್ಯರ್ಥಿಗಳು

ಎಲ್ಲಿಯ ವಿದ್ಯಾರ್ಥಿಗಳು ಎಷ್ಟು?

2,75,599 ಕನ್ನಡ

1,47,594 ಇಂಗ್ಲಿಷ್

ಅಂಗವಿಕಲ ವಿದ್ಯಾರ್ಥಿಗಳು

ಉನ್ನತ ಶ್ರೇಣಿ	ಪ್ರಥಮ ಶ್ರೇಣಿ	ದ್ವಿತೀಯ ಶ್ರೇಣಿ	ಉತ್ತೀರ್ಣ
84	603	459	310

ಒಟ್ಟು 1,428

ದ್ವಿತೀಯ ಪರೀಕ್ಷೆಗೆ ನೋಂದಾಯಿಸಿದವರು

ವಿದ್ಯಾರ್ಥಿಗಳು	3,35,138
ವಿದ್ಯಾರ್ಥಿನಿಯರು	3,31,359
ಹೊಸ ವಿದ್ಯಾರ್ಥಿಗಳು	5,90,153
ಪುನರಾವರ್ತಿತ ವಿದ್ಯಾರ್ಥಿಗಳು	76,344

600ಕ್ಕೆ 600 ಅಂಕ ಗಳಿಸಿದ ಹೆಚ್ಚು ವಿದ್ಯಾರ್ಥಿಗಳಿರುವ ಜಿಲ್ಲೆ

ಶೈಕ್ಷಣಿಕ ಜಿಲ್ಲೆ	ವಿದ್ಯಾರ್ಥಿಗಳು
ದಕ್ಷಿಣ ಕನ್ನಡ	445
ಬೆಂಗಳೂರು ದಕ್ಷಿಣ	302
ಬೆಂಗಳೂರು ಉತ್ತರ	261
ಉಡುಪಿ	149
ಹಾಸನ	104

600ಕ್ಕೆ 600 ಅಂಕ ಗಳಿಸಿದ ಸಂಯೋಜನೆವಾರು ವಿದ್ಯಾರ್ಥಿಗಳು

ಸಂಯೋಜನೆ	ವಿದ್ಯಾರ್ಥಿಗಳು
ಕಲಾ	18
ವಾಣಿಜ್ಯ	292
ವಿಜ್ಞಾನ	1929
ಒಟ್ಟು	2,239

ದ್ವಿತೀಯ ಪಿಯುಸಿ ಫಲಿತಾಂಶ ವಿವರ

ಪರೀಕ್ಷೆಗೆ ನೋಂದಾಯಿಸಿಕೊಂಡಿದ್ದ ವಿದ್ಯಾರ್ಥಿಗಳು	15,213
ಕಲಾ ವಿಭಾಗ	1,697
ವಾಣಿಜ್ಯ ವಿಭಾಗ	8,043
ವಿಜ್ಞಾನ ವಿಭಾಗ	5,473
ಗ್ರಾಮೀಣ ವಿದ್ಯಾರ್ಥಿಗಳು	7,888
ನಗರ ವಿದ್ಯಾರ್ಥಿಗಳು	7,325

'ಅಹಿಂದ ವರ್ಗಗಳು ಎಚ್ಚರಗೊಳ್ಳಬೇಕಿದೆ'

ಪ್ರಜಾವಾಣಿ ವಾರ್ತೆ



ಮಹದೇವಪ್ಪ

ಬೆಂಗಳೂರು: ಜನರ ಬದುಕಿಗಿಂತಲೂ ತಮ್ಮ ಜಾತಿ ಉಳಿದರೆ ಸಾಕು ಎಂಬ ಪ್ರಬಲ ಜಾತಿಗಳ ಮನಸ್ಥಿತಿಯನ್ನೂ ನೋಡಿಯಾದರೂ ಅಲ್ಪಸಂಖ್ಯಾತ, ಹಿಂದುಳಿದ ಮತ್ತು ದಲಿತ (ಅಹಿಂದ) ವರ್ಗಗಳ ಜನರು ಎಚ್ಚೆತ್ತುಕೊಳ್ಳಬೇಕು ಎಂದು ಮಾಜಿ ಸಚಿವ ಡಾ.ಎಚ್.ಸಿ. ಮಹದೇವಪ್ಪ ಹೇಳಿದ್ದಾರೆ.

'ರಾಜಕಾರಣ ದಿನ ಕಳೆದಂತೆ ಜಾತಿ ಮತ್ತು ವ್ಯಾಪಾರದ ಗೋಡೆಗಳಿಗೆ ಮೊಳೆ ಹೊಡೆದುಕೊಂಡಂತೆ ಸಾಗುತ್ತಿದೆ. ಜಾತಿ ಪ್ರೇಮದ ಆಚೆಗೂ ಎಲ್ಲ ಜನಾಂಗದ ಹಿತಾಸಕ್ತಿಗಳನ್ನು ರಕ್ಷಿಸುವ ಜನಸೇವಾ ವಲಯವನ್ನು ನಿರ್ಮಿಸಬೇಕು ಎಂಬ ಗಂಭೀರ ಸಂಗತಿಯನ್ನು ರಾಜಕಾರಣಿಗಳು ಮರೆಯುತ್ತಿರುವುದು ದುರಂತದ ವಿದ್ಯಮಾನ' ಎಂದು ಅವರು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಕೆಲವು ಮಿತಿಗಳ ನಡುವೆಯೂ ಕಾಂಗ್ರೆಸ್ ಸರ್ಕಾರ ಐದು ವರ್ಷಗಳ ಕಾಲ ಜಾತ್ಯತೀತ ನೆಲೆಯಲ್ಲಿ ಸುಭದ್ರ ಆಡಳಿತ ನೀಡಿತ್ತು. ಆ ಬಳಿಕ ಜಾತಿವಾದಿ ಮತ್ತು ವ್ಯಾಪಾರಿ ಮನಸ್ಥಿತಿಯ ಜನರ ಸರ್ಕಾರ ಅಧಿಕಾರಕ್ಕೆ ಬಂದದ್ದರಿಂದ ಸಾಮಾನ್ಯ ಜನರು ಬದುಕಲು ಸಾಧ್ಯವೇ ಇಲ್ಲದಂತಹ ಕೆಟ್ಟ ಪರಿಸ್ಥಿತಿ ನಿರ್ಮಾಣವಾಗಿದೆ ಎಂದಿದ್ದಾರೆ.

'ಜನರು ಸಂಕಷ್ಟದಲ್ಲಿರುವಾಗಲೂ ಜಾತಿ ಶ್ರೇಷ್ಠತೆಯ ಪ್ರಜ್ಞೆ ಮೆರೆಯುವುದು ಮತ್ತು ತಮ್ಮ ಜಾತಿಯಷ್ಟೇ ಉಳಿದರೆ ಸಾಕೆಂಬ ವರ್ತನೆಗಳ ಪ್ರದರ್ಶನ ಆಗುತ್ತಿದೆ. ಅಹಿಂದ ವರ್ಗಗಳಲ್ಲಿ ಜಾತಿ ಪ್ರಜ್ಞೆ ಜಾಗೃತವಾಗಿದ್ದರೆ ರಾಜಕೀಯವಾಗಿ ಮತ್ತು ಸಾಮಾಜಿಕ ನ್ಯಾಯದ ದೃಷ್ಟಿಯಿಂದ ಶಾಶ್ವತವಾದ ರಾಜಕೀಯ ಶಕ್ತಿ ರಾಜ್ಯದಲ್ಲಿ ನಿರ್ಮಾಣವಾಗುತ್ತಿತ್ತು. ಅಹಿಂದ ವರ್ಗಗಳು ಇನ್ನಾದರೂ ಈ ಬಗ್ಗೆ ಗಂಭೀರವಾಗಿ ಯೋಚಿಸಬೇಕು' ಎಂದು ಮಹದೇವಪ್ಪ ಸಲಹೆ ನೀಡಿದ್ದಾರೆ.

ಕ್ಷಮೆ ಯಾಚನೆಗೆ ಆಗ್ರಹ: 'ಆಮ್ಲಜನಕದ ಕೊರತೆಯಿಂದ ಯಾರೂ ಸತ್ತಿಲ್ಲ' ಎಂದು ಕೇಂದ್ರ ಸರ್ಕಾರ ರಾಜ್ಯಸಭೆಯಲ್ಲಿ ಹೇಳಿಕೆ ನೀಡಿರುವುದಕ್ಕೆ ಟ್ವಿಟರ್‌ನಲ್ಲಿ ಪ್ರತಿಕ್ರಿಯಿಸಿರುವ ಅವರು, 'ಚಾಮರಾಜನಗರ ಜಿಲ್ಲೆಯೂ ಸೇರಿದಂತೆ ದೇಶದ ಹಲವೆಡೆ ಆಮ್ಲಜನಕದ ಕೊರತೆಯಿಂದ ಜನರು ಸತ್ತಿದ್ದಾರೆ. ಹೈಕೋರ್ಟ್, ಸುಪ್ರೀಂಕೋರ್ಟ್‌ಗಳು ಈ ವಿಚಾರದಲ್ಲಿ ಮಧ್ಯಪ್ರವೇಶ ಮಾಡಿವೆ. ಆದರೂ, ಸುಳ್ಳು ಹೇಳಿರುವ ಸರ್ಕಾರ ದೇಶದ ಜನರ ಕ್ಷಮೆ ಯಾಚಿಸಬೇಕು' ಎಂದು ಆಗ್ರಹಿಸಿದ್ದಾರೆ.

ಸಂಸತ್ತಿನ ಉಭಯ ಸದನಗಳ ಕಲಾಪಕ್ಕೆ ಅಡ್ಡಿ; ಜಂಟಿ ಸದನ ಸಮಿತಿ ತನಿಖೆಗೆ ಪಟ್ಟು

ಪೆಗಾಸಸ್: ಸರ್ಕಾರಕ್ಕೆ ಪ್ರತಿಪಕ್ಷಗಳ ತರಾಟೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಇಸ್ರೇಲ್‌ನ ಕಣ್ಗಾವಲು ತಂತ್ರಾಂಶ 'ಪೆಗಾಸಸ್' ಬಳಸಿ ಪ್ರತಿಪಕ್ಷ ಮುಖಂಡರಾದ ರಾಹುಲ್ ಗಾಂಧಿ ಹಾಗೂ ಅಭಿಷೇಕ್ ಬ್ಯಾನರ್ಜಿ ಅವರ ಮೇಲೆ ಗೂಢಚರ್ಯೆ ನಡೆಸಲಾಗಿದೆ ಎಂಬ ವಿಷಯವು ಸಂಸತ್ತಿನಲ್ಲಿ ಮಂಗಳವಾರ ಕೋಲಾಹಲಕ್ಕೆ ಕಾರಣವಾಯಿತು. ಪ್ರತಿಪಕ್ಷಗಳು ಸರ್ಕಾರದ ವಿರುದ್ಧ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದರಿಂದ ಕಲಾಪಕ್ಕೆ ಅಡ್ಡಿಯಾಯಿತು.

ಕೋವಿಡ್ ವಿಚಾರವಾಗಿ ಚರ್ಚೆ ನಡೆಸಲು ಒಪ್ಪಿಕೊಂಡಿದ್ದರಿಂದ ರಾಜ್ಯ ಸಭೆ ಕಲಾಪವು ಮಧ್ಯಾಹ್ನದ ಬಳಿಕ ಹಳಿಗೆ ಮರಳಿತು.

ಆದರೆ ಲೋಕಸಭೆಯಲ್ಲಿ ಇಡೀ ದಿನ ಯಾವುದೇ ಚರ್ಚೆ ಆಗಲಿಲ್ಲ. ಗದ್ದಲದ ನಡುವೆಯೇ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು 2021–22ನೇ ಸಾಲಿನ ಅನುದಾನಕ್ಕಾಗಿ ಪೂರಕ ಬೇಡಿಕೆಗಳನ್ನು ಮಂಡಿಸಿದರು.

ಉಭಯ ಸದನಗಳ ಕಲಾಪವನ್ನು ಬದಿಗಿರಿಸಿ, ಪೆಗಾಸಸ್ ಬಗ್ಗೆ ಚರ್ಚೆ ನಡೆಸಲು ಹಲವು ಸಂಸದರು ನೋಟಿಸ್ ನೀಡಿದ್ದರು. ಎರಡೂ ಸದನಗಳಲ್ಲಿ ಪೀಠದ ಮುಂದೆ ಸಂಸದರು ಪ್ರತಿ ಭಟನೆ ನಡೆಸಿದರು.

ಕೋವಿಡ್ ಬಗ್ಗೆ ಚರ್ಚಿಸಲು ಒತ್ತಾಯಿಸಿದ್ದರಿಂದ ರಾಜ್ಯ ಸಭೆ ಕಲಾಪವನ್ನು ಮೂರು ಬಾರಿ ಮುಂದೂಡಲಾಯಿತು.

ಗೂಢಚರ್ಯೆ ವಿಚಾರವನ್ನು ಒಗ್ಗಟ್ಟಿನಿಂದ ಪ್ರಸ್ತಾಪ ಮಾಡಲು ರಾಜ್ಯಸಭೆಯಲ್ಲಿ ಪ್ರತಿಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರ ಅಧ್ಯಕ್ಷತೆಯಲ್ಲಿ ನಡೆದ ನಾಯಕರ ಸಭೆಯಲ್ಲಿ ಕಾರ್ಯತಂತ್ರವನ್ನು ನಿರ್ಧರಿಸಲಾಗಿತ್ತು. ಸಭಾಪತಿ ವೆಂಕಯ್ಯ ನಾಯ್ಡು ಅವರು ಪ್ರತಿಪಕ್ಷಗಳು ಹಾಗೂ ಆಡಳಿತ ಪಕ್ಷದವರ ಮನವೊಲಿಸುವಲ್ಲಿ ಯಶಸ್ವಿಯಾದರು. ಪ್ರತಿಪಕ್ಷ ಮುಖಂಡರ ಜೊತೆ ರಾಜ್ಯಸಭೆ ನಾಯಕ ಪೀಯೂಷ್ ಗೋಯಲ್ ಅವರು ಅನೌಪಚಾರಿಕವಾಗಿ ನಡೆಸಿದ ಮಾತುಕತೆ ಫಲ ನೀಡಿತು. ನಾಲ್ಕು ಗಂಟೆಗಳ ಕಾಲ ಕೋವಿಡ್ ನಿರ್ವಹಣೆ ಕುರಿತು ಚರ್ಚೆಗೆ ಸಮಯ ನಿಗದಿಪಡಿಸಲಾಯಿತು.

'ಜನರು ಉದ್ಯೋಗ ಸಿಗದೇ ಒದ್ದಾಡುತ್ತಿದ್ದರೆ, ಸರ್ಕಾರವು ಗೂಢಚರ್ಯೆಯಲ್ಲಿ ತೊಡಗಿದೆ' ಎಂಬ ಫಲಕವನ್ನು ಲೋಕಸಭೆಯಲ್ಲಿ ಸಂಸದರು ಪ್ರದರ್ಶಿಸಿದರು. ರಾಜ್ಯಸಭೆಯಲ್ಲಿ ತೃಣಮೂಲ ಕಾಂಗ್ರೆಸ್ ಸದಸ್ಯರು ಗೂಢಚರ್ಯೆಯನ್ನು ವಿರೋಧಿಸುವ ಸಲುವಾಗಿ ಆಟಿಕೆ ಮೊಬೈಲ್‌ಗಳನ್ನು ಪ್ರದರ್ಶಿಸಿದರು. ತಮ್ಮ ಪಕ್ಷದ ನಾಯಕರೇ ಕಣ್ಗಾವಲು ಪ್ರಕರಣದ ಗುರಿ ಆಗಿದ್ದರಿಂದ ಕಾಂಗ್ರೆಸ್ ಹಾಗೂ ತೃಣಮೂಲ ಕಾಂಗ್ರೆಸ್ ಸಂಸದರು ಪ್ರತಿಭಟನೆಯ ಮುಂಚೂಣಿಯಲ್ಲಿ ಕಂಡುಬಂದರು.

ಪೆಗಾಸಸ್ ತಂತ್ರಾಂಶವನ್ನು ಖರೀದಿಸಲಾಗಿದೆಯೇ ಅಥವಾ ಇಲ್ಲವೇ ಎಂಬುದನ್ನು ಸರ್ಕಾರ ಸ್ಪಷ್ಟವಾಗಿ ತಿಳಿಸಬೇಕು ಹಾಗೂ ಈ ಬಗ್ಗೆ ಜಂಟಿ ಸಂಸದೀಯ ತನಿಖೆ ನಡೆಸಬೇಕು ಎಂದು ಕಾಂಗ್ರೆಸ್ ವಕ್ತಾರ ಶಕ್ತಿಸಿಂಹ ಗೋಹಿಲ್ ಆಗ್ರಹಿಸಿದರು.

ದೂರವಾಣಿ ಕದ್ದಾಲಿಕೆ ವಿಷಯದಲ್ಲಿ ರಾಷ್ಟ್ರೀಯ ಭದ್ರತೆ ಉಲ್ಲಂಘನೆಯಾಗಿದ್ದು, ಸಂವಿಧಾನದ ಅಡಿಯಲ್ಲಿರುವ ಮೂಲಭೂತ ಹಕ್ಕುಗಳ ಉಲ್ಲಂಘನೆಯೂ ಆಗಿದೆ. ಈ ಕುರಿತು ಚರ್ಚಿಸಲು ತಮ್ಮ ಪಕ್ಷದ ಸಂಸದರು ಉಭಯ ಸದನಗಳಲ್ಲಿ ಗೊತ್ತುವಳಿ ನೋಟಿಸ್ ನೀಡಿದ್ದಾರೆ ಎಂದು ಅವರು ಹೇಳಿದರು.

'ಪೆಗಾಸಸ್ ಖರೀದಿ ಕುರಿತಂತೆ ಸಚಿವರು ಗೊಂದಲಕಾರಿ ಹೇಳಿಕೆ ನೀಡುತ್ತಿದ್ದಾರೆ. ಖರೀದಿಸಿದ್ದೇ ಆದಲ್ಲಿ, ಜಂಟಿ ಸಂಸದೀಯ ತನಿಖೆ ನಡೆಯಬೇಕು' ಎಂದು ಅವರು ಹೇಳಿದರು. ತಮ್ಮ ಪಕ್ಷವು ಸದನದಲ್ಲಿ ನಿತ್ಯವೂ ಪ್ರತಿಭಟನೆ ನಡೆಸಲಿದೆ ಎಂದು ತೃಣಮೂಲ ಕಾಂಗ್ರೆಸ್ ಸಂಸದ ಶಂತನು ಸೇನ್ ರಾಜ್ಯಸಭೆಯಲ್ಲಿ ಹೇಳಿದರು. ಆದಾಗ್ಯೂ, ಕೋವಿಡ್ ಪರಿಸ್ಥಿತಿ ಅಥವಾ ಅದಕ್ಕೆ ಸಂಬಂಧಿಸಿದ ಅಂಶಗಳ ಕುರಿತ ಯಾವುದೇ ಚರ್ಚೆಗಳಿಗೆ ತಡೆ ಒಡ್ಡುವುದಿಲ್ಲ ಎಂದು ಸ್ಪಷ್ಟಪಡಿಸಿದರು.

'ಇದು ಗಂಭೀರ ವಿಷಯ. ಟಿಎಂಸಿ ಇದರ ಬಗ್ಗೆ ಯಾವುದೇ ರಾಜಿ ಮಾಡಿಕೊಳ್ಳುವುದಿಲ್ಲ. ಕಣ್ಗಾವಲು ಆರೋಪದಿಂದ ಸರ್ಕಾರ ಹೊರಬರುವವರೆಗೆ ನಾವು ಸದನ ನಡೆಸಲು ಬಿಡುವುದಿಲ್ಲ. ದೂರವಾಣಿಗಳನ್ನು ಕದ್ದಾಲಿಸಲು ಸರ್ಕಾರ ಲಕ್ಷಾಂತರ ರೂಪಾಯಿ ಖರ್ಚು ಮಾಡಿದೆ. ದೇಶವು ಸಾಂಕ್ರಾಮಿಕ ರೋಗವನ್ನು ಎದುರಿಸುತ್ತಿದ್ದ ಸಮಯದಲ್ಲಿ ಸರ್ಕಾರ ಈ ಕೆಲಸದಲ್ಲಿ ತೊಡಗಿತ್ತು' ಎಂದು ಟಿಎಂಸಿ ರಾಜ್ಯಸಭಾ ಸಂಸದ ಡೆರೆಕ್ ಒಬ್ರಿಯಾನ್ ಹೇಳಿದ್ದಾರೆ.

ಈದ್ ರಜೆಯ ನಂತರ ಲೋಕಸಭೆ ಕಲಾಪ ಗುರುವಾರ ನಡೆಸಲಿದೆ.



ಪೆಗಾಸಸ್ ಗೂಢಚರ್ಯೆ ಖಂಡಿಸಿ ಯುವ ಕಾಂಗ್ರೆಸ್ ಕಾರ್ಯಕರ್ತರು ದೆಹಲಿಯಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು —ಪಿಟಿಐ ಚಿತ್ರ

ಐ.ಟಿ ಸಚಿವರು ಸದನದಲ್ಲಿ ಸುಳ್ಳು ಹೇಳಿದ್ದಾರೆ. ಪೆಗಾಸಸ್ ಅನ್ನು ಸರ್ಕಾರ ಖರೀದಿಸಿದೆಯೇ ಎಂಬುದನ್ನು ಪ್ರಧಾನಿ, ಗೃಹಸಚಿವ, ಐ.ಟಿ ಸಚಿವರು ಸ್ಪಷ್ಟಪಡಿಸಬೇಕು
ಮಹುವಾ ಮೊಯಿತ್ರಾ, ಟಿಎಂಸಿ ಸಂಸದೆ

ಗೂಢಚರ್ಯೆ ಮತ್ತು ಬ್ಲಾಕ್ ಮೇಲ್‌ನ ಕೊಳಕು ಆಟ ಹೊಸ ವಿಷಯವಲ್ಲ, ಆದರೆ ದುಬಾರಿ ಸಲಕರಣೆಗಳ ಸಹಾಯದಿಂದ ಗೋಪ್ಯತೆ ಉಲ್ಲಂಘಿಸುವುದು ಗಂಭೀರ ವಿಷಯ
ಮಾಯಾವತಿ, ಬಿಎಸ್‌ಪಿ ನಾಯಕಿ

ಕೇಂದ್ರ ಸರ್ಕಾರವು ಇಸ್ರೇಲ್ ಜತೆ ಉತ್ತಮ ಸಂಬಂಧ ಹೊಂದಿದೆ. ಭಾರತದ ಅರಿವೆಗೆ ಬಾರದೇ ಇಂತಹ ಕಣ್ಗಾವಲು ಹೇಗೆ ಸಾಧ್ಯ ಎಂದು ಜನ ಪ್ರಶ್ನಿಸುತ್ತಿದ್ದಾರೆ
ಸಿಪಿಎಂ

ಗೂಢಚಾರಿಕೆ ಶಿಕ್ಷಾರ್ಹ ಅಪರಾಧ. ಈ ಬಗ್ಗೆ ಬಿಜೆಪಿ ಸರ್ಕಾರಕ್ಕೆ ಮಾಹಿತಿ ಇಲ್ಲ ಎಂದಾದಲ್ಲಿ, ಇದು ರಾಷ್ಟ್ರೀಯ ಭದ್ರತಾ ವೈಫಲ್ಯ
ಅಖಿಲೇಶ್ ಯಾದವ್, ಎಸ್‌ಪಿ ಮುಖ್ಯಸ್ಥ

ಅಮಿತ್ ಶಾ ವಜಾಕ್ಕೆ ಆಗ್ರಹ

(ಜೈಪುರ, ನವದೆಹಲಿ, ಲಖನೌ ವರದಿ): ಪೆಗಾಸಸ್ ಪ್ರಕರಣದಲ್ಲಿ ಕೇಂದ್ರ ಗೃಹಸಚಿವ ಅಮಿತ್ ಶಾ ಅವರನ್ನು ವಜಾ ಮಾಡಬೇಕು ಎಂದು ರಾಜಸ್ಥಾನ ಕಾಂಗ್ರೆಸ್ ಘಟಕ ಮಂಗಳವಾರ ಆಗ್ರಹಿಸಿದೆ. ಪ್ರಕರಣ ಸಂಬಂಧ ಪ್ರಧಾನಿ ನರೇಂದ್ರ ಮೋದಿ ಅವರನ್ನು ವಿಚಾರಣೆಗೆ ಒಳಪಡಿಸಬೇಕು ಎಂದು ಪಕ್ಷದ ರಾಜ್ಯ ಘಟಕದ ಮುಖ್ಯಸ್ಥ ಗೋವಿಂದ ಸಿಂಗ್ ದೋತಸ್ರಾ ಅವರು ಒತ್ತಾಯಿಸಿದ್ದಾರೆ.

ಪಕ್ಷದ ಕಾರ್ಯಕರ್ತರು ರಾಜಸ್ಥಾನದ ರಾಜಭವನಕ್ಕೆ ಗುರುವಾರ ಮುತ್ತಿಗೆ ಹಾಕಲಿದ್ದಾರೆ ಎಂದು ಹೇಳಿರುವ ಅವರು ಸುಪ್ರೀಂ ಕೋರ್ಟ್ ಮೇಲ್ವಿಚಾರಣೆಯಲ್ಲಿ ಈ ಬಗ್ಗೆ ತನಿಖೆ ನಡೆಸಬೇಕು ಎಂದು ಒತ್ತಾಯಿಸಿದ್ದಾರೆ.

ರಾಜಸ್ಥಾನದ ಮಾಜಿ ಮುಖ್ಯಮಂತ್ರಿ ವಸುಂಧರಾ ರಾಜೆ ಸೇರಿದಂತೆ ಹಲವಾರು ನಾಯಕರ ಫೋನ್‌ಗಳನ್ನು ಕದ್ದಾಲಿಕೆ ಮಾಡಲಾಗಿದ್ದು, ಇದನ್ನು ಗೃಹ ಸಚಿವರ ಮಟ್ಟದಲ್ಲಿ ಮಾಡಲು ಸಾಧ್ಯವಿಲ್ಲ ಎಂದು ಅವರು ಹೇಳಿ ದರು.

ಸರ್ಕಾರದ ವಿರುದ್ಧ ಬೀದಿಗಿಳಿದ ಕಾಂಗ್ರೆಸ್: ಹಲವು ಪತ್ರಕರ್ತರು ಮತ್ತು ರಾಜಕಾರಣಿಗಳ ವಿರುದ್ಧ ಪೆಗಾಸಸ್ ತಂತ್ರಾಂಶ ಬಳಸಿ ಕಣ್ಗಾವಲು ಇರಿಸಲಾಗಿದೆ ಎಂಬ ವಿಚಾರವನ್ನು ಖಂಡಿಸಿರುವ ದೆಹಲಿ ಕಾಂಗ್ರೆಸ್ ಘಟಕವು, ಮಂಗಳವಾರ ಬಿಜೆಪಿ ಕೇಂದ್ರ ಕಚೇರಿ ಬಳಿ ಪ್ರತಿಭಟನೆ ನಡೆಸಿತು.

ದೆಹಲಿ ಕಾಂಗ್ರೆಸ್ ಘಟಕದ ಅಧ್ಯಕ್ಷ ಅನಿಲ್ ಕುಮಾರ್ ನೇತೃತ್ವದ ಪ್ರತಿಭಟನಕಾರರು ಘೋಷಣೆಗಳನ್ನು ಕೂಗಿದರು. ತಮ್ಮ ಕಚೇರಿಯಿಂದ ಬಿಜೆಪಿ ಕೇಂದ್ರ ಕಚೇರಿವರೆಗೆ ಮೆರವಣಿಗೆ ನಡೆಸಿದರು. ಅಲ್ಲಿ ಅವರನ್ನು ಪೊಲೀಸರು ತಡೆದರು.

ಕಲಾಪ ಅಡ್ಡಿಗೆ ಯೋಗಿ ಆಕ್ಷೇಪ: ಪೆಗಾಸಸ್ ವಿಚಾರದಲ್ಲಿ ಸಂಸತ್ ಕಲಾಪವನ್ನು ಹಾಳು ಮಾಡುತ್ತಿರುವ ಪ್ರತಿಪಕ್ಷಗಳನ್ನು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ತರಾಟೆಗೆ ತೆಗೆದುಕೊಂಡಿದ್ದಾರೆ. ನಕಾರಾತ್ಮಕ ವಾತಾವರಣವನ್ನು ಸೃಷ್ಟಿಸುತ್ತಿರುವ ಪಕ್ಷಗಳು ಕ್ಷಮೆ ಕೇಳಬೇಕು ಎಂದು ಅವರು ಒತ್ತಾಯಿಸಿದ್ದಾರೆ.

ಸಾಮಾನ್ಯ ಜನರಿಗೆ ಸಂಸತ್ತಿನಲ್ಲಿ ದನಿಯಾಗಬೇಕಿದ್ದ ಸಂಸದರು ತಮ್ಮ ನಕಾರಾತ್ಮಕ ವರ್ತನೆಯಿಂದ ಕಲಾಪ ನಡೆಸಲು ಅವಕಾಶ ನೀಡುತ್ತಿಲ್ಲ ಎಂದು ಅವರು ಆರೋಪಿಸಿದರು.

ಸುದ್ದಿ 2 ನಿಮಿಷ

ನಟಿ ಖುಷ್ಬೂ ಸುಂದರ್ ಟ್ವಿಟರ್ ಖಾತೆ ಹ್ಯಾಕ್

ಚೆನ್ನೈ (ಪಿಟಿಐ): ಬಿಜೆಪಿ ನಾಯಕಿ ಹಾಗೂ ನಟಿ ಖುಷ್ಬೂ ಸುಂದರ್ ಅವರ ಟ್ವಿಟರ್ ಖಾತೆಯನ್ನು ಸೋಮವಾರ ಹ್ಯಾಕ್ ಮಾಡಲಾಗಿದೆ.

ಖುಷ್ಬೂ ಅವರ ಟ್ವಿಟರ್ ಖಾತೆ ಹ್ಯಾಕ್ ಆಗಿರುವುದು ಇದು ಎರಡನೇ ಸಲ. 2020ರ ಏಪ್ರಿಲ್‌ನಲ್ಲಿ ಖುಷ್ಬೂ ಅವರ ಟ್ವಿಟರ್ ಖಾತೆಯನ್ನು ಹ್ಯಾಕ್ ಮಾಡಲಾಗಿತ್ತು. ಈ ಬಾರಿ ಟ್ವಿಟರ್ ಖಾತೆಯ ಹೆಸರನ್ನು ಬ್ರಿಯಾನ್ ಎಂದು ಬದಲಿಸಿದ್ದಾರೆ. ಹಾಗೇ ಕವರ್ ಚಿತ್ರವನ್ನು ಬದಲಾಯಿಸಿದ್ದು, ಅವರ ಎಲ್ಲಾ ಟ್ವೀಟ್‌ಗಳನ್ನು ಅಳಿಸಲಾಗಿದೆ.



ದೂರು ದಾಖಲು: ರಾಜ್ಯ ಪೊಲೀಸ್ ಮುಖ್ಯಸ್ಥ ಸಿ. ಶೈಲೇಂದ್ರ ಬಾಬು ಅವರಿಗೆ ದೂರು ಸಲ್ಲಿಸಿರುವ ಖುಷ್ಬೂ ಅವರು ತಮ್ಮ ಟ್ವಿಟರ್ ಖಾತೆಯನ್ನು ದುರುಪಯೋಗಪಡಿಸಿಕೊಳ್ಳುವ ಭೀತಿ ವ್ಯಕ್ತಪಡಿಸಿದ್ದಾರೆ.

'ಮುಂದಿನ 48 ಗಂಟೆಗಳಲ್ಲಿ ಖುಷ್ಬೂ ಅವರ ಟ್ವಿಟರ್ ಖಾತೆಯನ್ನು ಮರು ಸ್ಥಾಪಿಸಲಾಗುವುದು ಎಂದು ಟ್ವಿಟರ್ ತಿಳಿಸಿದೆ' ಎಂದು ಖುಷ್ಬೂ ಮಾಹಿತಿ ನೀಡಿದ್ದಾರೆ.

ಜುಲೈ 23ರವರೆಗೂ ರಾಜ್ ಕುಂದ್ರಾ ಪೊಲೀಸ್ ವಶಕ್ಕೆ

ಮುಂಬೈ (ಪಿಟಿಐ): ಅಶ್ಲೀಲ ಚಿತ್ರಗಳನ್ನು (ನೀಲಿ ಚಿತ್ರ) ತಯಾರಿಸಿದ ಮತ್ತು ಕೆಲವು ಆ್ಯಪ್‌ಗಳ ಮೂಲಕ ಅವುಗಳನ್ನು ಬಿತ್ತರಿಸಿದ ಆರೋಪದ ಮೇಲೆ ಉದ್ಯಮಿ ಮತ್ತು ಬಾಲಿವುಡ್ ನಟಿ ಶಿಲ್ಪಾ ಶೆಟ್ಟಿ ಅವರ ಪತಿ ರಾಜ್ ಕುಂದ್ರಾ ಅವರನ್ನು ಇಲ್ಲಿನ ಸ್ಥಳೀಯ ನ್ಯಾಯಾಲಯ ಜುಲೈ 23ರವರೆಗೆ ಪೊಲೀಸ್ ವಶಕ್ಕೆ ಒಪ್ಪಿಸಿದೆ.

ಭಾರತೀಯ ದಂಡ ಸಂಹಿತೆ ಮತ್ತು ಮಾಹಿತಿ ತಂತ್ರಜ್ಞಾನ ಕಾಯ್ದೆಯ ಅಡಿಯಲ್ಲಿ ಪ್ರಕರಣ ದಾಖಲಿಸಿಕೊಂಡಿರುವ ಮುಂಬೈ ಅಪರಾಧ ವಿಭಾಗದ ಪೊಲೀಸರು, ಸೋಮವಾರ ರಾತ್ರಿ ಕುಂದ್ರಾ ಅವರನ್ನು ಬಂಧಿಸಿದ್ದರು.

ಮತ್ತೊಬ್ಬ ಆರೋಪಿ ರಿಯಾನ್ ಥೋರ್ಪ್ ಎಂಬುವರನ್ನೂ ಬಂಧಿಸಿದ್ದು, ಅವರನ್ನು ಜುಲೈ 23ರವರೆಗೂ ನ್ಯಾಯಾಲಯವು ಪೊಲೀಸ್ ವಶಕ್ಕೆ ನೀಡಿದೆ.

'ಅಶ್ಲೀಲ ಚಿತ್ರಗಳ ತಯಾರಿ ಮತ್ತು ಅವುಗಳನ್ನು ಕೆಲವು ಅಪ್ಲಿಕೇಶನ್‌ಗಳ ಮೂಲಕ ಬಿತ್ತರಿಸುತ್ತಿರುವ ಬಗ್ಗೆ 2021ರ ಫೆಬ್ರುವರಿಯಲ್ಲಿ ಮುಂಬೈನ ಅಪರಾಧ ವಿಭಾಗದಲ್ಲಿ ಪ್ರಕರಣ ದಾಖಲಾಗಿತ್ತು. ರಾಜ್ ಕುಂದ್ರಾ ಅವರನ್ನು ಈ ಪ್ರಕರಣದಲ್ಲಿ ನಾವು ಬಂಧಿಸಿದ್ದೇವೆ. ಅವರು ಪ್ರಕರಣದ ಪ್ರಮುಖ ಆರೋಪಿಯಾಗಿದ್ದಾರೆ. ಈ ಬಗ್ಗೆ ನಮ್ಮ ಬಳಿ ಸಾಕಷ್ಟು ಪುರಾವೆಗಳಿವೆ' ಎಂದು ಮುಂಬೈ ಪೊಲೀಸ್ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಾಜ್ ಕುಂದ್ರಾ ಅವರ ಮೊಬೈಲ್ ಫೋನ್ ಅನ್ನು ವಶಪಡಿಸಿಕೊಂಡಿರುವ ಪೊಲೀಸರು, 'ಅದರಲ್ಲಿನ ಮಾಹಿತಿಗಳು ಸೇರಿದಂತೆ ವ್ಯವಹಾರದ ವಹಿವಾಟುಗಳನ್ನೂ ಸೂಕ್ಷ್ಮವಾಗಿ ಪರಿಶೀಲಿಸಬೇಕಾಗಿದೆ' ಎಂದು ಹೇಳಿದ್ದಾರೆ.



ತೈಲ ಬೆಲೆ ಏರಿಕೆ ಖಂಡಿಸಿ ನವದೆಹಲಿಯಲ್ಲಿ ಮಂಗಳವಾರ ಯುವ ಕಾಂಗ್ರೆಸ್ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿದ ಕಾಂಗ್ರೆಸ್ ಸಂಸದ ಡಿ.ಕೆ. ಸುರೇಶ್ ಸೈಕಲ್ ಏರಿ ಸಂಸತ್‌ಗೆ ತೆರಳಿದರು. ಎಐಸಿಸಿ ಕಾರ್ಯದರ್ಶಿ ಬಿ.ಎಂ. ಸಂದೀಪ್, ಯುವ ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷ ಬಿ.ವಿ. ಶ್ರೀನಿವಾಸ್ ಚಿತ್ರದಲ್ಲಿದ್ದಾರೆ.

ಸೈಕಲ್‌ನಲ್ಲಿ ಸಂಸತ್‌ಗೆ ತೆರಳಿದ ಡಿ.ಕೆ. ಸುರೇಶ್

ಪ್ರಜಾವಾಣಿ ವಾರ್ತೆ

ನವದೆಹಲಿ: ಪೆಟ್ರೋಲ್, ಡೀಸೆಲ್ ಮತ್ತು ಅಡುಗೆ ಅನಿಲ ಬೆಲೆ ಏರಿಕೆಯನ್ನು ಖಂಡಿಸಿ ಯುವ ಕಾಂಗ್ರೆಸ್ ನೇತೃತ್ವದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದ ಕಾಂಗ್ರೆಸ್ ಸಂಸದ ಡಿ.ಕೆ. ಸುರೇಶ್, ಸೈಕಲ್‌ನಲ್ಲೇ ಸಂಸತ್‌ಗೆ ತೆರಳಿ ಗಮನ ಸೆಳೆದರು.

ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ಜನ ಸಾಮಾನ್ಯರ ಅಭ್ಯುದಯದ ಕುರಿತು ಕಿಂಚಿತ್ ಆಲೋಚಿಸದೇ, ತೈಲ ಬೆಲೆ ಹೆಚ್ಚಿಸುವ ಮೂಲಕ, ಅವರ ಬದುಕಿನೊಂದಿಗೆ ಚೆಲ್ಲಾಟ ಆಡುತ್ತಿದೆ ಎಂದು ಸುರೇಶ್ ಆರೋಪಿಸಿದರು.

ತೈಲೋತ್ಪನ್ನಗಳ ಮೇಲಿನ ತೆರಿಗೆ ಹೆಚ್ಚಿಸಿದ್ದರಿಂದ ಪೆಟ್ರೋಲ್ ಬೆಲೆಯು ಪ್ರತಿ ಲೀಟರ್‌ಗೆ ₹ 100 ದಾಟಿದೆ. ಕೂಡಲೇ ಬೆಲೆ ಇಳಿಕೆಗೆ ಮುಂದಾಗಿ, ಬಡಜನತೆಗೆ ಅನುಕೂಲ ಕಲ್ಪಿಸಬೇಕು ಎಂದು ಅವರು ಕೋರಿದರು.

'ತೈಲ ಬೆಲೆ ಹೆಚ್ಚಳದಿಂದಾಗಿ ಜನರು ದುಬಾರಿ ಮೊತ್ತದ ವಾಹನಗಳನ್ನು ಮೂಲೆಯಲ್ಲಿರಿಸಿ, ಕೆಲಸ, ಕಾರ್ಯಗಳಿಗೆ ನಡೆದುಕೊಂಡು ಅಥವಾ ಸೈಕಲ್ ಬಳಸಲು ಶುರು ಮಾಡಿದ್ದಾರೆ. ನಾವೂ ಸೈಕಲ್‌ನಲ್ಲಿ ತೆರಳುವ ಮೂಲಕ ಪ್ರತಿಭಟನೆ ಹಮ್ಮಿಕೊಳ್ಳುತ್ತಿದ್ದೇವೆ' ಎಂದು ಯುವ ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷ ಬಿ.ವಿ. ಶ್ರೀನಿವಾಸ ಅವರು ಹೇಳಿದರು.

ಎಐಸಿಸಿ ಕಾರ್ಯದರ್ಶಿ ಬಿ.ಎಂ. ಸಂದೀಪ್, ಯುವ ಕಾಂಗ್ರೆಸ್ ಮುಖಂಡ ರಾಹುಲ್ ರಾಯ್ ಮತ್ತಿತರರು ಹಾಜರಿದ್ದರು.

ನ್ಯಾಯಾಂಗ ತನಿಖೆಗೆ ಕಾಂಗ್ರೆಸ್ ಆಗ್ರಹ

ಪ್ರಜಾವಾಣಿ ವಾರ್ತೆ

ನವದೆಹಲಿ: ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ಪೆಗಾಸಸ್ ಗೂಢಚರ್ಯೆ ನೆರವಿನೊಂದಿಗೆ ಕರ್ನಾಟಕದ ಜೆಡಿಎಸ್- ಕಾಂಗ್ರೆಸ್ ಮೈತ್ರಿ ಸರ್ಕಾರವನ್ನು ಕೆಡವಿರುವ ಕುರಿತು ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿ ನೇತೃತ್ವದಲ್ಲಿ ನ್ಯಾಯಾಂಗ ತನಿಖೆಗೆ ಆದೇಶಿಸುವಂತೆ ಕಾಂಗ್ರೆಸ್ ಆಗ್ರಹಿಸಿದೆ.

ಎಐಸಿಸಿ ಕಚೇರಿಯಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಕಾಂಗ್ರೆಸ್ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ, ಪ್ರಧಾನಿ ನರೇಂದ್ರ ಮೋದಿ ಹಾಗೂ ಕೇಂದ್ರದ ಗೃಹ ಸಚಿವ ಅಮಿತ್ ಶಾ ಜೋಡಿಯೇ ರಾಜ್ಯದ ಮೈತ್ರಿ ಸರ್ಕಾರ ಕೆಡವಲು ಪೆಗಾಸಸ್ ನೆರವು ಪಡೆದಿದೆ ಎಂದು ದೂರಿದರು.

ಮಧ್ಯಪ್ರದೇಶದಲ್ಲೂ ಕಾಂಗ್ರೆಸ್ ನೇತೃತ್ವದ ಸರ್ಕಾರ ಉರುಳಿಸಲು ಇದೇ ಮಾರ್ಗ ಅನುಸರಿಸಿರುವ ಸಾಧ್ಯತೆ ಇದೆ. ಇದೀಗ ಮಹಾರಾಷ್ಟ್ರದಲ್ಲಿ ಮೈತ್ರಿ ಸರ್ಕಾರ ಕೆಡವುವ ಪ್ರಯತ್ನವನ್ನೂ ಪೆಗಾಸಸ್ ಗೂಢಚರ್ಯೆ ನೆರವಿನಿಂದಲೇ ನಡೆಸಿರುವ ಸಾಧ್ಯತೆ ಇದೆ. ಈ ಕುರಿತು ಸಮಗ್ರ ತನಿಖೆ ನಡೆಸಿದಲ್ಲಿ ಅಕ್ರಮ ಬಹಿರಂಗಗೊಳ್ಳಲಿದೆ ಎಂದು ಅವರು ಹೇಳಿದರು.

ಸಂಸತ್‌ನ ಉಭಯ ಸದನಗಳಲ್ಲಿ ಈ ಕುರಿತು ಧ್ವನಿ ಎತ್ತಲಾಗುವುದು. ದೇಶದ ಎಲ್ಲ ರಾಜ್ಯಗಳ ರಾಜಧಾನಿಯಲ್ಲಿ ಗುರುವಾರ ಪಕ್ಷದ ವತಿಯಿಂದ ಪ್ರತಿಭಟನೆ ಹಮ್ಮಿಕೊಂಡು, ರಾಜ್ಯಪಾಲರಿಗೆ ಮನವಿ ಸಲ್ಲಿಸಲಾಗುವುದು ಎಂದು ಅವರು ತಿಳಿಸಿದರು.

ಬಿಜೆಪಿ ಸರ್ಕಾರದ ಗೂಢಚರ್ಯೆಯು ಜನಸಾಮಾನ್ಯರ ಮಲಗುವ ಕೋಣೆ ಹಾಗೂ ಬಚ್ಚಲು ಮನೆಯನ್ನು ಪ್ರವೇಶಿಸಿರುವುದು ಕಳವಳ ಮೂಡಿಸಿದೆ ಎಂದು ಪಕ್ಷದ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಹೇಳಿದರು.

ಇಸ್ರೇಲ್ ಮೂಲದ ಪೆಗಾಸಸ್ ಕಣ್ಗಾವಲು ತಂತ್ರಾಂಶದ ಬಳಕೆಯ ವಿರುದ್ಧ ಫ್ರಾನ್ಸ್ ಸರ್ಕಾರ ಈಗಾಗಲೇ ತನಿಖೆಗೆ ಆದೇಶಿಸಿದೆ. ಪ್ರಜಾಪ್ರಭುತ್ವದ ಕಗ್ಗೊಲೆಗೆ ಮುಂದಾಗಿರುವ ಪ್ರಧಾನಿ ಮೋದಿ ವಿರುದ್ಧವೇ ತನಿಖೆ ನಡೆಯುವ ಅಗತ್ಯವಿದೆ ಎಂದು ರಾಜ್ಯ ಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರು ಅಭಿಪ್ರಾಯ ಪಟ್ಟರು.

ಕಾಂಗ್ರೆಸ್ ಹಾಗೂ ಜೆಡಿಎಸ್‌ನ 17 ಜನ ಶಾಸಕರನ್ನು ಖರೀದಿಸಿ, ಅಕ್ರಮವಾಗಿ ಸರ್ಕಾರ ರಚಿಸಿರುವ ಬಿ.ಎಸ್. ಯಡಿಯೂರಪ್ಪ ಅವರಿಗೆ ಬಿಜೆಪಿ ವರಿಷ್ಠರ ಬೆಂಬಲವೂ ಇತ್ತು ಎಂಬುದು ಈಗ ಸಾಬೀತಾದಂತಾಗಿದೆ ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

ಬಿಜೆಪಿ ಸರ್ಕಾರದ ನಾಟಕ ಈಗ ಬಹಿರಂಗಗೊಂಡಿದೆ. ನ್ಯಾಯಾಂಗ ತನಿಖೆಯ ಮೂಲಕವೇ ಪೆಗಾಸಸ್ ಗೂಢಚರ್ಯೆ ಪ್ರಕರಣ ಬಯಲಿಗೆ ಬರ ಬೇಕಿದೆ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಲೋಕಸಭೆಯ ಕಾಂಗ್ರೆಸ್ ಗುಂಪಿನ ನಾಯಕ ಅಧೀರ್ ರಂಜನ್ ಚೌಧರಿ, ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ ಈ ಸಂದರ್ಭ ಹಾಜರಿದ್ದರು.

ಬೆಲೆ ಏರಿಕೆ ವಿರುದ್ಧ ರಾಹುಲ್ ಚಾಟಿ

ನವದೆಹಲಿ (ಪಿಟಿಐ): ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ತೆರಿಗೆಗೆ ಸಂಬಂಧಿಸಿ ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಅವರು ಕೇಂದ್ರ ಸರ್ಕಾರದ ವಿರುದ್ಧ ಮಂಗಳವಾರ ಮತ್ತೆ ಚಾಟಿ ಬೀಸಿದ್ದಾರೆ.

'ಇಂಧನಗಳ ಮೇಲೆ ಅಧಿಕ ತೆರಿಗೆ ವಿಧಿಸಲಾಗುತ್ತಿದೆ. ಇದನ್ನು ನೋಡಿದರೆ ಇದೇನು ಸರ್ಕಾರವೋ ಅಥವಾ ಹಳೆಯ ಹಿಂದಿ ಚಿತ್ರಗಳಲ್ಲಿ ತೋರಿಸುವ ದುರಾಸೆಯ ಲೇವಾದೇವಿಗಾರನಂತೆ ಸರ್ಕಾರ ವರ್ತಿಸುತ್ತಿದೆಯೋ ಎನಿಸುತ್ತಿದೆ' ಎಂದು ಅವರು ವಾಗ್ದಾಳಿ ನಡೆಸಿದ್ದಾರೆ.

'ಕೇಂದ್ರ ಸರ್ಕಾರ ಒಂದೆಡೆ ಸಾಲ ತೆಗೆದುಕೊಳ್ಳುವಂತೆ ಜನರನ್ನು ಪ್ರಚೋದಿಸುತ್ತದೆ. ಮತ್ತೊಂದೆಡೆ, ವಿವೇಚನಾ ರಹಿತ ತೆರಿಗೆ ಮೂಲಕ ಜನರ ಸುಲಿಗೆ ಮಾಡುತ್ತಿದೆ' ಎಂದು ಟೀಕಿಸಿ, ಟ್ವೀಟ್ ಮಾಡಿದ್ದಾರೆ.

ಮೈತ್ರಿ ಸರ್ಕಾರ ಕೆಡವಿತೇ ಪೆಗಾಸಸ್?

ಒಂದನೇ ಪುಟದಿಂದ

ಮೈತ್ರಿ ಸರ್ಕಾರವು ಪತನವಾಗುವ ಕೆಲವೇ ದಿನಗಳ ಮುನ್ನ ಇವರ ಫೋನ್‌ಗಳ ಮೇಲೆ ಕಣ್ಗಾವಲು ಇಡಲಾಗಿತ್ತು ಎಂಬುದನ್ನು 'ವಾಷಿಂಗ್ಟನ್ ಪೋಸ್ಟ್', 'ದಿ ಗಾರ್ಡಿಯನ್' ಹಾಗೂ 'ದಿ ವೈರ್' ಮಂಗಳವಾರ ವರದಿ ಮಾಡಿವೆ.

ಕರ್ನಾಟಕದಲ್ಲಿ 2019ರಲ್ಲಿ ಅಧಿಕಾರಕ್ಕಾಗಿ ಕಿತ್ತಾಟ ನಡೆದ ಸಂದರ್ಭದಲ್ಲಿ, ಮೈತ್ರಿ ಸರ್ಕಾರದ 17 ಶಾಸಕರು ರಾಜೀನಾಮೆ ನೀಡಿದ್ದರು. ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಮಂಡಿಸಿದ ವಿಶ್ವಾಸ ಮತಕ್ಕೆ ಸೋಲಾಗಿತ್ತು. ನಂತರ, ಬಿ.ಎಸ್.ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರ್ಕಾರ ಅಸ್ತಿತ್ವಕ್ಕೆ ಬಂತು. ಸರ್ಕಾರ ಬೀಳಿಸುವುದಕ್ಕಾಗಿಯೇ ಮೈತ್ರಿ ಸರ್ಕಾರದ ಮುಖಂಡರು ಹಾಗೂ ಅವರ ಆಪ್ತರ ಮೇಲೆ ಕಣ್ಗಾವಲು ನಡೆಸಲಾಗಿತ್ತು ಎಂದು ವರದಿ ಹೇಳಿದೆ.

ಕಣ್ಗಾವಲಿಗೆ ಗುರಿಯಾದ, ಜಿ.ಪರಮೇಶ್ವರ ಅವರು ಬಳಸುತ್ತಿದ್ದರು ಎನ್ನಲಾದ ಫೋನ್ ಸಂಖ್ಯೆಯು ತಮ್ಮದೇ ಎಂಬುದನ್ನು ಅವರು ದೃಢಪಡಿಸಿದ್ದಾರೆ. ಆದರೆ, ಆ ಸಂಖ್ಯೆಯನ್ನು ಕೆಲವು ತಿಂಗಳುಗಳಿಂದ ತಾವು ಬಳಕೆ ಮಾಡುತ್ತಿಲ್ಲ ಎಂದಿದ್ದಾರೆ.

ಸೋರಿಕೆಯಾಗಿರುವ ದತ್ತಾಂಶದ ಪ್ರಕಾರ, ಎರಡು ಫೋನ್ ಸಂಖ್ಯೆಗಳು ಕುಮಾರಸ್ವಾಮಿ ಅವರ ಆಪ್ತ ಕಾರ್ಯದರ್ಶಿ ಸತೀಶ್ ಅವರಿಗೆ ಸೇರಿವೆ. 2019ರಲ್ಲಿ ತಾವು ಆ ಫೋನ್ ಸಂಖ್ಯೆಗಳನ್ನು ಬಳಸುತ್ತಿದ್ದುದಾಗಿ ಸತೀಶ್ ಕೂಡ ದೃಢಪಡಿಸಿದ್ದಾರೆ. ಆದರೆ, ಈ ಬಗ್ಗೆ ಬೇರೇನೂ ಪ್ರತಿಕ್ರಿಯೆ ನೀಡಲು ನಿರಾಕರಿಸಿದರು.

ಸಿದ್ದರಾಮಯ್ಯ ಅವರು ಬಹಳ ವರ್ಷಗಳಿಂದ ಖಾಸಗಿ ಫೋನ್ ಬಳಸುತ್ತಿರಲಿಲ್ಲವಾದ್ದರಿಂದ, ಆಪ್ತ ಕಾರ್ಯದರ್ಶಿ ವೆಂಕಟೇಶ್ ಅವರ ಫೋನ್ ಸಂಖ್ಯೆಯನ್ನೇ ಗುರಿಯಾಗಿಸಲಾಗಿದೆ ಎಂದು 'ದಿ ವೈರ್' ವರದಿ ಮಾಡಿದೆ.

ಪ್ರಭಾವಿಗಳನ್ನು ಗುರಿಯಾಗಿಸಿ ಕಣ್ಗಾವಲು ಇಡಲಾದ ಫೋನ್ ನಂಬರ್‌ಗಳ ಪೈಕಿ, ಎಚ್.ಡಿ. ದೇವೇಗೌಡ ಅವರ ಭದ್ರತಾ ಸಿಬ್ಬಂದಿಯಾಗಿದ್ದ ಮಂಜುನಾಥ ಮುದ್ದೇಗೌಡ ಅವರ ಫೋನ್ ನಂಬರ್ ಕೂಡ ಸೇರಿದೆ. ಫೋನ್ ನಂಬರ್ ಅನ್ನು ಮಂಜುನಾಥ್ ಕೂಡ ದೃಢಪಡಿಸಿದ್ದಾರೆ.

ಆದರೆ, ಕರ್ನಾಟಕದ ರಾಜಕಾರಣಿಗಳು ಹಾಗೂ ಅವರ ಆಪ್ತರ ಫೋನ್‌ಗಳ ಮೇಲೆ ಕಣ್ಗಾವಲು ನಡೆದಿತ್ತೇ ಅಥವಾ ಹ್ಯಾಕ್ ಮಾಡಲು ಪ್ರಯತ್ನಿಸಲಾಗಿತ್ತೇ ಎಂಬುದು ಸ್ಪಷ್ಟವಾಗಿಲ್ಲ ಎಂದೂ ವರದಿ ಮಾಡಿರುವ 'ದಿ ವೈರ್', 'ಆಗಿನ ಸಂದರ್ಭ, ನಡೆದ ರಾಜಕೀಯ ವಿದ್ಯಮಾನಗಳು ಹಾಗೂ ರಾಜ್ಯ ಸರ್ಕಾರವನ್ನು ಕೆಡವಲು ಬಿಜೆಪಿ ಹುನ್ನಾರ ನಡೆಸುತ್ತಿರುವುದಾಗಿ ಕಾಂಗ್ರೆಸ್ ಹಾಗೂ ಜೆಡಿಎಸ್ ಮುಖಂಡರು ಮಾಡುತ್ತಿದ್ದ ಆರೋಪಗಳನ್ನು ಪರಿಗಣಿಸುವುದಾದರೆ ಕಣ್ಗಾವಲಿನ ಸಾಧ್ಯತೆ ಇದೆ' ಎಂದಿದೆ.

'ಬಿಜೆಪಿಯ ಕೀಳುಮಟ್ಟ ಪೆಗಾಸಸ್‌ನಿಂದ ಬಹಿರಂಗ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೇಂದ್ರದಲ್ಲಿ ಅಧಿಕಾರ ಉಳಿಸಿಕೊಳ್ಳಲು ಮತ್ತು ರಾಜ್ಯಗಳಲ್ಲಿ ಅಧಿಕಾರಕ್ಕೇರಲು ಬಿಜೆಪಿ ಎಂತಹ ಕೀಳುಮಟ್ಟಕ್ಕೆ ಇಳಿಯುತ್ತಿದೆ ಎಂಬುದು 'ಪೆಗಾಸಸ್' ಗೂಢಚರ್ಯೆ ಪ್ರಕರಣದಿಂದ ಬಹಿರಂಗವಾಗಿದೆ. ಬಿಜೆಪಿಯ ನಡೆ ಅತ್ಯಂತ ಅಪಾಯಕಾರಿಯಾದುದು' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಹೇಳಿದ್ದಾರೆ.

ಜೆಡಿಎಸ್– ಕಾಂಗ್ರೆಸ್ ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ಆಗಿನ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ, ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕರಾಗಿದ್ದ ಸಿದ್ದರಾಮಯ್ಯ ಮತ್ತು ಗೃಹ ಸಚಿವರಾಗಿದ್ದ ಡಾ.ಜಿ. ಪರಮೇಶ್ವರ ಅವರ ಮೇಲೆ 'ಪೆಗಾಸಸ್' ಮೂಲಕ ನಿಗಾ ಇರಿಸಲಾಗಿತ್ತು ಎಂಬ ಮಾಹಿತಿ ಕುರಿತು ಮಂಗಳವಾರ ಅವರು ಪ್ರತಿಕ್ರಿಯಿಸಿದರು.

'ನನ್ನ ಮೇಲೆಯೇ ಗೂಢಚರ್ಯೆ ನಡೆಸಿದ್ದ ಬಿಜೆಪಿ, ನನ್ನ ವಿರುದ್ಧವೇ ದೂರವಾಣಿ ಕದ್ದಾಲಿಕೆ ಆರೋಪ ಮಾಡಿತ್ತು. ನನ್ನ ವಿರುದ್ಧ ಸಿಬಿಐ ತನಿಖೆಯನ್ನೂ ನಡೆಸುವ ಮೂಲಕ ಆತ್ಮವಂಚನೆಯಿಂದ ನಡೆದುಕೊಂಡಿದೆ' ಎಂದು ಹೇಳಿದರು.



ಎಚ್.ಡಿ. ಕುಮಾರಸ್ವಾಮಿ

ರಾಜಕಾರಣಿಗಳು, ಅಧಿಕಾರಿಗಳು, ಪತ್ರಕರ್ತರು, ಹೋರಾಟಗಾರರ ಮೇಲೆ ಕಣ್ಗಾವಲು ಇರಿಸಿದ್ದ ಬಿಜೆಪಿ ಮುಂದೊಂದು ದಿನ ಜನರ ವೈಯಕ್ತಿಕ ಬದುಕಿನಲ್ಲೂ ಇಣುಕುವುದಿಲ್ಲ ಎಂಬುದಕ್ಕೆ ಖಚಿತತೆ ಇದೆಯೆ? ಬಿಜೆಪಿಯ ಇಂತಹ ಕೃತ್ಯಗಳ ಬಗ್ಗೆ ಜನರು ಜಾಗೃತರಾಗಬೇಕು ಎಂದರು.

ಹೊಸದೇನೂ ಅಲ್ಲ: 'ಈ ರೀತಿ ಪ್ರಮುಖರ ಮೇಲೆ ಕಣ್ಗಾವಲು ಇಡುವ ಕ್ರಮ ನರೇಂದ್ರ ಮೋದಿ ಅವರು ಪ್ರಧಾನಿಯಾದ ಬಳಿಕವೇ ಬಂದದ್ದಲ್ಲ. 15 ವರ್ಷಕ್ಕೂ ಹೆಚ್ಚು ಕಾಲದಿಂದ ಈ ರೀತಿಯ ಕಣ್ಗಾವಲು ಇದೆ. ಆದಾಯ ತೆರಿಗೆ ಇಲಾಖೆ ಸೇರಿದಂತೆ ಕೆಲವು ಇಲಾಖೆಗಳೂ ಕಣ್ಗಾವಲು ಇರಿಸುತ್ತಿವೆ' ಎಂದರು.

ತಮ್ಮ ಕಾರ್ಯದರ್ಶಿಯ ಎರಡು ಮೊಬೈಲ್ ಫೋನ್‌ಗಳ ಮೇಲೆ ನಿಗಾ ಇರಿಸಲಾಗಿತ್ತು ಎಂಬುದರ ಕುರಿತು ತಲೆ ಕೆಡಿಸಿಕೊಳ್ಳುವುದಿಲ್ಲ. ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ದೇಶ ಮತ್ತು ರಾಜ್ಯದ ಹಿತಕ್ಕೆ ವಿರುದ್ಧವಾಗಿ ತಾವು ಏನನ್ನೂ ಮಾಡಿಲ್ಲ ಎಂದು ಹೇಳಿದರು.

ಜನಸಂಖ್ಯೆ ನಿಯಂತ್ರಣಾ ಕಾಯ್ದೆ: ಮಸೂದೆ ಪರಿಷ್ಕರಣೆಗೆ ನಿರ್ಧಾರ

ಪ್ರಜಾವಾಣಿ ವಾರ್ತೆ

ಲಖನೌ: ವಿಶ್ವ ಹಿಂದೂ ಪರಿಷತ್, ಆರ್‌ಎಸ್‌ಎಸ್ ಮತ್ತು ಇತರೆ ಸಂಸ್ಥೆಗಳ ಆಕ್ಷೇಪಣೆಗಳ ಹಿಂದೆಯೇ ನೂತನ ಜನಸಂಖ್ಯೆ ನಿಯಂತ್ರಣಾ ಕಾಯ್ದೆ ಕುರಿತ ಕರಡು ಮಸೂದೆ ಪರಿಷ್ಕರಿಸಲು ಉತ್ತರ ಪ್ರದೇಶ ಸರ್ಕಾರವು ನಿರ್ಧರಿಸಿದೆ.

ಮೂಲಗಳ ಪ್ರಕಾರ, ಸದ್ಯ ಕರಡು ಮಸೂದೆಯಲ್ಲಿ ಇರುವಂತೆ, ಏಕ ಮಗುವನ್ನು ಹೊಂದುವ ದಂಪತಿಗಳಿಗೆ ಉತ್ತೇಜನ ನೀಡುವ ಪ್ರಸ್ತಾಪವನ್ನು ಕೈಬಿಡಲು ನಿರ್ಧರಿಸಲಾಗಿದೆ.

ಸಹಕಾರ ಸಂಘಕ್ಕೆ ಸಂಬಂಧಿಸಿದ ಸಂವಿಧಾನ ತಿದ್ದುಪಡಿ: ಕೆಲವು ಅಂಶಕ್ಕೆ 'ಸುಪ್ರೀಂ' ಕತ್ತರಿ

ಪ್ರಜಾವಾಣಿ ವಾರ್ತೆ

ನವದೆಹಲಿ (ಪಿಟಿಐ): ಸಹಕಾರ ಸಂಘಗಳ ಕಾರ್ಯವೈಖರಿ ಮತ್ತು ಪರಿಣಾಮಕಾರಿ ನಿರ್ವಹಣೆಗೆ ಸಂಬಂಧಿಸಿ ಸಂವಿಧಾನಕ್ಕೆ ಮಾಡಲಾಗಿದ್ದ 97ನೇ ತಿದ್ದುಪಡಿಯ ಕೆಲವು ಅಂಶಗಳನ್ನು ಸುಪ್ರೀಂ ಕೋರ್ಟ್ 2:1 ಬಹುಮತದಲ್ಲಿ ಮಂಗಳವಾರ ರದ್ದುಪಡಿಸಿದೆ. ಈ ತಿದ್ದುಪಡಿಯ ಬಗ್ಗೆ ಸ್ಪಷ್ಟನೆ ಬೇಕು ಎಂದು ಹಲವು ರಾಜ್ಯಗಳು ಕೋರಿದ್ದವು.

ಬಹುರಾಜ್ಯ ಸಹಕಾರ ಸಂಘಗಳ ಕಾರ್ಯನಿರ್ವಹಣೆಗೆ ಸಂಬಂಧಿಸಿದ ತಿದ್ದುಪಡಿಯ ಭಾಗ 9 ಬಿ-ಯ ಸಿಂಧುತ್ವವನ್ನು ನ್ಯಾಯಾಲಯವು ಎತ್ತಿ ಹಿಡಿದಿದೆ.

2011ರ ಡಿಸೆಂಬರ್‌ನಲ್ಲಿ ಸಂಸತ್ತು ಅಂಗೀಕರಿಸಿದ್ದ ಸಂವಿಧಾನ ತಿದ್ದುಪಡಿಯು 2012ರ ಫೆಬ್ರುವರಿಯಿಂದ ಜಾರಿಗೆ ಬಂದಿತ್ತು. ಸಹಕಾರ ಸಂಘಗಳಿಗೆ ಹೆಚ್ಚಿನ ರಕ್ಷಣೆ ಒದಗಿಸುವುದಕ್ಕಾಗಿ ಸಂವಿಧಾನದ 19(1)(ಸಿ) ವಿಧಿಗೆ ತಿದ್ದುಪಡಿ ಮಾಡಲಾಗಿತ್ತು ಮತ್ತು 43 ಬಿ ವಿಧಿ ಹಾಗೂ ಭಾಗ 9 ಬಿಯನ್ನು ಸೇರಿಸಲಾಗಿತ್ತು.

ಕೆಲವು ನಿರ್ಬಂಧಗಳಿಗೆ ಒಳಪಟ್ಟು ಸಂಘಟನೆ, ಸಂಘ, ಸಹಕಾರ ಸಂಘ ರಚನೆಯ ಸ್ವಾತಂತ್ರ್ಯದ ಖಾತರಿಯನ್ನು 19(1)(ಸಿ) ವಿಧಿಯು ನೀಡುತ್ತದೆ. ವಿಧಿ 43 ಬಿ ಪ್ರಕಾರ, ಸಹಕಾರ ಸಂಘಗಳ ಸ್ವಯಂ ಪ್ರೇರಿತ ರಚನೆ, ಸ್ವಾಯತ್ತ ಕಾರ್ಯನಿರ್ವಹಣೆ, ಪ್ರಜಾಸತ್ತಾತ್ಮಕ ನಿಯಂತ್ರಣ ಮತ್ತು ವೃತ್ತಿಪರ ನಿರ್ವಹಣೆಗೆ ರಾಜ್ಯಗಳು ಪ್ರೋತ್ಸಾಹ ನೀಡಬಹುದು.

97ನೇ ತಿದ್ದುಪಡಿ ಮೂಲಕ ಸೇರಿಸಲಾದ ಭಾಗ 9 ಬಿಯು ಸಹಕಾರ ಸಂಘಗಳ ಸಂಯೋಜನೆ, ಆಡಳಿತ ಮಂಡಳಿ ಸದಸ್ಯರು ಮತ್ತು ಇತರ ಪದಾಧಿಕಾರಿಗಳ ಅಧಿಕಾರಾವಧಿ ಮತ್ತು ಪರಿಣಾಮಕಾರಿ ನಿರ್ವಹಣೆಗೆ ಸಂಬಂಧಿಸಿದ್ದಾಗಿದೆ.

ಸಂವಿಧಾನದ ಭಾಗ 9 ಬಿ–ರಾಜ್ಯಗಳ ಒಳಗೆ ಮತ್ತು ಕೇಂದ್ರಾಡಳಿತ ಪ್ರದೇಶದಲ್ಲಿ ಕಾರ್ಯನಿರ್ವಹಿಸುವ ಬಹುರಾಜ್ಯ ಸಹಕಾರ ಸಂಘಗಳಿಗೆ ಮಾತ್ರ ಅನ್ವಯ ಎಂದು ನ್ಯಾಯಮೂರ್ತಿಗಳಾದ ಆರ್.ಎಫ್. ನರೀಮನ್ ಮತ್ತು ಬಿ.ಆರ್.ಗವಾಯಿ ಅವರು ಬಹುಮತದ ತೀರ್ಪಿನಲ್ಲಿ ಹೇಳಿದ್ದಾರೆ.

'ಬಹುರಾಜ್ಯ ಸಹಕಾರ ಸಂಘಗಳು' ಮತ್ತು 'ಇತರ ಸಹಕಾರ ಸಂಘಗಳು' ಎಂಬುದನ್ನು ಪ್ರತ್ಯೇಕವಾಗಿಯೇ ನೋಡಬೇಕು ಎಂಬುದು ಸ್ಪಷ್ಟ. ಬಹುರಾಷ್ಟ್ರೀಯ ಸಹಕಾರ ಸಂಘಗಳ ವಿಚಾರದಲ್ಲಿ ಸಂಸತ್ತಿಗೆ ಅಧಿಕಾರ ಇದೆ. ಇತರ ಸಹಕಾರ ಸಂಘಗಳ ವಿಚಾರದಲ್ಲಿ ರಾಜ್ಯಗಳು ಅಗತ್ಯ ಕಾನೂನು ರೂಪಿಸಬಹುದು ಎಂದು ನ್ಯಾಯಾಲಯ ಹೇಳಿದೆ.

ಭಾಗ 9ಬಿಯ ಅವಕಾಶಗಳನ್ನು ಉಪಯೋಗಿಸಿ 28 ರಾಜ್ಯಗಳ ಪೈಕಿ 17 ರಾಜ್ಯಗಳು ಕಾಯ್ದೆಗಳನ್ನು ರಚಿಸಿವೆ. ಹಾಗಾಗಿ, ಭಾಗ 9ಬಿಯಲ್ಲಿರುವ ನಿರ್ಬಂಧಗಳನ್ನು ಈ ರಾಜ್ಯಗಳು ಒಪ್ಪಿವೆ ಎಂಬ ಕೇಂದ್ರ ಸರ್ಕಾರದ ವಾದಕ್ಕೆ ಸುಪ್ರೀಂ ಕೋರ್ಟ್ ಮಾನ್ಯತೆ ನೀಡಿಲ್ಲ.

'ಐಎಎಫ್ ಮೇಲೆ ಡ್ರೋನ್ ದಾಳಿಗೆ ಪಾಕ್ ಬೆಂಬಲ'

ಶ್ರೀನಗರ (ಪಿಟಿಐ): ಇಲ್ಲಿನ ಐಎಎಫ್ ನೆಲೆಯ ಮೇಲೆ ನಡೆದ ಡ್ರೋನ್ ದಾಳಿ ಕುರಿತ ತನಿಖೆಯ ಪ್ರಕಾರ, ಉಗ್ರ ಸಂಘಟನೆಗಳ ಈ ಕೃತ್ಯಕ್ಕೆ ಪಾಕಿಸ್ತಾನ ಸೇನೆ, ಗುಪ್ತದಳದ ಬೆಂಬಲವೂ ಇರುವುದು ಗೊತ್ತಾಗಿದೆ.

ಜಮ್ಮು ಮತ್ತು ಕಾಶ್ಮೀರದ ಡಿಜಿಪಿ ದಿಲ್‌ಬಾಗ್ ಸಿಂಗ್ ಮಂಗಳವಾರ ಈ ಮಾಹಿತಿ ನೀಡಿದ್ದು, ಈ ಹಿಂದೆಯೂ ನೆರೆ ರಾಷ್ಟ್ರವು ಗಡಿಯೊಳಗೆ ಹಣ, ಶಸ್ತ್ರಾಸ್ತ್ರ ಪೂರೈಕೆಗೆ ಡ್ರೋನ್ ಬಳಸಿರುವುದು ಇದೆ. ಭದ್ರತೆಗಿರುವ ಬೆದರಿಕೆಯನ್ನು ಪರಿಣಾಮಕಾರಿಯಾಗಿ ಹತ್ತಿಕ್ಕಲು ಹೆಚ್ಚುವರಿ ಪ್ರಯತ್ನದ ಅಗತ್ಯವಿದೆ ಎಂದು ಹೇಳಿದರು.

'ಜೂನ್ 26ರ ರಾತ್ರಿ ಭಾರತೀಯ ವಾಯುಪಡೆ ನೆಲೆಯ ಮೇಲೆ ಸ್ಫೋಟಕ ಹಾಕಲು ಡ್ರೋನ್ ಬಳಸಲಾಗಿದೆ. ಇಂಥ ಕೃತ್ಯಗಳನ್ನು ಕೈಗೊಳ್ಳಲು ಉಗ್ರ ಸಂಘಟನೆಗಳಿಗೆ ನೆರೆ ರಾಷ್ಟ್ರ ಬೆಂಬಲ ನೀಡಿರುವುದು ಖಂಡನಾರ್ಹ ಬೆಳವಣಿಗೆ' ಎಂದರು.

ಚುನಾವಣಾ ಅಭ್ಯರ್ಥಿಗಳ ಅಪರಾಧ ಹಿನ್ನೆಲೆ ಪ್ರಕಟಣೆ

ಕ್ಷಮೆ ಬೇಡ, ಆದೇಶ ಪಾಲಿಸಿ: 'ಸುಪ್ರೀಂ'

ಪ್ರಜಾವಾಣಿ ವಾರ್ತೆ

ನವದೆಹಲಿ: 'ಚುನಾವಣೆಗೆ ಸ್ಪರ್ಧಿಸುವ ಅಭ್ಯರ್ಥಿಗಳ ಅಪರಾಧ ಹಿನ್ನೆಲೆಯ ವಿವರಗಳನ್ನು ಸಾರ್ವಜನಿಕವಾಗಿ ಪ್ರಕಟಿಸಬೇಕು ಎಂಬ ಆದೇಶವನ್ನು ರಾಜಕೀಯ ಪಕ್ಷಗಳು ಪಾಲಿಸಲೇಬೇಕು' ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಫೆಬ್ರುವರಿ 2020ರಲ್ಲಿ ನೀಡಲಾಗಿದ್ದ ಆದೇಶದ ಪಾಲನೆ ಕುರಿತಂತೆ ರಾಜಕೀಯ ಪಕ್ಷಗಳ ಕ್ಷಮೆಯನ್ನು ಒಪ್ಪುವುದಿಲ್ಲ ಎಂದು ನ್ಯಾಯಮೂರ್ತಿಗಳಾದ ಆರ್.ಎಫ್.ನರೀಮನ್, ಬಿ.ಆರ್.ಗವಾಯಿ ಅವರಿದ್ದ ಪೀಠ ಸ್ಪಷ್ಟಪಡಿಸಿತು.

ಬಿಹಾರ ಚುನಾವಣೆಯಲ್ಲಿ ರಾಜಕೀಯ ಪಕ್ಷಗಳು ಈ ಆದೇಶವನ್ನು ಪಾಲಿಸಿಲ್ಲ ಎಂಬುದಕ್ಕೆ ಸಂಬಂಧಿಸಿ ಸಲ್ಲಿಸಿದ್ದ ನಿಂದನಾ ಅರ್ಜಿಯ ವಿಚಾರಣೆಯ ವೇಳೆ, ಸಿಪಿಐ–ಎಂ ಪಕ್ಷವನ್ನು ಪ್ರತಿನಿಧಿಸಿದ್ದ ಹಿರಿಯ ವಕೀಲ ಪಿ.ವಿ. ಸುರೇಂದ್ರನಾಥ್, 'ಇದು ಅಗಬಾರದಿತ್ತು' ಎಂದು ಬೇಷರತ್ ಕ್ಷಮೆ ಯಾಚಿಸಿದರು.



ಪೀಠವು ಇದಕ್ಕೆ, 'ನಾವು ಕ್ಷಮೆಯನ್ನು ಒಪ್ಪುವುದಿಲ್ಲ. ಆದೇಶವನ್ನು ಪಾಲಿಸಬೇಕು' ಎಂದು ತಾಕೀತು ಮಾಡಿತು.

ಚುನಾವಣಾ ಆಯೋಗವನ್ನು ಪ್ರತಿನಿಧಿಸಿದ್ದ ಹಿರಿಯ ವಕೀಲ ವಿಕಾಸ್ ಸಿಂಗ್, ರಾಷ್ಟ್ರೀಯ ಪಕ್ಷಗಳು ನಿಯಮವನ್ನು ಉಲ್ಲಂಘಿಸಿದ ಸಂದರ್ಭದಲ್ಲಿ ಚುನಾವಣಾ ಚಿಹ್ನೆಯನ್ನು ಅಮಾನತುಪಡಿಸಬೇಕು ಎಂದು ಸಲಹೆ ಮಾಡಿದರು.

ನ್ಯಾಷನಲಿಸ್ಟ್ ಕಾಂಗ್ರೆಸ್ ಪಕ್ಷವು ಕ್ರಿಮಿನಲ್ ಹಿನ್ನೆಲೆಯಿದ್ದ 26, ಸಿಪಿಐಎಂ ನಾಲ್ವರು ಅಭ್ಯರ್ಥಿಗಳನ್ನು ಕಣಕ್ಕಿಳಿಸಿತ್ತು. ಅಧಿಕ ಸಂಖ್ಯೆಯಲ್ಲಿ ಅಂದರೆ 103 ಅಭ್ಯರ್ಥಿಗಳು ರಾಷ್ಟ್ರೀಯ ಜನತಾ ದಳ ಪಕ್ಷಕ್ಕೆ ಸೇರಿದ್ದರೆ, ಜೆಡಿಯು 56, ಬಿಜೆಪಿ 77 ಅಭ್ಯರ್ಥಿಗಳನ್ನು ಕಣಕ್ಕಿಳಿಸಿತ್ತು ಎಂದು ಇದೇ ಸಂದರ್ಭದಲ್ಲಿ ಮಾಹಿತಿ ನೀಡಿದರು.

ಅಭ್ಯರ್ಥಿಗಳು ಸಾಮಾಜಿಕ ಕಾರ್ಯಕರ್ತ ಇತ್ಯಾದಿ ಎಂಬುದು ಎಲ್ಲ ಪಕ್ಷಗಳ ಸಾಮಾನ್ಯ ಉತ್ತರ. ಅತ್ಯಾಚಾರ ಪ್ರಕರಣದಲ್ಲಿ ದೋಷಾರೋಪ ಪಟ್ಟಿ ದಾಖಲಿಸಿದಾಗಲೂ ರಾಜಕೀಯ ಪಕ್ಷಗಳು ಈ ನಿಲುವು ತಳೆಯಬಹುದೆ? ಅಪರಾಧ ಹಿನ್ನೆಲೆಯುಳ್ಳವರನ್ನು ಸಾರ್ವಜನಿಕ ಕ್ಷೇತ್ರಕ್ಕೆ ಕರೆತರುವ ಮೂಲಕ ರಾಜಕೀಯದಲ್ಲಿ ಅಪರಾಧೀಕರಣ ತೀವ್ರಗತಿಯಲ್ಲಿ ಏರುತ್ತಿದೆ ಎಂದು ಅವರು ಅಭಿಪ್ರಾಯಪಟ್ಟರು.

ಅಮಿಕಸ್ ಕ್ಯೂರಿ ಹಿರಿಯ ವಕೀಲ ಕೆ.ವಿ.ವಿಶ್ವನಾಥ್ ಅವರು, ನಿಯಮ ಉಲ್ಲಂಘನೆ ಸಂದರ್ಭದಲ್ಲಿ ಪಕ್ಷಗಳ ಚಿಹ್ನೆಯನ್ನು ಅಮಾನತು ಪಡಿಸುವುದು ನಿರ್ದಿಷ್ಟ ಕಾಲಮಿತಿಗೆ ಅನ್ವಯವಾಗಬೇಕು ಎಂದು ಸಲಹೆ ಮಾಡಿದರು. ಈ ಹಂತದಲ್ಲಿ ಪೀಠವು ವಿಶ್ವನಾಥನ್ ಅವರಿಗೆ, ಗಂಭೀರವಲ್ಲದ ಉಲ್ಲಂಘನೆ ಸಂದರ್ಭದಲ್ಲಿ ರಾಜಕೀಯ ಪಕ್ಷಗಳನ್ನು ನಿರ್ದಿಷ್ಟ ಅವಧಿಗೆ, ಈ ಪ್ರಕರಣದಲ್ಲಿ ಎರಡು ಪಕ್ಷಗಳು ಮುಂದಿನ ಚುನಾವಣೆವರೆಗೂ ಅಮಾನತುಪಡಿಸಬಹುದೇ ಎಂದು ಪ್ರಶ್ನಿಸಿತು. ಅಲ್ಲದೆ, ರಾಷ್ಟ್ರೀಯ ಪಕ್ಷಗಳ ವಿಷಯದಲ್ಲಿ ಪಂಚಾಯಿತಿ ಹಂತದಲ್ಲಿ ಅಭ್ಯರ್ಥಿಯ ಲೋಪಕ್ಕೆ, ಇಡೀ ಪಕ್ಷವನ್ನು ಕಣದಿಂದ ಹೊರಗಿಡಲಾಗದು ಎಂದು ಪೀಠ ಅಭಿಪ್ರಾಯಪಟ್ಟಿತು.

ಕೋರ್ಟ್ ಕೆಲ ಮಾರ್ಗದರ್ಶಿ ಸೂತ್ರಗಳನ್ನು ರೂಪಿಸಬಹುದು ಎಂದು ವಿಶ್ವನಾಥನ್ ಹೇಳಿದರು. ಆಗ, ಪೀಠವು, ಲೋಪವು ಪಕ್ಷದಿಂದ ಅಥವಾ ಅಭ್ಯರ್ಥಿಯಿಂದ ಆಗಿದೆ ಎಂಬುದನ್ನು ಹೇಗೆ ಗುರುತಿಸುವುದು ಎಂದು ಪ್ರಶ್ನಿಸಿತು.

ಸುದೀರ್ಘ ವಿಚಾರಣೆಯ ಬಳಿಕ ಈ ಕುರಿತ ತೀರ್ಪನ್ನು ಪೀಠವು ಕಾಯ್ದಿರಿಸಿತು.



ಟೋಕಿಯೊ ಒಲಿಂಪಿಕ್ಸ್ ಅಂಗಳದಲ್ಲಿ ಭಾರತ ಹಾಕಿ ತಂಡ –ಪಿಟಿಐ ಚಿತ್ರ



ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಸ್ಪರ್ಧಿಸಲಿರುವ ಭಾರತ ಮಹಿಳಾ ಹಾಕಿ ತಂಡ –ಪಿಟಿಐ ಚಿತ್ರ

ಸಿನೋರ್ ಮೆಡಿಕಾಟ್ ಅಶ್ವ ಆಯ್ಕೆ ಮಾಡಿದ ಫವಾದ್

ಬೆಂಗಳೂರು: ಭಾರತದ ಈಕ್ವೆಸ್ಟ್ರಿಯನ್ ಪಟು ಫವಾದ್ ಮಿರ್ಜಾ, ಒಲಿಂಪಿಕ್ಸ್‌ನಲ್ಲಿ ಸಿನೋರ್ ಮೆಡಿಕಾಟ್ ಕುದುರೆಯೊಂದಿಗೆ ಕಣಕ್ಕಿಳಿಯಲು ನಿರ್ಧರಿಸಿದ್ದಾರೆ. ಈ ಹಿಂದೆ ಅವರು 'ದಯಾರಾ ಫೋರ್' ಅಶ್ವದೊಂದಿಗೆ ಟೋಕಿಯೊಗೆ ತೆರಳುವುದಾಗಿ ಪ್ರಕಟಿಸಿದ್ದರು.

ಸಿನೋರ್ ಮೆಡಿಕಾಟ್ ಕುದುರೆಯೊಂದಿಗೆ ಫವಾದ್, 2018ರ ಏಷ್ಯನ್ ಕ್ರೀಡಾಕೂಟದಲ್ಲಿ ಎರಡು ಬೆಳ್ಳಿ ಪದಕಗಳನ್ನು ಗೆದ್ದುಕೊಂಡಿದ್ದರು.

'ಮಿಕಿ' ಎಂದು ಪ್ರೀತಿಯಿಂದ ಕರೆಯಲಾಗುವ ಸಿನೋರ್ ಮೆಡಿಕಾಟ್ ಅಶ್ವವು ಏಷ್ಯನ್ ಗೇಮ್ಸ್‌ನಲ್ಲಿ ಫವಾದ್ ಅವರಿಗೆ ಎರಡು ಬೆಳ್ಳಿ ಪದಕ ಗೆದ್ದುಕೊಳ್ಳಲು ನೆರವಾಗಿದೆ. ಈ ಕುದುರೆಯೊಂದಿಗೆ ಫವಾದ್‌ಗೆ ಭಾವನಾತ್ಮಕ ಬಂಧವಿದೆ' ಎಂದು ಎಂಬೆಸಿ ಗ್ರೂಪ್ ನೀಡಿರುವ ಪ್ರಕಟಣೆಯಲ್ಲಿ ತಿಳಿಸಲಾಗಿದೆ. ಎಂಬೆಸಿ ಗ್ರೂಪ್ ಫವಾದ್ ಅವರಿಗೆ ನೆರವು ನೀಡುತ್ತಿದೆ.

'ಫವಾದ್ ಈ ಮೊದಲು ದಯಾರಾ ಫೋರ್ ಕುದುರೆಯನ್ನು ಆಯ್ಕೆ ಮಾಡಿದ್ದರು. ಆದರೆ ಕೆಲವು ವಾರಗಳ ಹಿಂದೆ ಸ್ಪರ್ಧೆ ಮತ್ತು ತರಬೇತಿಯ ಅವಧಿಯಲ್ಲಿ ಈ ಕುದುರೆ ಹೆಚ್ಚು ಒತ್ತಡಕ್ಕೆ ಒಳಗಾಗುತ್ತಿದೆ ಎಂದು ಅವರಿಗೆ ಅನಿಸಿತ್ತು. ಹೀಗಾಗಿ ಸಿನೋರ್ ಮೆಡಿಕಾಟ್‌ನೊಂದಿಗೆ ಟೋಕಿಯೊಗೆ ತೆರಳಲು ನಿರ್ಧರಿಸಿದರು' ಎಂದು ಪ್ರಕಟಣೆ ಹೇಳಿದೆ. ಸಿನೋರ್ ಮೆಡಿಕಾಟ್ ಕುದುರೆಯು ಜರ್ಮನಿಯ ಆಚೆನ್‌ನಲ್ಲಿ ಕ್ವಾರಂಟೈನ್ ಪೂರ್ಣಗೊಳಿಸಿದ್ದು, ಈಗಾಗಲೇ ಟೋಕಿಯೊ ತಲುಪಿದೆ. ಕುದುರೆಯೊಂದಿಗೆ ಅದರ ಪಾಲಕ ಜೊಹಾನ್ನಾ ಫೋಲನ್, ವೈದ್ಯ ಗ್ರಿಗರಿಯೊಸ್ ಮಾಲಿಸ್ ಹಾಗೂ ಫಿಸಿಯೊಥೆರಪಿಸ್ಟ್ ವೆರೊನಿಕಾ ಸಿಂಜ್ ಕೂಡ ತೆರಳಿದ್ದಾರೆ.



ಫವಾದ್ ಮಿರ್ಜಾ– ಎಎಫ್‌ಪಿ ಚಿತ್ರ

ಪತ್ರ ಬರೆದ ಹಾಕಿ ತಂಡಗಳ ನಾಯಕರು; ಕೃತಜ್ಞತೆ ಸಲ್ಲಿಸಿದ ರಾಣಿ, ಮನ್‌ಪ್ರೀತ್

ಅಭಿಮಾನಿಗಳ ಪ್ರೀತಿಯ ಅರಿವು ಇದೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಬೆಂಗಳೂರಿನಲ್ಲಿ ಒಲಿಂಪಿಕ್ಸ್ ಸಿದ್ಧತೆ ಮಾಡಿಕೊಂಡಿರುವ ತಂಡಗಳು
- ಸವಾಲುಗಳನ್ನು ಎದುರಿಸುವ ಆತ್ಮವಿಶ್ವಾಸ ಹೆಚ್ಚಿದೆ ಎಂದ ನಾಯಕರು

ಬೆಂಗಳೂರು: 'ಜನರ ಪ್ರೀತಿ ಮತ್ತು ಪ್ರೋತ್ಸಾಹದ ಅರಿವು ನಮಗಿದೆ. ವಿಶ್ವದ ಅತಿ ದೊಡ್ಡ ಕ್ರೀಡಾಮೇಳವಿದರಲ್ಲಿ ನಾವು ಬೆಳೆಯಲು ಕಾರಣರಾದವರೆಲ್ಲರ ನಿರೀಕ್ಷೆಯನ್ನು ಹೊತ್ತು ಟೋಕಿಯೊಗೆ ಹೊರಟಿದ್ದೇವೆ'–

ಒಲಿಂಪಿಕ್ಸ್‌ನಲ್ಲಿ ಸ್ಪರ್ಧಿಸಲು ತೆರಳಿರುವ ಭಾರತ ಪುರುಷರ ಹಾಕಿ ತಂಡದ ನಾಯಕ ಮನ್‌ಪ್ರೀತ್ ಸಿಂಗ್ ಮತ್ತು ಮಹಿಳಾ ತಂಡದ ನಾಯಕಿ ರಾಣಿ ರಾಂಪಾಲ್ ಅವರು ಸೇರಿ ಅಭಿಮಾನಿಗಳಿಗೆ ಬರೆದ ಪತ್ರದ ಸಾರಾಂಶ ಇದು.

ಬೆಂಗಳೂರಿನ ಭಾರತೀಯ ಕ್ರೀಡಾ ಪ್ರಾಧಿಕಾರದ ವಸತಿ ನಿಲಯದಲ್ಲಿ ಕಳೆದ ಎರಡು ವರ್ಷಗಳ ಬಹುಪಾಲು ಸಮಯವನ್ನು ಈ ಎರಡೂ ತಂಡಗಳು ಕಳೆದಿವೆ. ಒಲಿಂಪಿಕ್ಸ್ ಸಿದ್ಧತೆಯನ್ನು ಇಲ್ಲಿಯೇ ಮಾಡಿಕೊಂಡಿವೆ. ಕೊರೊನಾದಿಂದಾಗಿ ಲಾಕ್‌ಡೌನ್ ಆದಾಗ ಇದೇ ವಸತಿ ನಿಲಯದಲ್ಲಿ ಪ್ರತ್ಯೇಕವಾಸದಲ್ಲಿ ಆಟಗಾರರಿದ್ದರು.

ಆ ದಿನಗಳ ನೆನಪುಗಳನ್ನೂ ಇಬ್ಬರೂ ಹಂಚಿಕೊಂಡಿದ್ದಾರೆ.

'ಒಲಿಂಪಿಕ್ಸ್‌ನಂತಹ ಅತಿದೊಡ್ಡ ಕ್ರೀಡಾಕೂಟದಲ್ಲಿ ಭಾರತ ತಂಡವನ್ನು ಪ್ರತಿನಿಧಿಸುವುದೇ ದೊಡ್ಡ ಗೌರವ. ಅಂತಹದರಲ್ಲಿ ತಂಡಗಳನ್ನು ಮುನ್ನಡೆಸುವ ಗೌರವವು ನಮಗೆ ದಕ್ಕಿದೆ. ಇದು ನಮ್ಮ ಜೀವಮಾನದ ಸಾಧನೆಯೇ ಸರಿ. ನಾವು ಚಿಕ್ಕವರಿದ್ದಾಗ ಒಲಿಂಪಿಯನ್ ಕ್ರೀಡಾಪಟುಗಳನ್ನು ಅಚ್ಚರಿಯಿಂದ ನೋಡುತ್ತಿದ್ದೆವು. ಅವರನ್ನು ನೋಡಲು ಉತ್ಸುಕರಾಗುತ್ತಿದ್ದೆವು. ಇಂದು ನಾವು ಅವರೆಲ್ಲರ ಹಾದಿಯಲ್ಲಿ ಹೋಗುತ್ತಿದ್ದೇವೆಯೆಂಬುದು ಹೆಮ್ಮೆಯ ಸಂಗತಿ' ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

'ಸದ್ಯದ ಪರಿಸ್ಥಿತಿಯಲ್ಲಿ ತಂಡದಲ್ಲಿ ಪರಸ್ಪರ ಎಲ್ಲರೂ ಹೆಚ್ಚು ಕಾಲ ಜೊತೆಗೂಡಿ ಇರುವಂತಾಗಿದ್ದು ಒಳ್ಳೆಯದಾಯಿತು. ಇದರಿಂದಾಗಿ ನಾವೆಲ್ಲರೂ ಬಹಳ ನಿಕಟ ಸ್ನೇಹಿತರಾಗಿದ್ದೇವೆ. ಇದು ತಂಡವನ್ನು ಬಲಯುತಗೊಳಿಸಿದೆ. ಪರಸ್ಪರ ಎಲ್ಲರ ವೈಯಕ್ತಿಕ ಮತ್ತು ವೃತ್ತಿಪರ ವಿಷಯಗಳಲ್ಲಿ ಚಿಂತನ, ಮಂಥನ ಮಾಡಿದ್ದೇವೆ. ಇದರಿಂದಾಗಿ ಮಾನಸಿಕವಾಗಿ ಸಬಲರಾಗಿದ್ದೇವೆ. ಇದರಿಂದಾಗಿ ಮುಂಬರುವ ಸವಾಲುಗಳನ್ನು ಎದುರಿಸುವ ಆತ್ಮವಿಶ್ವಾಸ ಹೆಚ್ಚಿದೆ' ಎಂದು ಬರೆದಿದ್ದಾರೆ.

ತಂಡಗಳ ಕೋಚ್‌ಗಳು, ಸಾಯ್, ಹಾಕಿ ಇಂಡಿಯಾ ಅಧಿಕಾರಿಗಳು ಮತ್ತು ನೆರವು ಸಿಬ್ಬಂದಿಗೂ ಅವರಿಬ್ಬರೂ ಕೃತಜ್ಞತೆ ಸಲ್ಲಿಸಿದ್ದಾರೆ.

'ವೇಗವಾಗಿ ಉನ್ನತಿಗೇರೋಣ, ಜೊತೆಗೂಡಿ ಸದೃಢರಾಗೋಣ'

ಟೋಕಿಯೊ (ಪಿಟಿಐ): ಒಲಿಂಪಿಕ್ ಧ್ಯೇಯವಾಕ್ಯವನ್ನು ಮಂಗಳವಾರ ಪರಿಷ್ಕರಿಸಲಾಗಿದ್ದು, 'ಜೊತೆಗೂಡಿ' ಎಂಬ ಮತ್ತೊಂದು ಪದವನ್ನು ಸೇರಿಸಲಾಗಿದೆ.

ಮಂಗಳವಾರ ಇಲ್ಲಿ ನಡೆದ ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿಯ ಅಧಿವೇಶನದಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ.

ಟೋಕಿಯೊ ಒಲಿಂಪಿಕ್ ಧ್ಯೇಯವಾಕ್ಯ ಈಗ 'ವೇಗವಾಗಿ ಉನ್ನತಿಗೇರೋಣ, ಜೊತೆಗೂಡಿ ಸದೃಢರಾಗೋಣ' ಎಂದು ಬದಲಾಗಿದೆ.

'ಟುಗೆದರ್ (ಜೊತೆಗೂಡಿ)' ಎಂಬ ಪದವನ್ನು ಸೇರಿಸುವ ಪ್ರಸ್ತಾವನ್ನು ಏಪ್ರಿಲ್‌ನಲ್ಲಿ ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿಯ (ಐಒಸಿ) ಅಧ್ಯಕ್ಷ ಥಾಮಸ್ ಬಾಕ್ ಮುಂದಿಟ್ಟಿದ್ದರು.

ಇದಕ್ಕೆ ಸಮಿತಿಯ ಕಾರ್ಯಕಾರಿ ಮಂಡಳಿಯು ಅನುಮೋದನೆ ನೀಡಿತ್ತು. ಕೋವಿಡ್–19 ಪಿಡುಗಿನ ಬಿಕ್ಕಟ್ಟಿಗೆ ಪ್ರತಿಕ್ರಿಯೆಯಾಗಿ ಅವರು ಈ ಸಲಹೆ ನೀಡಿದ್ದರು.

ಅಧಿವೇಶನದ ಸಂದರ್ಭದಲ್ಲಿ ಒಗ್ಗಟ್ಟಿನ ಮಹತ್ವವನ್ನು ಬಾಕ್ ಪುನರುಚ್ಚರಿಸಿದರು.

'ಒಗ್ಗಟ್ಟು ಎಂಬುದು ನಾವು ಮಾಡುವ ಪ್ರತಿಯೊಂದು ಕಾರ್ಯಕ್ಕೆ ಹೃದಯವಿದ್ದಂತೆ. ಕ್ರೀಡೆಯ ಮೂಲಕ ಜಗತ್ತನ್ನು ಉತ್ತಮ ತಾಣವನ್ನಾಗಿ ರೂಪಿಸುವ ನಮ್ಮ ಧ್ಯೇಯಕ್ಕೆ ಏಕತೆ ಇಂಧನವಾಗಿದೆ. ಒಬ್ಬರಿಗೊಬ್ಬರು ಜೊತೆಯಾಗಿ ನಿಂತರೆ ಮಾತ್ರ ವೇಗವಾಗಿ, ಉನ್ನತ ಗುರಿಯತ್ತ ಚಲಿಸಿ ಬಲಶಾಲಿಯಾಗಬಹುದು' ಎಂದು ಬಾಕ್ ಹೇಳಿದರು.

ಶಿಸ್ತು ಉಲ್ಲಂಘಿಸಿದ ಬೋಪಣ್ಣ: ಎಐಟಿಎ ಅಸಮಾಧಾನ

ನವದೆಹಲಿ (ಪಿಟಿಐ): ಟೆನಿಸ್ ಆಟಗಾರ ರೋಹನ್ ಬೋಪಣ್ಣ ಮತ್ತು ಅಖಿಲ ಭಾರತ ಟೆನಿಸ್ ಸಂಸ್ಥೆಯು (ಎಐಟಿಎ) ನಡುವಣ ಸಂಘರ್ಷವು ಮಂಗಳವಾರ ಮತ್ತಷ್ಟು ತಾರಕಕ್ಕೇರಿತು.

'ಒಲಿಂಪಿಕ್ಸ್‌ಗೆ ಅರ್ಹತೆ ಕುರಿತು ಎಐಟಿಎ ಮಹಾಕಾರ್ಯದರ್ಶಿ ಅನಿಲ್ ಧುಪರ್ ಅವರೊಂದಿಗೆ ಮಾತನಾಡಿದ್ದ ಆಡಿಯೊ ಕ್ಲಿಪ್ ಅನ್ನು ಸಾರ್ವಜನಿಕವಾಗಿ ಬಹಿರಂಗಪಡಿಸಿರುವ ಬೋಪಣ್ಣ ಶಿಸ್ತುಉಲ್ಲಂಘನೆ ಮಾಡಿದ್ದಾರೆ' ಎಂದು ಸಂಸ್ಥೆಯ ಶಿಸ್ತು ಮತ್ತು ವ್ಯವಸ್ಥಾಪನ ಸಮಿತಿಗೆ ದೂರು ದಾಖಲಿಸಲಾಗಿದೆ.

ಬೋಪಣ್ಣ ಆರೋಪಕ್ಕೆ ತಿರುಗೇಟು ನೀಡಿರುವ ಎಐಟಿಎ ಕೂಡ ಅಂತರರಾಷ್ಟ್ರೀಯ ಟೆನಿಸ್ ಫೆಡರೇಷನ್ ನೊಂದಿಗೆ ಮಾಡಿರುವ ಇಮೇಲ್ ಸಂವಹನದ ದಾಖಲೆಗಳನ್ನು ಬಹಿರಂಗಪಡಿಸಿದೆ. ಜೂನ್ 28ರಿಂದ ಜುಲೈ 16ರವರೆಗೂ ರೋಹನ್ ಬೋಪಣ್ಣ ಮತ್ತು ದಿವಿಜ್ ಶರಣ್ ಜೋಡಿಗೆ ಒಲಿಂಪಿಕ್ಸ್ ಅರ್ಹತೆ ದೊರಕಿಸಿಕೊಡಲು ಐಟಿಎಫ್‌ಗೆ ಪತ್ರವ್ಯವಹಾರ ಮಾಡಿರುವುದಾಗಿ ತಿಳಿಸಿದೆ.

ಜುಲೈ 2ರಂದು ಅಮೆರಿಕ (ರ‍್ಯಾಂಕಿಂಗ್ 118), ಸ್ಪೇನ್ (170) ಮತ್ತು ಪೋರ್ಚುಗಲ್ (204) ದೇಶಗಳ ಪುರುಷರ ಡಬಲ್ಸ್ ಜೋಡಿಗಳಿಗೆ ಒಲಿಂಪಿಕ್ ಅರ್ಹತೆ ನೀಡಲಾಗಿತ್ತು.



ರೋಹನ್ ಬೋಪಣ್ಣ

ಈ ಅಂಶಗಳನ್ನು ಉಲ್ಲೇಖಿಸಿ 113ನೇ ಶ್ರೇಯಾಂಕ ಹೊಂದಿರುವ ಬೋಪಣ್ಣ–ಶರಣ್ ಜೋಡಿಗೂ ಅವಕಾಶ ಕೊಡಬೇಕು ಎಂದು ಕೋರಿ ಇಮೇಲ್ ಮಾಡಲಾಗಿದೆ.

ಇನ್ನೊಂದು ಇಮೇಲ್‌ನಲ್ಲಿ, 2018ರ ಏಷ್ಯನ್ ಕ್ರೀಡಾಕೂಟದಲ್ಲಿ ಬೋಪಣ್ಣ ಜೋಡಿಯ ಸಾಧನೆಯನ್ನು ವಿವರಿಸಿ ಅವಕಾಶವನ್ನು ಕೋರಲಾಗಿತ್ತು.

'ನಮ್ಮ ಕಡೆಯಿಂದ ಯಾವುದೇ ಲೋಪವಾಗಿಲ್ಲ. ಆದರೆ ಈ ವಿಚಾರವನ್ನು ಸಾರ್ವಜನಿಕವಾಗಿ ತೆರೆದಿಟ್ಟಿದ್ದು ಬೋಪಣ್ಣ ಅವರ ತಪ್ಪು. ಎರಡೂ ಕಮಿಟಿಗಳು ಪ್ರಕರಣದ ವಿಚಾರಣೆ ನಡೆಸಿ ಮುಂದಿನ ಕ್ರಮ ಕೈಗೊಳ್ಳಲಿವೆ' ಎಂದು ಧುಪರ್ ತಿಳಿಸಿದ್ದಾರೆ.

ಟೋಕಿಯೊ ಒಲಿಂಪಿಕ್ಸ್‌ಗೆ ಅರ್ಹತೆ ಗಳಿಸಿದ ಸಿಂಗಲ್ಸ್ ಆಟಗಾರ ಸುಮಿತ್ ನಗಾಲ್ ಅವರೊಂದಿಗೆ, ಡಬಲ್ಸ್‌ನಲ್ಲಿ ಆಡಲು ರೋಹನ್ ಬೋಪಣ್ಣ ಅವರಿಗೆ ಅವಕಾಶ ನೀಡಲು ಎಐಟಿಎ ಐಟಿಎಫ್‌ಗೆ ಮನವಿ ಮಾಡಿತ್ತು.

ಆದರೆ ತಮಗೆ ಒಲಿಂಪಿಕ್ಸ್‌ನಲ್ಲಿ ಆಡುವ ಅವಕಾಶ ಖಚಿತವಾಗಿರುವುದಾಗಿ ಹೇಳಿದ್ದ ಧುಪರ್ ದಾರಿ ತಪ್ಪಿಸಿದ್ದಾರೆಂದು ಬೋಪಣ್ಣ ಸೋಮವಾರ ಟ್ವೀಟ್ ಮಾಡಿ ಆಕ್ರೋಶವ್ಯಕ್ತಪಡಿಸಿದ್ದರು. ಜೊತೆಗೆ ಧುಪರ್ ಜೊತೆಗಿನ ಮಾತುಕತೆಯ ಅಡಿಯೊವನ್ನೂ ಟ್ವೀಟ್ ಮಾಡಿದ್ದರು.

'ಧುಪರ್ ಹೇಳಿಕೆಯ ಕುರಿತ ಸಾಕ್ಷಿ ನನ್ನ ಬಳಿ ಇದೆ. ಅವರ ಮಾತಿನಿಂದಾಗಿ ನಾನು ಶಿಷ್ಟಾಚಾರ ನಿಯಮಗಳನ್ನು ಪಾಲನೆಗೆ ಸಜ್ಜಾಗಬೇಕಾಯಿತು. ಕೋವಿಡ್ ಟೆಸ್ಟ್ ಕೂಡ ಮಾಡಿಸಿಕೊಂಡಾಯಿತು' ಎಂದು ಬೋಪಣ್ಣ ಅವರು ಹೇಳಿದ್ದಾರೆ.

ಗುರುಪ್ರೀತ್ ಕೈತಪ್ಪಿದ ಅವಕಾಶ

ನವದೆಹಲಿ (ಪಿಟಿಐ): ಭಾರತದ ನಡಿಗೆ ಸ್ಪರ್ಧಿ ಗುರುಪ್ರೀತ್ ಸಿಂಗ್ ಅವರು ಟೋಕಿಯೊ ಒಲಿಂಪಿಕ್ಸ್ ತಪ್ಪಿಸಿಕೊಂಡಿದ್ದಾರೆ.

ವಿಶ್ವ ರ‍್ಯಾಂಕಿಂಗ್ ಆಧಾರದಲ್ಲಿ ಗುರುಪ್ರೀತ್ ಅರ್ಹತೆ ಗಳಿಸಿದ್ದರು. ಆದರೆ ಭಾರತ ಅಥ್ಲೆಟಿಕ್ಸ್ ಫೆಡರೇಷನ್ (ಎಎಫ್‌ಐ), ಕಳುಹಿಸಿಕೊಟ್ಟಿರುವ ಪಟ್ಟಿಯಲ್ಲಿ ಅವರ ಹೆಸರು ಇಲ್ಲ. ಹೀಗಾಗಿ ಅವರು ಈಗ ಕ್ರೀಡಾಕೂಟದಲ್ಲಿ ಸ್ಪರ್ಧಿಸುವ ಮಾನ್ಯತೆ ಕಳೆದುಕೊಂಡಿದ್ದಾರೆ.50 ಕಿ.ಮೀ. ನಡಿಗೆ ವಿಭಾಗದಲ್ಲಿ ಸ್ಪರ್ಧಿಸುವ ಗುರುಪ್ರೀತ್ ಅವರಿಗೆ ಕೊನೆ ಕ್ಷಣದಲ್ಲಿ ಮಾನ್ಯತೆ ದೊರಕಿಸಿಕೊಡುವ ಎಎಫ್‌ಐನ ಪ್ರಯತ್ನ ಫಲಿಸಲಿಲ್ಲ ಎಂದು ತಿಳಿದು ಬಂದಿದೆ. ಒಲಿಂಪಿಕ್ಸ್‌ಗೆ ಅರ್ಹತೆ ಗಳಿಸಲು ಹತ್ತಿರ ದಲ್ಲಿರುವ ಸಂಭಾವ್ಯ ಕ್ರೀಡಾಪಟುಗಳ ದೀರ್ಘ ಪಟ್ಟಿಗೆ ಮಾನ್ಯತೆ ಪಡೆಯಲು ಒಲಿಂಪಿಕ್ಸ್ ಪ್ರಾರಂಭವಾಗುವ ತಿಂಗಳುಗಳ ಮೊದಲು ಸಲ್ಲಿಸಲಾಗುತ್ತದೆ. ಕೊನೆಯಲ್ಲಿ ಯಾರು ಅರ್ಹತೆ ಗಳಿಸುವುದಿಲ್ಲವೊ ಅವರು ಮಾನ್ಯತೆ ಪಡೆದಿದ್ದರೂ ಕೂಟದಲ್ಲಿ ಸ್ಪರ್ಧಿಸಲು ಸಾಧ್ಯವಾಗುವುದಿಲ್ಲ.50 ಕಿ.ಮೀ. ನಡಿಗೆ ಸ್ಪರ್ಧೆಯಲ್ಲಿ ಗುರುಪ್ರೀತ್ ಶ್ರೇಷ್ಠ ಸಾಧನೆ 3 ತಾಸು 59 ನಿಮಿಷ, 42 ಸೆಕೆಂಡು ಆಗಿದೆ. ಒಲಿಂಪಿಕ್ಸ್ ಅರ್ಹತೆಗೆ ಮಾನದಂಡ 3 ತಾಸು 50 ನಿಮಿಷ ಆಗಿತ್ತು.

'ಕ್ರೀಡಾಕೂಟ ಸುರಕ್ಷಿತವಾಗಿ ನಡೆಯುವದನ್ನು ವಿಶ್ವ ನೋಡಲಿ'

ಒಲಿಂಪಿಕ್ಸ್ ಅನ್ನು ಜಪಾನ್ ಸುರಕ್ಷಿತವಾಗಿ ಆಯೋಜಿಸಲಿದೆ ಎಂಬುದನ್ನು ವಿಶ್ವದ ಜನತೆ ನೋಡುಬೇಕು ಎಂದು ಜಪಾನ್ ಪ್ರಧಾನಿ ಯೋಶಿಹಿದೆ ಸುಗಾ ಹೇಳಿದ್ದಾರೆ.

ಸ್ಥಳೀಯ ತುರ್ತು ಪರಿಸ್ಥಿತಿ ಮತ್ತು ಸಾರ್ವಜನಿಕರಿಂದ ವ್ಯಾಪಕ ವಿರೋಧದ ನಡುವೆಯೂ ಹತ್ತಾರು ಕ್ರೀಡಾಪಟುಗಳು, ಅಧಿಕಾರಿಗಳು, ಸಿಬ್ಬಂದಿ ಮತ್ತು ಮಾಧ್ಯಮಗಳು ಜಪಾನ್‌ಗೆ ಆಗಮಿಸುತ್ತಿವೆ. ಐಒಸಿ ಸದಸ್ಯರೊಂದಿಗೆ ನಡೆಸಿದ ಸಭೆಯಲ್ಲಿ ಮಾತನಾಡಿದ ಸುಗಾ, ಜಗತ್ತು ದೊಡ್ಡ ಬಿಕ್ಕಟ್ಟು ಎದುರಿಸುತ್ತಿದೆ. ನಾಗರಿಕರ ಆರೋಗ್ಯ ಸುರಕ್ಷತೆ ನಮ್ಮ ಜವಾಬ್ದಾರಿ' ಎಂದರು.

ಟೋಕಿಯೊ ಒಲಿಂಪಿಕ್ಸ್ 2020 ಭಾರತದ ಕನಸಿನ ಪಯಣ

ಜಿಮ್ನಾಸ್ಟಿಕ್ಸ್: 'ದೀಪ' ಬೆಳಗಿಸುವರೇ ಪ್ರಣತಿ?

ಇನ್ನು 2 ದಿನ

2016ರ ರಿಯೊ ಒಲಿಂಪಿಕ್ಸ್. ಭಾರತವಷ್ಟೇ ಅಲ್ಲ. ಜಗತ್ತಿನ ಬಲಾಢ್ಯ ಕ್ರೀಡಾರಾಷ್ಟ್ರಗಳೆಲ್ಲ ಬೆಕ್ಕಸಬೆರಗಾಗಿದ್ದವು. ತ್ರಿಪುರಾದ ದೀಪಾ ಕರ್ಮಾಕರ್ ಎಂಬ ಹುಡುಗಿ ಅಂತಹ ಅಚ್ಚರಿ ಮೂಡಿಸಿದ್ದರು.

ಒಲಿಂಪಿಕ್ಸ್‌ನಲ್ಲಿ ಹಲವು ಕ್ರೀಡಾವಿಭಾಗಗಳಲ್ಲಿ ಪದಕಗಳನ್ನು ಗೆದ್ದ ಸಾಧನೆ ಮಾಡಿರುವ ಭಾರತವು ಹಿಂದೆಂದೂ ಜಿಮ್ನಾಸ್ಟಿಕ್ಸ್ ಕ್ರೀಡೆಯಲ್ಲಿ ಮಾತ್ರ ದೊಡ್ಡಮಟ್ಟದ ಸಾಧನೆ ಮಾಡಿರಲಿಲ್ಲ. ಆದರೆ, ದೀಪಾ ಅವತ್ತು ಪದಕ ಜಯದ ಭರವಸೆಯನ್ನೇ ಮೂಡಿಸಿದ್ದರು. ಮಹಿಳೆಯರ ವಾಲ್ಟ್ ವಿಭಾಗದಲ್ಲಿ ಅಲ್ಪ ಅಂತರದಲ್ಲಿ ಕಂಚಿನ ಪದಕ ತಪ್ಪಿಸಿಕೊಂಡರು. ನಾಲ್ಕನೇ ಸ್ಥಾನ ಪಡೆದರು. ಆಗ ಅವರು 2020ರ ಒಲಿಂಪಿಕ್ಸ್‌ನಲ್ಲಿ ಪದಕ ಗೆಲ್ಲುವ ವಿಶ್ವಾಸದೊಂದಿಗೆ ದೇಶಕ್ಕೆ ಮರಳಿದ್ದರು. ಆದರೆ, ಅದೃಷ್ಟ ಅವರೊಂದಿಗಿಲ್ಲ. ಗಾಯದಿಂದಾಗಿ ಅವರು ಈ ಬಾರಿಯ ಒಲಿಂಪಿಕ್ಸ್ ನಲ್ಲಿ ಭಾಗವಹಿಸುತ್ತಿಲ್ಲ.



ಪ್ರಣತಿ ನಾಯಕ್ –ಟ್ವಿಟರ್ ಚಿತ್ರ



ಸೈಮನ್ ಬೈಲ್ಸ್

ಅವರ ಗೈರುಹಾಜರಿಯಲ್ಲಿ ಭಾರತದ ನಿರೀಕ್ಷೆಯ ಭಾರ ಹೊತ್ತು ಪ್ರಣತಿ ನಾಯಕ್ ಟೋಕಿಯೊಗೆ ತೆರಳಿದ್ದಾರೆ. ಪಶ್ಚಿಮ ಬಂಗಾಳದ ಪಿಂಗ್ಲಾದ ಹುಡುಗಿ ಪ್ರಣತಿ ಬಾಲ್ಯದಿಂದಲೇ ಜಿಮ್ನಾಸ್ಟಿಕ್ಸ್‌ನಲ್ಲಿ ಕಠಿಣ ಅಭ್ಯಾಸ ಮಾಡಿದವರು.

26 ವರ್ಷದ ಪ್ರಣತಿಗೆ ಮಿನಾರಾ ಬೇಗಂ ತರಬೇತಿ ನೀಡುತ್ತಿದ್ದಾರೆ. ಕಳೆದ 18 ವರ್ಷಗಳಿಂದ ಬೇಗಂ ಮಾರ್ಗದರ್ಶನದಲ್ಲಿ ಹಲವು ಕೌಶಲಗಳನ್ನು ಕಲಿತಿರುವ ಪ್ರಣತಿ, ವಾಲ್ಟ್‌ನಲ್ಲಿಯೇ ಪರಿಣತಿ ಸಾಧಿಸಿದ್ದಾರೆ. 2019ರಲ್ಲಿ ಉಲಾನ್‌ಬಾತರ್‌ನಲ್ಲಿ ನಡೆದಿದ್ದ ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕ ಜಯಿಸಿದ್ದರು. ಅದೇ ವರ್ಷ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಒಟ್ಟು 45.832 (ವಾಲ್ಟ್ 14.200, ಫ್ಲೋರ್ ಎಕ್ಸೈಜ್ 11.133, ಬಾರ್ 10.566 ಮತ್ತು ಭೀಮ್‌ನಲ್ಲಿ 9.933) ಅಂಕಗಳನ್ನು ಗಳಿಸಿದ್ದರು.


ಇದರಿಂದಾಗಿ ಅವರಿಗೆ ಒಲಿಂಪಿಕ್ಸ್ ರಹದಾರಿ ಸಿಕ್ಕಿತು.

ಆದರೆ, ಅವರ ಮುಂದೆ ಈಗ ಕಠಿಣ ಸವಾಲು ಇದೆ. ಇದೇ 24ರಂದು ನಡೆಯುವ ಕ್ವಾಲಿಫೈಯರ್‌ನಲ್ಲಿ ಅವರು ಗೆದ್ದರೆ, ಫೈನಲ್ ಪ್ರವೇಶಿಸುತ್ತಾರೆ.

ಆದರೆ ಈ ಹಾದಿಯಲ್ಲಿ ಅವರು ಜರ್ಮನಿ, ಚೀನಾ, ರಷ್ಯಾ, ಅಮೆರಿಕದ ಬಲಾಢ್ಯರ ಸ್ಪರ್ಧೆಯನ್ನು ಎದುರಿಸಬೇಕಿದೆ. ಹೋದ ಸಲದ ಒಲಿಂಪಿಕ್ಸ್‌ನಲ್ಲಿ ನಾಲ್ಕು ಚಿನ್ನದ ಪದಕ ಜಯಿಸಿದ್ದ ಅಮೆರಿಕದ ಸೈಮನ್ ಬೈಲ್ಸ್ ಈ ಬಾರಿಯೂ ಫೇವರಿಟ್ ಆಗಿದ್ದಾರೆ.

ಆಲ್‌ರೌಂಡ್ ವಿಭಾಗದ ಪ್ರಶಸ್ತಿ ಗೆಲ್ಲುವ ಛಲದಲ್ಲಿ ಅವರಿದ್ದಾರೆ. ಒಲಿಂಪಿಕ್ಸ್ ಮತ್ತು ವಿಶ್ವ ಚಾಂಪಿಯನ್‌ಷಿಪ್‌ಗಳಲ್ಲಿ ಅವರು ಇಲ್ಲಿಯವರೆಗೆ 30 ಪದಕಗಳನ್ನು ಜಯಿಸಿದ್ದಾರೆ.

ಇನ್ನುಳಿದ ವಿಭಾಗಗಳಲ್ಲಿ ಚೀನಾ, ರುಮೇನಿಯಾ, ರಷ್ಯಾ, ಅಮೆರಿಕ, ಜರ್ಮನಿಯ ಸ್ಪರ್ಧಿಗಳ ಪೈಪೋಟಿಯನ್ನು ಕಣ್ತುಂಬಿಕೊಳ್ಳಬೇಕು. ಆರ್ಟಿಸ್ಟಿಕ್, ರಿಧಮಿಕ ಮತ್ತು ಟ್ರ್ಯಾಂಪೊಲಿನ್ ವಿಭಾಗಗಳಲ್ಲಿ ರೋಚಕ ಸ್ಪರ್ಧೆಗಳು ನಡೆಯುವ ನಿರೀಕ್ಷೆ ಇದೆ. ಚೀನಾದ 20 ವರ್ಷ ಲಿ ಟಿಂಗ್‌ಟಿಂಗ್ ಈ ಬಾರಿ ಜಿಮ್ನಾಸ್ಟಿಕ್ಸ್‌ನಲ್ಲಿ ಸ್ಪರ್ಧಿಸುತ್ತಿರುವ ಅತಿ ಕಿರಿಯ ವಯಸ್ಸಿನವರಾಗಿದ್ದಾರೆ. ರಿಂಗ್ ಜಂಪ್‌ನಲ್ಲಿ ಅವರು ಪರಿಣಿತರಾಗಿದ್ದಾರೆ.



ದೀಪಾ ಕರ್ಮಾಕರ್

ಶೂಟರ್‌ಗಳಿಗೆ ತಾಪಮಾನದ ಸವಾಲು

ಟೋಕಿಯೊ (ಪಿಟಿಐ): ಒಲಿಂಪಿಕ್ಸ್ ಸ್ಪರ್ಧೆಗಳಿಗಾಗಿ ತರಬೇತಿ ನಡೆಸುತ್ತಿರುವ ಶೂಟಿಂಗ್ ಪಟುಗಳು ನಗರದಲ್ಲಿ ಹೆಚ್ಚುತ್ತಿರುವ ತಾಪಮಾನದಿಂದಾಗಿ ತೊಂದರೆ ಅನುಭವಿಸುತ್ತಿದ್ದಾರೆ.

ಇಲ್ಲಿಯ ಅಸಾಕ ಶೂಟಿಂಗ್ ರೇಂಜ್‌ನಲ್ಲಿ ಪುರುಷ ಮತ್ತು ಮಹಿಳಾ ಶೂಟರ್‌ಗಳ ಅಭ್ಯಾಸಕ್ಕಾಗಿ ಅವಕಾಶ ಕಲ್ಪಿಸಲಾಗಿದೆ. 50 ಮೀಟರ್, 25 ಮೀ. ಮತ್ತು 10 ಮೀ. ವಿಭಾಗದ ಸ್ಪರ್ಧೆಗಳ ತರಬೇತಿಗಾಗಿ ಇದೊಂದೇ ತಾಣವನ್ನು ನಿಗದಿಪಡಿಸಲಾಗಿದೆ.

10 ಮೀಟರ್ ವಿಭಾಗದ ಸ್ಪರ್ಧೆಗಳನ್ನು ಈ ರೇಂಜ್‌ನ ಒಳಾಂಗಣದಲ್ಲಿ ನಡೆಸಲಾಗುತ್ತದೆ. ಆದರೆ ಹೆಚ್ಚಿನ ತಾಪಮಾನದಿಂದಾಗಿ ಅದು ಹೊರಾಂಗಣದಂತೆಯೇ ಭಾಸವಾಗುತ್ತಿದೆ. ಜಾಕೆಟ್ ಧರಿಸುವ ರೈಫಲ್ ಶೂಟರ್‌ಗಳು ಹೆಚ್ಚಾಗಿ ಉಷ್ಣತೆಯ ತೀವ್ರತೆಯನ್ನು ಅನುಭವಿಸುತ್ತಿದ್ದಾರೆ.

ಭಾರತದ 15 ಶೂಟರ್‌ಗಳು ಈ ಬಾರಿಯ ಕ್ರೀಡಾಕೂಟದಲ್ಲಿ ಪದಕಗಳಿಗೆ ಗುರಿಯಿಡಲಿದ್ದಾರೆ. ಯುವ ಶೂಟರ್‌ಗಳಾದ ಸೌರಭ್ ಚೌಧರಿ ಮತ್ತು ಮನು ಭಾಕರ್ ಭರವಸೆ ಮೂಡಿಸಿದ್ದಾರೆ.

ಶೂಟರ್‌ಗಳು ಎದುರಿಸುತ್ತಿರುವ ತೊಂದರೆ ಕುರಿತು ಪ್ರತಿಕ್ರಿಯಿಸಿರುವ ಭಾರತ ರಾಷ್ಟ್ರೀಯ ರೈಫಲ್ ಸಂಸ್ಥೆಯ (ಎನ್‌ಆರ್‌ಎಐ) ಅಧಿಕಾರಿಯೊಬ್ಬರು 'ಕ್ರೀಡಾಕೂಟದ ಸ್ಥಳೀಯ ಆಯೋಜಕರು ಅಥ್ಲೀಟ್‌ಗಳಿಗೆ ಬೇಕಾದ ಸೌಲಭ್ಯಗಳನ್ನು ಒದಗಿಸಲಿದ್ದಾರೆ. ರೈಫಲ್ ಶೂಟರ್‌ಗಳಿಗೆ ಈ ತಾಪಮಾನದಿಂದ ಹೆಚ್ಚು ಕಿರಿಕಿರಿ ಎನಿಸುತ್ತದೆ. ಶೂಟಿಂಗ್ ಹಾಲ್‌ನಲ್ಲಿ ಹವಾನಿಯಂತ್ರಕಗಳು ಸೂಕ್ತವಾಗಿ ಕಾರ್ಯನಿರ್ವಹಿಸುತ್ತಿವೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು' ಎಂದಿದ್ದಾರೆ.

ಉದ್ಯೋಗ ವಾಣಿ

ಭಾರತಕ್ಕೆ ಸರಣಿ ಕೈವಶ: ಭುವನೇಶ್ವರ್ ಕುಮಾರ್ ಆಲ್‌ರೌಂಡ್ ಆಟ

ದೀಪಕ್ ಚಾಹರ್ ಕೊಟ್ಟ ಜಯದ ಕಾಣಿಕೆ

ಕೊಲಂಬೊ (ಪಿಟಿಐ): ಅಜೇಯ ಅರ್ಧಶತಕ ಬಾರಿಸಿದ ದೀಪಕ್ ಚಾಹರ್ ಭಾರತ ತಂಡಕ್ಕೆ ಸರಣಿ ಗೆಲುವಿನ ಸಂತಸ ಉಣಬಡಿಸಿದರು. ಶ್ರೀಲಂಕಾ ತಂಡದ ಗೆಲುವಿನ ಆಸೆಗೆ ತಣ್ಣೀರೆರಚಿದರು.

ಪ್ರೇಮದಾಸ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಏಕದಿನ ಪಂದ್ಯದಲ್ಲಿ ಭಾರತ ತಂಡವು 3 ವಿಕೆಟ್‌ಗಳ ರೋಚಕ ಜಯ ಸಾಧಿಸಿತು. ಇದರೊಂದಿಗೆ ಮೂರು ಪಂದ್ಯಗಳ ಸರಣಿಯನ್ನು 2–0ಯಿಂದ ಕೈವಶ ಮಾಡಿಕೊಂಡಿತು.

ಟಾಸ್ ಗೆದ್ದ ಶ್ರೀಲಂಕಾ ತಂಡವು ಮೊದಲು ಬ್ಯಾಟಿಂಗ್ ಮಾಡಿತು. 50 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 275 ರನ್ ಗಳಿಸಿ, ಕಠಿಣ ಸವಾಲೊಡ್ಡಿತ್ತು. ಈ ಗುರಿಯನ್ನು ಬೆನ್ನತ್ತಿದ ಭಾರತವು ದೀಪಕ್ ಚಾಹರ್ (ಔಟಾಗದೆ 69; 82ಎ, 7ಬೌಂ, 1ಸಿ) ಅವರ ದಿಟ್ಟ ಬ್ಯಾಟಿಂಗ್ ಬಲದಿಂದ 49.1 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 277 ರನ್ ಗಳಿಸಿತು.

ಬೌಲಿಂಗ್‌ನಲ್ಲಿಯೂ ಮಿಂಚಿದ್ದ ದೀಪಕ್ ಎರಡು ವಿಕೆಟ್ ಗಳಿಸಿದ್ದರು. ಅವರು ಬ್ಯಾಟಿಂಗ್ ಮಾಡಲು ಕ್ರೀಸ್‌ಗೆ ಬಂದಾಗ ತಂಡವು ಗೆಲುವಿನಿಂದ ಇನ್ನೂ ಬಹಳ ದೂರದಲ್ಲಿತ್ತು. ಕ್ರೀಸ್‌ನಲ್ಲಿದ್ದ ಕೃಣಾಲ್ ಪಾಂಡ್ಯ (35 ರನ್) ಅವರೊಂದಿಗೆ ಸೇರಿದ ದೀಪಕ್ ಬೌಲರ್‌ಗಳಿಗೆ ತಿರುಗೇಟು ನೀಡಿದರು. ಸುಲಭ ಜಯದ ಕನಸು ಕಾಣುತ್ತಿದ್ದ ಆತಿಥೇಯರಿಗೆ ಸೋಲಿನತ್ತ ತಳ್ಳಿದರು.

ಏಳನೇ ವಿಕೆಟ್‌ಗೆ ದೀಪಕ್ ಮತ್ತು ಕೃಣಾಲ್ 33 ರನ್ ಸೇರಿಸಿದರು. ಕೃಣಾಲ್ 36ನೇ ಓವರ್‌ನಲ್ಲಿ ಔಟಾದರು. ದೀಪಕ್ ಜೊತೆಗೂಡಿದ ಭುವನೇಶ್ವರ್ ಕುಮಾರ್ (ಔಟಾಗದೆ 19) ತಂಡವನ್ನು ಜಯದ ದಡಕ್ಕೆ ಸೇರಿಸಿದರು. ಇಬ್ಬರೂ ಸಮಾಧಾನಚಿತ್ತದಿಂದ ಬ್ಯಾಟಿಂಗ್ ಮಾಡಿದರು.

ಹೆಚ್ಚು ಎಸೆತಗಳನ್ನು ಆಡಿದರು. ಇದರಿಂದಾಗಿ ವಿಕೆಟ್ ಪತನವಾಗದಂತೆ ತಡೆದರು. ಕೊನೆಯ ಓವರ್‌ನಲ್ಲಿ ತಂಡಕ್ಕೆ ಜಯ ಒಲಿಯಿತು.



ದೀಪಕ್ ಚಾಹರ್ ಅವರ ಬ್ಯಾಟಿಂಗ್ ವೈಖರಿ– ಎಎಫ್‌ಪಿ ಚಿತ್ರ

ಸೂರ್ಯ ಅರ್ಧಶತಕ: ಸರಣಿಯ ಮೊದಲ ಪಂದ್ಯದಲ್ಲಿ ಮಿಂಚಿದ್ದ ನಾಯಕ ಶಿಖರ್ ಧವನ್ ಮತ್ತು ಇಶಾನ್ ಕಿಶನ್ ಈ ಪಂದ್ಯದಲ್ಲಿ ಹೆಚ್ಚು ರನ್ ಹೊಡೆಯಲಿಲ್ಲ. ಆರಂಭಿಕ ಪೃಥ್ವಿ ಶಾ ಕೂಡ ವೈಫಲ್ಯ ಅನುಭವಿಸಿದರು.

ಮನೀಷ್ ಪಾಂಡೆ (37ರನ್) ಮತ್ತು ಸೂರ್ಯಕುಮಾರ್ ಯಾದವ್ (53 ರನ್) ಅವರು ಇನಿಂಗ್ಸ್‌ಗೆ ಬಲ ತುಂಬುವ ಪ್ರಯತ್ನ ಮಾಡಿದರು. ಪಾಂಡೆ 18ನೇ ಓವರ್‌ನಲ್ಲಿ ರನ್‌ಔಟ್ ಆದರು. ಆಗ ಕ್ರೀಸ್‌ಗೆ ಬಂದ ಹಾರ್ದಿಕ್ ಖಾತೆಯನ್ನೇ ತೆರೆಯದೇ ನಿರ್ಗಮಿಸಿದರು.

ಚಾಹಲ್ ಮೋಡಿ: ಆರಂಭಿಕ ಜೋಡಿ ಅವಿಷ್ಕಾ ಫರ್ನಾಂಡೊ (50; 71ಎ) ಮತ್ತು ಮಿನೋದ್ ಭಾನುಕಾ (36; 42ಎ) ಅವರು ಉತ್ತಮ ಅಡಿಪಾಯ ಹಾಕಿದರು. ಮೊದಲ ವಿಕೆಟ್ ಗೆ 77 ರನ್ ಸೇರಿಸಿದ್ದ ಇವರಿಬ್ಬರ ಜೊತೆಯಾಟವನ್ನು ಸ್ಪಿನ್ನರ್ ಯಜುವೇಂದ್ರ ಚಾಹಲ್ 14ನೇ ಓವರ್‌ನಲ್ಲಿ ಮುರಿದರು. ಈ ಓವರ್‌ನ ಎರಡನೇ ಎಸೆತದಲ್ಲಿ ಭಾನುಕಾ ಹೊಡೆದ ಚೆಂಡನ್ನು ಮನೀಷ್ ಪಾಂಡೆ ಕ್ಯಾಚ್ ಮಾಡಿದರು. ನಂತರದ ಎಸೆತದಲ್ಲಿಯೇ ಚಾಹಲ್ ಅವರು ರಾಜಪಕ್ಷ ವಿಕೆಟ್ ಕೂಡ ಗಳಿಸಿದರು.

ಮಧ್ಯಮ ಕ್ರಮಾಂಕದ ಬ್ಯಾಟ್ಸ್‌ಮನ್ ಅಸಲೆಂಕಾ (65; 68ಎ) ಅವರು ಬೌಲರ್‌ಗಳನ್ನು ದಿಟ್ಟತನದಿಂದ ಎದುರಿಸಿದರು. ಕೆಳಕ್ರಮಾಂಕದಲ್ಲಿ ಆಡಿದ ಕರುಣಾರತ್ನೆ (ಔಟಾಗದೆ 44) ಕೂಡ ಮಿಂಚಿದರು. ಏಳನೇ ವಿಕೆಟ್ ಜೊತೆಯಾಟದಲ್ಲಿ ಅಸಲೆಂಕಾ ಅವರೊಂದಿಗೆ 50 ರನ್‌ಗಳನ್ನು ಸೇರಿಸಿದರು. ಇದರಿಂದಾಗಿ ತಂಡವು ಸವಾಲಿನ ಮೊತ್ತ ಪೇರಿಸಲು ಸಾಧ್ಯವಾಯಿತು.

ಸ್ಕೋರ್ ಕಾರ್ಡ್

ಶ್ರೀಲಂಕಾ 9ಕ್ಕೆ 275 (50 ಓವರ್)
ಆವಿಷ್ಕ ಸಿ ಕೃಣಾಲ್ ಬಿ ಭುವನೇಶ್ವರ್ 50 (71 ಎ, 4x4, 6x1), ಮಿನೋದ್ ಸಿ ಪಾಂಡೆ ಬಿ ಚಾಹಲ್ 36 (42 ಎ, 4x6), ರಾಜಪಕ್ಷ ಸಿ ಕಿಶನ್ ಬಿ ಚಾಹಲ್ 0(1ಎ), ಧನಂಜಯ ಸಿ ಧವನ್ ಬಿ ದೀಪಕ್ 32 (45 ಎ, 4x1), ಅಸ್ಲೆಂಕಾ ಸಿ ಪಡಿಕ್ಕಲ್ (ಬದಲಿ) ಬಿ ಭುವನೇಶ್ವರ್ 65(68ಎ, 4x6), ಶನಕ ಬಿ ಚಾಹಲ್ 16 (24 ಎ, 4x1), ವನಿಂದು ಬಿ ದೀಪಕ್ 8 (11 ಎ, 4x1), ಚಾಮಿಕಾ ಔಟಾಗದೆ 44 (33 ಎ, 4x5) ದುಷ್ಮಂತ್ ಸಿ ಪಡಿಕ್ಕಲ್ (ಬದಲಿ) ಬಿ ಭುವನೇಶ್ವರ್ 2 (5ಎ), ಸಂಡಗನ್ ರನ್ ಔಟ್ 0(1 ಎ,) ಕಸುನ್ ಔಟಾಗದೆ 1 (1ಎ)
ಇತರೆ (ಲೆಗ್ ಬೈ 6, ನೋಬಾಲ್ 2, ವೈಡ್ 13) 21.
ವಿಕೆಟ್ ಪತನ: 1-77 (ಮಿನೋದ್ ಭಾನುಕಾ, 13.2), 2-77 (ಭಾನುಕ ರಾಜಪಕ್ಷ, 13.3), 3-124 (ಆವಿಷ್ಕ ಫರ್ನಾಂಡೊ, 24.6), 4-134 (ಧನಂಜಯ ಡಿಸಿಲ್ವಾ, 27.2), 5-172 (ದಸುನ್ ಶನಕ, 35.2), 6-194 (ವನಿಂದು ಹಸರಂಗ, 39.1), 7-244 (ಚರಿತ ಅಸ್ಲೆಂಕಾ, 47.1), 8-264 (ದುಷ್ಮಂತ ಚಮೀರ, 49.1), 9-266(ಲಕ್ಷಣ್ ಸಂಡಗನ್, 49.3)
ಬೌಲಿಂಗ್: ಭುವನೇಶ್ವರ್ ಕುಮಾರ್ 10–0–54–3, ದೀಪಕ್ ಚಾಹರ್ 8–0–53–2, ಹಾರ್ದಿಕ್ ಪಾಂಡ್ಯ 4–0–20–0, ಯಜುವೇಂದ್ರ ಚಾಹಲ್ 10–1–50–3, ಕುಲದೀಪ್ ಯಾದವ್ 10–0–55–0, ಕೃಣಾಲ್ ಪಾಂಡ್ಯ 8–0–37–0

ಭಾರತ 7ಕ್ಕೆ 277 (49.1 ಓವರ್)
ಪೃಥ್ವಿ ಬಿ ವನಿಂದು 13 (11ಎ, 4X1), ಧವನ್ ಎಲ್‌ಬಿಡಬ್ಲ್ಯು ವನಿಂದು 29 (38ಎ, 4X6), ಕಿಶನ್ ಬಿ ರಜಿತ 1 (4ಎ), ಮನೀಷ್ ರನೌಟ್ ಶನಕ 37 (31ಎ, 4X3), ಸೂರ್ಯಕುಮಾರ್ ಎಲ್‌ಬಿಡಬ್ಲ್ಯು ಸಂಡಗನ್ 53 (44ಎ, 4X6), ಹಾರ್ದಿಕ್ ಸಿ ಧನಂಜಯ ಬಿ ಶನಕ 0 (3ಎ), ಕೃಣಾಲ್ ಬಿ ವನಿಂದು 35 (54ಎ, 4X3), ದೀಪಕ್ ಔಟಾಗದೆ 69 (82ಎ, 4X7, 6X1), ಭುವನೇಶ್ವರ್ ಔಟಾಗದೆ 19 (28ಎ, 4X2)
ಇತರೆ (ಬೈ 1, ಲೆಗ್ ಬೈ 4, ವೈಡ್ 16) 21.
ವಿಕೆಟ್ ಪತನ: 1-28 (ಪೃಥ್ವಿ ಶಾ, 2.6), 2-39 (ಇಶಾನ್ ಕಿಶನ್, 4.6), 3-65 (ಶಿಖರ್ ಧವನ್, 11.6), 4-115 (ಮನೀಷ್ ಪಾಂಡೆ, 17.2), 5-116 (ಹಾರ್ದಿಕ್ ಪಾಂಡ್ಯ, 17.6), 6-160(ಸೂರ್ಯಕುಮಾರ್ ಯಾದವ್, 26.6), 7-193 (ಕೃಣಾಲ್ ಪಾಂಡ್ಯ, 35.1),
ಬೌಲಿಂಗ್: ಕಸುನ್ ರಜಿತ 7.1–0–53–1, ದುಷ್ಮಂತ್ ಚಮೀರ 10–0–65–0, ವನಿಂದು ಹಸರಂಗ 10–0–37–3, ಲಕ್ಷಣ್ ಸಂಡಗನ್ 10–0–71–1, ಚಾಮಿಕ ಕರುಣಾರತ್ನೆ 6–1–26–0, ದಸುನ್ ಶನಕ 3–0–10–1, ಧನಂಜಯ ಡಿಸಿಲ್ವಾ 3–0–10–0

ಫಲಿತಾಂಶ: ಭಾರತಕ್ಕೆ 3 ವಿಕೆಟ್‌ಗಳ ಜಯ ಸರಣಿಯಲ್ಲಿ 2–0 ಮುನ್ನಡೆ.

ಐಸಿಸಿ ಮಹಿಳಾ ಏಕದಿನ ಬ್ಯಾಟರ್‌ಗಳ ರ್‍ಯಾಂಕಿಂಗ್

ಮತ್ತೆ ಅಗ್ರಸ್ಥಾನಕ್ಕೇರಿದ ಮಿಥಾಲಿ

ದುಬೈ (ಪಿಟಿಐ): ಭಾರತ ಮಹಿಳಾ ಕ್ರಿಕೆಟ್ ತಂಡದ ನಾಯಕಿ ಮಿಥಾಲಿ ರಾಜ್ ಐಸಿಸಿ ಏಕದಿನ ಬ್ಯಾಟರ್‌ಗಳ ರ್‍ಯಾಂಕಿಂಗ್‌ನಲ್ಲಿ 762 ಪಾಯಿಂಟ್‌ಗಳೊಂದಿಗೆ ಮತ್ತೆ ಅಗ್ರಸ್ಥಾನಕ್ಕೆ ಮರಳಿದ್ದಾರೆ. ಎಡಗೈ ಬ್ಯಾಟರ್ ಸ್ಮೃತಿ ಮಂದಾನ ಒಂಬತ್ತನೇ ಸ್ಥಾನದಲ್ಲಿದ್ದಾರೆ.



ಮಿಥಾಲಿ ರಾಜ್

ಮಿಥಾಲಿ 16 ವರ್ಷಗಳ ಹಿಂದೆ ಮೊದಲ ಬಾರಿ ಅಗ್ರಸ್ಥಾನ ಗಳಿಸಿದ್ದರು.

ಬೌಲರ್‌ಗಳ ಪಟ್ಟಿಯಲ್ಲಿ, ಐದನೇ ಸ್ಥಾನದಲ್ಲಿರುವ ಜೂಲನ್ ಗೋಸ್ವಾಮಿ ಅಗ್ರ 10ರಲ್ಲಿರುವ ಏಕೈಕ ಭಾರತೀಯರಾಗಿದ್ದಾರೆ. ಆಲ್ ರೌಂಡರ್ ವಿಭಾಗದಲ್ಲಿ ದೀಪ್ತಿ ಶರ್ಮಾ ಐದನೇ ಸ್ಥಾನ ಪಡೆದಿದ್ದಾರೆ.ಟಿ20 ವಿಭಾಗದ ರ್‍ಯಾಂಕಿಂಗ್‌ನಲ್ಲಿ ಭಾರತದ ಎಡಗೈ ಆರಂಭಿಕ ಆಟಗಾರ್ತಿ ಸ್ಮೃತಿ ಮಂದಾನ ವೃತ್ತಿಜೀವನದ ಶ್ರೇಷ್ಠ ಮೂರನೇ ಸ್ಥಾನಕ್ಕೆ ಜಿಗಿದಿದ್ದಾರೆ. ಇಂಗ್ಲೆಂಡ್ ವಿರುದ್ಧದ ಸರಣಿಯ ಅಂತಿಮ ಪಂದ್ಯದಲ್ಲಿ ಅತ್ಯುತ್ತಮ ಸಾಮರ್ಥ್ಯ ತೋರಿದ ಕಾರಣ ಸ್ಮೃತಿ ರ್‍ಯಾಂಕಿಂಗ್‌ನಲ್ಲಿ ಏರಿಕೆಯಾಗಿದೆ.



ಕೆ.ಎಲ್ ರಾಹುಲ್ –ಸಂಗ್ರಹ ಚಿತ್ರ

ಅಭ್ಯಾಸ ಪಂದ್ಯ: ರಾಹುಲ್ ಶತಕ

ಚೆಸ್ಟರ್ ಲಿ ಸ್ಟ್ರೀಟ್: ಕನ್ನಡಿಗ ಕೆ.ಎಲ್. ರಾಹುಲ್ ಮಂಗಳವಾರ ರಿವರ್‌ಸೈಡ್ ಕ್ರೀಡಾಂಗಣದಲ್ಲಿ ಸುಂದರವಾದ ಶತಕ ದಾಖಲಿಸಿದರು.

ಇಲ್ಲಿ ಆರಂಭವಾದ ಅಭ್ಯಾಸ ಪಂದ್ಯದಲ್ಲಿ ರಾಹುಲ್ ಶತಕದ ಬಲದಿಂದ ಇಂಡಿಯನ್ಸ್ ತಂಡವು ಕೌಂಟಿ ಸೆಲೆಕ್ಟ್ ಇಲೆವನ್ ತಂಡದ ಎದುರು 72 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 234 ರನ್ ಗಳಿಸಿತು.

ವಿರಾಟ್ ಕೊಹ್ಲಿ ಮತ್ತು ಅಜಿಂಕ್ಯ ರಹಾನೆ ಅವರಿಗೆ ಈ ಪಂದ್ಯದಿಂದ ವಿಶ್ರಾಂತಿ ನೀಡಲಾಗಿದೆ. ಆದ್ದರಿಂದ ಇಂಡಿಯನ್ಸ್ ತಂಡವು ರೋಹಿತ್ ಶರ್ಮಾ ಅವರ ನಾಯಕತ್ವದಲ್ಲಿ ಕಣಕ್ಕಿಳಿಯಿತು.

ಐದನೇ ಕ್ರಮಾಂಕದಲ್ಲಿ ಬ್ಯಾಟಿಂಗ್‌ಗೆ ಬಂದ ರಾಹುಲ್ ಸೊಗಸಾದ ಹೊಡೆತಗಳ ಮೂಲಕ ಗಮನ ಸೆಳೆದರು. 150 ಎಸೆತಗಳನ್ನು ಎದುರಿಸಿದ ಅವರು 101 ರನ್ ಗಳಿಸಿದರು. ಅದರಲ್ಲಿ 11 ಬೌಂಡರಿ ಮತ್ತು ಒಂದು ಸಿಕ್ಸರ್ ಸೇರಿದ್ದವು. ಗಾಯಗೊಂಡು ನಿವೃತ್ತಿ ಪಡೆದರು.

ರಾಹುಲ್ ಐದನೇ ವಿಕೆಟ್ ಜೊತೆಯಾಟದಲ್ಲಿ ರವೀಂದ್ರ ಜಡೇಜ (ಔಟಾಗದೆ 46) ಅವರೊಂದಿಗೆ 127 ರನ್ ಗಳಿಸಿದರು. ಜಡೇಜ ತಮ್ಮ ಎಂದಿನ ಬೀಸಾಟವನ್ನು ಆಡಲಿಲ್ಲ. ಬದಲಿಗೆ ತಾಳ್ಮೆಯಿಂದ ಬ್ಯಾಟ್ ಬೀಸಿದರು. 101 ಎಸೆತಗಳನ್ನು ಆಡಿದರು.

ಟಾಸ್ ಗೆದ್ದ ರೋಹಿತ್ ಶರ್ಮಾ ಬ್ಯಾಟಿಂಗ್ ಆರಂಭಿಸಿದರು. ಆದರೆ, ಉತ್ತಮ ಆರಂಭ ನೀಡಲು ಅವರಿಗೆ ಸಾಧ್ಯವಾಗಲಿಲ್ಲ. ಕೇವಲ ಒಂಬತ್ತು ರನ್ ಗಳಿಸಿ ಔಟಾದರು.

ಅವರೊಂದಿಗೆ ಇನಿಂಗ್ಸ್ ಆರಂಭಿಸಿದ ಮಯಂಕ್ ಅಗರವಾಲ್ (28; 35ಎ) ಲಯ ಕಂಡುಕೊಳ್ಳುವ ಪ್ರಯತ್ನ ಮಾಡಿದರು. ಚೇತೇಶ್ವರ್ ಪೂಜಾರ (21; 46ಎ) ಕೂಡ ತಮ್ಮ ಫಾರ್ಮ್ ಮರಳಿ ಪಡೆಯುವ ಪ್ರಯತ್ನ ಮಾಡಿದರು. ಆದರೆ, 14ನೇ ಓವರ್‌ನಲ್ಲಿ ಮಯಂಕ್ ಔಟಾದರು.

ಸಂಕ್ಷಿಪ್ತ ಸ್ಕೋರು: ಇಂಡಿಯನ್ಸ್: 72 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 234 (ಮಯಂಕ್ ಅಗರವಾಲ್ 28, ಚೇತೇಶ್ವರ್ ಪೂಜಾರ 21, ಹನುಮವಿಹಾರಿ 24, ಕೆ.ಎಲ್. ರಾಹುಲ್ 101, ರವೀಂದ್ರ ಜಡೇಜ ಬ್ಯಾಟಿಂಗ್ 46, ಲಿಂಡನ್ ಜೇಮ್ಸ್ 21ಕ್ಕೆ2) ವಿವರ ಅಪೂರ್ಣ